ಎ.ಕೆ. ಕುಕ್ಕಿಲ

# ವೈರಸ್

## ಅವರಿಬ್ಬರೂ ಪರಾರಿಯಾದರು

---

ಕಾದಂಬರಿ

# VIRUS

A Novel By A.K. Kukkila,
Cell : 9880096128, email: akkukkila@gmail.com,



| | | |
|---|---|---|
| Copyright | : | Writer |
| First Edition | : | |
| Pages | : | 176 |
| Size | : | 1/8 Demmy |

| | | |
|---|---|---|
| **ಮೊದಲನೆ ಮುದ್ರಣ** | : | |
| **ಪುಟಗಳು** | : | 176 |
| **ಅಳತೆ** | : | 1/8 ಡೆಮಿ |
| **ಮುಖಪುಟ ವಿನ್ಯಾಸ** | : | |





## ಮುನ್ನುಡಿ

# ವರ್ತಮಾನದ ನಮ್ಮ ತಿಳಿವನ್ನು ವಿಸ್ತರಿಸುವ ಕಾದಂಬರಿ

**ಸ್ವಾ**ತಂತ್ರ್ಯೋತ್ತರ ಭಾರತವು ಇದಿರಿಸಿದ ಅನಿರೀಕ್ಷಿತ ಆಪತ್ತುಗಳಲ್ಲಿ ಕೊರೋನಾ ತಂದ ಬಿಕ್ಕಟುಗಳು ಬಹಳ ಪ್ರಮುಖವಾದುವು. ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಮಾನಸಿಕವಾಗಿ ಮತ್ತು ಆರ್ಥಿಕವಾಗಿ ಅದು ಬಹುತೇಕ ಭಾರತೀಯರನ್ನು ಕಂಗೆಡಿಸಿತು. ಯಾವ ಪೂರ್ವ ಸಿದ್ಧತೆಯಿಲ್ಲದೆ ಲಾಕ್‌ಡೌನ್ ಘೋಷಿಸಿದ್ದರ ಪರಿಣಾಮವಾಗಿ ಲಕ್ಷಾಂತರ ಜನರು ಕೆಲವು ಗಂಟೆಗಳೊಳಗಾಗಿ ಬೀದಿಗೆ ಬಿದ್ದು ತಮ್ಮ ಬದುಕನ್ನು ಕಳೆದುಕೊಳ್ಳಬೇಕಾಯಿತು. ಭಾರತ ವಿಭಜನೆಯ ಸಂದರ್ಭದಲ್ಲಿ ಕಾಣಿಸಿಕೊಂಡ ಮಹಾವಲಸೆಯು ಮತ್ತೊಮ್ಮೆ ಮರುಕಳಿಸಿತು. ಇದು ಉಂಟು ಮಾಡಿದ ಗಾಯಗಳು ಗುಣವಾಗಬೇಕಾದರೆ ಬಹಳ ಸಮಯ ಬೇಕಾದೀತು.

ಶಿಕ್ಷಣ ಕ್ಷೇತ್ರವು ಇಡಿಯಾಗಿ ಕುಸಿಯಿತು. ಅನೇಕ ಕೈಗಾರಿಕೆಗಳಿಗೆ ತಮ್ಮ ಮುಚ್ಚಿದ ಬಾಗಿಲುಗಳನ್ನು ತೆರೆಯಲು ಇನ್ನೂ ಸಾಧ್ಯವಾಗಿಲ್ಲ. ಪ್ರವಾಸೋದ್ಯಮ ನೆಲಕಚ್ಚಿತು. ಕ್ರೀಡಾ ಕ್ಷೇತ್ರ ಕುಸಿಯಿತು. ವಿಶೇಷವೆಂದರೆ,

ಧಾರ್ಮಿಕ ಕ್ಷೇತ್ರಗಳನ್ನೂ ಕೇಳುವವರಿಲ್ಲವಾಗಿದೆ. ರಿಕ್ಷಾ ಓಡಿಸುವವರು, ಬಾಡಿಗೆ ವಾಹನಗಳನ್ನು ಚಲಾಯಿಸುವ ಡ್ರೈವರುಗಳು ಮತ್ತು ಲಕ್ಷಾಂತರ ಉದ್ಯೋಗಿಗಳು ಅನಾಥರಾದರು. ಯುವಕರು ನಿಧಾನವಾಗಿ ಹತಾಶೆಯತ್ತ ಜಾರುತ್ತಿದ್ದಾರೆ. ಅಳಿದುಳಿದ ವಲಸೆ ಕಾರ್ಮಿಕರಿಗೆ ಇನ್ನೂ

ತಮ್ಮ ನೆಲೆಗಳನ್ನು ಕಂಡುಕೊಳ್ಳಲಾಗಿಲ್ಲ. ವಿಶ್ವ ಆರೋಗ್ಯ ಸಂಸ್ಥೆಯು ಹೇಳುವ ಪ್ರಕಾರ, ಕೊರೋನಾದಿಂದ ಜನ ಮಾನಸಿಕ ಒತ್ತಡಗಳಿಗೆ ಒಳಗಾಗಿದ್ದು, ಅದು ಆತ್ಮಹತ್ಯೆಗಳಿಗೂ ಕಾರಣವಾಗಿದೆ ಮತ್ತು ಅನೇಕ ಕಡೆಗಳಲ್ಲಿ ಹಿಂಸೆಯನ್ನೂ ಹೆಚ್ಚು ಮಾಡಿದೆ.

ಇಂಥ ತೀವ್ರತರವಾದ ಕಷ್ಟದ ದಿನಗಳಲ್ಲಿ ಕೆಲವರು ತಮ್ಮ ಗುಪ್ತ ಕಾರ್ಯಸೂಚಿಗಳನ್ನು ಮುನ್ನೆಲೆಗೆ ತರಲು ಪ್ರಯತ್ನಿಸಿದ ಘಟನೆಗಳೂ ನಡೆದುವು. ಕೊರೋನಾ ಓಡಿಸಲು ಶಂಖ ಜಾಗಟೆಗಳನ್ನು ಬಳಸಲು ಸೂಚಿಸಿದಲ್ಲಿಂದ ಆರಂಭವಾದ ಅದು ದೆಹಲಿಯ ತಬ್ಲೀಗ್ ಜಮಾಅತ್ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದವರಿಂದ ಕೊರೋನಾ ಹರಡಿದೆ ಎಂದು ಹೇಳುತ್ತಾ ಮಹಾಮಾರಿಗೂ ಕೋಮುವಾದದ ಸೋಂಕು ತಗಲಿಸುವವರೆಗೆ ಮುಂದುವರೆಯಿತು. ಆದರೆ ಕೊರೋನಾಕ್ಕೆ ಹಿಂದು ಮುಸ್ಲಿಂ ವ್ಯತ್ಯಾಸ ಗೊತ್ತಾಗದೆ, ಎಲ್ಲರನ್ನೂ ಬಲಿ ತೆಗೆದುಕೊಳ್ಳಲಾರಂಭಿಸಿದ ಮೇಲೆ ಚಿತ್ರ ಸ್ವಲ್ಪ ಬದಲಾಯಿತು.

ಏ.ಕೆ. ಕುಕ್ಕಿಲರ ಪ್ರಸ್ತುತ ಕಾದಂಬರಿ ಮೇಲೆ ಹೇಳಿದ ಕೊರೋನಾ ಕಾಲದ ಕೆಲವು ದುರಿತಗಳನ್ನು ಮುನ್ನೆಲೆಗೆ ತರಲು ಪ್ರಯತ್ನಿಸುತ್ತದೆ. ಹಾಗೆ ಮಾಡಲು ಕುಕ್ಕಿಲರು ನೂರ್ ಮತ್ತು ಅನಾಮಿಕ ಎಂಬ ಎರಡು ಮುಖ್ಯ ಪಾತ್ರಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಇಡೀ ಕಾದಂಬರಿಯು ಈ ಎರಡು ಪಾತ್ರಗಳ ಸುತ್ತವೇ ಬೆಳೆಯುತ್ತಾ, ಇಸ್ಲಾಂ ಮತ್ತು ಹಿಂದೂ ಧರ್ಮದ ಕುರಿತಾದ ಕೆಲವು ವಿಷಯಗಳಿಗೆ ಆಗಾಗ ಮುಖಾಮುಖಿಯಾಗುತ್ತಾ ಅವರೆಡೂ ಧರ್ಮಗಳ ಬಗ್ಗೆ ಇರುವ ಅಪನಂಬಿಕೆಗಳನ್ನು ಹೋಗಲಾಡಿಸಲು ಪ್ರಯತ್ನಿಸುತ್ತದೆ. ಇಂಥ ಪ್ರಯತ್ನಗಳ ನಡುವೆ ನೂರ್‌ನ ಅಸಾಮಾನ್ಯ ಪ್ರತಿಭೆಗೆ ಅನಾಮಿಕ ಮರುಳಾಗುತ್ತಾಳೆ ಮತ್ತು ಅನಾಮಿಕಳ ನಾಯಕತ್ವದ ಲಕ್ಷಣಗಳಿಗೆ ನೂರ್ ಮನಸೋಲುತ್ತಾನೆ.

ನೂರ್ ಕೆಲಸ ಹುಡುಕಿಕೊಂಡು ಬಂಗಾಳದಿಂದ ಬಂದವನಾದರೆ, ಅದೇ ಕಾಫಿ ಎಸ್ಟೇಟಿನಲ್ಲಿ ದುಡಿದು ಜೀವನ ಸಾಗಿಸಲು ಬಿಹಾರದಿಂದ ವಿಧವೆ ಅನಾಮಿಕಳೂ ಆಗಮಿಸಿರುತ್ತಾಳೆ. ಲಾಕ್‌ಡೌನ್ ಅವರಿಬ್ಬರ ಬದುಕಿನಲ್ಲಿ ಆರ್ಥಿಕ ಬಿಕ್ಕಟ್ಟನ್ನು ತರುತ್ತದೆ. ಆದರೆ ಎಸ್ಟೇಟ್ ಮಾಲೀಕ ವರದರಾಜನು ಅವರ ಸಮಸ್ಯೆಗಳಿಗೆ ಕಿವಿಯಾಗುವ ಬದಲು ಸಮಸ್ಯೆಗಳನ್ನು ಹೆಚ್ಚು ಮಾಡುತ್ತಾನೆ. ಆಗ ನೂರ್ ಮತ್ತು ಅನಾಮಿಕರಿಬ್ಬರೂ ಅಲ್ಲಿಂದ ತಪ್ಪಿಸಿಕೊಳ್ಳಲು ಯೋಜನೆಯನ್ನು ರೂಪಿಸುತ್ತಾರೆ. ಕಾದಂಬರಿ ಸುರು ಆಗುವುದೇ ಅವರಿಬ್ಬರ ಪರಾರಿ ಯೋಜನೆಯಿಂದ. ಮುಂದೆ ಕಾದಂಬರಿಯು ನೂರ್ ಮತ್ತು ಅನಾಮಿಕರ ನಡುವಣ ಸಂಬಂಧಗಳನ್ನು ಪರಿ ಶೋಧಿಸುತ್ತಾ ಕುತೂಹಲಕರವಾಗಿ ಬೆಳೆಯುತ್ತದೆ.

ಒಂದು ಉದಾತ್ತ ಸಂಬಂಧವನ್ನು ಮಾನವನ ಕೆಲವು ಇತಿ ಮಿತಿಗಳ ಚೌಕಟ್ಟಿನಲ್ಲಿ ಪರಿಶೀಲಿಸುವ ಈ ಕಾದಂಬರಿಯು ವರ್ತಮಾನ ಕಾಲದ ನಮ್ಮ ತಿಳಿವಿನ ಗಡಿ





ರೇಖೆಗಳನ್ನು ಗಮನಾರ್ಹವಾಗಿ ವಿಸ್ತರಿಸುತ್ತದೆ ಮತ್ತು ಕೆಲವು ಅಪಕಲ್ಪನೆಗಳನ್ನು ಹೋಗಲಾಡಿಸುತ್ತದೆ. ಈ ಸಂದರ್ಭಗಳಲ್ಲಿ ಕಾದಂಬರಿಯು ಕಲಾಕೃತಿಯೊಂದರ ಕೆಲವು ಗುಣಗಳನ್ನು ಮೀರಿ ವಾಚ್ಯವಾಗುವುದೂ ಇದೆ. ಸಂದೇಶ ಮುಖ್ಯವಾದಾಗ ಇದು ಅನಿವಾರ್ಯವಾಗುತ್ತದೆ.

ಅಂತಹ ಕೆಲವು ಉದಾಹರಣೆಗಳನ್ನು ಇಲ್ಲಿ ಗಮನಿಸಬಹುದು.

ಕಾದಂಬರಿಯ ಆರಂಭದಲ್ಲಿ ಕೊರೋನಾದಿಂದ ಮರಣಹೊಂದಿದ ಶಂಕರನ ವಿವರ ಬರುತ್ತದೆ. ಆ ಸಂದರ್ಭದಲ್ಲಿ ಕಾಯಿಲೆಗೆ ಮುಸ್ಲಿಮರ ಸಂಪರ್ಕದಲ್ಲಿ ಕಾರಣಗಳನ್ನು ಹುಡುಕುವುದನ್ನು ಕಾದಂಬರಿಯು ವಿಶ್ಲೇಷಿಸುತ್ತದೆ– ಯಾವ ಕೋನದಲ್ಲಿ ಯೋಚಿಸಿದರೂ ತನ್ನ ಗಂಡ ಕೊರೋನಾ ಪಾಸಿಟಿವ್ ಹೇಗಾದ ಅನ್ನುವ ಪ್ರಶ್ನೆಗೆ ಉತ್ತರವೇ ಸಿಗುತ್ತಿಲ್ಲ ಮತ್ತು ನಡು ನಡುವೆ ಬಿಕ್ಕುವಿಕೆ, ದೀರ್ಘ ಉಸಿರಾಟ. ತುಸು ಹೊತ್ತು ಎರಡೂ ಕಡೆಯಿಂದಲೂ ಮೌನ. ಬಳಿಕ ಆತ ಮೌನ ಮುರಿದ.

ಪಕ್ಕದ ಬ್ಯಾರಿ ಮುಸಲ್ಮಾನರ ಮನೆಯಿಂದ ಯಾರಾದ್ರೂ ನಮ್ಮ ಮನೆಗೆ ಬಂದಿದ್ದರೇ?

ಯಾವಾಗ? ಆಕೆಯ ಪ್ರಶ್ನೆ.

ಕಳೆದ ಎರಡ್ಮೂರು ವಾರಗಳಲ್ಲಿ.

ಇಲ್ವಲ್ಲ? ಯಾಕೆ?

ನಂಗೆ ಕೊರೋನಾ ಹೇಗೆ ಬಂತೂ ಅಂತ?

ಅದೇ ನಂಗೂ ಚಿಂತೇರಿ. ಬ್ಯಾರಿಗಳೊಂದಿಗೆ ಸಂಪರ್ಕವೇ ಇಲ್ಲದ ನಿಮಗೆ ಹೇಗೆ ಬಂತೂ ಅಂತ? ಲಾಕ್ಡೌನ್ ಸಡಿಲಿಕೆ ಆದಾಗ ಬ್ಯಾರಿಗಳನ್ನು ಸಂಪರ್ಕಿಸಿದ್ದಿರಾ? ಬ್ಯಾರಿಗಳ ಅಂಗಡಿಯಿಂದ ಏನನ್ನಾದರೂ ಖರೀದಿಸಿದ್ದಿರಾ? ರೇವತಿ ಆತಂಕ ತೋಡಿಕೊಂಡಳು.

ಕಾದಂಬರಿಯು ಹೀಗೆ ಬೆಳೆಯುತ್ತಾ ಹೋಗುತ್ತಿದ್ದಂತೆ ಭಾರತೀಯ ಸಮಾಜದ ಅನೇಕ ಅನಿಷ್ಟಗಳ ಬಗೆಗೂ ಮಾತುಗಳು ಬರುತ್ತವೆ. ಅಮಾನುಷವಾದ ಅಸ್ಪೃಶ್ಯತೆಯ ಕುರಿತು, ಅಭಿವೃದ್ಧಿಯ ಫಲಗಳು ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ತಲುಪಬೇಕಾದ ಅಗತ್ಯಗಳು, ಮಾಲ್ ಸಂಸ್ಕೃತಿಯು ಉಂಟು ಮಾಡಿದ ಹಾನಿಗಳು, ಕುಡಿತದ ಸಮಸ್ಯೆಗಳು, ಕಾಡನ್ನು ನಾಶ ಮಾಡಿ ಕಾಂಕ್ರಿಟ್ ಕಟ್ಟಡ ಕಟ್ಟುವವರು ಮಾಡುವ ಪರಿಸರ ವಿನಾಶ, ಕೋಮು ಜಗಳಗಳು ಸಮಾಜವನ್ನು ಒಡೆದು ಮಾನವ ಸಂಬಂಧಗಳನ್ನು ಛಿದ್ರಗೊಳಿಸುತ್ತಿರುವ ರೀತಿ, ಅಂತರಜಾತಿಯ ವಿವಾಹಗಳು, ಬುರ್ಖಾ ಸಮಸ್ಯೆ, ಲಿಂಗ ತಾರತಮ್ಯ, ಆಧುನಿಕ ತಂತ್ರಜ್ಞಾನವನ್ನು ಬಳಸಿ ವಿಷಬೀಜಗಳನ್ನು ಬಿತ್ತುವ ಪರಿ– ಮೊದಲಾದ ಅನೇಕ ಸಂಗತಿಗಳು ಕಾದಂಬರಿಯಲ್ಲಿ

ಹಸಿ ಹಸಿಯಾಗಿಯೇ ಕಾಣಿಸಿಕೊಳ್ಳುತ್ತವೆ. ಮುಂದಿನ ಸಾಲುಗಳನ್ನು ಗಮನಿಸಿರಿ–

ಲಾಕ್‌ಡೌನ್ ಘೋಷಣೆಯಾಗಿ ಒಂದು ವಾರ ಕಳೆಯುತ್ತಲೇ ಟಿ.ವಿ. ವಾರ್ತೆಗಳ ಸ್ವರೂಪವೇ ಬದಲಾಯಿತು. ಕೊರೋನಾವನ್ನು ಮುಸ್ಲಿಮರಿಗೆ ಜೋಡಿಸಿ, ಅವರು ಸೋಂಕು ಹರಡುತ್ತಿದ್ದಾರೆ ಎಂಬ ವಾರ್ತೆಗಳು ಮೇಲಿಂದ ಮೇಲೆ ಪ್ರಸಾರವಾಗತೊಡಗಿದುವು. ಟೊಪ್ಪಿ, ಪೈಜಾಮ, ಗಡ್ಡ ಇಟ್ಟ ಮುಸ್ಲಿಮರನ್ನು ಮತ್ತೆ ಮತ್ತೆ ತೋರಿಸುತ್ತಾ ಮಸೀದಿ, ನಮಾಝ್‌ಗಳ ವೀಡಿಯೋಗಳನ್ನು ಪ್ರಸಾರ ಮಾಡುತ್ತಾ, ಸಾರ್ವಜನಿಕವಾಗಿ ಒಂದು ನಿರ್ದಿಷ್ಟ ಅಭಿಪ್ರಾಯವನ್ನೇ ಅವು ರೂಪಿಸಿದುವು. ಮಾಧ್ಯಮಗಳು ಕೊಟ್ಟ ಕೆಲವು ಹೆಸರುಗಳನ್ನು ರೇವತಿ ನೆನಪಿಸಿಕೊಂಡಳು–

‘ಕೊರೋನಾ ಜಿಹಾದ್, ಮದ್ರಸ ವೈರಸ್, ಗರ್ಭಿಣಿ ವೈರಸ್, ತಬ್ಲೀಗಿ ವೈರಸ್.. ಹೀಗೆ ತರಹೇವಾರಿ ಹೆಸರುಗಳನ್ನು ಕೊಟ್ಟು ಟಿ.ವಿ. ಚಾನೆಲ್‌ಗಳು ಕೊರೋನಾಕ್ಕೆ ನಿರ್ದಿಷ್ಟ ಚಹರೆಯನ್ನು ಕೊಟ್ಟವು. ಆ ಬಳಿಕ ಮೊಬೈಲ್‌ಗಳಲ್ಲಿ ಪುಂಖಾನುಪುಂಖ ಸುದ್ದಿಗಳು, ವೀಡಿಯೋಗಳು. ಬ್ಯಾರಿಗಳು ಉದ್ದೇಶಪೂರ್ವಕವಾಗಿ ಸೋಂಕು ಹರಡುತ್ತಿದ್ದಾರೆ, ಅವರಿಂದ ಏನೂ ಖರೀದಿಸಬೇಡಿ, ಮುಟ್ಟಬೇಡಿ, ಅವರು ನೋಟಿಗೆ ಉಗುಳುತ್ತಾರೆ, ತರಕಾರಿಗಳಿಗೆ ಉಗುಳುತ್ತಾರೆ, ರಸ್ತೆಗೆ ಉಗುಳುತ್ತಾರೆ.. ಹೀಗೆ ಸುದ್ದಿಗಳೇ ಸುದ್ದಿಗಳು...’

ಇಂತಹ ಕಟು ವಾಸ್ತವವಾದೀ ಸಾಲುಗಳು ನಮ್ಮ ಕಣ್ಣೆದುರೇ ನಡೆದು ಹೋದ, ಈಗಲೂ ನಡೆಯುತ್ತಿರುವ ಅಪಾಯಕಾರೀ ಬೆಳವಣಿಗೆಗಳನ್ನು ಓದುಗರ ಗಮನಕ್ಕೆ ತರುವಲ್ಲಿ ಯಶಸ್ವಿಯಾಗಿದೆ. ಜೊತೆಗೆ ಕಾದಂಬರಿಯು ರೇವತಿಯ ಮೂಲಕ ಇವತ್ತಿಗೆ ಅಗತ್ಯವಾಗಿ ಬೇಕಾದ ಸಂದೇಶವೊಂದನ್ನೂ ನಮಗೆ ನೀಡುತ್ತದೆ– ‘ಈ ಜಗತ್ತಿನಲ್ಲಿರುವವರೆಲ್ಲ ಕೇವಲ ಮನುಷ್ಯರು ಮಕ್ಕಳೇ. ಯಾರೂ ಅನ್ಯರಿಲ್ಲ. ಎಲ್ಲರೂ ನಮ್ಮವರೇ. ಯಾರನ್ನೂ ಧರ್ಮದ ಕಾರಣಕ್ಕಾಗಿ ದ್ವೇಷಿಸಬೇಡಿ. ಕೆಟ್ಟವರು ಎಲ್ಲ ಧರ್ಮದಲ್ಲೂ ಇದ್ದಾರೆ, ಒಳ್ಳೆಯವರೂ ಎಲ್ಲ ಧರ್ಮದಲ್ಲಿ ಇದ್ದಾರೆ, ಕೆಟ್ಟವರ ಕೆಟ್ಟತನವನ್ನು ವಿರೋಧಿಸಿ. ಒಳ್ಳೆಯವರ ಒಳ್ಳೇತನವನ್ನು ಮೆಚ್ಚಿಕೊಳ್ಳಿ. ಇದರಾಚೆಗಿನ ಎಲ್ಲ ವಾದಗಳನ್ನೂ ತಿರಸ್ಕರಿಸಿ’.

ಕಾದಂಬರಿಯ ಉತ್ತರಾರ್ಧವು ಬಹುತೇಕವಾಗಿ ಇಸ್ಲಾಂ ಧರ್ಮದ ಬಗ್ಗೆ ಜನರಲ್ಲಿರುವ ತಪ್ಪುಕಲ್ಪನೆಗಳನ್ನು ನೂರ್‌ನ ವಿವರಣೆಗಳ ಮೂಲಕ ಹೋಗಲಾಡಿಸಲು ಪ್ರಯತ್ನಿಸುತ್ತದೆ. ಈ ನಿಟ್ಟಿನಲ್ಲಿ ಇದು ಬೊಳುವಾರು ಮುಹಮ್ಮದ್ ಕುಂಞಿಯವರ ಪ್ರಯತ್ನದ ಮುಂದುವರಿಕೆಯೂ ಹೌದು. ನೂರಾರು ವರ್ಷಗಳು ಜೊತೆಗೇ ಬದುಕಿದ ಹಿಂದೂ ಮುಸ್ಲಿಮರು ಪರಸ್ಪರ ತಿಳಿದುಕೊಳ್ಳಲು ಮಾಡಿದ ಪ್ರಯತ್ನಗಳು ಇಲ್ಲವೆಂಬಷ್ಟು ಕಡಿಮೆ. ದ್ವೇಷಿಸಲು ಹೇಳಿಕೊಟ್ಟಷ್ಟು ಪ್ರೀತಿಸಲು ಕಲಿಸಿದ್ದರೆ ಭಾರತದ ಇಂದಿನ





ಪರಿಸ್ಥಿತಿಯೇ ಬೇರೆ ಇರುತ್ತಿತ್ತು. ಮುಸ್ಲಿಮರ ಕುರಿತಾಗಿ ಮುಸ್ಲಿಮೇತರರಲ್ಲಿ ಇರುವ ಕೆಲವು ಜನಪ್ರಿಯ ನಂಬಿಕೆಗಳನ್ನು ಈ ಕಾದಂಬರಿ ದಿಟ್ಟವಾಗಿ ತಿರಸ್ಕರಿಸುತ್ತದೆ. ಮುಸ್ಲಿಮರ ಬಹುಪತ್ನಿತ್ವ ಮತ್ತು ಹೆಚ್ಚು ಮಕ್ಕಳ ಕಲ್ಪನೆ ಅಂತಹ ಒಂದು ಜನಪ್ರಿಯ ನಂಬಿಕೆ. ಅದರ ಕಾರಣಗಳನ್ನು ಕಾದಂಬರಿಯು ಚಾರಿತ್ರಿಕವಾಗಿ ವಿಶ್ಲೇಷಿಸುತ್ತದೆ–

ಯುದ್ಧದಲ್ಲಿ ಮೃತಪಟ್ಟ ಮುಸ್ಲಿಮ್ ಯೋಧರ ಅನಾಥ ಮಕ್ಕಳಿಗೆ ಇತರ ಮುಸ್ಲಿಮರು ಆಶ್ರಯ ಒದಗಿಸಬೇಕು. ಅವರ ಜೊತೆ ಅವರ ವಿಧವೆ ಪತ್ನಿಯರೂ ಇರುವುದು ಸಹಜ. ಅವರ ಆಶ್ರಯವೂ ನಿಮ್ಮ ಹೊಣೆಯಲ್ಲಿದೆ. ಆದರೆ ಇವರೆಲ್ಲರಿಗೆ ಆಶ್ರಯ ಕೊಟ್ಟ ಹೆಸರಲ್ಲಿ ನೀವು ಅವರ ಮೇಲೆ ಅಧಿಕಾರ ಸ್ಥಾಪಿಸಬಾರದು. ಅವರನ್ನು ಲೈಂಗಿಕವಾಗಿ ಶೋಷಿಸಬಾರದು. ಹಾಗೊಂದು ವೇಳೆ, ಅಂಥ ಸನ್ನಿವೇಶ ನಿರ್ಮಾಣವಾಗುವ ಸಂದರ್ಭ ಎದುರಾದರೆ, ಅವರನ್ನು ಪತ್ನಿಯಾಗಿ ಸ್ವೀಕರಿಸಿ ಆಶ್ರಯ ಕಲ್ಪಿಸಬೇಕು, ಇದು ಯುದ್ಧದ ಸಂದರ್ಭದಲ್ಲಿ ಉಂಟಾದ ವಿಷಮ ಪರಿಸ್ಥಿತಿಗೆ ನೀಡಲಾದ ಪರಿಹಾರವೇ ಹೊರತು ನಾಲ್ವರು ಪತ್ನಿಯರನ್ನು ಸಾರಾಸಗಟು ಹೊಂದಲು ಪ್ರೇರೇಪಿಸುವ ಅಥವಾ ಅನುಮತಿಸುವ ವಚನ ಅಲ್ಲ. ಒಂದುವೇಳೆ,

ಇದು ಮುಸ್ಲಿಮರ ಸಂಸ್ಕೃತಿ ಎಂದಾಗಿದ್ದರೆ, ಪ್ರತಿ ಊರಿನಲ್ಲೂ ಇಂಥವರು ಧಾರಾಳ ಕಾಣಸಿಗಬೇಕಿತ್ತು. ಮಾತ್ರವಲ್ಲ, ಮುಸ್ಲಿಮ್ ಸಮುದಾಯದಲ್ಲಿ ಹೆಣ್ಮಕ್ಕಳ ಕೊರತೆಯಾಗಿ ಹಾಹಾಕಾರ ಏಳಬಹುದಿತ್ತು... ಎಂಬಂಥ ಕಣ್ತೆರೆಸುವ ಮಾತುಗಳು ಇಲ್ಲಿವೆ. ಅದೇ ರೀತಿ,


ಇಸ್ಲಾಮಿನ ಸಹಿಷ್ಣು ಗುಣವನ್ನು ಕೂಡಾ ಇಲ್ಲಿ ಪ್ರತಿಪಾದಿಸಲಾಗಿದೆ.

ಇಡೀ ಕಾದಂಬರಿಯನ್ನು ಓದಿ ಮುಗಿಸಿದಾಗ ನಮಗೆ ಇಸ್ಲಾಂ ಧರ್ಮದ ಕೆಲವು ಮೂಲ ತತ್ವಗಳ ಕುರಿತು ತಿಳಿವಳಿಕೆ ಹೆಚ್ಚುತ್ತದೆ. ಇದೇನೂ ಸಣ್ಣ ಸಾಧನೆಯಲ್ಲ.

ನನಗೆ ಬಹಳ ಆಪ್ತವಾಗಿ ಕಂಡ ನೂರ್‌ನ ಕವಿತೆಯಂಥಾ ಒಂದು ಮಾತನ್ನು ಉದ್ಧರಿಸಿ ಈ ಮುನ್ನುಡಿಯನ್ನು ಮುಗಿಸಬಯಸುತ್ತೇನೆ. ಆತ ಹೇಳುತ್ತಾನೆ– ‘ಕಪ್ಪು ಬುರ್ಖಾ ಧರಿಸಿರುವ ನೀನು ಮತ್ತು ನಾನು ಜಗಳ ಮಾಡಿದರೆ ಈ ಸಮಾಜ ಅದನ್ನು ನೋಡಿ ಮಜಾ ಪಡೆಯುತ್ತದೆ. ನಕ್ಕು ಸುಮ್ಮನಾಗುತ್ತದೆ. ಆದರೆ ಹಣೆಗೆ ಬಿಂದಿ ಹಾಕಿರುವ ನೀನು ಮತ್ತು ನಾನು ಜಗಳವಾಡಿದರೆ ಹಿಂದೂ ಮಹಿಳೆಯ ಮೇಲೆ ಮುಸ್ಲಿಮನಿಂದ ಹಲ್ಲೆ ಎಂದು ರೊಚ್ಚಿಗೇಳುತ್ತದೆ. ಘರ್ಷಣೆಗೆ ನಿಲ್ಲುತ್ತದೆ. ಬುರ್ಖಾದ ಒಳಗಿದ್ದುಕೊಂಡು ನೀನು ನನ್ನೊಂದಿಗೆ ಜಗಳ ಮಾಡಿದರೆ ಅದು ಮನರಂಜನೆ, ಬುರ್ಖಾದಿಂದ ಹೊರಬಂದು ನೀನು ಜಗಳ ಮಾಡಿದರೆ ಅದು ಧರ್ಮಗಳ ನಡುವಿನ ಸಂಘರ್ಷ. ಧರ್ಮಗಳೆಲ್ಲ ಸಂಕೇತಗಳಲ್ಲಿ ಬಂಧಿಯಾಗಿರುವುದರ ಪರಿಣಾಮ ಇದು. ನೀನು ಮುಸ್ಲಿಮ್ ಆಗುವುದು ಪರ್ದಾ ಧರಿಸಿರುವುದರಿಂದ

ಅಲ್ಲ. ಗಡ್ಡ ಮತ್ತು ಟೋಪಿ ಧರಿಸಿರುವುದರಿಂದಾಗಿ ನಾನು ಮುಸ್ಲಿಮ್ ಆಗಿರುವುದೂ ಅಲ್ಲ...'

ಹೀಗೆ ಈ ಕಾದಂಬರಿಯು ಅನೇಕ ಸಮಸ್ಯೆಗಳನ್ನು ಮೈಮೇಲೆಳೆದುಕೊಂಡು ಕ್ರಿಯಾಶೀಲವಾಗಿದೆ. ಒಮ್ಮೊಮ್ಮೆ ಇವೆಲ್ಲವನ್ನೂ ತಾಳಿಕೊಳ್ಳುವ ಶಕ್ತಿ ಈ ಕೃತಿಗಿದೆಯೇ ಎಂಬ ಸಂಶಯವೂ ಬರುವುದುಂಟು. ಇಷ್ಟಿದ್ದರೂ ನಮ್ಮ ಕಾಲದ ಮುಖ್ಯ ಸಮಸ್ಯೆಗಳಿಗೆ ದಿಟ್ಟವಾಗಿ ಮುಖಾಮುಖಿಯಾಗುತ್ತಾ, ಓದುಗರ ಅರಿವಿನ ವಲಯಗಳನ್ನು ವಿಸ್ತರಿಸಿದ ಕುಕ್ಕಿಲರಿಗೆ ನಾವು ಅಭಿನಂದನೆಗಳನ್ನು ಹೇಳಲೇಬೇಕು.



**ಪ್ರೊ| ಪುರುಷೋತ್ತಮ ಬಿಳಿಮಲೆ**
**ಮಾಜಿ ಮುಖ್ಯಸ್ಥರು, ಕನ್ನಡ ಅಧ್ಯಯನ ಪೀಠ**
**ಜೆ.ಎನ್.ಯು. ವಿವಿ, ನವದೆಹಲಿ**





# ಜನ್ಮತಃ ಯಾರೂ ಕೆಟ್ಟವರಲ್ಲ
# ಶಂಕರನೂ ಅಷ್ಟೇ, ಕುಮಾರನೂ ಅಷ್ಟೇ

**ಈ** ಕಾದಂಬರಿಯನ್ನು ಬರೆಯುವುದಕ್ಕೆ ಕೊರೋನಾ ಕಾರಣವೋ? ಅಥವಾ

ಅದೊಂದು ನೆಪವೋ?

ಈ ಕಾದಂಬರಿಯನ್ನು ಬರೆದು ಮುಗಿಸಿದ ಬಳಿಕ ನನ್ನೊಳಗೆ ಹುಟ್ಟಿಕೊಂಡ ಪ್ರಶ್ನೆಗಳಿವು. ಈ ಪ್ರಶ್ನೆಗೆ ಖಚಿತ ಉತ್ತರ ಕೊಡಬಲ್ಲೆ ಎಂಬ ವಿಶ್ವಾಸ ಈಗಲೂ ನನ್ನಲ್ಲಿಲ್ಲ.

ಕೊರೋನಾ ಒಂದು ಕಾಯಿಲೆಯಾಗಿ ಈ ದೇಶವನ್ನು ಕಾಡಿದ್ದಕ್ಕಿಂತಲೂ ಹೆಚ್ಚಾಗಿ ಜನಾಂಗೀಯವಾಗಿ ಕಾಡಿದ್ದೇ ಹೆಚ್ಚು. 2020 ಮಾರ್ಚ್‌ನ ಕೊನೆ ವಾರದಲ್ಲಿ ಈ ದೇಶದಲ್ಲಿ ಘೋಷಿಸಲಾದ ಲಾಕ್‌ಡೌನ್ ಮತ್ತು ಆ ಬಳಿಕದ ಎರಡ್ಮೂರು ತಿಂಗಳುಗಳು ಈ ದೇಶದ ನಿಜವಾದ ಕಾಯಿಲೆ ಏನು ಎಂಬುದಕ್ಕೆ ಕನ್ನಡಿ ಹಿಡಿದಿದ್ದುವು.

ಸಾಂಕ್ರಾಮಿಕ ಕಾಯಿಲೆ ಈ ಜಗತ್ತಿಗೂ ಹೊಸತಲ್ಲ,

ಭಾರತಕ್ಕೂ ಹೊಸತಲ್ಲ. ಕೊರೋನಾವನ್ನೇ ಹೋಲುವ ಸಾರ್ಸ್, ಎಬೋಲಾ, ಪ್ಲೇಗ್‌ಗಳೆಲ್ಲಾ ಈ ಜಗತ್ತನ್ನು ಕಾಡಿವೆ. ಊರಿಗೆ ಊರನ್ನೇ ಕಂಗಾಲುಗೊಳಿಸಿವೆ. ಪ್ರತಿ 5ರಿಂದ 10 ವರ್ಷಗಳಿಗೊಮ್ಮೆ ಯಾವುದಾದರೊಂದು ಸಾಂಕ್ರಾಮಿಕ ವೈರಸ್ ಜಗತ್ತನ್ನು ಸುತ್ತಾಡುವುದು ಮಾಮೂಲಿ. ಕೊರೋನಾ ಒಂದಷ್ಟು ಹೆಚ್ಚೇ ರಾಷ್ಟ್ರಗಳನ್ನು ಸುತ್ತಾಡಿದೆ ಎಂಬುದನ್ನು ಬಿಟ್ಟರೆ, ಸಾಂಕ್ರಾಮಿಕ ರೋಗವೆಂಬ ನೆಲೆಯಲ್ಲಿ ಅದು ಇತಿಹಾಸ ಕಂಡರಿಯದ ಮಹಾಮಾರಿ ಏನಲ್ಲ. ಆಧುನಿಕ ತಂತ್ರಜ್ಞಾನದ ಕಾರಣದಿಂದ ಜಗತ್ತು ಮುಷ್ಠಿಯೊಳಗೆ ಬಂದಿರುವುದರಿಂದ ಈಗಿನ ಸಾಂಕ್ರಾಮಿಕ ಕಾಯಿಲೆಗಳು ಚಿಟಿಕೆ ಹೊಡೆಯುವುದರೊಳಗೆ ಒಂದು ರಾಷ್ಟ್ರದಿಂದ ಇನ್ನೊಂದು ರಾಷ್ಟ್ರಕ್ಕೆ ಅನಾಯಾಸವಾಗಿ ಪ್ರವೇಶಿಸಬಲ್ಲವು ಎಂಬುದಷ್ಟೇ ವ್ಯತ್ಯಾಸ. ನಿಜಕ್ಕೂ ಒಂದು ದೇಶವಾಗಿ ಅಥವಾ ಅದಕ್ಕಿಂತಲೂ ವಿವಿಧ ಧರ್ಮೀಯರಿರುವ ಒಂದು ಜನಸಮೂಹವಾಗಿ ನಾವು ಕೊರೋನಾದ ವಿರುದ್ಧ ಹೋರಾಡಬೇಕಿದ್ದುದು ಹೇಗೆ? ಹೋರಾಡಿದ್ದು ಹೇಗೆ?

ಈ ಪ್ರಶ್ನೆ ಈ 2020 ಪ್ರಶ್ನೆಯಾಗಿಯಷ್ಟೇ ಉಳಿಯಲ್ಲ. ಮುಂದಿನ ತಲೆಮಾರನ್ನೂ ಈ ಪ್ರಶ್ನೆ ಕಾಡಲಿದೆ. ಮಾತ್ರವಲ್ಲ, ಆ ತಲೆಮಾರು ತನ್ನ ಪೂರ್ವಜನರನ್ನು ಜನಾಂಗೀಯವಾದಿಗಳಾಗಿ ಮತ್ತು ಧರ್ಮಾಂಧರಾಗಿ ಗುರುತಿಸುವ ಸಾಧ್ಯತೆಯೂ ಇದೆ. ಅಷ್ಟಕ್ಕೂ,

ಯಕಶ್ಚಿತ್ ವೈರಸೊಂದು 130 ಕೋಟಿ ಜನಸಂಖ್ಯೆಯನ್ನು ಧರ್ಮಾಧಾರಿತವಾಗಿ ವಿಭಜಿಸಲು ಹೇಗೆ ಶಕ್ತವಾಯಿತು? ಮಾರ್ಚ್ 24, 2020ರಂದು ದೇಶದಲ್ಲಿ ಲಾಕ್‌ಡೌನ್ ಘೋಷಿಸಲಾದ ಬಳಿಕದ ಎರಡ್ಮೂರು ತಿಂಗಳುಗಳಲ್ಲಿ ಈ ದೇಶದ ಮಾಧ್ಯಮಗಳು ಮಾತಾಡಿದ್ದು ಹೇಗೆ? ರಾಜಕಾರಣಿಗಳು ಹೇಳಿದ್ದು ಏನನ್ನು? ಪೊಲೀಸರು ನಡಕೊಂಡದ್ದು ಹೇಗೆ? ನಾಗರಿಕರ ವರ್ತನೆ ಏನಿತ್ತು? ಮುಸ್ಲಿಮರನ್ನು ಹಣಿಯುವುದಕ್ಕೆ, ದ್ವೇಷಿಸುವುದಕ್ಕೆ ಮತ್ತು ಅವಮಾನಿಸುವುದ್ಕಾಗಿಯೇ ಯಾರೋ ಲ್ಯಾಬೋರೇಟರಿಯಲ್ಲಿ ಕೃತಕವಾಗಿ ಈ ವೈರಸನ್ನು ಸೃಷ್ಟಿ ಮಾಡಿದರೋ ಎಂದು ನಂಬುವಂಥಾದದ್ದು ಏಕೆ? ಕೊರೋನಾ ಜಿಹಾದ್, ಕೊರೋನಾ ಟೆರರಿಸಂ ಮುಂತಾದ ಪದಗಳು ಎಗ್ಗಿಲ್ಲದೇ ಚಾಲ್ತಿಗೆ ಬಂದುದು ಹೇಗೆ?

ಕೊರೋನಾಕ್ಕೆ ಈ ದೇಶದ ಪ್ರತಿಕ್ರಿಯೆ ಹೇಗಿತ್ತು ಎಂಬ ಬಗ್ಗೆ ಮುಂದಿನ ತಲೆಮಾರು ಎಂದಾದರೂ ಜಿಜ್ಞಾಸೆಗೆ ಇಳಿದರೆ ಈ ಎಲ್ಲ ಪ್ರಶ್ನೆಗಳನ್ನು ಎದುರಿಟ್ಟುಕೊಂಡು ಕಂಗಾಲಾದಾವು.

ಈ ಕಾದಂಬರಿಯನ್ನು ಬರೆಯಬೇಕೆಂದು ಅನಿಸಿದ್ದು ಈ ಎಲ್ಲ ಪ್ರಶ್ನೆಗಳಿಂದಾಗಿಯೇ.

ಓರ್ವ ಮಾಧ್ಯಮ ಕ್ಷೇತ್ರದ ವ್ಯಕ್ತಿಯೆಂಬ ನೆಲೆಯಲ್ಲಿ ಪ್ರತಿದಿನದ ಬೆಳವಣಿಗೆಗಳ ಮೇಲೆ ಒಂದು ಕಣ್ಣಿಟ್ಟಿರುವುದು ನನ್ನ ಕರ್ತವ್ಯವಾಗಿತ್ತು. ಕೊರೋನಾ ಕಾಲವೂ





ಇದಕ್ಕಿಂತ ಹೊರತಲ್ಲ. ನನ್ನೊಳಗನ್ನು ತಟ್ಟಿದ ನೂರಾರು ಸುದ್ದಿಗಳನ್ನು ಪತ್ರಿಕೆಯ ವೆಬ್ ಪೋರ್ಟಲ್‌ಗಾಗಿ ತಯಾರಿಸುವಾಗ ಮನಸನ್ನು ಕಲ್ಲಾಗಿಸುತ್ತಿದ್ದೆ. ಕೆಲವೊಮ್ಮೆ ಸಿಟ್ಟು, ಕೆಲವೊಮ್ಮೆ ದುಃಖ, ಕೆಲವೊಮ್ಮೆ ಹತಾಶೆ, ಸಂಕಟಗಳು ಒತ್ತೊತ್ತಾಗಿ ಮುತ್ತಿಕೊಳ್ಳುತ್ತಿದ್ದುವು. ಏನೆಲ್ಲ ಆಗಬಾರದ್ದು ಆಗುತ್ತಿದೆ, ನನ್ನ ದೇಶವೇಕೆ ಇಷ್ಟು ಕ್ರೂರಿಯಾಗುತ್ತಿದೆ ಎಂದೆಲ್ಲಾ ಬಾರಿ ಬಾರಿಗೂ ಅನಿಸುತ್ತಿತ್ತು. ಛೆ, ಛೆಛೆ ಎಂದು ಸಂಕಟಪಡುವುದರ ಹೊರತಾಗಿ ಇನ್ನೇನೂ ಮಾಡಲು ಸಾಧ್ಯವಿಲ್ಲ ಎಂದು ಅನಿಸತೊಡಗಿದಾಗ ಈ ಕಾದಂಬರಿ ಎಲ್ಲೋ ಮನದೊಳಗೆ ಗೂಡು ಕಟ್ಟತೊಡಗಿರಬೇಕು ಎಂದು ಅನಿಸುತ್ತದೆ. ಏನನ್ನೋ ಹೇಳಬೇಕಿತ್ತು. ಹಾಗಲ್ಲ, ಹೀಗೆ ಎಂದು ವಿವರಿಸಬೇಕಿತ್ತು. ಹಾಗೆ ಅನಿಸತೊಡಗಿದಾಗ ಮತ್ತು ಈ ಅನಿಸಿಕೆ ಒತ್ತಡವಾಗಿ ಮಾರ್ಪಡತೊಡಗಿದಾಗ ಕೊನೆಗೆ ಈ ಕಾದಂಬರಿಯ ಬರವಣಿಗೆಗೆ ಇಳಿದೆ. ಹಾಗಂತ,

ಒಂದು ಕಾದಂಬರಿಯ ಆರಂಭ ಹೀಗೆಯೇ ಇರಬೇಕು, ಕೊನೆ ಹಾಗಿರಬೇಕು, ಮಧ್ಯದ ಭಾಗ ಹೀಗಿರಬೇಕು ಎಂಬಂಥ ಸಿದ್ಧ ಸೂತ್ರದ ಬೆನ್ನೇರಿ ನಾನು ಬರೆದಿಲ್ಲ. ಅನಾಮಿಕ ಮತ್ತು ನೂರ್ ಹಾಗೂ ಶಂಕರ ಮತ್ತು ರೇವತಿ– ಈ ನಾಲ್ಕು ಪಾತ್ರಗಳ ಮೂಲಕ ಕತೆಯನ್ನು ಹೇಳುವ ಉದ್ದೇಶವಷ್ಟೇ ನನ್ನಲ್ಲಿತ್ತು. ಯಾವ ಪಾತ್ರವೂ ಕೆಟ್ಟದಲ್ಲ. ಸಮಯ, ಸಂದರ್ಭ, ಸನ್ನಿವೇಶ, ಪರಿಸ್ಥಿತಿಗಳು ಮನುಷ್ಯರನ್ನು ಒಳ್ಳೆಯವರನ್ನಾಗಿಯೂ ಕೆಟ್ಟವರನ್ನಾಗಿಯೂ ಮಾರ್ಪಡಿಸುತ್ತದೆಯೇ ಹೊರತು ಜನ್ಮತಃ ಎಲ್ಲರೂ ಒಳ್ಳೆಯವರೇ ಎಂಬುದು ನನ್ನ ಭಾವನೆ. ಈ ಕಾದಂಬರಿಯಲ್ಲಿ ಬರುವ ಶಂಕರ, ಕುಮಾರ ಅಥವಾ ವರದರಾಜರಿಗೂ ಇದೇ ಮಾತು ಅನ್ವಯಿಸುತ್ತದೆ. ಯಾವುದೋ ಒಂದು ಕ್ಷಣ, ಎಲ್ಲೋ ಸಿಕ್ಕಿದ ಒಂದು ತಪ್ಪು ಜ್ಞಾನ, ಎಂದೋ ಆದ ಕೆಟ್ಟ ಅನುಭವ... ಇತ್ಯಾದಿಗಳು ವ್ಯಕ್ತಿಯ ಆಲೋಚನೆಯ ದಿಕ್ಕನ್ನೇ ಬದಲಿಸುವುದಿದೆ. ಶಂಕರ ಇಂಥದ್ದೊಂದು ಪರಿಸ್ಥಿತಿಯ ಕೂಸು.

ಆತನ ಜೊತೆಗೆ ಇರುವ ರೇವತಿಗೆ ಅದು ಜೀರ್ಣವೇ ಆಗುವುದಿಲ್ಲ. ಒಂದೇ ಮನೆಯಲ್ಲಿದ್ದೂ, ಒಂದೇ ಹಾಸಿಗೆಯಲ್ಲಿ ಮಲಗಿಯೂ, ಒಂದೇ ಬಾವಿಯ ನೀರನ್ನು ಕುಡಿದೂ, ಒಂದೇ ಬಟ್ಟಲಿನ ಆಹಾರವನ್ನು ಸೇವಿಸಿಯೂ ಶಂಕರನ ಆಲೋಚನೆಯೇ ಬೇರೆ, ರೇವತಿಯ ಆಲೋಚನೆಯೇ ಬೇರೆ.

ನಾನು ಈ ಪಾತ್ರಗಳ ಮೂಲಕ ಏನನ್ನು ಹೇಳಹೊರಟಿರುವೆನೋ ಅವುಗಳಲ್ಲಿ ಈ ಸಂದೇಶವೂ ಒಂದು.

ಹೇಳಿದ್ದು ಅತಿಯಾಯ್ತು ಅನ್ಸುತ್ತೆ.

ಈ ಕಾದಂಬರಿಯನ್ನು ಬರೆದಾದ ಬಳಿಕ ಮೊದಲು ಓದುವ ಕಷ್ಟ ಕೊಟ್ಟದ್ದು ಪ್ರೀತಿಯ ಬೊಳುವಾರು ಮಹಮ್ಮದ್ ಕುಂಞಿಯವರಿಗೆ. ಅವರ ಸಲಹೆಗಳು ಈ

ಕಾದಂಬರಿಯನ್ನು ಅರ್ಥಪೂರ್ಣವಾಗಿಸುವಲ್ಲಿ ಸಾಕಷ್ಟು ನೆರವಾಗಿವೆ. ನಿಮಗೆ ಈ ಕಾದಂಬರಿ ಇಷ್ಟವಾದರೆ, ಆ ಇಷ್ಟದಲ್ಲಿ ಅವರೂ ಪಾಲುದಾರರು ಎಂದು ವಿನೀತನಾಗಿ ಹೇಳುವೆ. ಅವರಿಗೆ ಋಣಿ.

ಈ ಕಾದಂಬರಿಯನ್ನು ಓದಿ ಸಲಹೆ-ಸೂಚನೆ ನೀಡಿದವರ ಮತ್ತು ಅಭಿಪ್ರಾಯವನ್ನು ಹಂಚಿಕೊಂಡವರ ಪುಟ್ಟ ಪಟ್ಟಿಯೇ ಇದೆ. ವಾರ್ತಾಭಾರತಿ ಪತ್ರಿಕೆಯ ಪ್ರಧಾನ ಸಂಪಾದಕರಾದ ಅಬ್ದುಸ್ಸಲಾಮ್ ಪುತ್ತಿಗೆ, ನ್ಯಾಯವಾದಿ ಪುನೀತ್ ಅಪ್ಪು, ಯುವ ನ್ಯಾಯವಾದಿ ತಲ್ಹಾ ಇಸ್ಮಾಈಲ್, ಗೆಳೆಯ ದಾನಿಶ್ ಚೆಂಡಾಡಿ, ಇರ್ಶಾದ್ ಬೈರಿಕಟ್ಟೆ, ಮೈಸೂರಿನ ಟೆಕ್ಕಿ ಗಿರಿಧರ್ ಭಟ್ ಗುಂಜಗೋಡು, ನಾದಿನಿ ರಹೀನಾ, ತಂಗಿ ಆರಿಫಾ, ಇರ್ಶಾದ್ ವೇಣೂರು ಎಲ್ಲರೂ ಈ ಕಾದಂಬರಿಯನ್ನು ಚೆಲುವಾಗಿಸುವಲ್ಲಿ ಕೊಡುಗೆಯನ್ನು ನೀಡಿದ್ದಾರೆ. ಇವರೆಲ್ಲರಿಗೂ ಆಭಾರಿಯಾಗಿದ್ದೇನೆ.

ಈ ಕಾದಂಬರಿ ಹೀಗೆ ಪುಸ್ತಕ ರೂಪದಲ್ಲಿ ನಿಮ್ಮ ಕೈಯಲ್ಲಿದ್ದರೆ, ಅದಕ್ಕೆ ರೂಪ ಪ್ರಕಾಶನದ ಮಹೇಶ್ ಮತ್ತು ಸಾಹಿತಿ ಅರವಿಂದ್ ಚೊಕ್ಕಾಡಿ ಕಾರಣಕರ್ತರು. ಅವರಿಬ್ಬರಿಗೂ ಹೃದಯಾಂತರಾಳದ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ನನ್ನ ಹೆತ್ತವರು, ಒಡ ಹುಟ್ಟಿದವರು, ನಾದಿನಿಯರನ್ನು ಈ ಸಂದರ್ಭದಲ್ಲಿ ನೆನೆಯುತ್ತೇನೆ. ಇವರೆಲ್ಲ ತೋರಿದ ಪ್ರೀತಿ, ಪ್ರೋತ್ಸಾಹಕ್ಕೆ ಆಭಾರಿಯಾಗಿದ್ದೇನೆ. ನನ್ನನ್ನು ಇಷ್ಟು ಎತ್ತರಕ್ಕೆ ಬೆಳೆಸಿದ ಸನ್ಮಾರ್ಗ ಪತ್ರಿಕೆಗೆ ಋಣಿಯಾಗಿದ್ದೇನೆ. ಬರೆಯಲು ಪ್ರೋತ್ಸಾಹಿಸಿದ ಡಿ.ಕೆ. ಇಬ್ರಾಹೀಮ್ ಮತ್ತು ಎಂ.ಎ. ಶುಕೂರ್ ಅವರೂ ನನ್ನ ನೆನಪಿನಲ್ಲಿದ್ದಾರೆ. ಅಂದವಾಗಿ ಅಕ್ಷರ ಜೋಡಿಸಿ ಕೊಟ್ಟ ಮುಜೀಬ್ ಮತ್ತು ತೌಸೀಫ್‌ರಿಗೆ ಕೃತಜ್ಞತೆಗಳು.

ಮನದನ್ನೆ ಶಮೀಮಳಿಗೆ ಹಣೆಗೊಂದು, ಕೆನ್ನೆಗೊಂದು.

ಎಲ್ಲಕ್ಕಿಂತ ಮಿಗಿಲಾಗಿ ಕರುಣಾಳು ಅಲ್ಲಾಹುವಿಗೆ ಸ್ತುತಿಗಳು.



**ಏ.ಕೆ. ಕುಕ್ಕಿಲ**

9880096128





# ಓದುಗರು ಏನೆನ್ನುತ್ತಾರೆ?

# ನಿಜ ಬದುಕಿಗೆ ತೀರಾ ನಿಕಟವಾದ ಕಾದಂಬರಿ

**ಎ.**ಕೆ. ಕುಕ್ಕಿಲ ಎಂದೇ ಜನಪ್ರಿಯರಾಗಿರುವ ನಮ್ಮ ನಾಡಿನ ಯುವ ಪತ್ರಕರ್ತ ಹಾಗೂ ಪ್ರತಿಭಾವಂತ ಬರಹಗಾರ ಅಬ್ದುಲ್ ಕಾದರ್ ಕುಕ್ಕಿಲ ಅವರು ರಚಿಸಿರುವ ಕಾದಂಬರಿ ವೈರಸ್ ನಿಮ್ಮ ಕೈಯಲ್ಲಿದೆ.

ಎಳೆವಯಸ್ಸಿನಲ್ಲೇ ಒಂದು ಸಾಪ್ತಾಹಿಕದ ಸಂಪಾದಕರಾಗಿ ಮತ್ತು ಸಾಹಿತ್ಯ ರಂಗದ ವಿವಿಧ ಪ್ರಕಾರಗಳಲ್ಲಿ ಕೈಯಾಡಿಸಿ ಅನುಭವ ಪಡೆದಿರುವ ಕುಕ್ಕಿಲ, ಏನನ್ನು ಬರೆದರೂ ಸೊಗಸಾಗಿಯೇ ಬರೆಯುತ್ತಾರೆ.

ಅವರ, ಪುಟ್ಟ ಪುಟ್ಟ 34 ಅಧ್ಯಾಯಗಳಿರುವ, ಮಧ್ಯಮ ಗಾತ್ರದ ವೈರಸ್ ಕಾದಂಬರಿಯು ನಮ್ಮ ಸಮಕಾಲೀನ ಸನ್ನಿವೇಶದ ಕಡುಬಡತನ, ಕೌಟುಂಬಿಕ ಅಸ್ಥಿರತೆ, ನಗರೀಕರಣದ ಪ್ರತಿಕೂಲ ಪರಿಣಾಮಗಳು, ಸಾಮಾಜಿಕ ಸಂಬಂಧಗಳು ಇತ್ಯಾದಿ ಹಲವು ಆಯಾಮಗಳ ಮೇಲೆ ಬೆಳಕು ಚೆಲ್ಲುತ್ತದೆ. ವಿಶೇಷವಾಗಿ 'ಕೊರೋನಾ' ಎಂಬ ತೀರಾ ಇತ್ತೀಚಿನ ಕಠಿಣ ಸವಾಲು ಮತ್ತು ಆ ಮೂಲಕ ವಿವಿಧ ವರ್ಗಗಳು, ಅದರಲ್ಲೂ ಮುಖ್ಯವಾಗಿ ಅಸಂಘಟಿತ ಕಾರ್ಮಿಕ ವಲಯಗಳು ಎದುರಿಸಬೇಕಾಗಿ ಬಂದ ತೀರಾ ಪ್ರತಿಕೂಲವಾದ, ಅಸ್ತಿತ್ವ ಸಂಬಂಧಿ ಸನ್ನಿವೇಶಗಳನ್ನು ಇದರಲ್ಲಿ ಪರಿಣಾಮಕಾರಿಯಾಗಿ ನಿರೂಪಿಸಲಾಗಿದೆ.

ಕೊರೋನಾ ತಂದ ವಿಷಮ ಸ್ಥಿತಿಯನ್ನು ಬಳಸಿ ಸಮಾಜದಲ್ಲಿ ಬಿರುಕು ಮೂಡಿಸಲು ನಡೆಸಲಾದ ರಾಜಕೀಯ ಪ್ರೇರಿತ ಕೊಳಕು ಶ್ರಮಗಳು ಮತ್ತು ಅದರ ಫಲಸ್ವರೂಪವಾಗಿ ಹಲವೆಡೆ ತಲೆ ಎತ್ತಿದ ಉದ್ವಿಗ್ನತೆ, ಸಂದಿಗ್ಧತೆ ಹಾಗೂ ನೂತನ ಬಗೆಯ 'ಮಾರುಕಟ್ಟೆ ಮಡಿವಂತಿಕೆ'ಯನ್ನು ವೈರಸ್‌ನಲ್ಲಿ ಸೊಗಸಾಗಿ ಚಿತ್ರಿಸಲಾಗಿದೆ. ಎಲ್ಲ ಪ್ರತಿಕೂಲ ಬೆಳವಣಿಗೆ ಮತ್ತು ಒತ್ತಡಗಳ ನಡುವೆ ಅಲ್ಲಲ್ಲಿ ಎದ್ದು ಕಾಣುವ ತೀರಾ ವಿಭಿನ್ನ ಹಿನ್ನೆಲೆಯ ಮಾನವರಲ್ಲಿ ಅಡಗಿರುವ ಸ್ವಾಭಾವಿಕವಾದ ಸೌಜನ್ಯ ಮತ್ತು ಸಜ್ಜನಿಕೆಯ ಕಡೆಗೆ ಇಲ್ಲಿ ಗಮನ ಸೆಳೆಯಲಾಗಿದೆ.

ಕಾಲ ಕಳೆದಂತೆ ನಮ್ಮಲ್ಲೀಗ ಉದ್ದದ ಬರಹಗಳ ಬಗ್ಗೆ ಮತ್ತು ವಿಶೇಷವಾಗಿ ಉಪದೇಶಗಳ ಬಗ್ಗೆ ಅಸಹನೆ ಹೆಚ್ಚುತ್ತಿದೆ. ಹಾಗೆಯೇ, ಸಂಕ್ಷಿಪ್ತ ಬರಹಗಳ ಕಡೆಗೆ ಒಲವು ಹೆಚ್ಚುತ್ತಿದೆ. ಇದಕ್ಕೆ ಪರಿಹಾರವೆಂಬಂತೆ ವೈರಸ್ ಅನ್ನು ಸಂಭಾಷಣೆ ಕೇಂದ್ರಿತವಾಗಿ ರಚಿಸಲಾಗಿದೆ. ಉಪದೇಶಗಳ ಬದಲು ರೋಚಕ ಸನ್ನಿವೇಶಗಳ ಮೂಲಕ ಪಾಠಗಳನ್ನು ಹೇಳಲಾಗಿದೆ. ಪುಟ್ಟ ಅಧ್ಯಾಯಗಳು ಓದುಗರ ಕುತೂಹಲವನ್ನು ಉಳಿಸಿಕೊಳ್ಳುತ್ತವೆ.

ನಮ್ಮ ಕುಕ್ಕಿಲ, ಸಮಾಜದ ವಾಸ್ತವ ಮತ್ತು ಅದರ ದಿಕ್ಕು ದೆಸೆಗಳ ಬಗ್ಗೆ ಸಂವೇದನಾಶೀಲರು. ಸಮಾಜವನ್ನು ಬದಲಿಸಬೇಕೆಂಬ ಕಾಳಜಿ, ಹಂಬಲ ಉಳ್ಳವರು. ಸಾಮಾನ್ಯವಾಗಿ ಆಶಾವಾದವನ್ನು ಕೈಬಿಡದೆ, ಆದರ್ಶ ಸಮಾಜದ ಕನಸನ್ನು ಪೋಷಿಸುತ್ತಾ ನಡೆಯುವವರು ತಮ್ಮ ಕಾಲದ ಸಮಾಜವು ತಾವು ನೆಚ್ಚಿಕೊಂಡ ಆದರ್ಶಗಳಿಗೆ ತೀರಾ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿರುವಾಗ ಮತ್ತು ಅದನ್ನು ಬದಲಿಸಲು ತಕ್ಷಣವಂತೂ ತಮ್ಮಿಂದ ಸಾಧ್ಯವಿಲ್ಲ ಎಂದು ಮನವರಿಕೆಯಾದಾಗ ಕಾದಂಬರಿಗಳಲ್ಲಿ ಆಶ್ರಯ ಕಾಣುವುದುಂಟು. ಕಾದಂಬರಿಗಳಲ್ಲಿರುವ ಅನುಕೂಲವೇನೆಂದರೆ, ಅಲ್ಲಿ ನೀವು, ನಿಮಗೆ ಬೇಕಾದ ಪಾತ್ರಗಳನ್ನೂ ಸನ್ನಿವೇಶಗಳನ್ನೂ ನೀವೇ ಸೃಷ್ಟಿಸಿ, ಯಾವ ಸಮಾಜವನ್ನೂ ನಿಮಗೆ ಬೇಕಾದ ದಿಕ್ಕಿಗೆ ಒಯ್ಯಬಹುದು. ಆದರೆ,

ಕಾದಂಬರಿ ಬರೆಯುವುದೆಂದರೆ ಅಷ್ಟೇನೂ ಸುಲಭದ ಕೆಲಸವಲ್ಲ. ನಾನು ಬರೆಯಲಾರಂಭಿಸಿ ನಾಲ್ಕು ದಶಕಗಳೇ ಕಳೆದಿವೆ. ಆದರೆ ಈ ಅವಧಿಯಲ್ಲಿ ಕಾದಂಬರಿಯಂತಿರಲಿ, ಒಂದು ಸಣ್ಣ ಕತೆಯನ್ನು ಬರೆಯಲಿಕ್ಕೂ ನನಗೆ ಸಾಧ್ಯವಾಗಿಲ್ಲ. ಈ ದೃಷ್ಟಿಯಿಂದ, ಸಮಾಜಕ್ಕೆ ದಿಕ್ಕು ತೋರಿಸುವಂತಹ, ಆಸಕ್ತಿಯೊಂದಿಗೆ ಓದಲು ಸಾಧ್ಯವಾಗುವಂತಹ, ನೈಜ ಬದುಕಿಗೆ ಮತ್ತು ಇಂದಿನ ಬೆಳವಣಿಗೆಗಳಿಗೆ ತೀರಾ ನಿಕಟವಾದ ಕಾದಂಬರಿಯೊಂದನ್ನು ಬರೆದ ಕುಕ್ಕಿಲ ಅಭಿನಂದನಾರ್ಹರು.

ವೈರಸ್ ಅಪರಿಚಿತವಾಗಿ ಉಳಿಯದೆ ಎಲ್ಲರ ಕೈ ಸೇರಲಿ ಎಂದು ಹಾರೈಸುತ್ತೇನೆ.



**ಅಬ್ದುಸ್ಸಲಾಂ ಪುತ್ತಿಗೆ**
**ಪ್ರಧಾನ ಸಂಪಾದಕರು, ವಾರ್ತಾ ಭಾರತಿ**





## ಮೊದಲ ನೋಟದಲ್ಲಿ ಬಯಾಸ್ಡ್ ಆಗಿ ಬರೆದಿದ್ದೀರಿ ಅಂತನ್ನಿಸಿದರೂ ಬಳಿಕ ಹಾಗಲ್ಲ ಅನಿಸಿತು

**ನ**ಮಸ್ಕಾರ ಸಾರ್...

ಕಾದಂಬರಿಯನ್ನ ಓದಿದೆ.

ಇಲ್ಲಿ ನಾನು ಕತೆಯನ್ನು ಮುಖ್ಯವಾಗಿ ಎರಡು ಭಾಗಗಳನ್ನಾಗಿ ನೋಡಿದೀನಿ. ಒಂದು ಅನಾಮಿಕಳಿಗೆ ಹೇಳಲ್ಪಟ್ಟ ತುಳುನಾಡಿನಲ್ಲಿದ್ದ ಅಸ್ಪೃಶ್ಯತೆ, ಜಾತೀಯತೆ ಮೊದಲಾದುವುಗಳ ಕತೆ. ಅಂದರೆ ಶಂಕರನಿಗಾದಂತಹ ಅನುಭವ. ಹಾಗೇ ಅತ್ಯಂತ ಪ್ರಬುದ್ಧವಾದ ಅವನ ಹೆಂಡತಿಯ ವಿಶ್ಲೇಷಣೆ ಇತ್ಯಾದಿ.

ಇನ್ನೊಂದು, ನೂರ್ ಮತ್ತು ಅನಾಮಿಕಳ ನಡುವೆ ನಡೆಯುವ ಘಟನೆಗಳು. ಅದರಲ್ಲಿ ಇಸ್ಲಾಮಿನ ಉದಾತ್ತ ಅಂಶಗಳ ಬಗ್ಗೆ, ಕೆಲ ಸಂಪ್ರದಾಯಗಳ ಹಿಂದಿನ ಕಾರಣಗಳ ಬಗ್ಗೆ ತುಂಬಾ ಸುಂದರವಾಗಿ ಕಟ್ಟಿಕೊಟ್ಟಿದ್ದೀರಿ. ನೀವು ಹೇಳಿದ ಕೆಲ ಅಂಶಗಳು ಡಿಬೆಟೇಬಲ್ ಅನ್ನಿಸಿದರೂ, ಸೈದ್ಧಾಂತಿಕವಾದ

ವಿಚಾರಧಾರೆ ಬೇರೆ ಇದ್ದರೂ ತಿರಸ್ಕರಿಸುವಂತದ್ದು ಅಷ್ಟೇನೂ ಕಾಣಲಿಲ್ಲ.

ಕಾದಂಬರಿ ಲೇಖಕನ ಕೂಸು. ಲೇಖಕನ ಮನಸ್ಸಿನ ಓಘಕ್ಕೆ ತಕ್ಕಂತೆ ತಲುಪಬೇಕು. ಬಹಳ ಬಯಾಸ್ಡ್ ಆಗಿ ಬರೆದಿದ್ದೀರಿ ಅಂತ ಮೊದಲು ಅನ್ನಿಸಿತು. ಎರಡು ಮೂರು ಬಾರಿ ಮನನ ಮಾಡಿದ ನಂತರ ಹಾಗೇನೂ ಇಲ್ಲ, ಕೊರೋನಾ ಶುರುವಾತಿನಲ್ಲಾದ ಘಟನೆಗಳ ನೋವು ನಿಮ್ಮ ಬರಹದಲ್ಲಿ ಪ್ರತಿಧ್ವನಿಸಿದೆ ಎಂದೆನ್ನಿಸಿತು.

ಡಾರ್ವಿನ್ ಅಂಶ ವಿವರಿಸಿದ್ದು ಚಿಕ್ಕದಾದರೂ ಬಹಳ ಇಷ್ಟವಾಯಿತು.

ಧರ್ಮ ಮತ್ತು ವಿಜ್ಞಾನವನ್ನು ಬೆರೆಸಬಾರದು ಅನ್ನುವುದು ನನ್ನ ನಂಬಿಕೆ. ಧರ್ಮವನ್ನು ಧರ್ಮವಾಗೇ ನೋಡಬೇಕು, ವಿಜ್ಞಾನವನ್ನು ವಿಜ್ಞಾನವನ್ನಾಗಿಯೇ ನೋಡಿದರೆ ಚಂದ. ಒಬ್ಬ ಮುಸ್ಲಿಮ್ ಆಗಿ ನೀವು ಆದಮ್ ಮತ್ತು ಹವ್ವಾರಿಂದ ಮಾನವ ಜನಾಂಗ ಸೃಷ್ಟಿಯಾಯಿತೆಂದು ಧೃಡವಾಗಿ ನಂಬುವುದು ನನಗೆ ಸಮಸ್ಯೆಯೇ ಅಲ್ಲ. ಹಾಗೇ ನಾನು ಪುನರ್ಜನ್ಮ ನಂಬೋದು ಕೂಡಾ.

ಬಿಡುಗಡೆಗೆ ಮುಂಚೆ ಓದ್ತಾ ಇರೋ ಮೊದಲ ಕಾದಂಬರಿ ಇದು. ತಪ್ಪಿದ್ದಲ್ಲಿ ದಯವಿಟ್ಟು ಕ್ಷಮಿಸಿ.



**ಗಿರಿಧರ್ ಭಟ್ ಗುಂಜಗೋಡು**
**ಟೆಕ್ಕಿ ಮತ್ತು ಹವ್ಯಾಸಿ ಬರಹಗಾರ**





## ಇದು ಕಾಲ್ಪನಿಕವಲ್ಲ, ವಾಸ್ತವ

**ನ**ವ್ಯ ಬಂಡಾಯ, ದಲಿತ, ಪ್ರಗತಿಪರ ಈ ಓಘದಲ್ಲಿ ತೆರೆದುಕೊಂಡ ವೈರಸ್ ಕಾದಂಬರಿ ಅಸ್ಪೃಶ್ಯತೆ ತನ್ನ ಪ್ರಭಾವವನ್ನು ಉಳಿಸಿಕೊಂಡೇ ಬಂದಿರುವ ರೀತಿಯನ್ನು, ಜೊತೆಗೆ ಕೊರೋನಾ ಕಾಲದ ಘಟನೆಗಳು ಮತ್ತು ಕೊರೋನಾ ತಂದಿತ್ತ ಅಸ್ಪೃಶ್ಯತೆಯ ಕರಾಳತೆಯನ್ನು ಎಳೆ ಎಳೆಯಾಗಿ ಬಿಚ್ಚಿಟ್ಟಿದೆ. ಸೋಶಿಯಲ್ ಮೀಡಿಯಾಗಳು ಬೀರುವ ಸಾಮಾಜಿಕ ಪರಿಣಾಮವು ಕಾದಂಬರಿಯಲ್ಲಿ ಬಹಳ ಚೆನ್ನಾಗಿ ನಿರೂಪಣೆಯಾಗಿದೆ. ಧರ್ಮದ ಅಶಯ, ಆದರ್ಶಗಳನ್ನು ಅರಿಯದೆಯೇ ಯುವ ಜನಾಂಗ ಅದ್ಹೇಗೆ ತಪ್ಪುಕಲ್ಪನೆಗೆ ಒಳಗಾಗಿದೆ ಎಂಬುದು ಪರಿಣಾಮಕಾರಿಯಾಗಿ ನಿರೂಪಣೆಯಾಗಿದೆ. ನೂರ್ ಎಂಬ ಉಪನ್ಯಾಸಕ ತನ್ನ ಜ್ಞಾನದ ಮೂಲಕ ಅನಾಮಿಕಳಿಗೆ ಹೆಸರಿಗೆ ತಕ್ಕಂತೆ ನೂರ್(ಬೆಳಕು)ನ್ನು ತೋರಿಸುತ್ತಾನೆ. ಮತ್ತು ಅನಾಮಿಕ ಆತನ ಎರಡನೇ ಪತ್ನಿಯಾಗಿ ಹೋಗಲು ಬಯಸಿದ್ದು ಮನೋಜ್ಞವಾಗಿದೆ.

ಬಂಡಾಯದ ಹೆಣ್ಣು ಅನಾಮಿಕಳನ್ನು ಎಸ್ಟೇಟ್ ಮೀಟಿಂಗ್‌ನಲ್ಲಿ

ನಾಯಕಿಯನ್ನಾಗಿ ಮಾಡಿದ ಕಾರ್ಮಿಕರ ನಡೆ ಮತ್ತು ಆ ನಡೆಯಿಂದಾಗಿ ಆಕೆ ತನ್ನ ಗತಕಾಲದ ಮೆಲುಕನ್ನು ಹಾಕುವುದು ಮತ್ತು ಪುರುಷರಲ್ಲಿಯೂ ಮಹಿಳೆಯ ನಾಯಕತ್ವವನ್ನು ಒಪ್ಪುವವರು ಇದ್ದಾರೆಂಬುದನ್ನು ನಿರೂಪಿಸುವ ಪ್ರಯತ್ನವಾಗಿ ಕಂಡಿತು.

ತತ್ವಜ್ಞಾನ, ಧಾರ್ಮಿಕ ಬೋಧನೆ, ಪ್ರಕೃತಿಯ ಸಹಾಯ, ಭರವಸೆ, ವಿಶ್ವಾಸ, ಪಾಸಿಟಿವ್ ಎನರ್ಜಿ ಇವೆಲ್ಲವನ್ನೂ ನೂರ್ ಬಾಯಿಯಿಂದ ಹೇಳಿಸಿದ ಕಾದಂಬರಿಕಾರ ಹೊಸ ಆಲೋಚನೆಗೆ, ವ್ಯಾಖ್ಯಾನಗಳಿಗೆ ತೆರೆದುಕೊಳ್ಳುವಂತೆ ಓದುಗರನ್ನು ಪ್ರೇರೇಪಿಸಿದ್ದಾರೆ.

ಒಂದು ಹೆಣ್ಣು, ಗಂಡು ಜೊತೆಯಾಗಿ ಹೋಗ್ತಾ ಇದ್ದಾಗ ಸುತ್ತಮುತ್ತಲಿನ ಜನರ ಮಾತುಕತೆ ಹೇಗಿರುತ್ತೆ ಮತ್ತು ನೂರ್, ಅನಾಮಿಕ ಪಲಾಯನಗೈಯಲು ತಯಾರಾದಾಗ ಕಾರ್ಮಿಕರು ಅಲ್ಲಿನ ಜನ ಹೇಗೆ ಮಾತಾಡಿಕೊಳ್ಳುತ್ತಾರೆ ಎಂಬ ಅವರಿಬ್ಬರ ಮಾತುಕತೆಯು ಸಮಾಜದ ಮನಸ್ಥಿತಿಗೆ ಹಿಡಿದ ಕನ್ನಡಿ. ಹಾಗೆ ನೂರ್ ಮತ್ತು ಅನಾಮಿಕರ ಗೆಳೆತನ ಹೇಗಿತ್ತು ಅಂತ ಅವರಿಗೇ ಗೊತ್ತು. ಈ ಮೂಲಕ ಒಂದೊಳ್ಳೆ ಸಂದೇಶ ರವಾನೆಯಾಗುವುದರಲ್ಲಿ ಸಂಶಯವಿಲ್ಲ. 'ಯಾರೂ ಯಾರ ಹೊರೆಯನ್ನೂ ಹೊರಲಾರರು' ಎಂಬ ಫಿಲಾಸಫಿ ಮೂಲಕ ಕಾಲಬುಡಕ್ಕೆ ನೀರು ಬಂದಾಗ ಅವರದನಷ್ಟೇ ನೋಡುತ್ತಾರೆಯೇ ಹೊರತು ಬೇರೆಯವರದನಲ್ಲ, ಹಾಗಿರುವಾಗ ಇತರರ ವೈಯಕ್ತಿಕ ವಿಷಯದಲ್ಲಿ ಅನಗತ್ಯ ತಲೆ ಹಾಕುವುದು ಸರಿಯಲ್ಲ ಎಂಬ ಪಾಠವನ್ನೂ ಸೂಚ್ಯವಾಗಿ ತಿಳಿಸಿದ್ದಾರೆ.

ಇದನ್ನು ಕಾಲ್ಪನಿಕ ಕಾದಂಬರಿ ಅನ್ನುವುದಕ್ಕಿಂತ ವಾಸ್ತವವನ್ನು ಬರೆದಿದ್ದೀರಿ ಅಂತಾನೇ ಹೇಳಬಹುದು. ಕೊರೋನಾ ಕಳೆದು ಸಮಾಜ ವಾಸ್ತವಕ್ಕೆ ಬಂದಾಗ ಮತ್ತು ದಶಕಗಳು ಶತಮಾನಗಳು ಕಳೆದರೂ ಕಾದಂಬರಿಯು ಒಂದು ದಾಖಲೆಯಾಗಿ ಜನರ ಕೈಯಲ್ಲಿ ಉಳಿಯಬಹುದು.



**ರಹೀನಾ ತೊಕ್ಕೊಟ್ಟು**
**ಪತ್ರಿಕೆ ಮತ್ತು ಟಿ.ವಿ. ಪತ್ರಕರ್ತೆ**





## ನಿಮ್ಮೊಂದಿಗೆ ಕೂತು ಮಾತಾಡಬಹುದಾದ ಕಾದಂಬರಿ

**ಮ**ನುಷ್ಯ ಸಂಬಂಧಗಳ ನಡುವಿನ ಅನೇಕ ಸಮಸ್ಯೆಗಳು ಕೂತು ಮಾತನಾಡಿದರೆ ಖಂಡಿತ ಪರಿಹಾರವಾಗುತ್ತದೆ. ಭಾರತದ ಪ್ರಸ್ತುತ ಸಮಾಜದಲ್ಲಿ ಧರ್ಮಗಳ ಕುರಿತ ಅಪಪ್ರಚಾರ, ವ್ಯಕ್ತಿಯ ನಂಬಿಕೆಯ, ವಿಶ್ವಾಸದ, ಆಹಾರದ, ಸಂಸ್ಕೃತಿಯ ವಿಷಯವಾಗಿ ಹೆಚ್ಚುತ್ತಿರುವ ದ್ವೇಷಗಳು ಕೂಡ ಪರಸ್ಪರ ಕೂತು ಮಾತನಾಡಿ ವಿಚಾರ ವಿನಿಮಯ ಮಾಡಿಕೊಂಡಾಗ ಪರಿಹಾರವಾಗಬಹುದು. ಈ ಕಾದಂಬರಿಯು ಈ ರೀತಿಯಾದ ಅನೇಕ ಇಶ್ಯೂಗಳನ್ನು ಕಳಕಳಿಯಿಂದ ಕೂತು ಮಾತನಾಡುತ್ತದೆ. ಪರಸ್ಪರ ಜನ ಸಮುದಾಯದ ವಿರುದ್ಧ ಪ್ರಚಾರಪಡಿಸುವ ಕಲ್ಮಶ ಕಲ್ಪನೆಗಳಿಗೆ ತನ್ನ ವಿಚಾರಶೀಲತೆಯನ್ನು ಬಲಿ ನೀಡುವ ಪಾತ್ರವಾಗಿ ಶಂಕರ ಬಂದರೆ ಆತನ ಪತ್ನಿಯು ತನ್ನ ಪ್ರಜ್ಞೆಯನ್ನು ವ್ಯಕ್ತಪಡಿಸುವ ಪಾತ್ರವಾಗುತ್ತದೆ. ಅನೇಕ ವಿಚಾರಗಳನ್ನು ಒರೆಗೆ ಹಚ್ಚಿಸಬಹುದಾದ, ನಿಮ್ಮೊಂದಿಗೆ ಕೂತು ಮಾತನಾಡಬಹುದಾದ ಕಾದಂಬರಿ.



**ಎಂ. ದಾನಿಶ್**
**(ಇತ್ತೀಚೆಗಷ್ಟೇ ಇವರ 'ಕಾಡಿಗೊಂದು ಕಿಟಕಿ' ಕಾದಂಬರಿ ಬಿಡುಗಡೆಗೊಂಡಿತ್ತು.)**

## ಪ್ರಕಾಶಕರ ಮಾತು





## ಅರ್ಪಣೆ

ನನ್ನನ್ನು
ಇಷ್ಟೆತ್ತರ
ಬೆಳೆಸಿದ
ಸನ್ಮಾರ್ಗ
ಪತ್ರಿಕೆಗೆ

# ಒಂದು

**ರಾ**ತ್ರಿ 1 ಗಂಟೆ

ನೂರ್ ಮಲಗಿದ್ದಲ್ಲಿಂದಲೇ ನಿಧಾನಕ್ಕೆ ಕಣ್ಣು ತೆರೆದ.

ಬಳಿಕ ಕಣ್ಣ ಗುಡ್ಡೆಯನ್ನು ಅತ್ತ–ಇತ್ತ ತಿರುಗಿಸಿದ. ಕುಳಿತುಕೊಂಡ. ಝೀರೋ ವೋಲ್ಟಿನ ಬಲ್ಬ್ ಒಂದು ಬೇಕೋ ಬೇಡವೋ ಎಂಬಂತೆ ಉರಿಯುತ್ತಿತ್ತು. ಎಲ್ಲರೂ ಮಲಗಿ ನಿದ್ರಿಸುವಾಗ ತಾನು ಮಾತ್ರ ಯಾಕೆ ಎಚ್ಚರದಲ್ಲಿರಬೇಕು ಎಂಬ ಆಕ್ಷೇಪವನ್ನು ವ್ಯಕ್ತಪಡಿಸುವಂತಿತ್ತು ಅದರ ಬೆಳಕು. ಆ ಕೋಣೆಯಲ್ಲಿದ್ದ ಕತ್ತಲೆಯೊಂದಿಗೆ ರಾಜಿ ಮಾಡಿಕೊಂಡಂತೆ ಅರ್ಧ ಭಾಗಕ್ಕೆ ಮಾತ್ರ ಬೆಳಕನ್ನು ಹರಿಸಿ ಉಳಿದರ್ಧ ಭಾಗದ ಕತ್ತಲೆಯನ್ನು

ಹಾಗೆಯೇ ಉಳಿಸಿಕೊಂಡ ಬಲ್ಬ್‌ನ ಬಗ್ಗೆ ನೂರ್ ಅಸಮಾಧಾನ ವ್ಯಕ್ತಪಡಿಸಿದ. ಹಾಗಂತ,

ಹಿಂದಿನ ದಿನ ಅನಾಮಿಕಳ ಜೊತೆ ಸೇರಿ 'ಪರಾರಿ ಪ್ಲಾನ್' ಮಾಡುವಾಗ ಆತ ಈ ಬಲ್ಬ್‌ನ ಕುರಿತು ಆಲೋಚಿಸಿಯೇ ಇರಲಿಲ್ಲ. ಆಲೋಚಿಸಿರಲಿಲ್ಲ ಅನ್ನುವುದಕ್ಕಿಂತ ಬಲ್ಬ್ ಒಂದು ಸಮಸ್ಯೆಯಾಗಬಹುದು ಎಂಬ ಕಲ್ಪನೆಯೇ ಬಂದಿರಲಿಲ್ಲ ಅನ್ನುವುದೇ ಹೆಚ್ಚು ಸರಿ.

ಆತ ಆ ಕೋಣೆಯಲ್ಲಿ ಕಳೆದ ಎರಡು ತಿಂಗಳಿನಿಂದ ಮಲಗುತ್ತಿದ್ದಾನೆ. ಆತನ ಜೊತೆ 53 ಮಂದಿಯೂ ಅದೇ ಕೋಣೆಯಲ್ಲಿ ಮಲಗುತ್ತಿದ್ದಾರೆ. ಈ ಎರಡು ತಿಂಗಳಿನಿಂದ ಆ ಕೋಣೆಯಲ್ಲಿ ಉರಿಯುತ್ತಿದ್ದುದು ಅದೇ ಬಲ್ಬ್. ಆದರೆ, ಸದ್ದಿಲ್ಲದೆಯೇ, ಪಕ್ಕದಲ್ಲಿ ಮಲಗಿದವರಿಗೆ ಯಾವ ಸೂಚನೆಯೂ ಸಿಗದಂತೆಯೇ ಮೈಯೆಲ್ಲಾ ಕಣ್ಣಾಗಿ ಆ ಅರ್ಧ ರಾತ್ರಿಯೂ ಎದ್ದು ಕುಳಿತ ಆತನಿಗೆ ತನ್ನ ಪ್ಲಾನ್ ಈ ಬಲ್ಬ್‌ನಿಂದಾಗಿ ವಿಫಲಗೊಳ್ಳಬಹುದೇ ಎಂಬ ಸಂದೇಹ ಮೂಡಿತು. ಅದಕ್ಕೆ ಕಾರಣ–

ಕೋಣೆಯ ಅರ್ಧ ಭಾಗಕ್ಕಿಂತಲೂ ಹೆಚ್ಚಿನ ವ್ಯಾಪ್ತಿಯಲ್ಲಿ ಕತ್ತಲೆ ತುಂಬಿರುವುದು. ತಾನು ಎದ್ದು ಕುಳಿತಿರುವುದನ್ನು ಯಾರಾದರೂ ನೋಡುತ್ತಿರಬಹುದೇ? ಕತ್ತಲೆ ತುಂಬಿದ ಜಾಗದಲ್ಲಿ ಮಲಗಿದವರು ನಿದ್ರಿಸಿರಬಹುದೇ? ಅಥವಾ ತನ್ನ ಚಲನವಲನವನ್ನು ಮಲಗಿದಲ್ಲಿಂದಲೇ ಗುಟ್ಟಾಗಿ ಗಮನಿಸುತ್ತಿರಬಹುದೇ?

ಒಂದು ವೇಳೆ ತನ್ನ 'ಪರಾರಿ ಪ್ಲಾನ್' ವಿಫಲವಾದರೆ?

ನೂರ್ ಆ ಬಲ್ಬ್‌ನ್ನು ಮತ್ತೊಮ್ಮೆ ಅಸಹನೆಯಿಂದ ನೋಡಿದ. ಏನಿದ್ದರೂ ಈಗ ಚಿಂತಿಸಿ ಫಲವಿಲ್ಲ ಅನ್ನುವುದು ಆತನಿಗೆ ಗೊತ್ತಿತ್ತು. ಆತ ತನ್ನ ಮೈ ಮೇಲಿದ್ದ ಚದ್ದರವನ್ನು ಕುಳಿತಲ್ಲಿಂದಲೇ ನಿಧಾನಕ್ಕೆ ಸರಿಸಿದ. ಪಕ್ಕದಲ್ಲಿ ಮಲಗಿದ್ದ ನಿತೀಶ್‌ನ ಮೇಲೆ ಚದ್ದರದ ಕಾಲು ಭಾಗ ಬಿದ್ದುಕೊಂಡಿತ್ತು. ಅದನ್ನು ಆತನ ಮೈ ಮೇಲಿಂದ ಬಿಡಿಸಿಕೊಳ್ಳಬೇಕು. ನಿನ್ನೆ ರಾತ್ರಿಯಾಗಿದ್ದರೆ ಇದು ಒಂದು ಸಂಗತಿಯೇ ಅಲ್ಲ. ಯಾರ ಚದ್ದರವೂ ಬೆಳಿಗ್ಗೆ ಏಳುವಾಗ ಅವರ ಮೈ ಮೇಲೆ ಮಾತ್ರ ಇರುವುದೇ ಇಲ್ಲ. ರಾತ್ರಿ ಮಲಗುವಾಗ ಚದ್ದರ ಹಾಸಿಕೊಂಡರೆ ಬೆಳಿಗ್ಗೆ ಅದರ ಅರ್ಧ ಭಾಗ ಕೆಲವೊಮ್ಮೆ ಪೂರ್ಣ ಚದ್ದರವೇ ಪಕ್ಕದಲ್ಲಿ ಮಲಗಿದವನ ಮೇಲೆ ಇರುತ್ತಿತ್ತು. ಆತನ ಚದ್ದರ ಇನ್ನೊಬ್ಬನ ಮೇಲಿರುತ್ತಿತ್ತು. ಚಳಿಯ ತೀವ್ರತೆಯನ್ನು ಹೊಂದಿಕೊಂಡು ಇವೆಲ್ಲ ಮಾಮೂಲಿ ಎಂಬಂತೆ ನಡೆಯುತ್ತಿತ್ತು.

ನೂರ್‌ಗೆ ಇದರ ಸಾಕಷ್ಟು ಅನುಭವವಿದೆ.

ಕೆಲವೊಮ್ಮೆ ಅರ್ಧ ರಾತ್ರಿ ಎದ್ದು ಕುಳಿತು ಪಕ್ಕದವನ ಮೈ ಮೇಲೆ





ಮಲಗಿಕೊಂಡಿರುವ ತನ್ನ ಚದ್ದರವನ್ನು ಆತ ಎಳೆದುಕೊಂಡದ್ದಿದೆ. ಚಳಿಯನ್ನು ತಡೆದುಕೊಳ್ಳಲಾಗದೇ ಇತರರ ಚದ್ದರವನ್ನು ಎಳೆದುಕೊಂಡು ಮಲಗಿದ್ದೂ ಇದೆ. ಅವರು ಎಚ್ಚರಗೊಂಡು ಪುನಃ ಚದ್ದರವನ್ನು ಈತನಿಂದ ಕಸಿದುಕೊಂಡು ಬೈದದ್ದೂ ಇದೆ.

ಆದರೆ,

ಈಗ ಹಾಗೆ ಮಾಡುವಂತಿಲ್ಲ. ನಿತೀಶನ ಮೇಲಿರುವ ಚದ್ದರವನ್ನು ಬಲವಂತದಿಂದ ಎಳೆದರೆ ಆತನಿಗೆ ಎಚ್ಚರವಾಗಬಹುದು. ಹಾಗೇನಾದರೂ ಆಗಿ ಬಿಟ್ಟರೆ ತನ್ನ ಪ್ಲಾನ್ ವಿಫಲವಾಗುತ್ತದೆ. ಆದ್ದರಿಂದ ಮುಳ್ಳಿನಲ್ಲಿ ಸಿಲುಕಿದ ಬಟ್ಟೆಯನ್ನು ಬಿಡಿಸುವಾಗಿನ ಎಚ್ಚರವನ್ನು ತಾನೀಗ ಪ್ರದರ್ಶಿಸಬೇಕು ಎಂದು ನೂರ್ ಮನಸ್ಸಲ್ಲೇ ನಿರ್ಧರಿಸಿದ. ಆತ ಎಷ್ಟು ನಿಧಾನಕ್ಕೆ ಚದ್ದರವನ್ನು ನಿತೀಶನ ಮೇಲಿಂದ ಸರಿಸಿ ತನ್ನ ಸುಪರ್ದಿಗೆ ಪಡಕೊಂಡನೆಂದರೆ, ನಿತೀಶನಿಗೆ ಬಿಡಿ, ಆತನ ಮೇಲೆ ಇರುವೆ ಇರುತ್ತಿದ್ದರೂ ಅದಕ್ಕೂ ಗೊತ್ತಾಗುತ್ತಿರಲಿಲ್ಲ.

ಯಾರೋ ಮಾತಾಡಿದಂತಾಯಿತು.

ನೂರ್ ಬೆವೆತು ಹೋದ. ಎದೆ ಹೊಡೆದುಕೊಳ್ಳತೊಡಗಿತು. ಸುತ್ತಲೂ ನೋಡಿದ. ಝೀರೋ ವೋಲ್ಟಿನ ಬಲ್ಬ್ ಯಾರನ್ನೆಲ್ಲಾ ತೋರಿಸುತ್ತಿತ್ತೋ, ಅವರಾರೂ ಎಚ್ಚರದಲ್ಲಿರುವಂತೆ ಕಾಣಿಸಲಿಲ್ಲ. ಮತ್ತೆ, ಆ ಕತ್ತಲೆಯಲ್ಲಿ ಮಲಗಿರುವವರು? ಅವರು ಎಚ್ಚರುದಲ್ಲಿರುವರೇ? ಆತ ತುಸು ಹೊತ್ತು ಸುಮ್ಮನೆ ಕೊಠಡಿ ಪೂರ್ತಿ ವೀಕ್ಷಿಸಿದ. ತನಗೂ ಪಾಸ್ವಾನ್‌ಗೂ ಮೊನ್ನೆ ಮಾತಿಗೆ ಮಾತಾದುದು ನೆನಪಾಯಿತು. ಕಾಲರ್ ಪಟ್ಟಿ ಹಿಡಿಯಲು ಆತ ಮುಂದೆ ಬಂದಿದ್ದ. ಮಂಡಲ್ ಅಲ್ಲದಿರುತ್ತಿದ್ದರೆ, ಜಗಳವೇ ನಡೆದು ಬಿಡುತ್ತಿತ್ತೇನೋ? ಜಗತ್ತೇ ಕೊರೋನಾದ ಸಂಕಟದಲ್ಲಿರುವಾಗ ನಿಮ್ಮದೇನು ರಗಳೆ ಎಂದು ಪಾಸ್ವಾನ್‌ನನ್ನು ಮಂಡಲ್ ಸುಮ್ಮನಾಗಿಸಿದ್ದ.

ಪಾಸ್ವಾನ್‌ಗೆ ಜಗಳವಾಡುವುದೊಂದು ಫ್ಯಾಶನ್.

ಸುಮ್ಮನೆ ಕಾಲು ಕೆರೆದು ಜಗಳವಾಡೋದು, ಕರಿಗಲ್ಲಿನಂಥ ತನ್ನ ಮೈಕಟ್ಟನ್ನು ಪ್ರದರ್ಶಿಸಿ ಉಳಿದವರನ್ನು ಬೆದರಿಸುವುದು, ಆವಾಜ್ ಹಾಕೋದು ಆತನಿಗೆ ಅಭ್ಯಾಸವಾಗಿತ್ತು.

ಆತ ತನ್ನನ್ನು ಗಮನಿಸುತ್ತಿರುವನೇ?

ಕೊಠಡಿಯ ಕತ್ತಲೆಯ ಭಾಗಕ್ಕೆ ನೂರ್ ತನ್ನ ದೃಷ್ಟಿಯನ್ನು ಎಷ್ಟು ತೀವ್ರವಾಗಿ ನೆಟ್ಟನೆಂದರೆ ತೀಕ್ಷ್ಣತೆಯಲ್ಲಿ ಬೆಕ್ಕಿನ ಕಣ್ಣೂ ಆತನೆದುರು ಸೋಲುವಂತಿತ್ತು. ಪಾಸ್ವಾನ್ ಆ ಕತ್ತಲೆಯ ಮೂಲೆಯಲ್ಲೆಲ್ಲೋ ಮಲಗಿರಬೇಕು ಅನ್ನುವ ಸಂದೇಹ ನೂರ್‌ಗೆ. ಆತ ಎಲ್ಲಾದರೂ ಎಚ್ಚರಗೊಂಡನೆಂದರೆ, ಖಂಡಿತ ಗದ್ದಲ ಮಾಡುತ್ತಾನೆ.

ಕೋಣೆಯಲ್ಲಿರುವವರೆಲ್ಲರನ್ನೂ ಎಚ್ಚರಗೊಳಿಸುತ್ತಾನೆ. ತನ್ನನ್ನು ಇಂಚಿಂಚೂ ಪರಿಶೀಲಿಸುವಂತೆ ಮಾಡುತ್ತಾನೆ. ದೇವಾ, ಆತನಿಗೆ ಈ ರಾತ್ರಿ ಪೂರ್ತಿ ನಿದ್ದೆ ಕೊಡು ಎಂದು ಪ್ರಾರ್ಥಿಸಿದ.

ಅದೇವೇಳೆ,

ಮತ್ತೊಮ್ಮೆ ಮಾತು ಕೇಳಿಸಿತು. ಕುಳಿತಲ್ಲಿಂದ ಎದ್ದು ನಿಲ್ಲಬೇಕೆಂದು ಹೊರಡುವಷ್ಟರಲ್ಲೇ ಕೇಳಿಸಿದ ಈ ಮಾತಿನಿಂದ ನೂರ್ ಮತ್ತೆ ಅಲ್ಲೇ ಕುಳಿತುಕೊಂಡ. ಈಗಿನ ಮಾತು ಈ ಮೊದಲು ಕೇಳಿಸಿದ ಮಾತಿಗಿಂತ ಭಿನ್ನ. ಆತ ಮತ್ತೆ ಕೋಣೆಯನ್ನು ಪರಿಶೀಲಿಸಿದ. ಆತನೊಳಗಡೆ ಆಶ್ಚರ್ಯ ಮತ್ತು ವಿನೋಧ– ಎರಡೂ ಭಾವಗಳು ಏಕಕಾಲದಲ್ಲಿ ಸ್ಫುರಿಸಿಕೊಂಡವು. ಆಶ್ಚರ್ಯ ಏಕೆಂದರೆ,

ಆತ ಮಲಗಿದಲ್ಲಿಂದ ಅತ್ತಿತ್ತ ಕಣ್ಣ ಗುಡ್ಡೆ ಹೊರಳಿಸುವಾಗಲೂ ಆ ಕೋಣೆ ಮೌನವಾಗಿಯೇನೂ ಇರಲಿಲ್ಲ. ಎದ್ದು ಕುಳಿತಾಗಲೂ ಕೋಣೆಯ ಪರಿಸ್ಥಿತಿ ಹಾಗೆಯೇ ಇತ್ತು. ಆ 53 ಮಂದಿಯ ಪೈಕಿ ಹೆಚ್ಚಿನವರು ವಿವಿಧ ರೀತಿಯ ಗೊರಕೆಯ ಶಬ್ದಗಳನ್ನು ಹೊರಡಿಸುತ್ತಿದ್ದರು. ಒಬ್ಬೊಬ್ಬರದ್ದೂ ಒಂದೊಂದು ರೀತಿ. ಕೆಲವರ ಗೊರಕೆ ದೀರ್ಘವಾಗಿದ್ದರೆ, ಇನ್ನೂ ಹಲವರದ್ದು ಹೃಸ್ವ, ಸೌಮ್ಯ. ಬೆಳಗಿನಿಂದ ಸಂಜೆಯವರೆಗೆ ಕಾಫಿ ತೋಟದಲ್ಲಿ ಬೆವರು ಸುರಿಸಿದ ದೇಹಕ್ಕೆ ಒಂದಿಷ್ಟು ಆರಾಮ ಒದಗುವುದು ಈ ಕೋಣೆಯಲ್ಲೇ. ದಣಿವಿನ ಪ್ರಮಾಣವನ್ನು ಅನುಸರಿಸಿ ವಿವಿಧ ದೇಹಗಳು ವಿವಿಧ ರೀತಿಯಲ್ಲಿ ಅದನ್ನು ಈ ಅರ್ಧ ರಾತ್ರಿಯಲ್ಲಿ ಹೊರಬಿಡುತ್ತಿದ್ದುವು. ತಾನೂ ಹೀಗೆ ಗೊರಕೆ ಹೊಡೆಯುವನೇ ಎಂದು ನೂರ್ ಒಮ್ಮೆ ಆಲೋಚಿಸಿದ. ತನಗೆ ಈವರೆಗೆ ಯಾರೂ ಯಾಕೆ ಈ ಬಗ್ಗೆ ಹೇಳಿಲ್ಲ ಎಂದೂ ಅಚ್ಚರಿಗೊಂಡ.

ಪತ್ನಿ ಸಾರಾ ಒಮ್ಮೆ ಹೇಳಿದ್ದಳು,

ಅವಳ ಅಪ್ಪನ ಗೊರಕೆ ಭಾರೀ ಪ್ರಸಿದ್ಧವಂತೆ. ಅವರನ್ನು ಗೊರಕೆ ಮೌಲಾ ಎಂದೇ ಊರವರು ಅವರ ಬೆನ್ನ ಹಿಂದೆ ಕರೆಯುತ್ತಿದ್ದರಂತೆ. ಅವರ ಗೊರಕೆಗೆ ಮಕ್ಕಳು ಎಚ್ಚರಗೊಳ್ಳುತ್ತಿದ್ದರಂತೆ. ಅಪ್ಪನ ಗೊರಕೆ ಶಬ್ದವನ್ನು ಆಲಿಸಲಾಗದೇ ಅಮ್ಮ ಕೋಣೆಯಿಂದ ಹೊರಗೆ ಬಂದು ಮಲಗಿದ್ದೂ ಇದೆಯಂತೆ. ಆದರೆ,

ಅಪ್ಪ ಮಾತ್ರ ತನ್ನ ಗೊರಕೆಯನ್ನು ಸುತಾರಾಂ ಒಪ್ಪಿಕೊಳ್ಳುತ್ತಿರಲಿಲ್ಲವಂತೆ. ಅಪ್ಪ ಈಗ ಜೀವಂತ ಇರುತ್ತಿದ್ದರೆ ಮೊಬೈಲ್‌ನಲ್ಲಿ ಅವರ ಗೊರಕೆಯನ್ನು ಸೆರೆ ಹಿಡಿದು ಅವರಿಗೆ ಮನದಟ್ಟು ಮಾಡಬಹುದಿತ್ತು ಎಂದಿದ್ದಳು.

ಅಂದಹಾಗೆ,

ಗೊರಕೆಯ ಸದ್ದಿನಿಂದ ಕೋಣೆಯ ವಾತಾವರಣ ಜಾತ್ರೆಯಂತಾಗಿದ್ದರೂ ತಾನು ಇವ್ಯಾವುದನ್ನೂ ಗಮನಿಸದೇ ಇರುವುದಕ್ಕೆ ತನ್ನಲ್ಲಿರುವ ಒತ್ತಡವೇ ಕಾರಣವಾಗಿದ್ದಿರ





ಬಹುದು ಎಂದು ನೂರ್ ಅಂದುಕೊಂಡ. ಬೇಡ ಬೇಡವೆಂದರೂ ಕಳೆದ ಮೂರು ವರ್ಷಗಳ ಕಾರ್ಮಿಕ ಬದುಕು ಆತನ ಮುಂದೆ ಧುತ್ತೆಂದು ತೇಲಿಬಂತು. ಈ ಅವಧಿಯಲ್ಲಿ ಇಂಥದ್ದೊಂದು ಒತ್ತಡವನ್ನು ಅನುಭವಿಸಿದ್ದಾಗಿ ಆತನಿಗೆ ಅನಿಸಲೇ ಇಲ್ಲ. ಆತ ಸ್ವಯಂ ಸಾಂತ್ವನಿಸಿಕೊಂಡ. ದೀರ್ಘವಾಗಿ ಉಸಿರಾಡಿದ. ಕೋಣೆಯಲ್ಲಿ ಕೇಳಿ ಬಂದ ಮಾತು– 'ನಿದ್ದೆ ಮಾತು' ಅನ್ನುವುದನ್ನು ಮತ್ತೆ ಮತ್ತೆ ತನ್ನೊಳಗೇ ಹೇಳಿಕೊಂಡು ಸಮಾಧಾನಪಟ್ಟ. ಇನ್ನೂ ಅನುಮಾನಿಸುತ್ತಾ ಕುಳಿತುಕೊಳ್ಳುವುದಕ್ಕೆ ಅರ್ಥವಿಲ್ಲ. ಎಚ್ಚರಗೊಂಡರೆ ಗೊಳ್ಳಲಿ, ನೋಡಿದರೆ ನೋಡಲಿ– ಮುಂದೆ ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ಪಡೆಯುವ ಪ್ರಶ್ನೆಯೇ ಇಲ್ಲ.

ಅನಾಮಿಕ ಈಗಾಗಲೇ ಆ ಬೇವಿನ ಮರದ ಕೆಳಗೆ ಒಂಟಿಯಾಗಿ ಕಾಯುತ್ತಿರುವಳೋ ಏನೋ?

ಹೇಳಿದ ಸಮಯಕ್ಕೆ ಸರಿಯಾಗಿ ಹೊರಟಿದ್ದರೆ ಈಗಾಗಲೇ ಆಕೆ ಅಲ್ಲಿ ತಲುಪಿರುತ್ತಾಳೆ. ಈ ಅರ್ಧ ರಾತ್ರಿಯಲ್ಲಿ ಆಕೆಯನ್ನು ಒಂಟಿಯಾಗಿ ಅಲ್ಲಿಗೆ ಬರ ಹೇಳಿ ತಾನು ಮಾತ್ರ ಭಯ ಬಿದ್ದು ಹೀಗೆ ಮೀನ–ಮೇಷ ಎಣಿಸಿದರೆ ಆಕೆ ತಿರುಗಿ ತನ್ನ ಕೋಣೆ ಸೇರುವಳೋ ಏನೋ? ಭಯಪಡಬೇಕಾದದ್ದು ನಾನಲ್ಲ, ಆಕೆ. ಆದರೆ, ತಮ್ಮ ಪರಾರಿ ಪ್ಲಾನ್‌ನ ಯಾವ ಸಮಯದಲ್ಲೂ ಆಕೆ ಭಯಪಟ್ಟದ್ದೇ ಇಲ್ಲ. 'ತಾನು ಸಿದ್ಧ' ಎಂದಷ್ಟೇ ನಿರ್ವಿಕಾರವಾಗಿ ಆಕೆ ಹೇಳಿದ್ದಳು. ಆಕೆಯ ಮಾತಿನಲ್ಲಿ ಎಂಥ ಧೈರ್ಯ ಇತ್ತೆಂದರೆ, ಅದೊಂದು ಪರಾರಿ ಪ್ಲಾನ್ ಎಂದು ಆಕೆಗೆ ಗೊತ್ತೇ ಇಲ್ಲವೇ ಎಂದು ಅನಿಸಿತ್ತು. ರಾತ್ರಿಯ ಒಂದು ಗಂಟೆಗೆ ಎಲ್ಲರೂ ಮಲಗಿರುವಾಗ ಮತ್ತು ಕಾಫಿ ಎಸ್ಟೇಟ್ ಮಾಲಿಕ ವರದರಾಜನಿಗೆ ಗೊತ್ತಾಗದೆಯೇ ತಪ್ಪಿಸಿಕೊಳ್ಳುವುದೆಂದರೆ ಅದು ಸಾಮಾನ್ಯ ಸಂಗತಿಯಲ್ಲ.

ಅದರಲ್ಲೂ ವರದರಾಜ ಎಂಥವ?

ಬರೇ ರಾಜಕಾರಣಿ ಎಂದಾಗಿದ್ದರೆ ಸಮಸ್ಯೆ ಇರಲಿಲ್ಲ. ಆದರೆ, ಆತನ ರಾಜಕೀಯ ಆದರಿಸಿಕೊಂಡಿರುವುದೇ ಹಿಂದೂ ಮತ್ತು ಮುಸ್ಲಿಮರನ್ನು. ಮುಸ್ಲಿಮರ ಯಾವ ಸಣ್ಣ ತಪ್ಪುಗಳನ್ನೂ ಆತ ರಾಜಕೀಯಕ್ಕೆ ದುರುಪಯೋಗಿಸದೇ ಬಿಡುತ್ತಿರಲಿಲ್ಲ. ಆತನಿಗೆ ಅನುಯಾಯಿಗಳ ದಂಡೇ ಇತ್ತು. ಪತ್ರಿಕಾಗೋಷ್ಠಿ ನಡೆಸುವುದು, ಮಾಧ್ಯಮಗಳಿಗೆ ಹೇಳಿಕೆ ನೀಡುವುದು, ಪ್ರತಿಭಟನೆ ನಡೆಸುವುದು ಇತ್ಯಾದಿಗಳನ್ನು ಒಂದು ದಿನಚರಿಯೆಂಬಂತೆ ಆತ ಮಾಡುತ್ತಲೂ ಇದ್ದ. ಹೀಗಿರುವಾಗ ಆತನ ಕಣ್ಣು ತಪ್ಪಿಸಿ ಅರ್ಧ ರಾತ್ರಿ ಹೋಗುವುದೆಂದರೆ, ಅದಕ್ಕೆ ಗಟ್ಟಿ ಗುಂಡಿಗೆ ಬೇಕು. ಆಕೆ ಮಾತ್ರ ಇವೆಲ್ಲ ಸವಾಲೇ ಅಲ್ಲ ಅನ್ನುವ ರೀತಿಯಲ್ಲಿ ನಿರ್ಭಾವುಕವಾಗಿ ಪರಾರಿ ಪ್ಲಾನ್‌ಗೆ ಸೈ ಎಂದಿದ್ದಳು.

ಆದ್ದರಿಂದ,

ತಾನಿನ್ನೂ ಸಮಯ ಕೊಲ್ಲುವುದು ಸರಿಯಲ್ಲ. ಆಕೆ ಬೇವಿನ ಮರದಡಿಯಲ್ಲಿ ತನಗಾಗಿ ಕಾಯುತ್ತಿರಬಹುದು...

ಆತ ಪಕಪಕನೆ ಎದ್ದು ಮೊದಲೇ ಸಿದ್ಧಪಡಿಸಿಟ್ಟಿದ್ದ ಬ್ಯಾಗಿಗೆ ಚದ್ದರವನ್ನು ತುಂಬಿಸಿ ಕೊನೆಯ ಬಾರಿ ಎಂಬಂತೆ ಕೋಣೆಯನ್ನೊಮ್ಮೆ ನೋಡಿದ. ಗೊರಕೆ ಸದ್ದುಗಳು ಆತನನ್ನು ಬೀಳ್ಕೊಡುವ ವಿವಿಧ ವಾದ್ಯಗಳಂತೆ ಕೇಳಿಸಿತು. ಮಂಜಾಗಿ ಉರಿಯುತ್ತಿದ್ದ ಬಲ್ಬು– ಈ ವಾದ್ಯ ಸದ್ದಿಗೆ ಮಾದಕ ಸ್ಪರ್ಶವನ್ನು ನೀಡಿದಂತಿತ್ತು. ಆತ ಲಗುಬಗನೆ ನಡೆದು ಮೊದಲೇ ನಿಶ್ಚಯಿಸಿದಂತೆ ಬೇವಿನ ಮರದಡಿಯಲ್ಲಿ ಕಾಯುತ್ತಿದ್ದ ಅನಾಮಿಕಳತ್ತ ನಡೆದ.





## ಎರಡು

ಇದು 'ಪರಾರಿ ಪ್ಲಾನ್' ಮಾಡುವುದಕ್ಕಿಂತ ಮೊದಲು ನಡೆದ ಘಟನೆ. ಇದನ್ನು ಅನಾಮಿಕಳೊಂದಿಗೆ ಹಂಚಿಕೊಂಡದ್ದು ಸೇಸಮ್ಮ. ಆಕೆಯ ನಿರೂಪಣಾ ಶೈಲಿಯೇ ಬೇರೆ.

❖ ❖ ❖

ಜಗಲಿಯಲ್ಲಿ ಕುಳಿತ ರೇವತಿಗೆ ತಲೆಬುಡ ಒಂದೂ ಅರ್ಥವಾಗುತ್ತಿಲ್ಲ.

ಯಾವ ಕೋನದಲ್ಲಿ ಯೋಚಿಸಿದರೂ ತನ್ನ ಗಂಡ ಕೊರೋನಾ ಪಾಸಿಟಿವ್ ಹೇಗಾದ ಅನ್ನುವ ಪ್ರಶ್ನೆಗೆ ಉತ್ತರವೇ ಸಿಗುತ್ತಿಲ್ಲ. ಗಂಡ ಶಂಕರ ಆಸ್ಪತ್ರೆ ಸೇರಿ 24 ಗಂಟೆ ಕಳೆದಿದೆ. ತಾನು ಆಸ್ಪತ್ರೆಗೆ ಹೋಗುವಂತಿಲ್ಲ. ಕಂಡು ಮಾತಾಡಿಸುವಂತಿಲ್ಲ. ತಾನಿರುವ ನೆಕ್ಕರೆಕಾಡು ಮನೆ ಸೀಲ್‌ಡೌನ್ ಆಗಿದೆ. ಯಾರೂ

ಈ ಮನೆಗೆ ಕಾಲಿಡುವಂತಿಲ್ಲ. ಈ ಮನೆಯಿಂದ ಯಾರೂ ಹೊರಗೆ ಹೋಗುವಂತೆಯೂ ಇಲ್ಲ. ಆಹಾರ ವಸ್ತುಗಳು ಸಹಿತ ಅಗತ್ಯ ಸಾಮಾನುಗಳೆಲ್ಲ ಪಾಸ್ ಹೊಂದಿರುವ ನಿರ್ದಿಷ್ಟ ವ್ಯಕ್ತಿಗಳು ತಂದುಕೊಡುತ್ತಾರೆ. ಅವರಿಗೆ ಕರೆ ಮಾಡಬೇಕು ಅಥವಾ ಮನೆ ಬಳಿಯೇ ಠಳಾಯಿಸುತ್ತಿರುವ ಪೊಲೀಸರಲ್ಲಿ ತಿಳಿಸಬೇಕು. ರೇವತಿಗೆ ಮತ್ತು ಆಕೆಯ 14 ವರ್ಷದ ಮಗ ರವೀಶ್ ಹಾಗೂ 12 ವರ್ಷದ ಪುತ್ರಿ ಅನನ್ಯಳಿಗೆ ಹೋಮ್ ಕ್ವಾರಂಟೈನ್. ಯಾವ ಸಂದರ್ಭದಲ್ಲೂ ಕೊರೋನಾ ಪಾಸಿಟಿವ್ ಆಗುವ ಭೀತಿ ಇದ್ದೇ ಇದೆ.

ಮೊಬೈಲ್ ರಿಂಗಾಯಿತು.

ಶಂಕರ. ಆಕೆ ಲಗುಬಗೆಯಿಂದ ಕರೆ ಸ್ವೀಕರಿಸಿದಳು. ಆತಂಕ, ಭಯ. ಅತ್ತ ಕಡೆಯಿಂದ ಕೆಮ್ಮುವ ಸ್ವರ. ಶಂಕರ ಮಾತಾಡಿದ. ಮಕ್ಕಳ ಬಗ್ಗೆ ವಿಚಾರಿಸಿದ. ಉಸಿರಾಟದ ತೊಂದರೆ ಮತ್ತು ಒಣ ಕೆಮ್ಮು ಬಿಟ್ಟರೆ ಉಳಿದಂತೆ ಏನೂ ಸಮಸ್ಯೆ ಇಲ್ಲ ಎಂದ. ರೇವತಿಗೆ ಮಾತೇ ಹೊರಡುತ್ತಿಲ್ಲ. ನಾನು ಗುಣಮುಖನಾಗಿ ಬರುತ್ತೇನೆ, ಮಕ್ಕಳ ಕಡೆ ಜೋಪಾನ ಎಂದು ಹೇಳಿದ. ಆರೋಗ್ಯದಲ್ಲಿ ಸಣ್ಣ ಏರುಪೇರಾದರೂ ತಕ್ಷಣ ಆರೋಗ್ಯಾಧಿಕಾರಿಗಳಿಗೆ ತಿಳಿಸು ಎಂದು ಗಾಬರಿ ತುಂಬಿದ್ದ ದನಿಯಲ್ಲಿ ಹೇಳಿದ. ಈ ನಡುವೆ ನಾಲ್ಕೈದು ಬಾರಿ ಕೆಮ್ಮುವಿಕೆಯೂ ನಡೆಯಿತು. ಮನೆ ಸೀಲ್‌ಡೌನ್ ಆಗಿರುವುದು, ತಾನು ಮತ್ತು ಮಕ್ಕಳು ಹೋಮ್ ಕ್ವಾರಂಟೈನ್ ಆಗಿರುವುದು, ಪೊಲೀಸರು ಅತ್ತಿತ್ತ ಸುತ್ತುತ್ತಿರುವುದು... ಎಲ್ಲವನ್ನೂ ರೇವತಿ ಪಟಪಟನೆ ಹೇಳಿ ಮುಗಿಸಿದಳು.

ನಡು ನಡುವೆ ಬಿಕ್ಕುವಿಕೆ, ದೀರ್ಘ ಉಸಿರಾಟ.

ತುಸು ಹೊತ್ತು ಎರಡೂ ಕಡೆಯಿಂದಲೂ ಮೌನ. ಬಳಿಕ ಆತ ಮೌನ ಮುರಿದ.

'ಪಕ್ಕದ ಬ್ಯಾರಿ ಮುಸಲ್ಮಾನರ ಮನೆಯಿಂದ ಯಾರಾದ್ರೂ ನಮ್ಮ ಮನೆಗೆ ಬಂದಿದ್ದರೇ?'

'ಯಾವಾಗ?' ಆಕೆಯ ಪ್ರಶ್ನೆ

'ಕಳೆದ ಎರಡ್ಮೂರು ವಾರಗಳಲ್ಲಿ.'

'ಇಲ್ವಲ್ಲ? ಯಾಕೆ?'

'ನಂಗೆ ಕೊರೋನಾ ಹೇಗೆ ಬಂತೂ ಅಂತ?'

'ಅದೇ ನಂಗೂ ಚಿಂತೇರಿ. ಬ್ಯಾರಿಗಳೊಂದಿಗೆ ಸಂಪರ್ಕವೇ ಇಲ್ಲದ ನಿಮಗೆ ಹೇಗೆ ಬಂತೂ ಅಂತ? ಲಾಕ್‌ಡೌನ್ ಸಡಿಲಿಕೆ ಆದಾಗ ಬ್ಯಾರಿಗಳನ್ನು ಸಂಪರ್ಕಿಸಿದ್ದಿರಾ? ಬ್ಯಾರಿಗಳ ಅಂಗಡಿಯಿಂದ ಏನನ್ನಾದರೂ ಖರೀದಿಸಿದ್ದಿರಾ?' ರೇವತಿ ಆತಂಕ ತೋಡಿಕೊಂಡಳು.





'ಇಲ್ಲ.'

ಅಷ್ಟೇ ಆತಂಕ ಬೆರೆತ ಉತ್ತರ. ಬಳಿಕ ಕೆಮ್ಮು. ನಾಲ್ಕೈದು ಬಾರಿ ಕೆಮ್ಮಿದ ಬಳಿಕ ಹೇಳಿದ,

'ಲಿಂಬೆ ಶರಬತ್ತು ಮಾಡಿ ಕುಡಿ. ಮಕ್ಕಳಿಗೂ ಕೊಡು. ನೆಲ್ಲಿಕಾಯಿ ತಿನ್ನು. ಸಾಧ್ಯವಾದರೆ ಬಿಸಿಲಿಗೆ ಮೈಯೊಡ್ಡು. ಮಕ್ಕಳಿಗೂ ಬಿಸಿಲು ತಾಗಿಸು. ಕೊರೋನಾಕ್ಕೆ ಇದು ಬಿಟ್ಟು ಬೇರೇನೂ ಮದ್ದಿಲ್ಲ...'

ಆತ ಭಾವುಕನಾಗಿದ್ದಾನೆ ಅನ್ನುವುದಕ್ಕೆ ದನಿಯ ಏರಿಳಿತವೇ ಸಾಕ್ಷಿಯಾಗಿತ್ತು. ರೇವತಿ ಅತ್ತಳು. ಕೆಮ್ಮುತ್ತಾ ಕರೆ ಸ್ಥಗಿತಗೊಂಡಿತು.

❖ ❖ ❖

ಇವತ್ತಿಗೆ ಇಷ್ಟು ಸಾಕು ಎಂಬಂತೆ ಸೇಸಮ್ಮ ಹೊರಡುವುದಕ್ಕೆಂದು ಎದ್ದು ನಿಂತಳು. ಅನಾಮಿಕಳಿಗೆ ಸೇಸಮ್ಮನ ಮಾತನ್ನು ಇನ್ನಷ್ಟು ಆಲಿಸಬೇಕೆಂಬ ಆಸೆ. ಸೇಸಮ್ಮನಲ್ಲಿ ವಿಷಯವನ್ನು ಹೇಳುವ ಅತ್ಯುತ್ತಮ ಕಲೆ ಇದೆ. ಶಂಕರ ಮತ್ತು ರೇವತಿಯ ನಡುವೆ ನಡೆದ ಮಾತುಕತೆಯನ್ನು ಎಷ್ಟು ಲೀಲಾಜಾಲವಾಗಿ ಆಕೆ ಹೇಳುತ್ತಿದ್ದಳೆಂದರೆ, ಅದೊಂದು ಸಿನಿಮಾ ದೃಶ್ಯವಾಗಿ ಮೂಡಿದಂತೆ ಅನಾಮಿಕಳಿಗೆ ಭಾಸವಾಗುತ್ತಿತ್ತು. ಸೇಸಮ್ಮ ಹೇಳುವ ರೀತಿಯೇ ಹಾಗೆ. ತಾನೇ ಪಾತ್ರವಾಗಿ ಮಾತಾಡೋದು. ಶಂಕರ ಮತ್ತು ರೇವತಿಯ ನಡುವಿನ ಮಾತುಕತೆಯನ್ನು ವಿವರಿಸುವಾಗ, ಆಕೆ ಅಲ್ಲಿ ಮೂರನೆಯವಳಾಗಿ ಪರಿವರ್ತಿತವಾಗುವುದಿಲ್ಲ. ಆಕೆಯೇ ಶಂಕರ ಆಗುತ್ತಾಳೆ. ಆಕೆಯೇ ರೇವತಿ ಆಗುತ್ತಾಳೆ. ಹೊರಗೆ ನಿಂತು ನಿರೂಪಿಸುವುದಕ್ಕಿಂತ ತಾನೇ ಪಾತ್ರವಾಗಿ ಪರಿವರ್ತಿತವಾಗೋದು ಆಕೆಯ ಕಥನ ಶೈಲಿ. ಅನಾಮಿಕ ಮೆಚ್ಚಿಕೊಂಡಿರುವುದೂ ಇದನ್ನೇ.

ಶಂಕರನ ಮನೆಗೂ ಸೇಸಮ್ಮನ ಮನೆಗೂ ನಡುವೆ ಕೂಗಳತೆಯ ದೂರ. ನೆಕ್ಕರೆಕಾಡಿನಿಂದ ಮುಕ್ಕಾಲು ಗಂಟೆ ಕಾಲ್ನಡಿಗೆಯಲ್ಲಿ ಸಾಗಿದರೆ ಸಿಗುವುದೇ ವರದರಾಜನ ಈ ಕಾಫಿ ಎಸ್ಟೇಟು. ಸೇಸಮ್ಮ ಪ್ರತಿದಿನ ಬೆಳಿಗ್ಗೆ ಕಾಫಿ ಎಸ್ಟೇಟ್‌ಗೆ ಬಂದು, ದುಡಿದು, ಸಂಜೆ ಮರಳಿ ಹೋಗುವವಳು. ಆಕೆಗೆ ದುಡಿಮೆ ಅನ್ನುವುದು ಜೀವನಾಧಾರ ಅಷ್ಟೇ ಅಲ್ಲ, ಅದು ಸಮಯ ಕಳೆಯುವ ದಾರಿಯೂ ಹೌದು. ಕೊರೋನಾ ಲಾಕ್‌ಡೌನ್ ಸಮಯದಲ್ಲೂ ಆಕೆ ಪ್ರತಿದಿನ ಕಾಫಿ ಎಸ್ಟೇಟ್‌ಗೆ ಬರುವವಳು. ಸಂಜೆವರೆಗೆ ಕಾರ್ಮಿಕರೊಂದಿಗೆ ಇದ್ದು ಹೋಗುವವಳು. ಸೊಸೆ ಮತ್ತು ಮಗನನ್ನು ಬಿಟ್ಟರೆ ಮನೆಯಲ್ಲಿ ಮೂರನೆಯವಳಾಗಿ ಇರುವುದು ಆಕೆಯೊಬ್ಬಳೇ. ಶಂಕರನಿಗೆ ದೂರದ ಸಂಬಂಧಿಯೂ ಆಗಿರುವುದರಿಂದ ಪ್ರತಿದಿನ ಆ ಮನೆಗೊಂದು ಭೇಟಿ ಇದ್ದೇ ಇತ್ತು. ಶಂಕರನ ಮನೆ ಸೀಲ್‌ಡೌನ್ ಆದಾಗ ರೇವತಿ ಮತ್ತು ಆಕೆಯ

ಮಕ್ಕಳಿಗಿಂತ ಹೆಚ್ಚು ಚಡಪಡಿಸಿದ್ದು ಸೇಸಮ್ಮಳೇ. ಸೀಲ್‌ಡೌನ್ ತೆರವುಗೊಂಡ ತಕ್ಷಣ ರೇವತಿ ಮನೆಗೆ ಭೇಟಿ ಕೊಟ್ಟವರಲ್ಲೂ ಸೇಸಮ್ಮಳೇ ಮೊದಲಿಗಳು.

ಸೇಸಮ್ಮ ಹೊರಟು ಹೋಗಿದ್ದಳು. ನಾಳೆ ಶಂಕರ ಮತ್ತು ರೇವತಿಯ ಸಂಪೂರ್ಣ ಕತೆಯನ್ನು ಕೇಳಿ ತಿಳಿದುಕೊಳ್ಳಬೇಕೆಂದು ಅನಾಮಿಕ ನಿಶ್ಚಯಿಸಿದ್ದಳು.





# ಮೂರು

ಮರುದಿನ ಸೇಸಮ್ಮ ಮತ್ತೆ ಕತೆ ಪ್ರಾರಂಭಿಸಿದ್ದಳು.

❖ ❖ ❖

'ಅಪ್ಪನಿಗೆ ಕೊರೋನಾ ಬಂದಿದ್ದು ಹೇಗಮ್ಮಾ?'

ರೇವತಿ ಮಾಡಿಕೊಟ್ಟ ಲಿಂಬೆ ಶರಬತ್ತನ್ನು ಕುಡಿಯುತ್ತಾ ಮಗ ರವೀಶ್ ಪ್ರಶ್ನಿಸಿದ. ಅನನ್ಯಳೂ ದನಿಗೂಡಿಸಿದಳು. ರೇವತಿಗೆ ತಲೆ ಚಿಟ್ಟು ಹಿಡಿದಂತಾಯಿತು. ಬೆಳಿಗ್ಗೆ ಎದ್ದಲ್ಲಿಂದ ರಾತ್ರಿ ಮಲಗುವ ವರೆಗೆ ಆಕೆ ಅತ್ಯಂತ ಹೆಚ್ಚು ಆಲೋಚಿಸುತ್ತಿದ್ದುದು ಇದರ ಬಗ್ಗೆಯೇ. ಶಂಕರನಿಗೆ ಕೊರೋನಾ ಬಂದಿದ್ದು ಹೇಗೆ? ಆಕೆಯ ಗೆಳತಿಯೂ ನಿನ್ನೆ ಇದೇ ಪ್ರಶ್ನೆಯನ್ನು ಕೇಳಿದ್ದಳು,

'ಶಂಕರನಿಗೆ ಬ್ಯಾರಿಗಳೊಂದಿಗೆ ಸಂಬಂಧ ಏನಾದರೂ

ಇದೆಯಾ?'

'ಇಲ್ಲ ಕಣೇ...' ಎಂದು ಚುಟುಕಾಗಿ ಹೇಳಿ ಫೋನಿಟ್ಟಿದ್ದಳು.

'ಅಲ್ಲಾ, ಆಕೆ ಕೇಳುವ ಪ್ರಶ್ನೆಯಾ ಇದು' ಎಂದು ಆಕೆಗೆ ಅನಿಸಿತಾದರೂ ತನ್ನೊಳಗೂ ಇಂಥದ್ದೊಂದು ಪ್ರಶ್ನೆ ಮೂಡಿಲ್ಲವೇ ಎಂದು ಸ್ವತಃ ಕೇಳಿಕೊಂಡಳು. ಅದೇವೇಳೆ, ಮೊಬೈಲ್ ರಿಂಗುಣಿಸಿತು. ಲಗುಬಗೆಯಿಂದ ರೇವತಿ ಕರೆ ಸ್ವೀಕರಿಸಿದಳು. ಅತ್ತ ಕಡೆ ಶಂಕರ. ರೇವತಿ ಮಾತಾಡಿದಳು. ಮಾತಾಡುತ್ತಲೇ ಇದ್ದಳು. ಶಂಕರನ ದನಿಯಲ್ಲಿ ನಿನ್ನೆಯಷ್ಟು ಹರಿತ ಇಲ್ಲ ಎಂದಾಕೆಗೆ ಅನಿಸಿತು. ಮಾತಿಗಿಂತ ಹೆಚ್ಚು ಆತ ಕೆಮ್ಮುತ್ತಿದ್ದ. ಉಸಿರಾಟದ ತೊಂದರೆ ನಿನ್ನೆಗಿಂತ ಇವತ್ತು ಹೆಚ್ಚಿದೆ ಎಂದಾತ ಹೇಳಿದ. ಆತ ಹೇಳದಿದ್ದರೂ ಅದನ್ನು ರೇವತಿ ಗುರುತಿಸಿದ್ದಳು. ಆಕೆಗೆ ಅಳು ಧುಮ್ಮಿಕ್ಕಿ ಬರುತ್ತಿತ್ತು. ಆ ಸ್ಥಿತಿಯಲ್ಲೂ ಆತ ತನಗೆ ಕೊರೋನಾ ಹೇಗೆ ಬಂತು ಎಂದು ರೇವತಿಯಲ್ಲಿ ಪ್ರಶ್ನಿಸಿದ.

ಆಕೆಯೇನು ಹೇಳಿಯಾಳು?

ಆಕೆ ಮಾತಾಡಲಿಲ್ಲ. ಆತನೂ ಪ್ರಶ್ನೆ ಎಸೆದನೇ ಹೊರತು ಅದಕ್ಕೊಂದು ಉತ್ತರ ಇದೆ ಅನ್ನುವ ಬಗ್ಗೆ ಗಂಭೀರವಾಗಿ ಇದ್ದಂತೆ ಕಾಣಿಸಲಿಲ್ಲ. ಬಹುಶಃ ಆತನೂ ಆ ಬಗ್ಗೆ ಯೋಚಿಸಿ ಯೋಚಿಸಿ ಸುಸ್ತಾಗಿರಬೇಕು. ರೇವತಿ ಮೌನವಹಿಸಿದಳು. ಆತ ಸ್ವಲ್ಪ ಹೊತ್ತು ಕೆಮ್ಮಿದ. ನಾನು ಗುಣಮುಖನಾಗಿ ಬರುತ್ತೇನೆ, ಮಕ್ಕಳ ಬಗ್ಗೆ ಜಾಗ್ರತೆ ವಹಿಸು ಎಂದು ಹೇಳಿದ. ಆಕೆ ಬಿಕ್ಕಳಿಸಿದಳು.

ಶಂಕರ ಏನು ಅನ್ನುವುದು ಆ ನೆಕ್ಕರೆಕಾಡು ಪ್ರದೇಶದ ಪ್ರತಿಯೊಬ್ಬರಿಗೂ ಗೊತ್ತು.

ಆತ ಬೆಳೆದದ್ದೇ ನೆಕ್ಕರೆಕಾಡಿನಲ್ಲಿ. ರೇವತಿ ನವ ವಧುವಾಗಿ ನೆಕ್ಕರೆಕಾಡಿಗೆ ಕಾಲಿಟ್ಟಾಗ ಅದು ಬೋರು ಗುಡ್ಡದಂತೆ ಇತ್ತು. ಅಲ್ಲೊಂದು ಇಲ್ಲೊಂದು ಮನೆಗಳು ಚದುರಿಕೊಂಡಂತೆ ಬಿದ್ದುಕೊಂಡಿದ್ದುವು. ಹೆಸರಿಗೆ ತಕ್ಕಂತೆ ಕಾಡುಗಳಿಂದ ಆವೃತವಾದ ಪ್ರದೇಶ. ಆದರೆ ರಿಯಲ್ ಎಸ್ಟೇಲ್ ವ್ಯಾಪಾರ ಒಮ್ಮಿಂದೊಮ್ಮೆಲೇ ತಾರಕ ಸ್ಥಿತಿಗೆ ತಲುಪಿದಾಗ ನೆಕ್ಕರೆಕಾಡಿಗೂ ಭಾರೀ ಬೆಲೆ ಬಂತು. ಎಲ್ಲೆಲ್ಲಿಂದಲೋ ಜನ ನೆಕ್ಕರೆಕಾಡಿನ ನೆಲಕ್ಕೆ ಗೆರೆ ಹಾಕಿ, ಕಾಂಪೌಂಡು ಕಟ್ಟಿ– ಇದು ನಮ್ಮದು ಎಂದು ಸಾರತೊಡಗಿದರು. ಮನೆ ಕಟ್ಟತೊಡಗಿದರು.

ನೋಡ ನೋಡುತ್ತಲೇ,

ಕಾಂಕ್ರೀಟು ಮನೆಗಳು ತಲೆ ಎತ್ತ ತೊಡಗಿದುವು. ಬಾಲ್ಯ ಕಾಲದಿಂದಲೇ ಅಲ್ಲಿದ್ದ ಶಂಕರ ಈ ಬೆಳವಣಿಗೆಗಳನ್ನೆಲ್ಲ ಆಶ್ಚರ್ಯ, ಆತಂಕದಿಂದ ನೋಡುತ್ತಿದ್ದ. ಆತನ ಹೆಂಚಿನ ಮನೆಯನ್ನು ಹೊಸ ಕಾಂಕ್ರೀಟು ಮನೆಗಳು ನೋಡಿ ನಗುತ್ತಿರುವಂತೆ ಅನಿಸುತ್ತಿತ್ತು. ಪ್ರತಿದಿನ ಜಲ್ಲಿಕಲ್ಲು, ಹೊಯ್ಗೆ, ಸಿಮೆಂಟುಗಳನ್ನು ತುಂಬಿಕೊಂಡ ಲಾರಿಗಳು





ಬಂದು ನಿಲ್ಲುವುದು, ಬುಲ್ಡೋಜರು ಬಂದು ನೆಲ ಸಮತಟ್ಟು ಮಾಡುವುದು, ಕಾಂಕ್ರೀಟನ್ನು ಮಿಶ್ರಣ ಮಾಡುವ ಯಂತ್ರದ ಕರ್ಕಶ ಸದ್ದು, ಕಾರ್ಮಿಕರ ಗೌಜು... ಎಲ್ಲವೂ ಆತನೊಳಗೆ ದಿನೇ ದಿನೇ ಅಸಹನೆಯನ್ನು ಹುಟ್ಟು ಹಾಕುತ್ತಲೇ ಇದ್ದುವು.

ಹೆಸರೇ ಹೇಳುವಂತೆ ನೆಕ್ಕರೆಕಾಡು–ಕಾಡಿನಿಂದಲೇ ತುಂಬಿದ್ದ ಊರು ಎಂದು ಶಂಕರನ ಅಪ್ಪ ತುಕ್ರಪ್ಪನವರು ಹೇಳಿದ್ದುದನ್ನು ಒಮ್ಮೆ ಆತ ರೇವತಿಯೊಂದಿಗೆ ಹಂಚಿಕೊಂಡಿದ್ದ. ನೆಕ್ಕರೆಕಾಡಿನಲ್ಲಿ ಮೊದಲು ಮನೆ ಕಟ್ಟಿದ್ದೇ ಶಂಕರನ ತಂದೆಯಂತೆ. ಆಗ ಆ ಊರು ಕಾಡಿನಿಂದ ಆವೃತ್ತವಾಗಿತ್ತಂತೆ. ರಸ್ತೆ ಬಿಡಿ ನಡೆಯಲು ಕಾಲು ದಾರಿಯೂ ಇದ್ದಿರಲಿಲ್ಲವಂತೆ. ಶಂಕರನನ್ನು ತೋಳಲ್ಲಿ ಕೂರಿಸಿಕೊಂಡು ಪತ್ನಿಯೊಂದಿಗೆ ತುಕ್ರಪ್ಪನವರು ಒಂದು ದಿನ ತನ್ನೂರು ಕಲ್ಪಣೆಯಿಂದ ನೆಕ್ಕರೆಕಾಡಿಗೆ ಹೊರಟು ನಿಂತಾಗ ಮನೆಯಲ್ಲಿ ಎಲ್ಲರೂ ತಡೆದಿದ್ದರಂತೆ. ಹುಲಿ, ಚಿರತೆ, ನರಿ, ಕಾಡೆಮ್ಮೆ ಇತ್ಯಾದಿ ಪ್ರಾಣಿಗಳಿರಬಹುದಾದ ಕಾಡಿನಲ್ಲಿ ಹೋಗಿ ಮನೆ ಮಾಡುವುದು ಮಕ್ಕಳಾಟಿಕೆಯಾ ಎಂದು ದಬಾಯಿಸಿದ್ದರಂತೆ. ಆದರೆ ತುಕ್ರಪ್ಪ ಯಾರ ಮಾತನ್ನೂ ಕಿವಿಗೆ ಹಾಕಿಕೊಳ್ಳದೇ ಹೊರಟೇ ಬಿಟ್ಟಿದ್ದರು.

ಇದಕ್ಕೆ ಒಂದು ಕಾರಣವೂ ಇತ್ತು.

ಐದು ಮಂದಿ ಸಹೋದರರಲ್ಲಿ ತುಕ್ರಪ್ಪ ಕೊನೆಯವರು. ಎಲ್ಲರದ್ದೂ ಬಟ್ಟಿ (ಗೊಬ್ಬರ, ಮಣ್ಣು ತುಂಬಿಸುವುದಕ್ಕೆ ಬಳಸುವ ಸಾಧನ) ತಯಾರಿಸುವ ಕೆಲಸ. ಬೆಳಗ್ಗೆದ್ದು ಕಾಡು ಹೊಕ್ಕು ಬಟ್ಟಿ ನೇಯುವುದಕ್ಕೆ ಉಪಯೋಗವಾಗುವ ಬಳ್ಳಿಯನ್ನು ಸಂಗ್ರಹಿಸುವುದು. ಆ ಬಳ್ಳಿ ಕಾಡಿನಲ್ಲಿ ಯಥೇಚ್ಛ ಸಿಗುತ್ತಿತ್ತು. ಇತರ ಮರಗಳನ್ನು ತಬ್ಬಿಕೊಂಡು ಎತ್ತರಕ್ಕೆ ಬೆಳೆಯುವ ಆ ಬಳ್ಳಿಯನ್ನು ಕತ್ತರಿಸಿ ತಂದು ಬಟ್ಟಿ ತಯಾರಿಸಿ ನಗರಕ್ಕೆ ಕೊಂಡೊಯ್ದರೆ ಅಷ್ಟಿಷ್ಟು ಕಾಸು ಸಿಗುತ್ತಿತ್ತು. ಸಾವಯವ ಗೊಬ್ಬರವನ್ನು ತುಂಬಿಸುವುದಕ್ಕೆ, ಅಡಿಕೆ ಮತ್ತು ತೆಂಗಿನ ತೋಟದ ಮಾಲಿಕರಿಗೆ ಬಟ್ಟಿಯ ಅಗತ್ಯ ತುಂಬಾ ಇದೆ. ಗದ್ದೆಗೆ ಗೊಬ್ಬರವನ್ನು ಹಾಕುವುದಕ್ಕೂ ಬಟ್ಟಿಯ ಉಪಯೋಗ ಇದೆ. ಕಂಗು, ತೆಂಗು ಮತ್ತು ಬಿತ್ತನೆ ಗದ್ದೆಗಳೇ ಪ್ರಧಾನ ಕೃಷಿಯಾಗಿದ್ದ ಆ ಕಾಲದಲ್ಲಿ ಎಷ್ಟು ಬಟ್ಟಿ ತಯಾರಿಸಿದರೂ ಗಿರಾಕಿಗಳಿದ್ದುವು.

ತುಕ್ರಪ್ಪನವರದ್ದು ತುಸು ಪ್ರಗತಿಪರ ಮನೋಭಾವ.

ಬಟ್ಟಿಯನ್ನು ಹೊತ್ತುಕೊಂಡು ತೋಟದ ಮಾಲಿಕರ ಮನೆಯ ಅಂಗಳದಿಂದ ತುಸು ದೂರದಲ್ಲಿ ನಿಂತು ಅವರನ್ನು ಅಣ್ಣೆರೇ ಎಂದು ಕರೆಯುವುದು, ಅಲ್ಲಿಯೇ ಬಟ್ಟಿ ಇಡುವುದು ಮತ್ತು ಮಾಲಿಕರು ಅಲ್ಲಿ ನೆಲದಲ್ಲೇ ಹಣ ಇಟ್ಟು ಬಟ್ಟಿ ಎತ್ತಿಕೊಂಡು ಹೋಗುವುದು... ಇತ್ಯಾದಿಗಳೆಲ್ಲ ಅವರೊಳಗೆ ಪ್ರಶ್ನೆಗಳನ್ನು ಎಬ್ಬಿಸುತ್ತಿತ್ತಂತೆ.

'ನಾವು ಹೆಣೆಯುವ ಬಟ್ಟಿಯನ್ನು ಸ್ಪರ್ಶಿಸುವ ನೀವು ನಮ್ಮನ್ನು ಮಾತ್ರ ಯಾಕೆ

ಅಸ್ಪೃಶ್ಯಗೊಳಿಸುತ್ತೀರಿ...' ಎಂದು ಒಂದು ದಿನ ಅವರು ತೋಟದ ಮಾಲಿಕರಲ್ಲಿ ಪ್ರಶ್ನಿಸಿದ್ದರಂತೆ. ಅಂದಿಗೇ ಕೊನೆ. ಆ ಬಳಿಕ ಆ ಮಾಲಿಕರು ತುಕ್ರಪ್ಪನವರಿಗೆ ಬಹಿಷ್ಕಾರ ಹಾಕಿದ್ದರಂತೆ.

ತುಕ್ರಪ್ಪ ಮದುವೆಯಾದ ಸಂದರ್ಭ.

ವಿಪರೀತ ಕುಡಿತದ ಚಟವನ್ನು ಬೆಳೆಸಿಕೊಂಡಿದ್ದ ಅವರ ನಾಲ್ವರು ಸಹೋದರರು ಇಡೀ ರಾತ್ರಿ ರಂಪಾಟ ನಡೆಸುವುದು ಮಾಮೂಲಿ ಆಗಿತ್ತು. ಜಗಳ, ಬೈಗುಳ, ಹೊ್ಯ–ಕೈ ಇತ್ಯಾದಿಗಳು ಇಲ್ಲದ ದಿನಗಳೇ ಇರಲಿಲ್ಲ. ಬೆಳಗಿನಿಂದ ಸಂಜೆಯವರೆಗೆ ಬಟ್ಟಿ ತಯಾರಿಸುವುದು ಮತ್ತು ಸಂಜೆಯ ಬಳಿಕ ಕುಡಿದು ರಾತ್ರಿಯನ್ನು ಅಮಲಿನಲ್ಲಿ ಕಳೆಯುವುದು... ಅವರ ದಿನಚರಿಯಾಗಿತ್ತು. ಹಾಗಂತ,

ತುಕ್ರಪ್ಪ ಕುಡಿಯುತ್ತಿರಲಿಲ್ಲ ಎಂದಲ್ಲ. ಆದರೆ,

ಅವರ ಕುಡಿತಕ್ಕೆ ಮಿತಿ ಇತ್ತು. ಕುಡಿದರೂ ಕುಡಿಯದಿದ್ದರೂ ವರ್ತನೆಯಲ್ಲಿ ಏರಿಳಿತ ಇರುತ್ತಿರಲಿಲ್ಲ. ತನ್ನ ಸಹೋದರರ ಹುಚ್ಚಾಟವನ್ನು ಕಂಡು ಸ್ವಯಂ ಅವರೇ ತನ್ನ ಮೇಲೆ ವಿಧಿಸಿಕೊಂಡ ನಿಯಂತ್ರಣ ಅದಾಗಿತ್ತು. ಆದರೆ ಮದುವೆಯಾದ ಹೊಸತರಲ್ಲಿ ಅವರು 'ರಾತ್ರಿಮೌನ'ವನ್ನು ಬಯಸಿದ್ದರು. ಮದುವೆಯ ಸುಖವನ್ನು ಅನುಭವಿಸುವುದಕ್ಕೆ ಇದ್ದುದು ರಾತ್ರಿ ಮಾತ್ರ. ಕಂಗಿನ ಸೋಗೆಯಿಂದ ಕಟ್ಟಿದ ಮನೆಯಾಕಾರದ ರಚನೆಯಲ್ಲಿ ಕೋಣೆಗಳು ಎಂಬುದಿರಲಿಲ್ಲ. ಮಳೆಯಿಂದ ರಕ್ಷಿಸಿಕೊಳ್ಳುವುದೇ ಆ ರಚನೆಯ ಮುಖ್ಯ ಉದ್ದೇಶವಾಗಿತ್ತು. ಆದ್ದರಿಂದ ರಾತ್ರಿಯೊಂದೇ ತನ್ನ ವಧುವನ್ನು ಸೇರಿಕೊಳ್ಳುವುದಕ್ಕೆ ತುಕ್ರಪ್ಪನಿಗಿದ್ದ ಏಕೈಕ ಆಸರೆಯಾಗಿತ್ತು. ಆದರೆ,

ತುಕ್ರಪ್ಪರ ನಾಲ್ವರು ಸಹೋದರರು ರಾತ್ರಿಯ ಮೌನವನ್ನು ಕೊಲ್ಲುವುದಕ್ಕೆಂದೇ ಇರುವವರೇನೋ ಎಂಬಂತೆ ವರ್ತಿಸುತ್ತಿದ್ದರು.

ಹೊಟ್ಟೆ ತುಂಬಾ ತುಂಬಿಕೊಂಡಿರುವ ಸೇಂದಿ ಬೆಳಗ್ಗಿನವರೆಗೆ ತನ್ನ ಕಾರುಬಾರನ್ನು ನಡೆಸುತ್ತಿತ್ತು.

ಹಾಗೂ ಹೀಗೂ ಎರಡು ವರ್ಷವನ್ನು ಆ ಮನೆಯಲ್ಲೇ ಕಳೆದ ತುಕ್ರಪ್ಪ, ಇನ್ನು ಸಾಧ್ಯವಿಲ್ಲ ಎಂದು ಹೊರಟು ಬಿಟ್ಟಿದ್ದರು. ನೆಕ್ಕರೆಕಾಡಿನ ಪ್ರಾಣಿಗಳಾದರೂ ಆದೀತು, ಆದರೆ ಈ ಕಲ್ಪಣೆಯ ನರಕವಲ್ಲ ಎಂದು ಗೊಣಗಿಯೇ ಅಲ್ಲಿಂದ ಹೊರಟಿದ್ದರು.

❖ ❖ ❖

ಸೇಸಮ್ಮ ಮಾತು ಮುಗಿಸಿ ಎದ್ದು ನಿಂತಿದ್ದಳು. ಆದರೆ ಅನಾಮಿಕ ಬಿಡಲಿಲ್ಲ.





# ನಾಲ್ಕು

ನೆಕ್ಕರೆಕಾಡು ತನ್ನ ಮೂಲ ಸ್ವರೂಪವನ್ನು ಬದಲಿಸಿಕೊಂಡು ಕಾಂಕ್ರೀಟು ನಾಡಾಗಿ ಬೆಳೆಯುತ್ತಿರುವುದನ್ನು ಶಂಕರ ಆತಂಕದಿಂದ ನೋಡುತ್ತಲೇ ಇದ್ದ. ಅಪ್ಪ ತುಕ್ರಪ್ಪ ಆರಂಭದಲ್ಲಿ ಇಲ್ಲಿ ಮನೆ ಮಾಡಿಕೊಂಡಾಗ ಅದು ಕಾಡಿನ ಮಧ್ಯದಲ್ಲಿ ಒಂದು ಮನೆಯಷ್ಟೇ ಆಗಿತ್ತು. ಅಪ್ಪ ಸಂಜೆಯಾಗುತ್ತಲೇ ಮನೆ ಸೇರಿಕೊಳ್ಳುತ್ತಿದ್ದ. ಸೂರ್ಯ ಮುಳುಗಿದ ಬಳಿಕ ಮನೆಯಿಂದ ಯಾರೂ ಹೊರಬರುವಂತಿರಲಿಲ್ಲ. ಸೂರ್ಯ ಉದಯಿಸಿದಲ್ಲಿಂದ ಸೂರ್ಯ ಮುಳುಗುವವರೆಗೆ ಮಾತ್ರ ಹೊರಗೆ ಓಡಾಟ. ಆ ಬಳಿಕ ಮನೆ ಸೇರಿಕೊಂಡು ಬಾಗಿಲು ಭದ್ರಪಡಿಸಿಕೊಂಡು ಇರಬೇಕು.

ಯಾಕೆಂದರೆ,

ಪ್ರಾಣಿಗಳು ದಾಳಿ ಮಾಡುವ ಅಪಾಯ ಇದ್ದಿತ್ತು.

ನೆಕ್ಕರೆಕಾಡಿನಲ್ಲಿ ಹುಲಿ, ಆನೆ, ಮುಳ್ಳು ಹಂದಿ, ಚಿರತೆ ಸಹಿತ ವಿವಿಧ ಅಪಾಯಕಾರಿ ಪ್ರಾಣಿಗಳು ಇವೆಯೆನ್ನುವುದು ಆವತ್ತು ಆಶ್ಚರ್ಯದ ವಿಷಯವಾಗಿರಲಿಲ್ಲ. ಅಲ್ಲದೇ ಎಲ್ಲಾ ಬಗೆಯ ಹಾವುಗಳಿರುವ ಕಾಡು. ಆದರೆ ಈಗ ಮನೆಗಳ ಮಧ್ಯೆ ಸ್ವಲ್ಪ ಕಾಡು ಎಂಬ ಸ್ಥಿತಿಗೆ ನೆಕ್ಕರೆಕಾಡು ಬದಲಾಗಿದೆ. ತುಕ್ರಪ್ಪನವರು ಇಲ್ಲಿ ಮನೆ ಮಾಡಿ ವರ್ಷಗಳು ಉರುಳಿದ ಬಳಿಕ ಒಬ್ಬೊಬ್ಬರೇ ಇಲ್ಲಿ ಬಂದು ತಳವೂರಿದರು. ನೆಕ್ಕರೆಕಾಡಿನಲ್ಲಿ ಬಟ್ಟೆ ತಯಾರಿಸುವುದಕ್ಕೆ ಬೇಕಾದ ಪರಿಕರಗಳು ಧಾರಾಳ ಲಭ್ಯವಿದ್ದುದರಿಂದ ಒಂದೊಂದೇ ಕುಟುಂಬಗಳು ಅಲ್ಲಿ ಜಮೆಯಾದುವು. ಆಗ ಭೂಮಿಗೆ ಬೆಲೆ ಇರಲಿಲ್ಲ. ಯಾರು ಎಲ್ಲಿ ಡೇರೆ ಹಾಕುತ್ತಾರೋ ಅದು ಅವರದು. ಹಾಗೆ ಬಂದವರ ಮನೆಗಳು ಈಗಲೂ ಇವೆ. ಬಹಳ ಕಷ್ಟದಿಂದ ಇತ್ತೀಚೆಗಷ್ಟೇ ಅವುಗಳಲ್ಲಿ ಕೆಲವು ಮುಳಿ ಹುಲ್ಲಿನಿಂದ ಹೆಂಚಿನ ಮನೆಗಳಾಗಿ ಬದಲಾಗಿವೆ. ಆದರೆ,

ಈಗ ಆಗುತ್ತಿರುವುದೇನು?

ಒಂದೇ ಸಮನೆ ಕಾಂಕ್ರೀಟ್ ಕಟ್ಟಡಗಳು! ದಶಕಗಳಿಂದ ಮೊದಲೇ ಇಲ್ಲಿ ನೆಲೆಯೂರಿದವರ ಮನೆ ಇನ್ನೂ ಹೆಂಚನ್ನು ಕಾಣುವುದೇ ಭಾಗ್ಯ ಎಂಬಂತಿರುವಾಗ ಮತ್ತು ಮಣ್ಣಿನ ಗೋಡೆಗೆ ಇನ್ನೂ ಮುಕ್ತಿ ಸಿಗದಿರುವಾಗ, ನಿನ್ನೆ–ಮೊನ್ನೆ ಬಂದವರು ದಿಢೀರನೇ ಕಲ್ಲಿನ ಗೋಡೆಯನ್ನು ಎಬ್ಬಿಸಿ ಅದರ ಮೇಲೊಂದು ಕಾಂಕ್ರೀಟು ಸ್ಲಾಬನ್ನು ಹಾಸಿ, ಅದರ ಮೇಲೂ ಮನೆ ಕಟ್ಟುತ್ತಿದ್ದಾರೆಂದರೆ? ಇಷ್ಟೊಂದು ಹಣ ಇವರಲ್ಲಿ ಎಲ್ಲಿಂದ ಬಂತು? ಶಂಕರ ಈ ಪ್ರಶ್ನೆಯನ್ನು ಹೊತ್ತುಕೊಂಡು ತಿರುಗಾಡುತ್ತಿದ್ದಾಗ ಸಿಕ್ಕ ಉತ್ತರವೇ ಗಲ್ಫ್.

ತನ್ನ ಟೈಲರ್ ಶಾಪ್‌ನಲ್ಲಿ ಗೆಳೆಯ ಕುಮಾರನೊಂದಿಗೆ ನೆಕ್ಕರೆಕಾಡಿನ ಬದಲಾವಣೆಯನ್ನು ಹಂಚಿಕೊಂಡಾಗ, ಆತ ಭಯಂಕರ ರಹಸ್ಯವೆಂಬಂತೆ ಕಿವಿಯ ಬಳಿಗೆ ಬಾಯಿಯಿಟ್ಟು ಗಲ್ಫ್ ಕತೆಯನ್ನು ಬಿಚ್ಚಿಟ್ಟಿದ್ದ.

'ಬ್ಯಾರಿಗಳು ಗಲ್ಫ್‌ಗೆ ಹೋಗಿ ದುಡಿಯಲು ಪ್ರಾರಂಭಿಸಿದ ಬಳಿಕ ನಿನ್ನ ನೆಕ್ಕರೆಕಾಡು ಬಿಡು, ಭಾರತದ ಮ್ಯಾಪೇ ಬದಲಾಗಿದೆ...' ಎಂದಾತ ಮಾತು ಪ್ರಾರಂಭಿಸಿದ್ದ.

'ಗಲ್ಫ್ ರಾಷ್ಟ್ರಗಳೆಂದರೆ ಮುಸ್ಲಿಮರದ್ದು ನೋಡು. ದೇವನ ಏನು ಮಹಿಮೆಯೋ ಏನೋ ಅಲ್ಲಿ ಅಗೆದಲ್ಲೆಲ್ಲಾ ಸಿಗುವುದು ಎಣ್ಣೆ. ಎಣ್ಣೆ ಅಂದರೆ ನಿನ್ನ ಸೇಂದಿ ಅಲ್ಲ, ಪೆಟ್ರೋಲ್, ಪೆಟ್ರೋಲ್. ಆ ಎಣ್ಣೆ ನಮ್ಮಲ್ಲಿ ಸಿಗುತ್ತಿದ್ದರೆ ನಾವು ಈಗ ಹೇಗಿರುತ್ತಿದ್ದೆವು ಗೊತ್ತಾ? ವಿಜಯನಗರದ ಕೃಷ್ಣ ದೇವರಾಯನ ಕಾಲ ಇತ್ತಲ್ಲ, ಹಾಗಿರುತ್ತಿದ್ದೆವು...'

ಶಂಕರ ಅರ್ಥವಾಗದವನಂತೆ ಕುಮಾರನ ಮುಖ ನೋಡಿದ್ದ.





'ಅದೇ ಮಾರಾಯ, ಕೃಷ್ಣ ದೇವರಾಯ ಅಂದರೆ ಮಹಾನ್ ಅರಸ. ಆತನ ಕಾಲದಲ್ಲಿ ಈ ದೇಶದಲ್ಲಿ ಎಂಥಾ ಶ್ರೀಮಂತಿಕೆ ಇತ್ತೆಂದರೆ, ರಸ್ತೆ ಬದಿಯಲ್ಲಿ ಚಿನ್ನದ ನಾಣ್ಯದೊಂದಿಗೆ ವ್ಯವಹರಿಸಲಾಗುತ್ತಿತ್ತಂತೆ. ಅಂಗಡಿಯಿಂದ ಸಾಮಾನು ಖರೀದಿಸಿದರೆ, ಆಗ ಈಗಿನಂತೆ ನೋಟು ಕೊಡುತ್ತಿದ್ದುದಲ್ಲ, ಚಿನ್ನ, ಚಿನ್ನ ಕೊಡುತ್ತಿದ್ದುದು. ಅಂಥ ಗತಕಾಲದ ಇತಿಹಾಸವೊಂದು ಈ ದೇಶಕ್ಕಿದೆ ಮಾರಾಯ. ಬರೇ ಬಟ್ಟೆ ಹೊಲಿದರೆ ಏನೂ ಆಗಲ್ಲ, ಇತಿಹಾಸ, ಇತಿಹಾಸ ಓದಬೇಕು'– ಕುಮಾರ ತುಸು ಅಸಹನೆ ಮತ್ತು ತುಸು ವ್ಯಂಗ್ಯಭರಿತ ದಾಟಿಯಲ್ಲಿ ಹೇಳಿದ್ದ.

'ಆಗ ಈ ದೇಶದಲ್ಲಿ ಎಣ್ಣೆ ಸಿಗುತ್ತಿತ್ತಾ?' ಶಂಕರನ ಪ್ರಶ್ನೆಯಲ್ಲಿ ವ್ಯಂಗ್ಯವಿರಲಿಲ್ಲ.

'ಯಾವ ಎಣ್ಣೆ?' ಕುಮಾರನ ಮರು ಪ್ರಶ್ನೆಯಲ್ಲಿ ಮುಗ್ಧತನವಿರಲಿಲ್ಲ.

'ಅದೇ, ನೀನು ಹೇಳಿದ್ದಿಯಲ್ಲ, ಗಲ್ಫ್‌ನಲ್ಲಿ ಸಿಗುವ ಎಣ್ಣೆ?'

'ಇಲ್ಲ ಮಾರಾಯ. ಅದು ಇಲ್ಲದೆಯೂ ಒಂದು ಕಾಲದಲ್ಲಿ ಈ ದೇಶ ಸುಭಿಕ್ಷವಾಗಿತ್ತು ಅನ್ನುವುದನ್ನು ನಿನಗೆ ತಿಳಿಸುವುದಕ್ಕಾಗಿ ಹೇಳಿದೆ. ಎಣ್ಣೆ ಇಲ್ಲಿ ಇರುತ್ತಿದ್ದರೆ ನೀನಿವತ್ತು ಈ ಸೂಜಿ–ದಾರ ಹಿಡಿದು ಹೊಲಿಯಬೇಕಿತ್ತಾ? ಗಡಗಡಾಂತ ಅರಚುವ ಈ ಹೊಲಿಗೆ ಯಂತ್ರದ ಸದ್ದನ್ನು ಆಲಿಸಬೇಕಿತ್ತಾ? ನಾನು, ನೀನು– ರಾಜ, ರಾಜನಂತೆ ಇರುತ್ತಿದ್ವಿ. ನೀನು ನಾಲ್ಕಂತಸ್ತಿನ ಮನೆಕಟ್ಟಿಸಿ ಎಲ್ಲೋ ನಗರದಲ್ಲಿ ಕಾರು–ಗೀರು ಅಂತ ಓಡಾಡುತ್ತಿದ್ದಿ. ಹಿಂದೆ–ಮುಂದೆ ನಿನ್ನ ಆದೇಶವನ್ನು ಪಾಲಿಸುವುದಕ್ಕೆ ಜನಗಳು. ದೊಡ್ಡ ಗೇಟಿನ ಬಂಗಲೆಯಂಥ ಮನೆಯನ್ನು ಕಾಯುವುದಕ್ಕೆಂದು ಎರಡು ಸಿಂಹದಂಥ ನಾಯಿಗಳು. ಚೌಕೀದಾರ. ಮನೆಯಿಂದ ಹೊರಬಂದ ಕೂಡಲೇ ಕಾರಿನ ಬಾಗಿಲು ತೆರೆದು ಕೊಟ್ಟು ರೊಯ್ಯಂತ ಕಾರಲ್ಲಿ ಕರೆದುಕೊಂಡು ಹೋಗುವ ಚಾಲಕ... ಇವೆಲ್ಲಾ ನಾವು ಈಗ ಸಿನಿಮಾದಲ್ಲಿ ನೋಡುತ್ತಿದ್ದೇವಲ್ಲ..., ಎಣ್ಣೆ ಸಿಗುತ್ತಿದ್ದರೆ ಆ ಬದುಕು ನಿನ್ನದೂ ಆಗುತ್ತಿತ್ತು...'

ಶಂಕರನ ಗಮನ ಬೇರೆಡೆ ಇದೆ ಅನ್ನುವುದನ್ನು ಗ್ರಹಿಸಿಕೊಂಡ ಕುಮಾರ ಮಾತು ನಿಲ್ಲಿಸಿದ.

ಶಂಕರನಿಗೆ ಕುಮಾರನ ಮಾತು ಗಿಲೀಟು ಅಂತ ಅನಿಸಿತು. ಅದಕ್ಕೆ ಕಾರಣ–

ಆತನ ಅಪ್ಪ ತುಕ್ರಪ್ಪ ಹೇಳುತ್ತಿದ್ದ ಕಟು ಅಸ್ಪೃಶ್ಯತೆಯ ಕತೆ.

ಅಪ್ಪನ ಕಾಲಕ್ಕೆ ಹೋಲಿಸಿದರೆ ಅಸ್ಪೃಶ್ಯತೆಯ ಸ್ವರೂಪದಲ್ಲಿ ಈಗ ಬದಲಾವಣೆಯಾಗಿದೆ, ನಿಜ. ಅಪ್ಪ ಅತೀ ಧಾರುಣ ಅಸ್ಪೃಶ್ಯ ಆಚರಣೆಯನ್ನು ಕಂಡುಂಡ ವ್ಯಕ್ತಿ. ತನ್ನ ಬಾಲ್ಯವೂ ಅದರ ಪಾರ್ಶ್ವ ಭಾಗವನ್ನು ಕಂಡಿತ್ತು. ಅಪ್ಪನಿಗೆ ತೋಟದ ಮಾಲಿಕರು ನೀರು ಕೊಡುತ್ತಿದ್ದುದು ಗೆರಟೆಯಲ್ಲಿ. ತೋಟದ ಮಾಲಿಕರು ಬಿಡಿ, ಹೊಟೇಲುಗಳಲ್ಲೂ ನಮಗೆಂದು ಪ್ರತ್ಯೇಕ ಗೆರಟೆಯನ್ನೇ ಇಡಲಾಗುತ್ತಿತ್ತು. ಚಾ ಕೊಡುವುದು ಅದರಲ್ಲೇ.

ನೀರೂ ಅದರಲ್ಲೇ. ಆದರೆ, ನಮ್ಮಿಂದ ಹಣ ಪಡಕೊಳ್ಳುವಾಗ ಮಾತ್ರ ಈ ಯಾವ ಅಸ್ಪೃಶ್ಯ ಭಾವವೂ ಇರುತ್ತಿರಲಿಲ್ಲ. ನಾವು ಮುಟ್ಟಿದ ಅದೇ ನೋಟನ್ನು ಅವರು ಯಾವ ಮೈಲಿಗೆಯೂ ಇಲ್ಲದೇ ಪಡಕೊಳ್ಳುತ್ತಿದ್ದರು. ನಮ್ಮ ನೋಟು ಆಗಬಹುದು, ಬಟ್ಟೆ ಆಗಬಹುದು, ನಾವು ತೋಟದಲ್ಲಿ ಕೆಲಸ ಮಾಡುವಾಗ ಅವರದೇ ಹಾರೆ, ಪಿಕ್ಕಾಸು, ಸಬಲ, ಬಳಸಬಹುದು. ಆದರೆ, ನಾವು ಮಾತ್ರ ಅವರನ್ನು ಸ್ಪರ್ಶಿಸಬಾರದು...

ತುಕ್ರಪ್ಪ ಇಂಥ ಅನೇಕಾರು ಕರುಳು ಹಿಂಡುವ ಘಟನೆಗಳನ್ನು ಶಂಕರನೊಂದಿಗೆ ಹಂಚಿಕೊಂಡಿದ್ದರು.

ತುಕ್ರಪ್ಪ ಮತ್ತು ಅವರು ಪ್ರತಿನಿಧಿಸುವ ಸಮುದಾಯಕ್ಕೆ ಕಾಡಿನೊಂದಿಗೆ ಅತ್ಯಾಪ್ತ ಸಂಬಂಧ ಇದ್ದುದರಿಂದ ವೈದ್ಯ ಪಂಡಿತರು ಔಷಧೀಯ ಗಿಡಮೂಲಿಕೆಗಳಿಗಾಗಿ ಇವರನ್ನೇ ಸಂಪರ್ಕಿಸುತ್ತಿದ್ದರು. ಯಾವ ಬಳ್ಳಿ, ಯಾವ ಮರದ ಎಲೆ, ಯಾವ ಬೇರು, ಯಾವ ಮರದ ಕೆತ್ತೆ, ಯಾವ ಹಣ್ಣು, ಯಾವ ಮೊಗ್ಗುಗಳೆಲ್ಲ ಕಾಡಿನ ಯಾವ ಯಾವ ಭಾಗದಲ್ಲಿರುತ್ತದೆ ಅನ್ನುವುದು ತುಕ್ರಪ್ಪನವರಿಗೆ ಚೆನ್ನಾಗಿ ಗೊತ್ತಿತ್ತು. ಅವರಿಗಷ್ಟೇ ಅಲ್ಲ, ಅವರಂತೆ ಕಾಡಿನ ಉತ್ಪನ್ನಗಳನ್ನೇ ಜೀವನೋಪಾಯವಾಗಿ ಕಂಡುಕೊಂಡಿದ್ದ ಅವರ ಸಮುದಾಯದ ಪ್ರತಿಯೊಬ್ಬರಿಗೂ ಗೊತ್ತಿತ್ತು. ಆ ದಿನಗಳಲ್ಲಿ ಕಾಯಿಲೆ–ಕಸಾಲೆಗಳಿಗೆ ಇಂಗ್ಲಿಷ್ ಮದ್ದು ಇದ್ದಿಲ್ಲ. ಆಸ್ಪತ್ರೆ, ಕ್ಲಿನಿಕ್ಕು, ಲ್ಯಾಬರೇಟರಿ ಅಂತೆಲ್ಲ ಇರಲೇ ಇಲ್ಲ.

ಇದ್ದುದು ಪಂಡಿತರು.

ಅವರೆಂದರೆ ಊರಿಗೆಲ್ಲ ಗೌರವ. ಅವರದೊಂದು ಗತ್ತೇ ಬೇರೆ. ಅಂದು ವಾಹನಗಳೂ ಇದ್ದಿರಲಿಲ್ಲ. ಎತ್ತಿನ ಗಾಡಿಯಲ್ಲಿ ಒಣಹುಲ್ಲು–ಮತ್ತಿತರ ಅಗತ್ಯ ವಸ್ತುಗಳ ಸಾಗಾಟ ನಡೆಯುತ್ತಿತ್ತು. ಯಾರಿಗಾದರೂ ಜ್ವರ ಬಂದರೆ ಆಯಾ ಮನೆಯವರಿಗೆ ಗೊತ್ತಿರುವ ನಾಟಿ ಔಷಧಿಯನ್ನು ತಯಾರಿಸಿ ಕುಡಿಸಲಾಗುತ್ತಿತ್ತು. ದಿನಗಳ ತನಕ ಇವೇ ಮದ್ದನ್ನು ಅರೆದು ಕುಡಿಸಲಾಗುತ್ತಿತ್ತು. ಈ ಯಾವ ಊರ ಮದ್ದಿಗೂ ಜ್ವರ ಬಗ್ಗುವುದಿಲ್ಲವೆಂದರೆ ಕೊನೆಗೆ ಪಂಡಿತರ ಬಳಿಗೆ ತೆರಳುವುದು ರೂಢಿ.

ಇಷ್ಟು ವಿಳಂಬ ಯಾಕೆಂದರೆ, ಪಂಡಿತರು ಪ್ರತಿ ಊರಿನಲ್ಲೂ ಇರುತ್ತಿರಲಿಲ್ಲ. ಅವರದ್ದು ವಿರಳ ಗುಂಪು.

ಇನ್ನು, ಅವರಿರುವ ಸ್ಥಳಕ್ಕೆ ಹೋಗುವುದೂ ಸುಲಭ ಸಾಧ್ಯವಾಗಿರಲಿಲ್ಲ. ವಾಹನ ಇಲ್ಲದೇ ಇರುವುದರಿಂದ ನಡೆದುಕೊಂಡೇ ಹೋಗಬೇಕು. ಅದೂ 30–40 ಕಿಲೋ ಮೀಟರ್ ದೂರ. ಇಷ್ಟು ದೂರ ಸಾಗುವುದಕ್ಕೆ ರಸ್ತೆಯೂ ಇರುತ್ತಿರಲಿಲ್ಲ. ಗುಡ್ಡ–ಕಾಡುಗಳಲ್ಲಿ ಕುರುಚಲುಗಳನ್ನು ಹೊದ್ದು ಮಲಗಿರುವ ಕಿರು ದಾರಿಯನ್ನು ಬೇಧಿಸಿಕೊಂಡು ಹೋಗಬೇಕು. ಕಾಡಿನ ನಡುವೆ ಸಾಗುವಾಗ ಪ್ರಾಣಿ ದಾಳಿಯ





ಭೀತಿಯೂ ಇರುತ್ತದೆ. ಒಂದು ವೇಳೆ ಹೀಗೆ ನಡೆಯುವಾಗ ಆಕಸ್ಮಾತ್ ಪ್ರಾಣಿಗಳು ದಾಳಿ ಮಾಡಿದುವೆಂದೇ ಇಟ್ಟುಕೊಳ್ಳೋಣ. ಅದು ತಕ್ಷಣಕ್ಕೆ ಊರಿಗೆ ಗೊತ್ತಾಗುವಂತೆಯೂ ಇಲ್ಲ. ಆತ ಕಾಣೆಯಾದ ಎರಡ್ಮೂರು ದಿನಗಳ ಬಳಿಕ, ಹುಡುಕಾಟ ಆರಂಭವಾಗುವ ಸ್ಥಿತಿ. ಫೋನ್, ಮೊಬೈಲ್ ಇಲ್ಲದ ಆ ಕಾಲದಲ್ಲಿ ಪಂಡಿತರನ್ನು ತಲುಪುವುದೇ ಒಂದು ಸವಾಲು.

ಗರ್ಭಿಣಿಯರಿಗಂತೂ ಮನೆಯೇ ಆಸ್ಪತ್ರೆ.

ಹಿರಿಯ ಮಹಿಳೆಯು ಪ್ರಸವ ತಜ್ಞೆಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಪ್ರಸವಕ್ಕೆ ದಿನ ಹತ್ತಿರುವಾಗುತ್ತಿರುವಂತೆಯೇ ನಾಟಿ ಔಷಧವನ್ನು ಸಿದ್ಧ ಮಾಡಿ ಇಟ್ಟುಕೊಳ್ಳಲಾಗುತ್ತಿತ್ತು. ಎಲ್ಲಾದರೂ ರಕ್ತಸ್ರಾವ ನಿಲ್ಲದೇ ಹೋದರೆ, ಉಪಯೋಗಿಸಲೆಂದು ಪಂಡಿತರಿಂದ ಮೊದಲೇ ಔಷಧ ತಂದಿಡಲಾಗುವುದೂ ಇತ್ತು. ಹಾಗಂತ, ಅದು ರಕ್ತಸ್ರಾವವನ್ನು ಪೂರ್ಣ ಮಟ್ಟದಲ್ಲಿ ತಡೆಯುವ ಔಷಧಿ ಎಂದಲ್ಲ. ಅದೊಂದು ಆತ್ಮವಿಶ್ವಾಸವನ್ನು ಹೆಚ್ಚಿಸುವ ಔಷಧಿಯಷ್ಟೇ ಆಗಿತ್ತು.

ಅಷ್ಟಕ್ಕೂ,

ತುಕ್ರಪ್ಪನವರ ಕಾಲದಲ್ಲಿ ಗರ್ಭ ಧರಿಸುವುದು ವಿಶೇಷ ಸಂಗತಿಯೇನೂ ಆಗಿರಲಿಲ್ಲ. ಗರ್ಭಧರಿಸಿದ ಹೆಣ್ಣು ಗರ್ಭಧರಿಸಿಲ್ಲದ ಹೆಣ್ಣಿನಷ್ಟೇ ಸಲೀಸಾಗಿ ಕೆಲಸ ಮಾಡುವುದು ಸಹಜವಾಗಿತ್ತು. ಕೆಲಸ ಮಾಡುತ್ತಿರುವಾಗಲೇ ಪ್ರಸವ ವೇದನೆ ಉಂಟಾಗುವುದು, ಗಂಟೆಯೊಳಗೆಯೇ ಪ್ರಸವವಾಗಿ ಮಗು ಅಳುವುದು ಇತ್ಯಾದಿಗಳು ಸಾಮಾನ್ಯ ಸಂಗತಿಯಾಗಿತ್ತು. ಅಪರೂಪಕ್ಕೆ ರಕ್ತಸ್ರಾವ ನಿಲ್ಲದೇ ತಾಯಿ ಸಾವಿಗೀಡಾಗುವುದೂ ಇತ್ತು.

ಅಂಥದ್ದೊಂದು ಹೃದಯ ವಿದ್ರಾವಕ ಘಟನೆಯನ್ನು ಮಗ ಶಂಕರನೊಂದಿಗೆ ತುಕ್ರಪ್ಪನವರು ಒಮ್ಮೆ ಹಂಚಿಕೊಂಡಿದ್ದರು.

ಅವರ ಕುಟುಂಬದ ಹತ್ತಿರದ ಸಂಬಂಧಿಗೆ ಒಬ್ಬಳೇ ಒಬ್ಬಳು ಮಗಳಿದ್ದಳು. ನೋಡುವುದಕ್ಕೂ ಚೆಲುವೆ. ಒಬ್ಬಳೇ ಮಗಳೆಂದು ತುಸು ಹೆಚ್ಚೇ ಜೋಪಾನ ಮಾಡಿದ್ದರು. ಕೆಲಸ ಮಾಡಿಸುತ್ತಿದ್ದುದೂ ಕಡಿಮೆ. ಹೀಗಿರುತ್ತಾ ಆಕೆಗೆ ಮದುವೆಯಾಗಿ ಗರ್ಭವನ್ನೂ ಧರಿಸಿದಳು. ಗಂಡನ ಮನೆಯಲ್ಲೂ ಆಕೆಯನ್ನು ತುಸು ಹೆಚ್ಚೇ ಪ್ರೀತಿಯಿಂದ ಕಾಣುತ್ತಿದ್ದರು. ಪ್ರಸವದ ದಿನ ತುಕ್ರಪ್ಪನವರ ತಾಯಿಯೇ ವಿಶೇಷ ಮುತುವರ್ಜಿ ವಹಿಸಿ ಉಸ್ತುವಾರಿ ನೋಡಿಕೊಂಡಿದ್ದರಂತೆ.

ಆದರೆ,

ಪ್ರಸವ ಸುಗಮವಾಗಿ ನಡೆದರೂ ರಕ್ತಸ್ರಾವ ಮಾತ್ರ ನಿಲ್ಲುವ ಸೂಚನೆ ಸಿಗಲಿಲ್ಲ. ತುಕ್ರಪ್ಪನವರಿಗೆ ತುರ್ತು ಕರೆ ಹೋಯಿತು. ಅವರು ಪಂಡಿತರ ಮನೆಗೆ ಓಡುತ್ತಲೇ

ಹೋಗಿದ್ದರಂತೆ. 20 ಕಿಲೋ ಮೀಟರ್ ದೂರದಲ್ಲಿ ಪಂಡಿತರ ಮನೆ. ಅಲ್ಲಿಗೆ ಹೇಗೋ ತಲುಪಿದರು. ಆದರೆ ಪಂಡಿತರು ತಕ್ಷಣ ಔಷಧ ಕೊಡಲು ನಿರಾಕರಿಸಿದರಂತೆ. ಈಗ ರಾಹುಕಾಲ ಕೊನೆಯ ಹಂತದಲ್ಲಿದ್ದು, ಈಗಲೇ ಔಷಧಿ ಕೊಟ್ಟರೆ ಅದು ಗರ್ಭಿಣಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂದು ಜ್ಯೋತಿಷ್ಯ ಶಾಸ್ತ್ರದ ಅಡಿಯಲ್ಲಿ ಕಡ್ಡಿ ಮುರಿದಂತೆ ಹೇಳಿದರಂತೆ. ತುಕ್ರಪ್ಪನವರಿಗೆ ಬೇರೆ ದಾರಿಯಿರಲಿಲ್ಲ. ಸಂಜೆ ವರೆಗೆ ಕಾದು ಪಂಡಿತರು ಅಂಗಳದಲ್ಲಿ ತಂದಿಟ್ಟ ಔಷಧಿಯನ್ನು ಎತ್ತಿಕೊಂಡು ಮನೆಗೆ ತಲುಪಿದಾಗ ಆ ಹೆಣ್ಣು ಮಗಳ ಪ್ರಾಣ ಪಕ್ಷಿ ಹಾರಿ ಹೋಗಿತ್ತಂತೆ.

ಹೀಗೆ ಆ ಘಟನೆಯನ್ನು ಹಂಚಿಕೊಳ್ಳುತ್ತಾ ತುಕ್ರಪ್ಪನವರು ದೀರ್ಘ ನಿಟ್ಟುಸಿರೊಂದನ್ನು ಬಿಟ್ಟು ವಿಷಾದದಿಂದೆಂಬಂತೆ ಶಂಕರನೊಂದಿಗೆ ಹೇಳಿದ್ದರಂತೆ–

ಆ ಪಂಡಿತರಿಗೆ ಕಾಡು ಸುತ್ತಿ ಗಿಡಿಮೂಲಿಕೆಗಳನ್ನು ಸಂಗ್ರಹಿಸಿಕೊಟ್ಟದ್ದೇ ನಾನು. ನನ್ನಿಂದ ಆ ಗಿಡಮೂಲಿಕೆಗಳನ್ನು ಪಡಕೊಳ್ಳುವಾಗ ಯಾವ ರಾಹುಕಾಲ–ಗುಳಿಗೆ ಕಾಲಗಳೂ ಇಲ್ಲ. ಅಲ್ಲದೇ, ನಾನು ಮುಟ್ಟಿದ ಬಳ್ಳಿಯೂ ಆಗುತ್ತೆ. ಮರದ ಕೆತ್ತೆಯೂ ಆಗುತ್ತೆ. ಆದರೆ, ಅದನ್ನು ಔಷಧಿಯಾಗಿಸಿ ನನಗೆ ಮರಳಿಸುವಾಗ ಮಾತ್ರ ರಾಹುಕಾಲ ಅಡ್ಡ ಬರುತ್ತದೆ. ಔಷಧಿಯನ್ನು ನನ್ನ ಕೈಯಲ್ಲಿ ಕೊಡುವುದಕ್ಕೆ ಜಾತಿ ಅಡ್ಡ ಬರುತ್ತದೆ...

❖ ❖ ❖

ಒಂದೇ ಉಸಿರಲ್ಲಿ ಹೇಳಿ ಮುಗಿಸಿದ ಸೇಸಮ್ಮ ನೀರು ಕೇಳಿದ್ದಳು. ನೀರು ಕೊಟ್ಟ ಅನಾಮಿಕ ಚಕ್ಕಳ–ಬಕ್ಕಳ ಕುಳಿತು ಕಿವಿ ಮುಂದು ಮಾಡಿದ್ದಳು. ಸೇಸಮ್ಮ ಮುಂದುವರಿಸಿದ್ದಳು..





# ಐದು

ಶಂಕರ ನಿಟ್ಟುಸಿರಿಟ್ಟ. ತನ್ನ ಎದುರು ಕೂತು ಕೃಷ್ಣ ದೇವರಾಯನ ಕತೆ ಹೇಳುತ್ತಿದ್ದ ಕುಮಾರ ಹೋಗಲೆಂದು ಎದ್ದು ನಿಂತ. ಶಂಕರ ಮೌನ ಮುರಿದ.

'ಕೃಷ್ಣದೇವರಾಯನ ಕಾಲದಲ್ಲಿ ಈ ಅಸ್ಪೃಶ್ಯ ಆಚರಣೆ ಇತ್ತೇ?'

ಕುಮಾರನ ನೆತ್ತಿಯಲ್ಲಿ ನೆರಿಗೆ ಮೂಡಿತು. ಆತ ಆ ಪ್ರಶ್ನೆಯನ್ನು ನಿರೀಕ್ಷಿಸಿರಲಿಲ್ಲ.

ಶಂಕರನದ್ದು ಸೌಮ್ಯ ಸ್ವಭಾವ. ಪ್ರಶ್ನಿಸುವ ಸ್ವಭಾವ ಕಡಿಮೆ. ಹೇಳುವುದನ್ನೆಲ್ಲಾ ಮೌನವಾಗಿ ಆಲಿಸುತ್ತಲೋ ಹೂಂಗುಟ್ಟುತ್ತಲೋ

ಹೋಗುವ ಸಾದು ಮನುಷ್ಯ. ಆದ್ದರಿಂದಲೇ, ಕುಮಾರ ಗಲಿಬಿಲಿಗೊಂಡಿದ್ದ. ಈ ದೇಶದಲ್ಲಿ ಗಲ್ಫ್‌ನಂತೆ ಎಣ್ಣೆ ಸಿಗುತ್ತಿದ್ದರೆ ನೀನು ಅರಸನಂತೆ ಬಾಳಬಹುದಿತ್ತು ಎಂದು ಹೇಳಿದಾಗ ಶಂಕರನ ಮುಖದಲ್ಲಿ ನಿರಾಸೆ ಎದ್ದು ಕಂಡದ್ದೇಕೆಂಬುದು ಕುಮಾರನಿಗೆ ಥಟ್ಟನೆ ಅರ್ಥವಾಗಿರಲಿಲ್ಲ.

ಬಹುಶಃ ಶತ ಶತಮಾನಗಳಿಂದ ತಮ್ಮ ಸಮುದಾಯದ ಮೇಲೆ ನಡೆದಿರುವ ಅಸ್ಪೃಶ್ಯ ದೌರ್ಜನ್ಯ ಶಂಕರನನ್ನು ಕಾಡಿರಬೇಕು.

ಗಲ್ಫ್‌ನಲ್ಲಿ ಅಸಮಾನತೆ ಇಲ್ಲ, ಅಸ್ಪೃಶ್ಯತೆಯೂ ಇಲ್ಲ. ಬಡವರು ಮತ್ತು ಶ್ರೀಮಂತರು ಎಂಬ ಎರಡು ವರ್ಗವಷ್ಟೇ ಇದೆ. ಎಣ್ಣೆಯ ಲಾಭದಿಂದ ಯಾರು ಬೇಕಾದರೂ ಅಲ್ಲಿ ಶ್ರೀಮಂತರಾಗಬಹುದು. ಆದರೆ ಭಾರತದಲ್ಲಿ ಎಣ್ಣೆ ಸಿಗುವಂತಾದರೆ, ಅದರ ಲಾಭ ಶಂಕರ ಪ್ರತಿನಿಧಿಸುವ ಸಮುದಾಯಕ್ಕೆ ಸಿಗುವುದು ಸಾಧ್ಯವೇ? ಅಭಿವೃದ್ಧಿಯ ಫಲ ಕಟ್ಟಕಡೆಯ ಜನರಿಗೂ ಲಭ್ಯವಾಗಬೇಕೆಂದರೆ ಮೊದಲು ಆ ಕಟ್ಟಕಡೆಯ ಜನರನ್ನು ಸಮಾಜ ಮನುಷ್ಯರಾಗಿ ಪರಿಗಣಿಸಬೇಕು. ಅವರು ಮುಖ್ಯವಾಹಿನಿಯಲ್ಲಿ ಇರಬೇಕು. ಆದರೆ ಶಂಕರನ ಸಮುದಾಯವನ್ನು ಮುಟ್ಟುವುದಕ್ಕೇ ಉಳಿದವರು ಸಿದ್ಧರಿಲ್ಲ. ಆ ಸಮುದಾಯದೊಂದಿಗೆ ಬೇರೆ ಸಮುದಾಯ ವಿವಾಹ ಸಂಬಂಧವನ್ನು ಬೆಳೆಸುವುದಿಲ್ಲ. ಅವರನ್ನು ತಮಗೆ ಸಮಾನ ಎಂದು ಪರಿಗಣಿಸುವುದಿಲ್ಲ. ಹೀಗಿರುವಾಗ, ಇಲ್ಲಿ ಎಣ್ಣೆ ಸಿಕ್ಕರೆ ಅದರ ಲಾಭ ತನಗೆ ಹೇಗೆ ಸಿಗುತ್ತದೆ ಎಂಬ ಭಾವ ಶಂಕರನನ್ನು ಕಾಡಿರುವ ಸಾಧ್ಯತೆ ಇದೆ ಎಂದು ತನ್ನೊಳಗೇ ಹೇಳಿಕೊಂಡ ಕುಮಾರ ಗೊಂದಲಕ್ಕೆ ಬಿದ್ದ.

ಶಂಕರ ಮಾತಾಡಿದ–

'ಒಂದೊಮ್ಮೆ ಇಲ್ಲಿ ಎಣ್ಣೆ ಸಿಗುತ್ತಿದ್ದರೆ ನಾನು ಮತ್ತು ನೀವು ರಾಜನಂತೆ ಇರುತ್ತಿದ್ವಿ ಎಂದು ನೀವು ಹೇಳಿದಿರಲ್ಲ? ನನ್ನನ್ನು ಮತ್ತು ನನ್ನ ಸಮುದಾಯವನ್ನು ಅಸ್ಪೃಶ್ಯರಂತೆ ನಡೆಸಿಕೊಳ್ಳುತ್ತಿರುವ ಈ ದೇಶದಲ್ಲಿ ಎಣ್ಣೆಯ ಲಾಭ ಈ ದೇಶದ ನಾಗರಿಕರಲ್ಲಿ ಸಮಾನವಾಗಿ ಹಂಚಿಕೆಯಾಗುತ್ತಿತ್ತು ಎಂದು ನೀವು ನಂಬುತ್ತೀರಾ? ನೀವೇನೋ ರಾಜರಾಗುತ್ತಿದ್ದಿರಿ. ಆದರೆ ನಾನು ನಿಮ್ಮ ಎತ್ತರಕ್ಕೆ ಏರುವುದಕ್ಕೆ ನನ್ನ ಜಾತಿ ಒಂದು ತಡೆಯಾಗಿ ನಿಲ್ಲುತ್ತಿರಲಿಲ್ಲವೇ? ಎಣ್ಣೆಯ ಲಾಭವು ಉನ್ನತ ಜಾತಿಯವರನ್ನು ಅರಸಿಕೊಂಡು ಹೋಗುತ್ತಿರಲಿಲ್ಲವೇ? ಅಥವಾ ಈ ಸಾಮಾಜಿಕ ಅನೀತಿಯ ಕಾರಣದಿಂದಾಗಿಯೇ ಆ ದೇವನು ಇಲ್ಲಿ ಎಣ್ಣೆಯನ್ನು ಅಲಭ್ಯಗೊಳಿಸಿದನೇ?'

ಹೋಗಲೆಂದು ಎದ್ದು ನಿಂತಿದ್ದ ಕುಮಾರ ನಿಂತಲ್ಲೇ ಹೇಗೆ ಥರಗುಟ್ಟಿ ಹೋದ ಎಂದರೆ, ಶಂಕರನ ಕಣ್ಣೋಟವನ್ನು ಎದುರಿಸಲಾಗದೆ ಕಲ್ಲಾಗಿ ನಿಂತು ಬಿಟ್ಟ. ಶಂಕರನಲ್ಲಿ ಇಷ್ಟೊಂದು ಪ್ರಖರ ಪ್ರಶ್ನೆ ಹುಟ್ಟಿಕೊಂಡೀತು ಎಂದು ಆತ ಕಲ್ಪಿಸಿಕೊಂಡೇ





ಇರಲಿಲ್ಲ. ಶಂಕರನ ಪ್ರತಿ ಮಾತಿನಲ್ಲೂ ಆತ ಅನುಭವಿಸಿರಬಹುದಾದ ಅಸಮಾನತೆಯ ದಟ್ಟ ಅನುಭವ ಇತ್ತು. ಪ್ರತಿಭಟನೆಯೂ ಇತ್ತು. ತಾನು ಶಂಕರನನ್ನು ತಪ್ಪಾಗಿ ಅಂದಾಜಿಸಿರುವೆ ಅನ್ನುವುದು ಕುಮಾರನಿಗೆ ಖಚಿತವಾಯಿತು.

ಶಂಕರ ಮತ್ತೆ ಮಾತಾಡಿದ–

'ನೀವು ಯಾರನ್ನಾದರೂ ಅಸ್ಪೃಶ್ಯರಂತೆ ನಡೆಸಿಕೊಂಡಿದ್ದೀರಾ?'

ಬೆನ್ನು ಬೆನ್ನಿಗೇ ಮೂರು ಪ್ರಶ್ನೆಗಳು. ಇದನ್ನು ಪ್ರಶ್ನೆಗಳು ಅನ್ನುವುದಕ್ಕಿಂತ ದೌರ್ಜನ್ಯದ ದಟ್ಟ ಅನುಭವವನ್ನು ಹೊತ್ತವನ ಪ್ರಾಮಾಣಿಕ ಆಕ್ರೋಶಗಳು ಎಂದರೂ ಸರಿಯೇ. ತಾನೀಗ ಗರಿಷ್ಠ ಜಾಗರೂಕತೆಯನ್ನು ಪಾಲಿಸಬೇಕು. ಉತ್ತರಿಸುವಾಗ ತುಸು ಎಡವಿದರೂ ತಾನು ಈ ಶಂಕರನನ್ನು ಶಾಶ್ವತವಾಗಿ ಕಳಕೊಳ್ಳಬೇಕಾಗುತ್ತದೆ. ಹಾಗೇನಾದರೂ ಆದರೆ, ಆತನ ಮೂಲಕ ಆ ಸಮುದಾಯವನ್ನು ತಲುಪುವ ನನ್ನ ಉದ್ದೇಶಕ್ಕೂ ಶಾಶ್ವತ ಕಲ್ಲು ಬೀಳುತ್ತದೆ. ಎದ್ದು ನಿಂತಿದ್ದ ಕುಮಾರ ಕುಳಿತುಕೊಂಡ. ಶಂಕರನ ಮುಖವನ್ನೇ ದಿಟ್ಟಿಸಿ ನೋಡಿದ.

'ನಿನ್ನ ಮೂರೂ ಪ್ರಶ್ನೆಗಳಿಗೆ ಸಾವಕಾಶವಾಗಿ ಉತ್ತರಿಸಬೇಕಾಗುತ್ತದೆ. ಅದಕ್ಕೆ ಗಂಟೆಗಟ್ಟಲೆ ಸಮಯ ಬೇಕು. ಈಗ ನನ್ನ ಬಳಿ ಸಮಯವೂ ಇಲ್ಲ. ಕೆಲಸದ ನಡುವೆ ಅದನ್ನು ಕೇಳಿಸಿಕೊಳ್ಳುವುದಕ್ಕೆ ಈಗ ನಿನಗೆ ವ್ಯವಧಾನವೂ ಇರಲಿಕ್ಕಿಲ್ಲ. ಇನ್ನು ನೀನು ಅಸ್ಪೃಶ್ಯತೆಯ ಬಗ್ಗೆ ಕೇಳಿದಿಯಲ್ಲ. ಅದರ ಬಗ್ಗೆ ಮಾತ್ರ ಎರಡು ಮಾತು ಹೇಳುತ್ತೇನೆ–

ಅಸ್ಪೃಶತೆ ಎಂಬುದು ಜಾತಿ ಮೂಲದಿಂದಾಗಿ ಬಂದಿದ್ದು. ಜಾತಿಯ ಬೇರಂತೂ ವೃತ್ತಿಯ ಮೂಲದಲ್ಲಿದೆ. ಈಗ ನೀನು ಟೈಲರ್. ನಾನು ಕೃಷಿಕ. ನಿನ್ನದೊಂದು ವೃತ್ತಿಯಾದರೆ, ನನ್ನದೊಂದು ವೃತ್ತಿಯೇ. ಈ ವೃತ್ತಿ ಮಾಡುವವರನ್ನು ಗುರುತಿಸುವುದಕ್ಕೆಂದೇ ಜಾತಿ ವಿಂಗಡಣೆ ಹುಟ್ಟಿಕೊಂಡಿತು. ಕ್ರಮೇಣ ಅದು ವೃತ್ತಿಯ ಹಂಗಿಲ್ಲದೇ ಬರೇ ಜಾತಿಯಾಗಿಯೇ ಉಳಿಯಿತು. ಹಾಗೆಯೇ ಈ ಜಾತಿಗಳಲ್ಲಿ ಒಂದು ಜಾತಿ ಮೇಲು, ಇನ್ನೊಂದು ಕೀಳು ಎಂಬಿತ್ಯಾದಿ ವರ್ಗೀಕರಣಗಳೂ ನಡೆದುವು. ಅದರಾಚೆಗೆ ಧರ್ಮಕ್ಕೂ ಅದಕ್ಕೂ ಸಂಬಂಧ ಇಲ್ಲ...'

ಕುಮಾರ ಹೊರಡಲು ಅವಸರಪಟ್ಟ. ಶಂಕರ ಬಿಡಲಿಲ್ಲ–

'ಹಾಗಿದ್ದರೆ ನೀವೊಮ್ಮೆ ನನ್ನ ಮನೆಗೆ ಊಟಕ್ಕೆ ಬರುವಿರಾ?'

ಹೊರಟು ನಿಂತ ಕುಮಾರ ಕಡೆಯ ಮಾತೆಂಬಂತೆ ಹೇಳಿದ–

'ಈಗ ಪುರುಸೊತ್ತಿಲ್ಲ. ಇನ್ನೊಮ್ಮೆ ಆ ಬಗ್ಗೆ ಮಾತಾಡುವ. ನನಗೆ ಬೇರೆ ಕೆಲಸವಿದೆ.'

ಶಂಕರನಿಗೆ ಸಮಾಧಾನವಾಗಿರಲಿಲ್ಲ. ಆ ರಾತ್ರಿ ಆತ ಆ ಇಡೀ ಘಟನೆಯನ್ನು

ಪತ್ನಿ ರೇವತಿಯೊಂದಿಗೆ ಹಂಚಿಕೊಂಡಿದ್ದ.

❖ ❖ ❖

ತನ್ನೆರಡೂ ಕಿವಿಯನ್ನು ಸೇಸಮ್ಮಳ ಬಾಯಿಗಿಟ್ಟು ಕುಳಿತುಕೊಂಡಿದ್ದ ಅನಾಮಿಕಳಿಗೆ ಇನ್ನಷ್ಟು ಆಲಿಸುವ ಉತ್ಸಾಹವಿತ್ತು. ಆದರೆ, ಏನೋ ಅರ್ಜೆಂಟ್ ಇದೆಯೆಂದು ಹೇಳಿ, ಸೇಸಮ್ಮ ಅವಸರವಸರವಾಗಿ ಹೊರಟು ಹೋಗಿದ್ದಳು.





# ಆರು

**ಒಂ**ದು ಮಧ್ಯಾಹ್ನ ಶಂಕರ ತನ್ನ ಮನೆಯ ಜಗಲಿಯಲ್ಲಿ ಕುಳಿತಿದ್ದ. ಟೈಲರ್ ಶಾಪ್‌ನಲ್ಲಿ ಕೆಲಸ ಹೇಳಿಕೊಳ್ಳುವಷ್ಟೇನೂ ಇರಲಿಲ್ಲ. ಈಗಿನ ಯುವಕರಿಗೆ ರೆಡಿಮೇಡ್ ಉಡುಪುಗಳನ್ನು ಧರಿಸುವುದೇ ಒಂದು ಫ್ಯಾಶನ್. ಜೀನ್ಸ್ ಪ್ಯಾಂಟು, ಟೀಶರ್ಟು– ಅದೂ ಬ್ರಾಂಡೆಡ್. ಅದಕ್ಕೆ ತಕ್ಕಂತೆ ಶೂವನ್ನೂ ಸಿಕ್ಕಿಸಿಕೊಂಡು ಜಗದ ಪರಿವೆಯೇ ಇಲ್ಲದೇ ಸುತ್ತಾಡುವುದು. ಇದೊಂದು ಆಧುನಿಕ ಫ್ಯಾಶನ್ ಆಗಿಬಿಟ್ಟಿದೆ. ಮಾಲ್‌ಗಳು ತೆರೆದುಕೊಂಡ ಬಳಿಕ ಯುವ ಸಮೂಹವು ಮಾಲ್ ಪರ್ಚೇಸ್ ಅನ್ನು ಒಂದು ಪ್ರೆಸ್ಟೀಜ್ ಆಗಿ ಪರಿಗಣಿಸತೊಡಗಿದೆ ಎಂಬ ದೂರು ಶಂಕರನದು.

ಪ್ಯಾಂಟು–ಶರ್ಟು ಪೀಸ್‌ಗಳನ್ನು ಖರೀದಿಸುವುದು, ಆ ಬಳಿಕ ಟೈಲರ್ ಶಾಪ್‌ನಲ್ಲಿ ಮೆಜರ್‌ಮೆಂಟ್ ತೆಗೆದುಕೊಳ್ಳುವುದು, ಮತ್ತೆ ಹೊಲಿದು ಸಿಗಬೇಕಾದರೆ ಒಂದು ವಾರ ಕಾಯಬೇಕು. ಈ ರಾಮಾಯಣವೆಲ್ಲ ಆಧುನಿಕ ಪೀಳಿಗೆಗೆ ಒಗ್ಗುತ್ತಿಲ್ಲ. ಎಲ್ಲವೂ ತಕ್ಷಣವೇ ಆಗಬೇಕು. ಮಾಲ್‌ಗೆ ಹೋದರೆ ತೊಂದರೆ ಇಲ್ಲ. ಬೇಕಾದಷ್ಟು ಪ್ಯಾಂಟು–ಶರ್ಟು–ಟೀ ಶರ್ಟು ರಾಶಿ ಹಾಕಿ ಇಟ್ಟಿರುತ್ತಾರೆ. ಎಲ್ಲವನ್ನೂ ಟ್ರಯಲ್ ರೂಮ್‌ಗೆ ತೆರಳಿ ಧರಿಸಿ, ಬೇಕಾದುದನ್ನು ಆಯ್ಕೆ ಮಾಡಿಕೊಳ್ಳಬಹುದು.

ಮಾಲ್ ಸಂಸ್ಕೃತಿಯಿಂದ ಆಗಿರುವ ದೊಡ್ಡ ಹಾನಿ ಯಾರ ಮೇಲೆಂದರೆ ನಮ್ಮಂಥ ಸಣ್ಣ–ಪುಟ್ಟ ಟೈಲರ್‌ಗಳ ಮೇಲೆ.

ರೆಡಿಮೇಡ್ ಡ್ರೆಸ್‌ಗಳ ಹಾವಳಿ ಜೋರು ಇಲ್ಲದಿದ್ದ ಕಾಲದಲ್ಲಿ ನಾವು ಹೊಲಿದದ್ದೇ ಪ್ಯಾಂಟು–ಶರ್ಟು. ಅಲ್ಲಿ ಮತ್ತೆ ಚರ್ಚೆಯಿಲ್ಲ. ಈಗ ಹಾಗಲ್ಲ. ಮಾಲ್‌ನಲ್ಲಿ ವಿಧ ವಿಧ ಪ್ಯಾಂಟು–ಶರ್ಟುಗಳನ್ನು ನೋಡಿ, ಧರಿಸಿ ಅಭ್ಯಾಸ ಮಾಡಿಕೊಂಡಿರುವ ಯುವಕರು, ನಾವು ಎಷ್ಟೇ ಎಚ್ಚರಿಕೆಯಿಂದ ಹೊಲಿದರೂ ಅದರಲ್ಲಿ ಲೋಪ ಹುಡುಕಿಯೇ ಹುಡುಕುತ್ತಾರೆ. ಎರಡು–ಮೂರು ಬಾರಿ ನಾವು ಹೊಲಿದದ್ದನ್ನೇ ಮತ್ತೆ ಮತ್ತೆ ಹೊಲಿಯಬೇಕಾಗುತ್ತದೆ. ನಾವೆಲ್ಲಾದರೂ ಅಸಮಾಧಾನ ಸೂಚಿಸಿದರೆ ಮುಂದೆ ಅವರನ್ನು ನಾವು ಶಾಶ್ವತವಾಗಿ ಕಳಕೊಳ್ಳಬೇಕಾಗುತ್ತದೆ.

ಐದಾರು ವರ್ಷಗಳ ಹಿಂದಿನ ಪರಿಸ್ಥಿತಿಯನ್ನೊಮ್ಮೆ ಶಂಕರ ಸುಮ್ಮನೆ ಕಣ್ಣ ಮುಂದೆ ತಂದುಕೊಂಡ.

ಆತನದ್ದು ಇತರ ಶಾಪ್‌ಗಳಿಗೆ ಹೋಲಿಸಿದರೆ ಸಣ್ಣ ಅಂಗಡಿ. ಆತನೇ ಮಾಲಿಕ, ಆತನೇ ಕೆಲಸಗಾರ. ಆರಂಭದಲ್ಲಿ ಆತ ಹೊಸ ಬಟ್ಟೆ–ಬರೆಗಳನ್ನು ಹೊಲಿಯುತ್ತಿರಲಿಲ್ಲ. ಹಳತು ಉಡುಪುಗಳನ್ನು ರಿಪೇರಿ ಮಾಡುವ ಕೆಲಸವನ್ನಷ್ಟೇ ಮಾಡುತ್ತಿದ್ದ. ನಗರದ ಅಂಗಡಿಗಳಿಂದ ರೆಡಿಮೇಡ್ ಉಡುಪು ಖರೀದಿಸಿದವರು ಕೂಡ ರಿಪೇರಿ ಮಾಡಿ ಕೊಳ್ಳುವುದಕ್ಕಾಗಿ ಶಂಕರನ ಅಂಗಡಿಗೆ ಬರುತ್ತಿದ್ದರು. ಹೀಗೆ ಬರಬರುತ್ತಾ ಹೊಸ ಉಡುಪನ್ನೂ ಹೊಲಿಯಲು ಶುರು ಮಾಡಿದ್ದ. ಆಗ ಹೊಲಿಯುವ ಕೆಲಸ ಎಷ್ಟಿತ್ತೆಂದರೆ, ರಾತ್ರಿ–ಹಗಲೂ ಹೊಲಿದದ್ದೇ ಹೊಲಿದದ್ದು. ಮುಳಿ ಹುಲ್ಲಿನ ಮನೆಯನ್ನು ಹೆಂಚಿನ ಮನೆಯಾಗಿ ಬದಲಾಯಿಸಿದ್ದೂ ಆ ಸಂದರ್ಭದಲ್ಲೇ. ಒಂದು ಸೆಕೆಂಡ್ ಹ್ಯಾಂಡ್ ಸ್ಕೂಟರನ್ನು ಖರೀದಿಸಿದ್ದೂ ಆ ಕಾಲದಲ್ಲೇ. ಬಳಿಕ ಕೆಲಸ ಕಡಿಮೆಯಾಗುತ್ತಾ ಬಂತು...

ಶಂಕರ ನಿಟ್ಟುಸಿರಿಟ್ಟ.

ಅದೇ ಸಂದರ್ಭದಲ್ಲಿ ಆತನ ಮನೆಯ ಮುಂದಿನ ರಸ್ತೆಯಿಂದ ಜಲ್ಲಿ ಕಲ್ಲು ತುಂಬಿಕೊಂಡ ಲಾರಿಯೊಂದು ಹಾದು ಹೋಯಿತು. ಅದರ ಬೆನ್ನಿನಲ್ಲಿ ಇನ್ನೆರಡು





ಲಾರಿಗಳೂ ಇದ್ದುವು. ಒಂದರಲ್ಲಿ ತುಂಬಾ ಹೊೖಗೆ. ಇನ್ನೊಂದರಲ್ಲಿ ಸಿಮೆಂಟ್ ಇದ್ದಿರಬೇಕೆಂದು ಕಾಣುತ್ತದೆ. ಶಂಕರನಿಗೆ ಕುಮಾರ ಹೇಳಿದ ಮಾತು ನೆನಪಾಯಿತು,

'ಬ್ಯಾರಿಗಳು ಗಲ್ಫ್‌ಗೆ ಹೋಗಿ ದುಡಿಯಲು ಪ್ರಾರಂಭಿಸಿದ ಬಳಿಕ ನಿನ್ನ ನೆಕ್ಕರೆಕಾಡು ಬಿಡು, ಇಡೀ ಭಾರತದ ಮ್ಯಾಪೇ ಬದಲಾಗಿದೆ...'

ಶಂಕರನಿಗೆ ಏನನಿಸಿತೋ, ಜಗಲಿಯಿಂದ ಎದ್ದು ಆ ಲಾರಿಗಳು ಸಾಗಿದ ರಸ್ತೆಯಲ್ಲಿ ಸೀದಾ ನಡೆಯತೊಡಗಿದ.

ಆತನಿಗೆ ನೆಕ್ಕರೆಕಾಡು ಅಪರಿಚಿತ ಅಲ್ಲ. ಆತನ ತಂದೆ ತುಕ್ರಪ್ಪನವರು ಅಲ್ಲಿ ಬಂದು ಡೇರೆ ಹಾಕಿಕೊಂಡಾಗ ಬರೇ ಕಾಡಾಗಿದ್ದ ಆ ಊರು ಕ್ರಮೇಣ ಒಂದೊಂದೇ ಕುಟುಂಬ ವಲಸೆ ಬಂದು ಅಲ್ಲಿ ನೆಲೆಸತೊಡಗಿದ ನಂತರ ಕಾಡಿನ ನಡುವೆ ಮನೆಗಳೂ ತಲೆ ಎತ್ತ ತೊಡಗಿದ್ದುವು. ಆತ ಅಲ್ಲೇ ಬೆಳೆದವನಾದ್ದರಿಂದ ಕಾಡಿನ ಉದ್ದಗಲ ಆತನಿಗೆ ಚೆನ್ನಾಗಿಯೇ ಗೊತ್ತಿತ್ತು. ಹೊಸ ಕುಟುಂಬಗಳು ಅಲ್ಲಿಗೆ ವಲಸೆ ಬಂದರೂ ಆತನಿಗೆ ತಿಳಿಯುತ್ತಿತ್ತು. ಸಾಮಾನ್ಯವಾಗಿ ಅಲ್ಲಿಗೆ ಬರುತ್ತಿದ್ದುದೆಲ್ಲಾ ಕಾಡುತ್ಪನ್ನಗಳನ್ನೇ ಜೀವನೋಪಾಯವಾಗಿ ಕಂಡುಕೊಂಡ ಕುಟುಂಬಗಳು. ಕಾಡಿಗೆ ತೆರಳಿ ಬಳ್ಳಿಗಳನ್ನು ಕತ್ತರಿಸಿಕೊಂಡು ಬಂದು ಬಟ್ಟಿ, ಬುಟ್ಟಿ ನೇಯುವ ಕಾಯಕದ ಕುಟುಂಬಗಳೇ ಆರಂಭದಲ್ಲಿ ಅಲ್ಲಿ ಡೇರೆ ಹಾಕಿ ವಾಸಿಸತೊಡಗಿದ್ದುವು. ಆಗೆಲ್ಲಾ ಶಂಕರ ಆ ಇಡೀ ಕಾಡಿಗೊಂದು ಸುತ್ತು ಹಾಕಿ ಎಲ್ಲಿ, ಯಾವ ಕುಟುಂಬ ವಾಸವಾಗಿದೆ ಎಂದೆಲ್ಲಾ ಖಾನೀಶುಮಾರಿಗಿಳಿದವನಂತೆ ಮಾಹಿತಿ ಸಂಗ್ರಹಿಸಿಕೊಂಡು ಬರುತ್ತಿದ್ದ.

ಕ್ರಮೇಣ ಈ ವಾತಾವರಣದಲ್ಲಿ ಬದಲಾವಣೆಯಾಯಿತು.

ರಿಯಲ್ ಎಸ್ಟೇಟ್ ವ್ಯಾಪಾರ ಬಲು ಜೋರಿನಲ್ಲಿ ಪ್ರಾರಂಭವಾಯಿತು. ಆ ಬಳಿಕ ಕಾಡನ್ನು ಆಶ್ರಯಿಸಿ ಬದುಕುವ ಕುಟುಂಬಗಳ ವಲಸೆ ನಿಂತು ಹೋಗಿ ಕಾಡನ್ನು ನಾಡನ್ನಾಗಿಸಿ ಪರಿವರ್ತಿಸುವ ಆಧುನಿಕ ಆಲೋಚನೆಯ ಕುಟುಂಬಗಳ ವಲಸೆ ಹೆಚ್ಚಾಯಿತು. ಶಂಕರನಿಗೆ ಅದು ಇಷ್ಟವಿರಲಿಲ್ಲ. ನೆಕ್ಕರೆಕಾಡಿನ ಭೌಗೋಳಿಕ ಸ್ಥಿತಿಯಲ್ಲಿ ಮಾರ್ಪಾಟು ತರುವುದನ್ನು ಆತ ವಿರೋಧಿಸುತ್ತಿದ್ದ. ಆದರೆ, ಆತ ಬಯಸಿದಂತೆ ರಿಯಲ್ ಎಸ್ಟೇಟ್ ವ್ಯವಹಾರ ನಡೆಸಲು ಸಾಧ್ಯವಿಲ್ಲವಲ್ಲ. ಆತನ ಕಣ್ಣೆದುರೇ ಕಾಡು ಇಂಚಿಂಚಾಗಿ ನಾಡಾಗಿ ಪರಿವರ್ತನೆಯಾಗತೊಡಗಿದುವು. ಆತನಿಗೆ ಎಷ್ಟು ನಿರಾಶೆಯಾಯಿತೆಂದರೆ, ಆತ ಆ ಬಗ್ಗೆ ಚಿಂತಿಸುವುದನ್ನೇ ಬಿಟ್ಟು ಬಿಟ್ಟ. ತಾನಾಯಿತು, ತನ್ನ ಮನೆ–ಮಕ್ಕಳಾಯಿತು ಎಂಬ ರೀತಿಯಲ್ಲಿ ಬದುಕತೊಡಗಿದ. ತನ್ನ ನೆಕ್ಕರೆಕಾಡು ಪ್ರದೇಶಕ್ಕೆ ಬರುತ್ತಿರುವವರಲ್ಲಿ ಹಿಂದೂಗಳು ಎಷ್ಟು, ಮುಸ್ಲಿಮರು ಎಷ್ಟು ಎಂಬ ಲೆಕ್ಕಾಚಾರಕ್ಕೂ ಆತ ಹೋಗಿರಲಿಲ್ಲ. ಆದರೆ,

ಕುಮಾರ ಹೇಳಿದ ಮಾತಿನ ಪ್ರಭಾವದಿಂದಲೋ ಏನೋ ಆ ಮಧ್ಯಾಹ್ನ ಆತನಲ್ಲಿ

ವಿಚಿತ್ರ ಕುತೂಹಲವೊಂದು ಮೂಡಿತು.

ಆತ ನೇರವಾಗಿ ಆ ಲಾರಿಗಳ ಹಿಂದೆಯೇ ಹೋದನಲ್ಲದೇ, ಲಾರಿಗಳು ತಮ್ಮ ಭಾರವನ್ನು ಕೊಡವಿ ಹಗುರ ಮಾಡಿಕೊಳ್ಳುತ್ತಿರುವ ಜಾಗದಲ್ಲಿ ಹೋಗಿ ನಿಂತುಕೊಂಡ. ಎಷ್ಟೊಂದು ಮನೆಗಳು! ವಿವಿಧ ಬಣ್ಣಗಳನ್ನು ಬಳಿದುಕೊಂಡು ಪೂರ್ಣ ಶೃಂಗಾರದೊಂದಿಗೆ ನಳನಳಿಸುವ ಮನೆಗಳು ಕೆಲವಾದರೆ, ನಿರ್ಮಾಣ ಹಂತದಲ್ಲಿರುವ ಮನೆಗಳು ಹಲವು. ಎರಡಂತಸ್ತಿನ ಮನೆಗಳೇ ಅಧಿಕ. ನಿರ್ಮಾಣ ಕಾರ್ಯಗಳು ಭರದಿಂದ ಸಾಗುತ್ತಿದ್ದುವು. ಕಾರ್ಮಿಕರು ಈ ಊರಿನವರಂತೆ ಕಾಣಿಸುತ್ತಿರಲಿಲ್ಲ. ಅಲ್ಲಲ್ಲಿ ಭೂಮಿಗೆ ಗುರುತು ಮಾಡಿಟ್ಟುಕೊಂಡದ್ದನ್ನೂ ಶಂಕರ ನೋಡಿದ.

ಆತನಿಗೆ ಕುಮಾರನ ನೆನಪಾಯಿತು.

ಗಲ್ಫ್‌ನ ಹಣದಿಂದ ಈ ಕಾಮಗಾರಿಗಳೆಲ್ಲ ನಡೆಯುತ್ತಿವೆಯೇ? ಇವರೆಲ್ಲಾ ಬ್ಯಾರಿಗಳಿರಬಹುದೇ? ನೆಕ್ಕರೆಕಾಡಿನ ಮ್ಯಾಪನ್ನೇ ಈ ಬ್ಯಾರಿಗಳು ಬದಲಿಸಿ ಬಿಡುವರೇ?

ಆತ ಏನೋ ತಪಾಸಿಸುವವನ ರೀತಿಯಲ್ಲಿ ಎರಡ್ಮೂರು ಬಾರಿ ಮೇಲೆ–ಕೆಳಗೆ ನಡೆದ. ಆತನನ್ನು ದೂರದಿಂದ ನೋಡುತ್ತಿದ್ದ ನಾಲ್ಕೈದು ಯುವಕರಿಗೆ ಏನೋ ಶಂಕೆ ತೋರಿತು. ಈತ ಏನನ್ನೋ ಪರಿಶೀಲಿಸಲು ಬಂದಿದ್ದಾನೆ ಎಂದವರು ಲೆಕ್ಕ ಹಾಕಿದರು. ಇಲ್ಲಿಯ ಏನಾದರೂ ಮಾಹಿತಿಯನ್ನು ಪಡೆದುಕೊಂಡು ಪೊಲೀಸರಿಗೆ ದೂರು ನೀಡುವ ಸಂಚು ಇರಬಹುದೇ ಎಂದವರು ಅನುಮಾನಿಸಿದರು. ಅವರಿಗೆ ಶಂಕರನ ಪರಿಚಯ ಇರಲಿಲ್ಲ. ಅವರು ಇನ್ನೂ ನೆಕ್ಕರೆಕಾಡಿನಲ್ಲಿ ಸರಿಯಾಗಿ ನೆಲೆಸಿಯೂ ಇರಲಿಲ್ಲ. ಶಂಕರನಿಗಾದರೋ ಅದು ಬಾಲ್ಯದೂರು. ಬಾಲ್ಯದಿಂದಲೇ ಅವಿನಾಭಾವ ಸಂಬಂಧವನ್ನು ಇಟ್ಟುಕೊಂಡ ಊರು.

ಆ ಯುವಕರು ಗುಂಪಾಗಿ ಆತನ ಬಳಿ ಬಂದರು. ಏನು ಎಂಬಂತೆ ಕಣ್ಸನ್ನೆಯಲ್ಲೇ ಪ್ರಶ್ನಿಸಿದರು. ಬಿಸಿ ರಕ್ತ. ಯಾವುದಕ್ಕೂ ಸಿದ್ಧ ಅನ್ನುವ ವಯಸ್ಸು.

ಅವರ ಆ ವರ್ತನೆ ಶಂಕರನಿಗೆ ಸರಿ ಕಾಣಿಸಲಿಲ್ಲ. ಮೊದಲೇ ಕುಮಾರ ಮೆದುಳಿಗೆ ಹುಳ ಬಿಟ್ಟಿದ್ದ. ಇದೀಗ ನಾಲ್ಕೈದು ಬ್ಯಾರಿ ಹುಡುಗರು ಆತನನ್ನು ಕೇವಲವಾಗಿ ನೋಡುತ್ತಿರುವಂತೆ ಅನಿಸಿತು. ಆತನೂ ಕಣ್ಸನ್ನೆಯಲ್ಲೇ ಮಾತಾಡಿದ. ಬಳಿಕ ಮಾತಿಗೆ ಮಾತು ಬೆಳೆಯಿತು. ನೆಕ್ಕರೆಕಾಡು ತನ್ನದು ಎಂಬಂತೆ ಶಂಕರ ಮಾತಾಡಿದರೆ, ಇಡೀ ನೆಕ್ಕರೆಕಾಡನ್ನೇ ಖರೀದಿಸುತ್ತೇವೆ, ನೀನಾರು ಕೇಳೋಕೆ ಎಂಬ ಪ್ರತಿ ಉತ್ತರ ಯುವಕರಿಂದಲೂ ಬಂತು. ಶಂಕರನಿಗೆ ರೇಗಿ ಹೋಯಿತು. ನನ್ನದೇ ಊರಿಗೆ ಬಂದು ನನ್ನನ್ನೇ ದಬಾಯಿಸುತ್ತಿದ್ದಾರಲ್ಲ ಎಂದು ಅನಿಸಿತು. ಗಲ್ಫ್‌ನ ಹಣವೇ ಈ ಯುವಕರನ್ನು ಹೀಗೆ ಮಾತಾಡಿಸುತ್ತಿದೆ ಎಂದು ಶಂಕರ ಅಂದುಕೊಂಡ.

ಶಂಕರನಂತೆ ಯುವಕರೂ ರೇಗಿದರು.





ಪರಸ್ಪರ ಹ್ಯೊ–ಕೈ ನಡೆಯಿತು. ಒಬ್ಬಾತ ಶಂಕರನ ಕಾಲರ್ ಪಟ್ಟಿಯನ್ನು ಹಿಡಿದುಕೊಂಡ. ಅಲ್ಲಿದ್ದ ಕಾರ್ಮಿಕರು ಮಧ್ಯ ಪ್ರವೇಶಿಸದೆ ಇರುತ್ತಿದ್ದರೆ ಅನಾಹುತವೊಂದು ಆಗಿಬಿಡುವ ಸಾಧ್ಯತೆಯೂ ಇತ್ತು.

ತೀವ್ರ ಅವಮಾನ, ದುಃಖ, ಸಂಕಟದೊಂದಿಗೆ ಶಂಕರ ಅಲ್ಲಿಂದ ಮನೆಯತ್ತ ಹೆಜ್ಜೆ ಹಾಕಿದ್ದ. ಆತನಿಗದು ಹೊಸ ಅನುಭವ. ಆವರೆಗೆ ಯಾರೂ ಆತನ ಕಾಲರ್ ಪಟ್ಟಿ ಹಿಡಿದಿರಲಿಲ್ಲ. ಆತ ಒಳಗೊಳಗೇ ಕುದಿಯತೊಡಗಿದ...

ಕುಮಾರ ಹೇಳಿದ್ದು ನಿಜ, ಬ್ಯಾರಿಗಳಿಂದ ಖಂಡಿತ ಅಪಾಯವಿದೆ ಎಂದಾತ ನಿರ್ಧರಿಸಿದ...

❖ ❖ ❖

ಏಕಪಾತ್ರಾಭಿನಯವನ್ನು ಮುಗಿಸಿ ಸೇಸಮ್ಮ ಎದ್ದು ನಿಂತಳು. ಶಂಕರ ಮತ್ತು ರೇವತಿಯಿಂದ ಆಲಿಸಿದ್ದನ್ನು ಹಾಗೂ ಆ ನೆಕ್ಕರೆಕಾಡು ಪ್ರದೇಶದ ಅಷ್ಟೂ ಘಟನೆಗಳನ್ನು ಸ್ವತಃ ತಾನೇ ಅನುಭವಿಸಿದಂತೆ ನಿರೂಪಿಸಿದ ಸೇಸಮ್ಮಳೆಡೆಗೆ ಬೆರಗಿನ ದೃಷ್ಟಿ ಬೀರಿ ಅನಾಮಿಕ ಕುಳಿತಲ್ಲೇ ಕಲ್ಲಾಗಿದ್ದಳು.

## ಏಳು

**ನಾ**ಲ್ಕೈದು ಬ್ಯಾರಿ ಹುಡುಗರು ತನ್ನ ಕಾಲರ್ ಪಟ್ಟಿ ಹಿಡಿದು ಜಗ್ಗಾಡಿದ್ದನ್ನು ಜೀರ್ಣಿಸಿಕೊಳ್ಳಲಾಗದೇ ಕುದಿಯುತ್ತಾ ಮನೆ ಸೇರಿದ ಶಂಕರನ ಸಿಟ್ಟು ಇನ್ನೂ ತಣಿದಿರಲಿಲ್ಲ.

ಆತ ಜಗಲಿಯಲ್ಲೇ ಶತಪಥ ಹಾಕಿದ. ಮಕ್ಕಳ ಜೊತೆಗೂ ಸಿಡುಕಿದ. ಗಂಡನಲ್ಲಾಗಿರುವ ಈ ಬದಲಾವಣೆಯನ್ನು ರೇವತಿ ಗುರುತಿಸಿದಳು. ಏನೋ ಆಗಬಾರದ್ದು ಆಗಿದೆ ಎಂದಾಕೆ ದೃಢಪಡಿಸಿಕೊಂಡಳು. ಶಂಕರನಿಗೆ ಹೋಲಿಸಿದರೆ ಆಕೆ ಹೆಚ್ಚು ಕಲಿತ ಹೆಣ್ಣು. ಅವಳ ಕುಟುಂಬದಲ್ಲಿ 12ನೇ ತರಗತಿ ಮೆಟ್ಟಲೇರಿದ ಏಕೈಕ ಹೆಣ್ಣು ಆಕೆ. ಈ ಬಗ್ಗೆ ಆಕೆಯ ಅಮ್ಮನಿಗೆ ಹೆಮ್ಮೆ ಇತ್ತು. ಮೂವರು ಸಹೋದರರಿದ್ದರೂ ಅವರಾರೂ ಹತ್ತನೇ ತರಗತಿಯ ಮೆಟ್ಟಲನ್ನೂ ಹತ್ತಿರಲಿಲ್ಲ. ರೇವತಿಯ ಅಮ್ಮ ತನ್ನ ಗಂಡು ಮಕ್ಕಳಿಗೆ ಶಿಕ್ಷಣ ಕೊಡಿಸಲು ಪಟ್ಟ ಪಾಡು ಅಷ್ಟಿಷ್ಟಲ್ಲ. ಅಪ್ಪ ಚಪ್ಪಲಿ ಹೊಲಿಯುವ ಕಾಯಕ ಮಾಡುತ್ತಿದ್ದರೆ ಅಮ್ಮ ಪೌರ ಕಾರ್ಮಿಕೆಯಾಗಿ ದುಡಿಯುತ್ತಿದ್ದರು. ಮಕ್ಕಳು ತಮ್ಮಂತೆ ಆಗಬಾರದು ಎಂಬುದು ಅಪ್ಪ–ಅಮ್ಮನ ಬಯಕೆ. ನನ್ನ ಸಹೋದರರಲ್ಲಿ ಎಷ್ಟು ಬಾರಿ ಈ ಪಾಠವನ್ನು ಅಮ್ಮ ಉರ





ಹೊಡೆದಿರುವರೋ ಲೆಕ್ಕವಿಲ್ಲ.

ಆದರೆ,

ಮೂವರು ಸಹೋದರರೂ ಅಪ್ಪ–ಅಮ್ಮನ ಮಾತನ್ನು ಒಂದು ಕಿವಿಯಲ್ಲಿ ಆಲಿಸಿ ಇನ್ನೊಂದು ಕಿವಿಯ ಮೂಲಕ ಹೊರ ಬಿಡುತ್ತಿದ್ದರು. ದೊಡ್ಡಣ್ಣ 7ನೇ ಕ್ಲಾಸಿಗೇ ಶಾಲೆ ಖೈದು ಮಾಡಿದ. ಬಳಿಕ ಸೇಂದಿ ಅಂಗಡಿಯಲ್ಲಿ ಕೆಲಸಕ್ಕೆ ನಿಂತ. ಇದನ್ನು ತೀವ್ರವಾಗಿ ವಿರೋಧಿಸಿದ್ದು ಅಮ್ಮ. ಅಮ್ಮ ಮದ್ಯಪಾನದ ಪ್ರಬಲ ವಿರೋಧಿ. ಅದು ಕುಟುಂಬವನ್ನು ಸರ್ವನಾಶ ಮಾಡುತ್ತದೆ ಎಂಬ ಬಲವಾದ ನಿಲುವು ಆಕೆಯದು.

ಅಪ್ಪನೋ ಇದಕ್ಕೆ ತದ್ವಿರುದ್ಧ. ಅವರು ದಿನಾ ಕುಡಿಯದೇ ಮನೆಗೆ ಬರುತ್ತಿದ್ದುದೇ ಕಡಿಮೆ. ಸಂಜೆವರೆಗೆ ಚಪ್ಪಲಿ ಅಂಗಡಿಯಿಟ್ಟು ದುಡಿಯುವುದು ಮತ್ತು ಆ ಬಳಿಕ ಸಿಕ್ಕ ದುಡ್ಡಿನ ಹೆಚ್ಚಿನ ಪಾಲನ್ನು ಸೇಂದಿ ಅಂಗಡಿಗೆ ಕೊಟ್ಟು ತೂರಾಡುತ್ತಾ ಮನೆಗೆ ಬರುವುದು– ಇದು ಅಪ್ಪನಿಗೆ ರೂಢಿಯಾಗಿತ್ತು. ಅಮ್ಮನ ಪೌರ ಕಾರ್ಮಿಕ ಉದ್ಯೋಗದಿಂದಲೇ ಮನೆ ನಡೆಯಬೇಕಾದ ಸ್ಥಿತಿ ಇತ್ತು.

ಅಂದಹಾಗೆ,

ಅಮ್ಮ ಕುಡಿತದ ವಿರೋಧಿಯಾದುದು ಅಪ್ಪನನ್ನು ನೋಡಿ ಅಲ್ಲ. ಅಮ್ಮ ಬಾಲ್ಯದಲ್ಲಿ ಅದರ ಘೋರ ಪರಿಣಾಮವನ್ನು ಕಂಡುಂಡೇ ಬೆಳೆದವರು. ಅಮ್ಮನ ಅಪ್ಪ ಮತ್ತು ಅಮ್ಮ ಇಬ್ಬರೂ ಪೈಪೋಟಿಯಿಂದ ಕುಡಿಯುತ್ತಿದ್ದರಂತೆ. ಎಲ್ಲಿಯವರೆಗೆಂದರೆ ಮಕ್ಕಳ ಆರೋಗ್ಯ, ಆಹಾರ, ಶಿಕ್ಷಣ ಇತ್ಯಾದಿ ಯಾವುದರ ಬಗ್ಗೆಯೂ ಗಮನವೇ ಹರಿಸದಷ್ಟು ಅವರು ಕುಡಿತದ ದಾಸರಾಗಿದ್ದರಂತೆ. ಮನೆಯಲ್ಲಿ ದಿನಾ ಜಗಳ, ಬೈಗುಳ, ಹೊಡೆತ, ಅಳು. ಮನೆಯಲ್ಲಿ ಶಾಂತಿ ಎಂಬುದೇ ಇರಲಿಲ್ಲ. ಕಲಿಕೆಯಲ್ಲಿ ಜಾಣೆಯಾಗಿದ್ದ ಅಮ್ಮನಿಗೆ ಓದು ಮುಂದುವರಿಸುವ ಆಸೆ. ಸರಕಾರಿ ಉದ್ಯೋಗಿಯಾಗಿದ್ದ ಚಿಕ್ಕಪ್ಪನಂತೆ ತಾನೂ ಸರಕಾರಿ ಉದ್ಯೋಗ ಪಡೆಯಬೇಕು ಎಂಬ ಬಯಕೆ. ಆದರೆ ಅಮ್ಮನ ಹೆತ್ತವರು ಈ ಬಯಕೆಗೆ ಕವಡೆ ಕಾಸಿನ ಕಿಮ್ಮತ್ತನ್ನೂ ನೀಡಿರಲಿಲ್ಲ. ಆದರೂ ಅಮ್ಮ 7ನೇ ತರಗತಿಯ ವರೆಗೆ ಓದಿದ್ದರು. ಮಾತ್ರವಲ್ಲ, ಸ್ವ ಆಸಕ್ತಿ ಮತ್ತು ಚಿಕ್ಕಪ್ಪನವರ ಮಾರ್ಗದರ್ಶನದಿಂದಾಗಿ ಪೌರ ಕಾರ್ಮಿಕ ಹುದ್ದೆಗೆ ಅರ್ಜಿ ಹಾಕಿ ಕೊನೆಗೆ ಕೆಲಸ ಗಿಟ್ಟಿಸಿಕೊಂಡಿದ್ದರು. ಸರಕಾರಿ ಉದ್ಯೋಗಿ ಆಗಿರುವುದರಿಂದ ಅಮ್ಮನಿಗೆ ಮದುವೆ ಪ್ರಸ್ತಾಪಗಳೂ ಭರ್ಜರಿಯಾಗಿಯೇ ಬರತೊಡಗಿದುವು. ಅಮ್ಮನದು ಒಂದೇ ಷರತ್ತು–

ನನ್ನನ್ನು ವರಿಸುವ ಗಂಡು ಕುಡಿಯುವವನಾಗಿರಬಾರದು.

ಐದಕ್ಕಿಂತ ಹೆಚ್ಚು ಪ್ರಸ್ತಾಪಗಳು ಅಮ್ಮನ ಈ ಷರತ್ತಿನಿಂದಾಗಿಯೇ ಬಿದ್ದು ಹೋದುವು. ಅಮ್ಮ ತನ್ನ ಷರತ್ತಿನಿಂದ ಯಾವ ಕಾರಣಕ್ಕೂ ಹಿಂಜರಿಯಲ್ಲ ಎಂದು ಖಡಾಖಂಡಿತವಾಗಿಯೇ ಹೇಳುತ್ತಿದ್ದರು. ಅಮ್ಮನ ಹೆತ್ತವರಲ್ಲಿ ತಳಮಳ. ಕುಡಿಯದ

ವರನನ್ನು ಹುಡುಕುವುದು ಹೇಗೆ? ನಮ್ಮಲ್ಲಿ ಕುಡಿತ ಒಂದು ಅಭ್ಯಾಸ. ಅದಿಲ್ಲದೇ ಬದುಕಿಲ್ಲ ಅನ್ನುವ ರೀತಿಯಲ್ಲಿ ಪಾರಂಪರಿಕವಾಗಿ ಬದುಕಿನ ಭಾಗವಾಗಿ ಅದು ರೂಢಿಯಲ್ಲಿ ಬಂದಿದೆ. ಈಗ ಒಮ್ಮೆಲೇ ಕುಡಿಯದ ವರ ಬೇಕೆಂದರೆ, ಎಲ್ಲಿಂದ ತರುವುದು? ಮಗಳ ಮಾತನ್ನು ಚಾಚೂ ತಪ್ಪದೇ ಪಾಲಿಸಲು ಹೋದರೆ ಈಕೆಗೆ ಮದುವೆ ಗಂಡೇ ಸಿಗಲಾರ. ಆದ್ದರಿಂದ ಈಕೆಯ ಷರತ್ತನ್ನು ಬದಿಗಿಟ್ಟು ಮದುವೆ ಮಾಡಿಸುವುದೇ ಸೂಕ್ತ ಎಂದವರು ನಿರ್ಧರಿಸಿದ್ದರು.

ಹಾಗೆ ನನ್ನಪ್ಪನೊಂದಿಗೆ ಅಮ್ಮನ ಮದುವೆಯಾಯಿತು.

ಆದರೆ, ಮದುವೆ ನಡೆದ ಎರಡೇ ದಿನಗಳಲ್ಲಿ ಅಮ್ಮ ಹೆತ್ತವರೊಂದಿಗೆ ಜಗಳ ಮಾಡಿದ್ದಳು. ತನಗೆ ನೀವು ಮೋಸ ಮಾಡಿದ್ದೀರಿ ಎಂದು ಕಿರುಚಾಡಿದ್ದರು. ತನಗೆ ಈ ಮದುವೆ ಬೇಡ ಎಂದು ಬೆದರಿಕೆಯನ್ನೂ ಹಾಕಿದ್ದರು. ಯಾಕೆಂದರೆ,

ನನ್ನಪ್ಪನಿಗೆ ಕುಡಿಯುವ ಅಭ್ಯಾಸ ಇತ್ತು. ಮದುವೆಯಾದ ಎರಡನೇ ದಿನಕ್ಕೇ ಅವರು ಕುಡಿದು ಬಂದಿದ್ದರು. ಅಮ್ಮ ಅದನ್ನು ನಿರೀಕ್ಷಿಸಿರಲಿಲ್ಲ. ತನ್ನ ಷರತ್ತಿನಂತೆ ಕುಡಿಯದ ಗಂಡನೇ ತನಗೆ ಸಿಕ್ಕಿದ್ದಾನೆ ಎಂದೇ ಅವರು ನಂಬಿದ್ದರು. ಹೆತ್ತವರು ಅವರನ್ನು ಹಾಗೆಯೇ ನಂಬಿಸಿದ್ದರು. ಅಂದೇ ಅಮ್ಮ ತೀರ್ಮಾನಿಸಿದ್ದರಂತೆ–

ನನ್ನ ಮಕ್ಕಳನ್ನು ನಾನು ಕುಡಿಯಲು ಬಿಡಲಾರೆ. ಆದರೆ,

ದೊಡ್ಡಣ್ಣ ಅಮ್ಮನ ಇಂಗಿತಕ್ಕೆ ವಿರುದ್ಧವಾಗಿ ಶೇಂದಿ ಅಂಗಡಿ ಸೇರಿಕೊಂಡದ್ದೇ ತಡ, ಅಮ್ಮ ಉಳಿದಿಬ್ಬರು ಗಂಡು ಮಕ್ಕಳ ಬಗ್ಗೆ ಎಷ್ಟು ಎಚ್ಚರಿಕೆ ಪಾಲಿಸಿದಳೆಂದರೆ, ಅವರನ್ನು ಯಾವ ಕಾರಣಕ್ಕೂ ಕುಡುಕರನ್ನಾಗಿಸಲಾರೆ ಎಂದು ಶಪಥ ತೊಟ್ಟಳು. ನನ್ನ ಓದಿಗೆ ಪ್ರೋತ್ಸಾಹಿಸಿದರು. ಇದರಿಂದಾಗಿ ನನ್ನ ದೊಡ್ಡಣ್ಣನನ್ನು ಬಿಟ್ಟು ಉಳಿದಿಬ್ಬರು ಸಹೋದರರು ಮದುವೆಯಾಗಿ ಬೇರೆ ಮನೆ ಮಾಡುವ ವರೆಗೆ ಕುಡಿದೇ ಇರಲಿಲ್ಲ. ಆದರೆ, ಅವರನ್ನು ಓದಿಸುವಲ್ಲಿ ಅಮ್ಮನ ಶ್ರಮಗಳು ವಿಫಲವಾದುವು. ಇವರಲ್ಲಿ ಒಬ್ಬ ಹತ್ತನೇ ತರಗತಿಯನ್ನು ಅರ್ಧದಲ್ಲೇ ಮುಗಿಸಿ ಹೊರಬಂದರೆ, ಇನ್ನೊಬ್ಬ 9ನೇ ಕ್ಲಾಸಿಗೇ ಕಲಿಕೆ ನಿಲ್ಲಿಸಿದ್ದ. ಆದರೆ, ನಾನು 12ನೇ ಕ್ಲಾಸಿನ ತನಕ ಕಲಿತು ಅಮ್ಮನ ಆಸೆಯನ್ನು ತಕ್ಕಮಟ್ಟಿಗಾದರೂ ಪೂರೈಸಿದ್ದೆ. ಆ ಬಳಿಕ ಓದು ಮುಂದುವರಿಸಿಲ್ಲವಾದರೂ ಆ ಓದಿನ ಕಾರಣದಿಂದಾಗಿ ಗಂಡ ಶಂಕರರನ್ನು ಅರ್ಥ ಮಾಡಿಕೊಳ್ಳಲು, ಅವರ ವರ್ತನೆಯಲ್ಲಾಗುವ ಬದಲಾವಣೆಯನ್ನು ಗುರುತಿಸಿ ಪ್ರತಿಕ್ರಿಯಿಸಲು ಸಾಧ್ಯವಾಗುತ್ತಿದೆ...

ಶಂಕರ ಸಿಟ್ಟಿನಿಂದ ಕುದಿಯುತ್ತಾ ಶತಪಥ ಹಾಕುತ್ತಿರುವುದನ್ನು ಗ್ರಹಿಸಿ ರೇವತಿ ಮಕ್ಕಳನ್ನು ಆತನ ಹತ್ತಿರ ಬರದಂತೆ ತಡೆದು ನಿಧಾನಕ್ಕೆ ಮಾತಿಗೆ ಸೆಳೆದಳು,

'ಏನು?'





'ಆ ಬ್ಯಾರಿ ಮಕ್ಕಳು..'

'ಏನಾಯ್ತು?'

'ಅವರು ನನ್ನ ಕಾಲರ್ ಪಟ್ಟಿ ಹಿಡಿದ್ರು. ಜಗ್ಗಾಡಿದ್ರು. ಎಂಥ ಅಹಂಕಾರ ಅವರಿಗೆ? ನನ್ನೂರಿಗೆ ಬಂದು ನನ್ನ ಮೇಲೆಯೇ ಕೈ ಹಾಕುವುದೆಂದರೆ...' ಮಾತು ಹಳಿ ತಪ್ಪತೊಡಗಿತು.

'ಎಲ್ಲಿ ನಡೆದಿದ್ದು? ನೀವು ಇಲ್ಲೇ ಇದ್ದಿರಲ್ಲ?' ರೇವತಿ ಆಶ್ಚರ್ಯ ವ್ಯಕ್ತಪಡಿಸಿದಳು.

'ಓ ಅಲ್ಲಿ, ಮೇಲೆ...' ಶಂಕರ ತನ್ನ ಮನೆಯ ಹಿಂಭಾಗದ ಗುಡ್ಡದತ್ತ ಕೈ ತೋರಿಸಿದ.

'ಅಲ್ಲೇ? ನೀವೇಕೆ ಅಲ್ಲಿಗೆ ಹೋದ್ರಿ? ಜಗಲಿಯಲ್ಲಿ ಕುಳಿತಿದ್ದಿರಲ್ಲ? ಅವರು ನಿಮ್ಮನ್ನು ಕರೆದರೇ?' ರೇವತಿಯಲ್ಲಿ ಕುತೂಹಲ.

'ಅವರು ಕರೆದರೆ ಮಾತ್ರ ನಾನು ಹೋಗಬೇಕೇ? ಈ ಗುಡ್ಡವೇನು ಅವರ ಅಪ್ಪನ ಸೊತ್ತೇ? ಬಾಲ್ಯ ಕಾಲದಿಂದಲೇ ಈ ನೆಕ್ಕರೆ ಕಾಡಿನಲ್ಲಿ ಬೆಳೆದವ ನಾನು. ಈ ಪ್ರದೇಶದ ಇಂಚಿಂಚೂ ನನಗೆ ಗೊತ್ತಿದೆ. ಈಗ ಈ ಕಾಡನ್ನು ನಾಶ ಮಾಡಿ ಕಾಂಕ್ರೀಟು ಕಟ್ಟಡ ಕಟ್ಟುತ್ತಿರುವವರು ನಿನ್ನೆ ಮೊನ್ನೆ ಬಂದವರು. ಅವರಿಗೆ ಈ ನೆಕ್ಕರೆಕಾಡಿನ ಇತಿಹಾಸ ಗೊತ್ತಿದೆಯೇ? ಈ ಕಾಡಿನ ವ್ಯಾಪ್ತಿಯಲ್ಲಿ ಹಿಂದಿನಿಂದಲೂ ಬದುಕುತ್ತಿರುವವರ ಹಾಡು–ಪಾಡು ಗೊತ್ತಿದೆಯೇ? ಈ ಪ್ರದೇಶದಲ್ಲಿ ಏನೇ ಚಟುವಟಿಕೆ ನಡೆಯುವುದಿದ್ದರೂ ಅದು ನಮಗೂ ಸಂಬಂಧಿಸುತ್ತದೆ. ನಾವು ಆ ಬಗ್ಗೆ ಕುತೂಹಲ ತಾಳಬಾರದು, ಅಲ್ಲಿಗೆ ಹೋಗಬಾರದು, ಪರಿಶೀಲನೆ ನಡೆಸಬಾರದು ಅಂದರೆ ಏನು?'

'ನೀವೇನು ಅವರನ್ನು ತರಾಟೆಗೆ ತೆಗೆದುಕೊಂಡ್ರಾ?'

'ನಾನು ಅವರಲ್ಲಿ ಮಾತಾಡಿಯೇ ಇಲ್ಲ. ಮೇಲೆ–ಕೆಳಗೆ ಹೋದೆನಷ್ಟೇ. ಅವರಿಗೆ ಹಣದ ಮದ. ಕುಮಾರ ಹೇಳಿದ್ದನಲ್ಲ, ಅದೇ...'

ರೇವತಿ ಸನ್ನಿವೇಶದ ಕಾವನ್ನು ತಣಿಸುವುದಕ್ಕೆಂಬಂತೆ ಚಾ ತರುತ್ತೇನೆಂದು ಹೇಳಿ ಒಳನಡೆದಳು.

❖ ❖ ❖

ಇನ್ನು ನಾಳೆ ಎಂಬಂತೆ ಸೇಸಮ್ಮ ಕುಳಿತಲ್ಲಿಂದ ಎದ್ದು ನಿಂತಿದ್ದಳು. ಅನಾಮಿಕಳಿಗಂತೂ ಇನ್ನೂ ಆಲಿಸುವ ಆಸೆ. ಸೇಸಮ್ಮಳ ಏಕ ಪಾತ್ರಾಭಿನಯಕ್ಕೆ ಭಂಗ ಬರದಿರಲೆಂದು ಆಕೆ ನಡುವೆ ಒಂದೇ ಒಂದು ಪ್ರಶ್ನೆಯನ್ನೂ ಕೇಳಿರಲಿಲ್ಲ. ಸೇಸಮ್ಮಳ ಕಥನಗಾರಿಕೆ ಎಲ್ಲರಂತಲ್ಲ. ಹಾಗಂತೆ, ಹೀಗಂತೆ ಎಂದು ಆಕೆ ಹೇಳುವುದಿಲ್ಲ. ತಾನೇ ಸ್ವತಃ ಕಂಡಂತೆ ವರ್ಣಿಸುತ್ತಾಳೆ. ಇದು ಅನಾಮಿಕಳಿಗೆ ಹೊಸತು. ಆದ್ದರಿಂದಲೇ ಆಕೆ ಬಾಯಿಗೆ ಹೊಲಿಗೆ ಹಾಕಿ ಕುಳಿತಿದ್ದಳು.

## ಎಂಟು

**ಚ**ಹಾದೊಂದಿಗೆ ರೇವತಿ ಹೊರಬಂದಳು.

ಸಿಟ್ಟಿನ ಭರದಲ್ಲಿ ಕುದಿಯುತ್ತಿದ್ದ ಗಂಡನ ಬಳಿಯಿಂದ ಆಕೆ ಚಹಾ ತಯಾರಿಸುವೆನೆಂದು ಹೇಳಿ ಒಳ ಹೋಗಿದ್ದರೂ ಆಕೆಯ ನಿಜವಾದ ಉದ್ದೇಶ ಚಹಾ ತಯಾರಿಸುವುದು ಆಗಿರಲಿಲ್ಲ. ಗಂಡ ಶಂಕರನಲ್ಲಿ ಆಕ್ರೋಶ ಇದೆ. ಬ್ಯಾರಿ ಹುಡುಗರು ಕಾಲರ್‌ಪಟ್ಟಿ ಹಿಡಿದು ಅವಮಾನಿಸಿದುದು ಅವರನ್ನು ತೀವ್ರವಾಗಿ ಕೆರಳಿಸಿದೆ. ಈ ಸಿಟ್ಟು ಬೆಳೆಯದಂತೆ ನೋಡಿಕೊಳ್ಳಬೇಕು. ಸಿಟ್ಟಿನ ಆವೇಶದಲ್ಲಿ ಇವರು ಪ್ರತೀಕಾರಕ್ಕೆ ಇಳಿದರೆ, ಇನ್ನೇನು ಅನಾಹುತ ಆಗಿಬಿಟ್ಟೀತು ಎಂದು ಹೇಳಲಾಗದು. ಈ ಘಟನೆಯನ್ನು ಇವರು ಕುಮಾರನಲ್ಲಿ ಹೇಳಿದರೆ, ಆತ ರಾದ್ಧಾಂತ ಮಾಡಿಬಿಡುವ ಸಾಧ್ಯತೆಯೂ ಇದೆ.





ಜನರ ಗುಂಪನ್ನು ಕಟ್ಟಿಕೊಂಡು ಬಂದು ಆ ಯುವಕರನ್ನು ಪ್ರಶ್ನಿಸಲು ಮುಂದಾದರೆ ಬಳಿಕ ಏನೂ ಆದೀತು. ಪೊಲೀಸರು ಬರಬೇಕಾದೀತು. ಇವರ ಮೇಲೆ ಕೇಸೂ ದಾಖಲಾದೀತು. ಬಳಿಕ ಅದರ ಪರಿಣಾಮವನ್ನು ಇವರೇ ಎದುರಿಸಬೇಕಾಗುತ್ತದೆ. ಜೈಲು, ಕೋರ್ಟು ಇತ್ಯಾದಿ ರಗಳೆ ಯಾರಿಗೆ ಬೇಕು?

ಈ ಘಟನೆ ಇಲ್ಲಿಗೇ ಮುಕ್ತಾಯ ಕಾಣುವಂತಾಗಬೇಕು.

ನನ್ನ ಇಬ್ಬರು ಅಣ್ಣಂದಿರು ಈಗ ಪಡುತ್ತಿರುವ ಪಾಡೇ ಧಾರಾಳ ಸಾಕು. ಜಿಲ್ಲೆ ಬಿಟ್ಟು ಹೋಗುವಂತಿಲ್ಲ. ಕರೆದಾಗಲೆಲ್ಲ ಪೊಲೀಸು ಠಾಣೆಗೆ ಹಾಜರಾಗಬೇಕು. ಆಗಾಗ ನ್ಯಾಯಾಲಯದ ಮೆಟ್ಟಲನ್ನು ಹತ್ತಬೇಕು. ಅವರಿಬ್ಬರೂ ಎರಡು ತಿಂಗಳು ಜೈಲಲ್ಲಿದ್ದಾಗ ಅಮ್ಮ ಕಣ್ಣೀರಿಳಿಸಿದ್ದು ಎಷ್ಟು? ವಕೀಲರ ಬಳಿಗೆ, ಪೊಲೀಸು ಠಾಣೆಗೆ, ರಾಜಕಾರಣಿಗಳ ಬಳಿಗೆ ಎಂದು ಅಲೆದದ್ದೆಷ್ಟು? ವಕೀಲರಿಗೆ ಫೀಸು ಕೊಡುವುದಕ್ಕೆ ಹಣ ಸಾಕಾಗದೇ ಅವರಿವರಿಂದ ಮಾಡಿದ ಸಾಲವನ್ನು ಇನ್ನೂ ಸಂಪೂರ್ಣವಾಗಿ ತೀರಿಸಲು ಸಾಧ್ಯವಾಗಿಲ್ಲ. ಅವರಿಬ್ಬರು ಜೈಲಲ್ಲಿದ್ದ ಸಮಯದಲ್ಲಿ ನಮ್ಮ ಇಡೀ ಪರಿವಾರ ಎಷ್ಟು ಆತಂಕದಲ್ಲಿತ್ತು ಎಂದರೆ, ಅಮ್ಮ ಸರಿಯಾಗಿ ಊಟಾನೂ ಮಾಡುತ್ತಿರಲಿಲ್ಲ.

ಮನೆಯಲ್ಲಿ ಗಂಜಿಯೂ ಬೇಯುತ್ತಿರಲಿಲ್ಲ.

ಮಕ್ಕಳು ಉತ್ತಮವಾಗಿ ಓದಿ ಒಳ್ಳೆಯ ಉದ್ಯೋಗ ಗಿಟ್ಟಿಸಿಕೊಳ್ಳಬೇಕೆಂದು ಬಯಸಿ ಮಾಡಿದ ಪರಿಶ್ರಮಗಳೆಲ್ಲ ಹೀಗೆ ಮಣ್ಣಾಗಿ ಹೋಯಿತಲ್ಲ ಎಂಬ ಸಂಕಟ ಅಮ್ಮನದು. ಮಕ್ಕಳು ಸಮಾಜದ ಕಣ್ಣಿನಲ್ಲಿ ಅಪರಾಧಿಗಳಾಗಿ ಬಿಟ್ಟರಲ್ಲ ಎಂಬ ನೋವು ಅಮ್ಮನ ಆರೋಗ್ಯವನ್ನೂ ಬಾಧಿಸಿತ್ತು. ಆದದ್ದು ಇಷ್ಟೇ–

ಹಿಂದೂ–ಮುಸ್ಲಿಮ್ ಜಗಳ, ಘರ್ಷಣೆ.

ಈ ಘರ್ಷಣೆಯಲ್ಲಿ ನನ್ನ ಸಹೋದರರೂ ಭಾಗಿಯಾಗಿದ್ದರು. ಆ ಘರ್ಷಣೆಯಲ್ಲಿ ಓರ್ವ ವ್ಯಕ್ತಿ ಸಾವಿಗೀಡಾಗಿದ್ದ. ನಾಲ್ಕೈದು ಮಂದಿಗೆ ಗಾಯವಾಗಿತ್ತು. ಆ ಘರ್ಷಣೆಯ ಫಲಿತಾಂಶವಾಗಿ ಕರ್ಫ್ಯೂ ಹೇರಲಾಗಿತ್ತು. ಪೊಲೀಸರು ಬಂಧಿಸಿದ ಅನೇಕರಲ್ಲಿ ನನ್ನ ಸಹೋದರರೂ ಸೇರಿದ್ದರು. ಆ ಘರ್ಷಣೆ ಆದ ಬಳಿಕ ಹಿಂದೂ–ಮುಸ್ಲಿಮರ ನಡುವೆ ಬಿಗುವಿನ ವಾತಾವರಣಕ್ಕೆ ಕಾರಣವಾಗಿ, ನನ್ನ ಸಹೋದರರ ಜೀವಕ್ಕೆ ಅಪಾಯವಿದೆ ಎಂಬ ಸುದ್ದಿಯೂ ಇತ್ತು. ಜೈಲಿನಿಂದ ಬಿಡುಗಡೆಗೊಂಡ ಬಳಿಕ ಅವರು ಕೆಲವು ಸಮಯ ಮನೆಯೊಳಗಡೆಯೇ ಇದ್ದರು. ಈಗಲೂ ಆ ಕೇಸು ಮುಗಿದಿಲ್ಲ. ನನ್ನ ಸಹೋದರರ ಮೇಲೆ ಇರುವ ಪ್ರಕರಣವೂ ಗಂಭೀರವಾದುದು. ಹತ್ಯೆ, ಹತ್ಯಾ ಯತ್ನ ಇತ್ಯಾದಿ ಗಂಭೀರ ಪ್ರಕರಣದಡಿ ಕೇಸು ನಡೆಯುತ್ತಿದೆ. ನ್ಯಾಯಾಲಯದಲ್ಲಿ ಪ್ರಕರಣ ಸಾಬೀತಾಗಿ ಜೈಲು ಶಿಕ್ಷೆಯಾಗಿಬಿಟ್ಟರೆ ಮುಂದೇನು ಎಂಬ ಆತಂಕವನ್ನು ಮೊನ್ನೆ ಮೊನ್ನೆಯಂತೆ ಅಮ್ಮ ತೋಡಿಕೊಂಡಿದ್ದರು. ಆದ್ದರಿಂದ ಈ ಘಟನೆ ಇನ್ನೊಂದು

ಅನಾಹುತಕ್ಕೆ ದಾರಿಯಾಗುವುದು ಬೇಡ ಎಂದು ನಿರ್ಧರಿಸಿಯೇ ರೇವತಿ ಅಡುಗೆ ಮನೆಯಿಂದ ಚಹಾದೊಂದಿಗೆ ಶಂಕರನ ಬಳಿ ಬಂದಿದ್ದಳು.

ಶಂಕರ ಹೇಳಿದ,

'ಕುಮಾರ ಈ ಮೊದಲು ಹೇಳಿದ್ದು ಸರಿ ಅಂತ ಅನಿಸ್ತಿದೆ. 'ಬ್ಯಾರಿಗಳು ಗಲ್ಫ್ ಹಣದಿಂದ ಮೆರೆಯುತ್ತಿದ್ದಾರೆ. ನೆಕ್ಕರೆಕಾಡು ಬಿಡು, ಇಡೀ ಭಾರತದ ಸ್ಥಿತಿಯನ್ನೇ ಅವರು ಬದಲಾಯಿಸಿ ಬಿಡುತ್ತಾರೆ' ಎಂದಾತ ಹೇಳಿದ್ದನ್ನು ನಾನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಈಗ ನೋಡಿದರೆ ಈ ನೆಕ್ಕರೆಕಾಡು ನಮ್ಮ ಕೈಯಿಂದ ತಪ್ಪಿ ಹೋಗುತ್ತಿರುವಂತಿದೆ. ಮಾತಾಡಿದರೆ ಮೈಮೇಲೆ ಬೀಳುತ್ತಾರೆ. ಹಣದ ಮದ...'

'ನೀವು ಸುಮ್ಮನೆ ಇಲ್ಲದ್ದನ್ನೆಲ್ಲ ಯೋಚಿಸಬೇಡಿ. ನಾಲ್ಕಾರು ಯುವಕರು ಕೆಟ್ಟದಾಗಿ ವರ್ತಿಸಿದರೆಂದು ಇಡೀ ಬ್ಯಾರಿ ಸಮುದಾಯವನ್ನೇ ಕೆಟ್ಟವರು ಎಂದು ಹೇಳಿದರೆ ಹೇಗೆ? ಆ ಯುವಕರು ಕೆಟ್ಟವರು ಅಷ್ಟೇ. ಹಾಗೆ ನೋಡಿದರೆ ನನ್ನ ಅಣ್ಣಂದಿರಿಬ್ಬರು ಜೈಲಿಗೆ ಹೋಗಿ ಬಂದಿದ್ದಾರೆ. ಅವರ ಹೆಸರಲ್ಲಿ ನಮ್ಮನ್ನೆಲ್ಲ ಬೈದರೆ ಹೇಗೆ?'

'ಒಂದು ಲೆಕ್ಕದಲ್ಲಿ ಅವರು ಮಾಡಿದ್ದೇ ಸರಿ ಎಂದು ತೋರುತ್ತದೆ'– ಶಂಕರ ಹೇಳಿದ.

ರೇವತಿ ಆ ಮಾತನ್ನು ನಿರೀಕ್ಷಿಸಿಯೇ ಇರಲಿಲ್ಲ. ಆತ ಈ ಮೊದಲು ಎಂದೂ ಅಂಥ ಮಾತನ್ನು ಆಡಿಯೂ ಇರಲಿಲ್ಲ. ಸಿಟ್ಟು ಆತನ ಯೋಚನಾಶಕ್ತಿಯನ್ನೇ ಕುರುಡಾಗಿಸಿದೆ ಎಂದಾಕೆಗೆ ಅನಿಸಿತು. ಆಕೆ ಮಾತು ಬದಲಿಸಿದಳು–

'ನಮ್ಮ ಪಕ್ಕದ ಮನೆಯಲ್ಲಿ ಫಾತಿಮಾ ಇದ್ದಾಳಲ್ಲ, ಅವಳ ಕುಟುಂಬ ಎಷ್ಟು ಚೆನ್ನಾಗಿದೆ? ಅವರ ವರ್ತನೆಯಲ್ಲಿ ಏನು ದೋಷವಿದೆ? ನಾವು ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿಟ್ಟು ತೂಗಬಾರದು'– ಬುದ್ಧಿವಾದದ ಶೈಲಿಯಲ್ಲಿತ್ತು ಮಾತು.

'ಹೌದು, ನೀನು ಫಾತಿಮಾಳ ಮಾತುಗಳ ಕುರಿತಷ್ಟೇ ಹೇಳುತ್ತಿರುವೆ. ಕುಮಾರನೂ ನನ್ನಲ್ಲಿ ಇದನ್ನೇ ಹೇಳಿ ಎಚ್ಚರಿಸಿದ್ದ– 'ನಾವು ಬ್ಯಾರಿಗಳ ಯಾವುದಾದರೊಂದು ವರ್ತನೆಯನ್ನು ಮೆಚ್ಚಿಕೊಂಡು, ಅವರ ಒಟ್ಟು ಬದುಕನ್ನು ಅಳೆಯುವುದಕ್ಕೆ ಅದನ್ನೇ ಮಾನದಂಡವನ್ನಾಗಿಸಿಕೊಳ್ಳುತ್ತೇವೆ...' ನಿನ್ನ ಬಾಲ್ಯದಲ್ಲಿ ಬ್ಯಾರಿಗಳು ಹೇಗಿದ್ದರು? ಅವರ ವೇಷ–ಭೂಷಣಗಳು ಹೇಗಿದ್ದುವು? ಈಗಿನಂತೆ ಇತ್ತಾ? ಈ ಬುರ್ಖಾ ಇತ್ತಾ? ಜುಬ್ಬಾ–ಪೈಜಾಮ, ಗಡ್ಡ, ಟೋಪಿಗಳೆಲ್ಲ ಇದ್ದುವಾ? ಇವೆಲ್ಲ ಎಲ್ಲಿಂದ ಬಂತು? ನಾನೂ ನಿನ್ನ ಹಾಗೆಯೇ ಯೋಚಿಸುತ್ತಿದ್ದೆ. ಆದರೆ ಬ್ಯಾರಿಗಳಲ್ಲಿ ಆಗುತ್ತಿರುವ ಈ ಸೂಕ್ಷ್ಮ ಬದಲಾವಣೆಯನ್ನು ನನ್ನ ಗಮನಕ್ಕೆ ತಂದವನು ಕುಮಾರ. ಇವೆಲ್ಲ ಬ್ಯಾರಿಗಳು ಗಲ್ಫ್‌ಗೆ ಹೋದ ಬಳಿಕ ಆದ ಬದಲಾವಣೆಗಳು. ಈಗ ಕಾರು, ಬೈಕುಗಳಿಲ್ಲದ ಬ್ಯಾರಿ ಮನೆಗಳೇ





ಇಲ್ಲ. ಎಲ್ಲ ವಿದೇಶಿ ಹಣದ ಪ್ರಭಾವ'– ಶಂಕರ ಮಾತು ನಿಲ್ಲಿಸಿದ.

ರೇವತಿ ಮಾತಾಡಲಿಲ್ಲ. ಆತನೇ ಪ್ರಶ್ನಿಸಿದ–

'ಯಾಕೆ ಮೌನವಾದೆ?'

'ಅಲ್ಲ, ಗಲ್ಫ್ ಹಣ ಅಂತ ಪದೇ ಪದೇ ಹೇಳುತ್ತೀರಲ್ಲ, ಗಲ್ಫ್‌ಗೆ ಹೋಗುವುದಕ್ಕೆ ಹಿಂದೂ–ಮುಸ್ಲಿಮ್ ಅಂತ ಬೇಧ–ಭಾವ ಇದೆಯೇ? ನಿಮಗೂ ಹೋಗಬಹುದು. ನನಗೂ ಹೋಗಬಹುದು. ಅವರು ಅವಕಾಶವನ್ನು ಬಳಸಿಕೊಂಡಿದ್ದಾರೆ. ಅಷ್ಟಕ್ಕೇ ಅವರನ್ನು ದ್ವೇಷಿಸಿದರೆ ಹೇಗೆ? ಅವರಲ್ಲಿ ಕೆಟ್ಟವರೂ ಇದ್ದಾರೆ. ಅವರನ್ನು ವಿರೋಧಿಸಬೇಕು. ಫಾತಿಮಾಳ ಕುಟುಂಬದಂತಹ ಒಳ್ಳೆಯವರೂ ಇದ್ದಾರೆ. ಅವರನ್ನು ಪ್ರೀತಿಸಬೇಕು. ಎಲ್ಲವನ್ನೂ ಕುಮಾರನ ಕಣ್ಣಿನಲ್ಲೇ ಯಾಕೆ ನೋಡಬೇಕು?'

ಆತ ಮಾತಾಡಲಿಲ್ಲ.

'ನಿಮಗೆ ಮುಸ್ಲಿಮ್ ಗಿರಾಕಿಗಳು ಇಲ್ಲವೇ?'

'ಇದ್ದಾರೆ. ಅವರೇ ಹೆಚ್ಚು'– ಶಂಕರ ಮುಜುಗರವಿಲ್ಲದೇ ಹೇಳಿದ.

'ಅವರನ್ನು ನೀವು ದ್ವೇಷಿಸುತ್ತೀರಾ? ಅವರೆಲ್ಲರನ್ನೂ ಕೆಟ್ಟವರೆಂದು ಪರಿಗಣಿಸುತ್ತೀರಾ?'

'ನೀನೇಕೆ ಅವರ ಪರವಹಿಸಿ ಮಾತಾಡುತ್ತಿರುವೆ?' ಶಂಕರನಿಗೆ ರೇಗಿತು.

'ಪರ ವಹಿಸಿ ಮಾತಾಡುತ್ತಿಲ್ಲ. ನನಗೆ ಅವರಿಂದ ಏನೂ ಲಾಭವೂ ಇಲ್ಲ. ಆದರೆ ನಾವು ಇತರರ ಕಣ್ಣಿನಲ್ಲಿ ಅವರನ್ನು ನೋಡಬಾರದು ಎಂದಷ್ಟೇ ಹೇಳುತ್ತಿದ್ದೇನೆ. ಅವರ ಗಡ್ಡ, ಬುರ್ಖಾ, ಪೈಜಾಮವನ್ನು ತೋರಿಸಿ ಮತ್ತು ಶ್ರೀಮಂತಿಕೆಯನ್ನು ಬೊಟ್ಟು ಮಾಡಿ ನಮ್ಮನ್ನು ಪ್ರಚೋದಿಸುವುದು ಸುಲಭ. ಇವು ಯಾವುವೂ ಅವರನ್ನು ಕೆಟ್ಟವರೆಂದು ಮುದ್ರೆ ಒತ್ತುವುದಕ್ಕೆ ಮಾನದಂಡ ಆಗುವುದಿಲ್ಲ.

ಇವೆಲ್ಲ ಸಹಜ ಬದಲಾವಣೆಗಳು.

ಒಂದು ಕಾಲದಲ್ಲಿ ಗಡ್ಡ ಬಿಡುತ್ತಿರಲಿಲ್ಲ. ಈಗ ಬಿಡುತ್ತಿದ್ದಾರೆ. ಮುಂದೊಂದು ದಿನ ಇದರಲ್ಲಿ ಬದಲಾವಣೆಯೂ ಬಂದೀತು. ಪೈಜಾಮ–ಬುರ್ಖಾ–ಟೋಪಿಗಳೆಲ್ಲ ಧಾರ್ಮಿಕ ಚಿಹ್ನೆಗಳಲ್ಲ. ನೀವು ಬಾಲ್ಯದಲ್ಲಿ ಪಂಚೆ ಉಡುತ್ತಿದ್ದಿರಿ. ಸುಮಾರು ದೊಡ್ಡವರಾಗುವ ವರೆಗೆ ಚಡ್ಡಿಯನ್ನೇ ಧರಿಸುತ್ತಿದ್ದುದು ಎಂದು ನೀವೇ ಹೇಳಿದ್ದೀರಿ. ಈಗ ಪ್ಯಾಂಟು–ಶರ್ಟು ಬಂದಿದೆ.

ಯುವಕರನ್ನು ನೋಡಿ.

ಅವರು ಷರ್ಟು ಧರಿಸಲ್ಲ. ಟೀ ಶರ್ಟು ಧರಿಸುತ್ತಿದ್ದಾರೆ. ನಮ್ಮ ಹೆಣ್ಮಕ್ಕಳು ಹಿಂದಿನಂತೆ ಸೀರೆ, ರವಿಕೆ ತೊಡಲ್ಲ. ಜೀನ್ಸ್ ಪ್ಯಾಂಟ್, ಟೀ ಶರ್ಟ್ ಧರಿಸುತ್ತಿದ್ದಾರೆ. ಸ್ಕರ್ಟ್ ಹಾಕುತ್ತಿದ್ದಾರೆ. ಹಿಂದೆ ನನ್ನ ಅಪ್ಪ ಕೂದಲು ಕತ್ತರಿಸುತ್ತಿರಲಿಲ್ಲ. ಹಾಗೆ ಉದ್ದಕ್ಕೆ ಬಿಡುತ್ತಿದ್ದರು. ಬ್ರಾಹ್ಮಣರಲ್ಲಿ ಜುಟ್ಟು ಇದ್ದವರೇ ಹೆಚ್ಚಿದ್ದರು. ಈಗ ಆ ವೇಷ–

ಭೂಷಣಗಳೇ ಇಲ್ಲ. ವೇಷ–ಭೂಷಣಗಳು ಬದಲಾಗುತ್ತಾ ಇರುತ್ತವೆ. ಎಲ್ಲರೂ ಈ ಹಿಂದೆ ಹೇಗಿದ್ದರೋ ಹಾಗೆಯೇ ಇರಬೇಕೆಂದು ಹೇಳಿದರೆ ಹೇಗೆ?

ನಮ್ಮಲ್ಲಿ ಈ ಸೀರೆ–ಕುಪ್ಪಸ–ಲಂಗ–ಧಾವಣಿಗಳು ಹೋಗಿ ಪ್ಯಾಂಟು–ಶರ್ಟು, ಟೀ ಶರ್ಟು ಇತ್ಯಾದಿಗಳಾಗಿ ಬದಲಾದುದು ಸಹಜವಾಗಿ ಅಲ್ಲ. ನಮ್ಮವರು ವಿದೇಶಕ್ಕೆ ಹೋದುದು ಮತ್ತು ವಿದೇಶಿಯರು ಇಲ್ಲಿಗೆ ಬಂದುದೂ ಒಂದು ಕಾರಣ. ಅವರ ವೇಷ ಭೂಷಣವನ್ನು ನಾವು ಅನುಸರಿಸಿದೆವು. ಮುಸ್ಲಿಮರೂ ಹಾಗೇನೇ. ವಿದೇಶಕ್ಕೆ ಹೋಗಿ ಅಲ್ಲಿನ ವೇಷ–ಭೂಷಣಗಳನ್ನು ಅನುಸರಿಸಿದ್ರು. ಇದು ಹೀಗೆಯೇ ನಿಲ್ಲುವುದಿಲ್ಲ. ಬದಲಾಗುತ್ತಾ ಇರುತ್ತೆ. ಅವರ ಕೆಟ್ಟತನವನ್ನು ವಿರೋಧಿಸಬೇಕು, ಅವರನ್ನಲ್ಲ..'

ರೇವತಿ ಗಂಡನತ್ತ ನೋಡಿದಳು. ತನ್ನ ಉತ್ತರ ದೀರ್ಘವಾಯಿತೇನೋ ಎಂಬ ಅಳುಕು ಆ ನೋಟದಲ್ಲಿತ್ತು. ಅಲ್ಲದೇ ತಾನು ಇಷ್ಟೆಲ್ಲಾ ಮಾತಾಡುವಷ್ಟು ಬೆಳೆದೆನೇ ಎಂಬ ಅಚ್ಚರಿಯೂ ಅವಳಲ್ಲಿತ್ತು. ಶಂಕರನೂ ಗೊಂದಲದಲ್ಲಿದ್ದ. ರೇವತಿಯಲ್ಲಿ ಇಷ್ಟೊಂದು ಜ್ಞಾನವಿದೆ ಎಂಬುದು ಆತನಿಗೆ ಗೊತ್ತಾದದ್ದೇ ಈಗ. ಚೆನ್ನಾಗಿ ಮಾತಾಡ್ತಾಳೆ ಎಂದಾತನಿಗೆ ಅನಿಸಿತು. ಆತ ಹೇಳಿದ,

'ನೀನು ಏನೇ ಹೇಳು, ನನ್ನ ಕಾಲರ್ ಪಟ್ಟಿ ಹಿಡಿದ ಆ ಬ್ಯಾರಿಗಳೊಂದಿಗೆ ನಾನು ಗೆಳೆತನ ಬೆಳೆಸಲ್ಲ. ನೀನೂ ಸಂಬಂಧ ಇಟ್ಟುಕೊಳ್ಳಬಾರದು.'

'ನೀವು ಗೆಳೆತನ ಬೆಳೆಸದಿದ್ದರೆ ತೊಂದರೆಯಿಲ್ಲ. ಆದರೆ ಈ ಘಟನೆಯನ್ನು ಇಲ್ಲಿಗೇ ಬಿಟ್ಟುಬಿಡಿ. ಬೆಳೆಸಬೇಡಿ'– ಆಕೆಯ ಮಾತಿನಲ್ಲಿ ದೈನ್ಯತೆ ತುಂಬಿತ್ತು.

'ಯಾಕೆ ಭಯವೇ?'

'ಹಾಂ. ನನ್ನ ಅಣ್ಣಂದಿರು ಅನುಭವಿಸಿದ್ದೇ ಸಾಕು. ನೀವು ಹಾಗಾಗಬಾರದು. ನೀವು ನನಗೆ ಬೇಕು'– ಆಕೆ ಪ್ರೀತಿ ಮತ್ತು ಕಾಳಜಿಯಿಂದ ಹೇಳಿದಳು.

ಶಂಕರ ಸುಮ್ಮನಾದ. ರೇವತಿಯೂ ಮಾತು ಬೆಳೆಸಲು ಇಚ್ಚಿಸಲಿಲ್ಲ. ಆದರೆ, ಬರಬರುತ್ತಾ ಆತ ಬ್ಯಾರಿಗಳೊಂದಿಗಿನ ಸಂಬಂಧವನ್ನು ಕಡಿಮೆಗೊಳಿಸುತ್ತಾ ಬರ ತೊಡಗಿದ. ಗೆಳೆಯರ ಪಟ್ಟಿಯಲ್ಲಿದ್ದ ಬ್ಯಾರಿಗಳನ್ನು ನಿಧಾನಕ್ಕೆ ನಿರ್ಲಕ್ಷಿಸುತ್ತಾ ಬಂದ. ಆಚೆ ಮನೆಯ ಫಾತಿಮಾ ಕುಟುಂಬದೊಂದಿಗೆ ಹೆಚ್ಚು ಸಂಬಂಧ ಇಟ್ಟುಕೊಳ್ಳ ಬೇಡವೆಂದು ರೇವತಿಗೆ ತಾಕೀತು ಮಾಡತೊಡಗಿದ. ಪ್ರತಿದಿನ ಬ್ಯಾರಿಗಳಿಗೆ ವಿರುದ್ಧವಾದ ಏನಾದರೊಂದು ಸುದ್ದಿಯನ್ನು ತಂದು ರೇವತಿಯೊಂದಿಗೆ ಹಂಚಿ ಕೊಳ್ಳುತ್ತಿದ್ದ. ಮೊಬೈಲ್‌ನಲ್ಲಿ ತುಂಬಿಕೊಳ್ಳುತ್ತಿದ್ದ ಮೆಸೇಜುಗಳಿಂದ ಕೆಲವನ್ನು ಹೆಕ್ಕಿ ರೇವತಿಗೆ ಫಾರ್ವರ್ಡ್ ಮಾಡುತ್ತಿದ್ದ. ಕುಮಾರನೊಂದಿಗೆ ಈ ಘಟನೆಯನ್ನು ಆತ ಹಂಚಿಕೊಳ್ಳದಿದ್ದರೂ ಅದರ ಬಳಿಕ ಆತನೊಂದಿಗೆ ಒಡನಾಟ ಹೆಚ್ಚಾಯಿತು. ಕುಮಾರನ





ಮಾತುಗಳನ್ನು ತರಾಟೆಗೆ ತೆಗೆದುಕೊಳ್ಳುವುದಕ್ಕಿಂತ ಆತನ ಮಾತಿಗೆ ಪೂರಕ ಮಾತುಗಳನ್ನು ಸೇರಿಸುವುದು ಹೆಚ್ಚಾಯಿತು. ದಿನಸಿ ಖರೀದಿಸುವ ಅಂಗಡಿಯೂ ಬದಲಾಯಿತು. ತನ್ನನ್ನು ಅವಮಾನಿಸಿದ ಆ ಹುಡುಗರು ಆತನೆದುರು ಪ್ರತಿನಿತ್ಯ ಕಂಡಂತಾಗುತ್ತಿದ್ದರು. ಆತನಿಗೆ ಅದರಿಂದ ಬಿಡಿಸಿಕೊಳ್ಳುವುದು ಕಷ್ಟಸಾಧ್ಯವಾಗುತ್ತಿತ್ತು. ರೇವತಿಯಲ್ಲೂ ಈ ಸಂಗತಿಯನ್ನು ಆತ ಆಗಾಗ ಹೇಳಿಕೊಳ್ಳುತ್ತಲೇ ಇದ್ದ.

❖ ❖ ❖

ಅನಾಮಿಕ ಕುಳಿತಲ್ಲೇ ಕಲ್ಲಾಗಿದ್ದಳು. ಸೇಸಮ್ಮಳ ಮಾತುಗಳು ಆಕೆಗೆ ನಿರೂಪಣೆಯ ಹೊಸ ಮಾದರಿಯನ್ನು ಪರಿಚಯಿಸುವಂತಿತ್ತು. ಆಕೆಯ ಎದುರು ಸೇಸಮ್ಮ ಮಾತಾಡುತ್ತಿರುವಂತೆ ಅನಿಸುತ್ತಲೇ ಇರಲಿಲ್ಲ. ರೇವತಿ ಮತ್ತು ಶಂಕರ ಇಬ್ಬರೂ ಅವಳ ಮುಂದೆಯೇ ಈ ಎಲ್ಲ ಮಾತುಕತೆಯನ್ನು ನಡೆಸುತ್ತಿರುವಂತೆ ಅನಿಸಿತು.

ಸೇಸಮ್ಮ ಎದ್ದು ಮನೆಗೆ ಹೊರಟಿದ್ದಳು.

## ಒಂಭತ್ತು

**ಕೊ**ರೋನಾ ಸೋಂಕಿಗೊಳಗಾಗಿ ಆಸ್ಪತ್ರೆಯಲ್ಲಿದ್ದ ಗಂಡ ಶಂಕರನ ಮೊಬೈಲ್ ಕರೆಯನ್ನು ಕಾಯುತ್ತಾ ರೇವತಿ ಮನೆಯ ವರಾಂಡದಲ್ಲಿ ಕುಳಿತಿದ್ದಳು. ಆಕೆಗೆ ತನ್ನ ಗಂಡನಲ್ಲಾದ ದಿಢೀರ್ ಪರಿವರ್ತನೆಯ ತಲೆ–ಬುಡ ಎಷ್ಟು ಆಲೋಚಿಸಿದರೂ ಅರ್ಥವಾಗಿರಲಿಲ್ಲ. ಕೇವಲ ಒಂದೇ ಒಂದು ಘಟನೆಯು ತನ್ನ ಗಂಡನ ವಿಚಾರಧಾರೆಯನ್ನು ಆಮೂಲಾಗ್ರವಾಗಿ ಬದಲಿಸಿಬಿಡುವುದು ಸಾಧ್ಯವೇ? ಅಥವಾ ಗಂಡನ ಸ್ನೇಹಿತ ಕುಮಾರನ ಪ್ರಭಾವದಿಂದ ಅವರು ಹೀಗಾಗಿರಬಹುದೇ?

ನಾಲ್ಕೈದು ಬ್ಯಾರಿ ಹುಡುಗರು ಕಾಲರ್ ಪಟ್ಟಿ ಹಿಡಿದ ಬಳಿಕ





ಗಂಡನಲ್ಲಾದ ಬದಲಾವಣೆಯನ್ನು ರೇವತಿ ಸೂಕ್ಷ್ಮವಾಗಿ ಪರೀಕ್ಷಿಸುತ್ತಿದ್ದಳು. ಆ ಮೊದಲು ಬ್ಯಾರಿಗಳ ಕುರಿತು ಟೀಕಾತ್ಮಕವಾಗಿ ಅವರು ಮಾತಾಡುತ್ತಿದ್ದರೂ ಅದು ತೀರಾ ಏಕಮುಖ ಎಂಬ ಹಂತಕ್ಕೆ ತಲುಪಿರಲಿಲ್ಲ. ಅಲ್ಲದೇ, ತನ್ನ ಸಮುದಾಯದ ತಪ್ಪುಗಳನ್ನು ಉಲ್ಲೇಖಿಸುವುದೂ ಮತ್ತು ಟೀಕಿಸುವುದನ್ನೂ ಮಾಡುತ್ತಿದ್ದರು. ಬ್ಯಾರಿಗಳೆಂದರೆ ಅಸಹನೆ ಇತ್ತು. ಆದರೆ ದ್ವೇಷ ಇರಲಿಲ್ಲ. ಬ್ಯಾರಿಗಳೆಂದರೆ ನಮ್ಮದೇ ಪೂರ್ವಜರು ಎಂದು ಹೇಳುವಷ್ಟು ಅವರು ಸಲುಗೆಯನ್ನು ಪ್ರದರ್ಶಿಸುತ್ತಿದ್ದರು.

ಅದನ್ನು ಅಲ್ಲಗಳೆಯುವಂತೆಯೂ ಇರಲಿಲ್ಲ.

ಈ ದೇಶದಲ್ಲಿ ಪ್ರವಾದಿ ಮುಹಮ್ಮದ್ ಹುಟ್ಟಲಿಲ್ಲ. ಇಲ್ಲಿಗೆ ಅವರು ಬರಲೂ ಇಲ್ಲ. ಬ್ಯಾರಿ ಧರ್ಮ ಹುಟ್ಟಿರುವುದು ಅರೇಬಿಯಾದಲ್ಲಿ. ಮುಹಮ್ಮದರ ಭಾಷೆ ಅರಬಿ. ಅವರ ಕುರಾನಿನ ಭಾಷೆಯೂ ಅರಬಿ ಎಂದು ಫಾತಿಮಾ ಹೇಳಿದ್ದಳು. ಅವಳು ನಮಾಝ್‌ನಲ್ಲಿ ಓದುವುದು ಅರಬಿ ಭಾಷೆಯ ವಚನ ಎಂಬುದೂ ಆಕೆ ಹೇಳಿಯೇ ತನಗೆ ಗೊತ್ತು. ಆಕೆಯ ನಮಾಜು, ಉಪವಾಸ, ಮಸೀದಿಯಿಂದ ಕೇಳಿಸುವ ಬಾಂಗು, ಬುರ್ಖಾ ಇವು ಯಾವುವೂ ನಮ್ಮ ದೇಶದ್ದೆಂದು ಅನಿಸುವುದೇ ಇಲ್ಲ. ಬ್ಯಾರಿಗಳ ಪವಿತ್ರ ಕ್ಷೇತ್ರ ಇರುವುದೂ ಮಕ್ಕಾದಲ್ಲೇ. ಮುಹಮ್ಮದರ ಗೋರಿ ಇರುವುದೂ ಅರಬ್ ರಾಷ್ಟ್ರದಲ್ಲೇ. ಆದ್ದರಿಂದ ಬ್ಯಾರಿ ಧರ್ಮದ ಮೂಲ ಈ ದೇಶವಂತೂ ಅಲ್ಲವೇ ಅಲ್ಲ. ಅವರದು ಅರಬ್ ರಾಷ್ಟ್ರ. ಮತ್ತೆ ಅವರು ಇಲ್ಲಿ ಹೇಗೆ ಕಾಣಿಸಿಕೊಂಡರು ಎಂಬ ಪ್ರಶ್ನೆಗೆ ಉತ್ತರ–

ಮತಾಂತರ.

ಅರಬ್ ರಾಷ್ಟ್ರದಿಂದ ವ್ಯಾಪಾರಕ್ಕೋ, ಪ್ರವಾಸಕ್ಕೋ ಭಾರತಕ್ಕೆ ಬಂದ ಮುಹಮ್ಮದರ ಅನುಯಾಯಿಗಳ ಒಳ್ಳೇತನದಿಂದ ಪ್ರಭಾವಿತರಾಗಿ ಇಲ್ಲಿನವರು ಅವರ ಧರ್ಮವನ್ನು ಅಪ್ಪಿಕೊಂಡರು. ಅದರಲ್ಲಿ ನಮ್ಮ ಸಮುದಾಯದ ಜನರೇ ಹೆಚ್ಚಿದ್ದರು ಎಂಬುದೂ ಒಂದು ಗಟ್ಟಿ ಹೇಳಿಕೆ. ಹೀಗೆ ಬ್ಯಾರಿಗಳ ಗುಂಪು ಬೆಳೆಯಿತು. ಗಂಡನ ಮಾತಿನಲ್ಲೂ ಇಂಥ ಅಭಿಪ್ರಾಯಗಳು ಈ ಹಿಂದೆ ವ್ಯಕ್ತವಾದದ್ದಿದೆ. ಅವರ ಮೂಲ ನಮ್ಮ ಪೂರ್ವಜರು ಎಂದು ಅವರು ಹೇಳುತ್ತಿದ್ದರು. ಆದರೆ, ಈಗ ತನ್ನ ಗಂಡನ ಅಭಿಪ್ರಾಯಗಳು ಹೇಗಿವೆ? ಬ್ಯಾರಿಗಳ ಕುರಿತು ಎಂಥ ಕಟು ಧೋರಣೆ ಇದೆಯೆಂದರೆ, ಅವರ ಸಹವಾಸವೇ ಅಪರಾಧ ಎಂಬ ರೀತಿಯಲ್ಲಿ ಇದೆಯಲ್ಲ, ಇದು ಹೇಗೆ ಸಾಧ್ಯವಾಯಿತು? ಆ ಏಕೈಕ ಘಟನೆಯ ಪ್ರಭಾವವೇ?

ರೇವತಿಗೆ ಉತ್ತರ ಸಿಗಲಿಲ್ಲ.

ಗಂಡನ ಅಭಿಪ್ರಾಯಗಳು ಅತ್ಯಂತ ಉಗ್ರ ಹಂತಕ್ಕೆ ತಲುಪಿದ್ದು ಕೊರೋನಾ ಲಾಕ್‌ಡೌನ್ ಕಾಲದಲ್ಲಿ. ಹೇಗೂ ಟೈಲರ್ ಶಾಪ್ ತೆರೆಯುವ ಹಾಗಿರಲಿಲ್ಲ.

ಅನಗತ್ಯವಾಗಿ ಮನೆಯಿಂದ ಹೊರಬಂದರೆ ಪೊಲೀಸರು ಲಾಠಿ ಬೀಸುತ್ತಿದ್ದರು. ಬೆಳಗ್ಗಿನಿಂದ ರಾತ್ರಿಯ ವರೆಗೆ ಶಾಪ್‌ನಲ್ಲಿದ್ದು ಅಭ್ಯಾಸವಾಗಿದ್ದ ಗಂಡನಿಗೆ ಈ ಲಾಕ್‌ಡೌನ್ ಅನ್ನುವುದು ವಿಪರೀತ ಅಸಹನೆಯನ್ನು ಉಂಟು ಮಾಡಿತು. ಹೊರಗೆ ಹೋಗುವಂತಿಲ್ಲ. ಮನೆಯೊಳಗೆ ಕೂರುವುದಕ್ಕೂ ಆಗುತ್ತಿಲ್ಲ. ಕೊರೋನಾ ಲಾಕ್‌ಡೌನ್ ಆರಂಭ ಕಾಲದಲ್ಲಿ ಅವರು ಮನೆಯೊಳಗಡೆ ಅತ್ತಿತ್ತ ಎಷ್ಟು ಬಾರಿ ಅಡ್ಡಾಡಿದ್ದರೋ? ತಾನು ಎಷ್ಟು ಬಾರಿ ಚಹಾ ತಯಾರಿಸಿ ಕೊಟ್ಟಿರುವೆನೋ? ಆದರೆ, ನಾಲ್ಕೈದು ದಿನಗಳಲ್ಲೇ ಅವರು ಮೊಬೈಲ್‌ಗೆ ಹೊಂದಿಕೊಂಡರು.

ಟಿ.ವಿ. ವೀಕ್ಷಣೆಗೆ ತೊಡಗಿದರು.

ಬಹುಶಃ ಅವರ ನಿಲುವುಗಳನ್ನು ಉಗ್ರ ಹಂತಕ್ಕೆ ಈ ಮೊಬೈಲ್ ಮೆಸೇಜುಗಳು ಮತ್ತು ಟಿ.ವಿ. ನ್ಯೂಸ್‌ಗಳು ಕೊಂಡೊಯ್ದಿರಬೇಕು ಎಂದೇ ಅನಿಸುತ್ತದೆ. ಭಾರತವನ್ನು ಕೊರೋನಾ ಪ್ರವೇಶಿಸಿದ ಕಾರಣದಿಂದ ಲಾಕ್‌ಡೌನ್ ಘೋಷಣೆಯಾಗಿ ಒಂದು ವಾರ ಕಳೆಯುತ್ತಲೇ ಟಿ.ವಿ. ವಾರ್ತೆಗಳ ಸ್ವರೂಪವೇ ಬದಲಾಯಿತು. ಕೊರೋನಾವನ್ನು ಮುಸ್ಲಿಮರಿಗೆ ಜೋಡಿಸಿ, ಅವರು ಸೋಂಕು ಹರಡುತ್ತಿದ್ದಾರೆ ಎಂಬ ವಾರ್ತೆಗಳು ಮೇಲಿಂದ ಮೇಲೆ ಪ್ರಸಾರವಾಗತೊಡಗಿದುವು. ಟೊಪ್ಪಿ, ಪೈಜಾಮ, ಗಡ್ಡ ಇಟ್ಟ ಮುಸ್ಲಿಮರನ್ನು ಮತ್ತೆ ಮತ್ತೆ ತೋರಿಸುತ್ತಾ ಮಸೀದಿ, ನಮಾಝ್‌ಗಳ ವೀಡಿಯೋಗಳನ್ನು ಪ್ರಸಾರ ಮಾಡುತ್ತಾ, ಸಾರ್ವಜನಿಕವಾಗಿ ಒಂದು ನಿರ್ದಿಷ್ಟ ಅಭಿಪ್ರಾಯವನ್ನೇ ಅವು ರೂಪಿಸಿದುವು.

ಮಾಧ್ಯಮಗಳು ಕೊಟ್ಟ ಕೆಲವು ಹೆಸರುಗಳನ್ನು ರೇವತಿ ನೆನಪಿಸಿಕೊಂಡಳು–

ಕೊರೋನಾ ಜಿಹಾದ್, ಮದ್ರಸ ವೈರಸ್, ಗರ್ಭಿಣಿ ವೈರಸ್, ತಬ್ಲೀಗಿ ವೈರಸ್.. ಹೀಗೆ ತರಹೇವಾರಿ ಹೆಸರುಗಳನ್ನು ಕೊಟ್ಟು ಟಿ.ವಿ. ಚಾನೆಲ್‌ಗಳು ಕೊರೋನಾಕ್ಕೆ ನಿರ್ದಿಷ್ಟ ಚಹರೆಯನ್ನು ಕೊಟ್ಟವು. ಆ ಬಳಿಕ ನಡೆದದ್ದೇ ಬೇರೆ. ಮೊಬೈಲ್‌ಗಳಲ್ಲಿ ಪುಂಖಾನುಪುಂಖ ಸುದ್ದಿಗಳು–ವೀಡಿಯೋಗಳು. ಬ್ಯಾರಿಗಳು ಉದ್ದೇಶಪೂರ್ವಕವಾಗಿ ಸೋಂಕು ಹರಡುತ್ತಿದ್ದಾರೆ, ಅವರಿಂದ ಏನೂ ಖರೀದಿಸಬೇಡಿ, ಮುಟ್ಟಬೇಡಿ, ಅವರು ನೋಟಿಗೆ ಉಗುಳುತ್ತಾರೆ, ತರಕಾರಿಗಳಿಗೆ ಉಗುಳುತ್ತಾರೆ, ರಸ್ತೆಗೆ ಉಗುಳುತ್ತಾರೆ.. ಹೀಗೆ ಮೊಬೈಲ್‌ಗಳಲ್ಲಿ ಸುದ್ದಿಗಳೇ ಸುದ್ದಿಗಳು. ನನ್ನ ಗಂಡನಿಗೆ ಅಂಥ ಸುದ್ದಿಗಳು ಎಲ್ಲಿಂದ ಬರುತ್ತಿತ್ತೋ ಗೊತ್ತಿಲ್ಲ. ಅವೆಲ್ಲವನ್ನೂ ಅವರು ನನ್ನೊಂದಿಗೆ ಹಂಚಿಕೊಳ್ಳುತ್ತಿದ್ದರು. ಯಾವ ಕಾರಣಕ್ಕೂ ಬ್ಯಾರಿಗಳೊಂದಿಗೆ ಸಂಬಂಧ ಇಟ್ಟುಕೊಳ್ಳಬೇಡ, ಕೊರೋನಾ ಬಂದೀತು ಎಂದು ಪ್ರಾಮಾಣಿಕವಾಗಿಯೇ ಹೇಳುತ್ತಿದ್ದರು. ಮಕ್ಕಳನ್ನು ಪಕ್ಕದ ಮನೆಯ ಬ್ಯಾರಿಗಳ ಮನೆಗೆ ಹೋಗದಂತೆ ನಿರ್ಬಂಧ ವಿಧಿಸಿದರು. ನನಗೂ ತಾಕೀತು ಮಾಡಿದರು.





ಹೀಗಿದ್ದೂ ಅವರಿಗೆ ಕೊರೋನಾ ಹೇಗೆ ಬಂತು?

ಕಳೆದ ಮೂರು ದಿನಗಳಿಂದ ರೇವತಿ ಈ ಕುರಿತು ಎಷ್ಟು ಆಲೋಚಿಸಿದ್ದಳೋ ಗೊತ್ತಿಲ್ಲ. ಪ್ರತಿ ಸಂಜೆ ಕರೆ ಬಂದಾಗಲೆಲ್ಲ ಗಂಡನಲ್ಲಿ ಆಕೆ ಕೇಳುತ್ತಿದ್ದುದೂ ಅದೇ ಪ್ರಶ್ನೆ–

ನಿಮಗೆ ಕೊರೋನಾ ಹೇಗೆ ಬಂತು?

ಆತನೂ ಅದೇ ಪ್ರಶ್ನೆಯನ್ನು ಪುನರಾವರ್ತಿಸುತ್ತಿದ್ದ– ತಾನು ಇಷ್ಟೆಲ್ಲ ಜಾಗರೂಕತೆ ಪಾಲಿಸಿಯೂ ತನಗೆ ಕೊರೋನಾ ಹೇಗೆ ಬಂತು?

ಆ ದಿನ ರೇವತಿಗೆ ಶಂಕರನಿಂದ ಕರೆ ಬರಲಿಲ್ಲ. ವರಾಂಡದಲ್ಲಿ ಕಾದೂ ಕಾದೂ ದುಃಖದಿಂದ ಎದ್ದು ಒಳನಡೆದಳು.

❖ ❖ ❖

ಸೇಸಮ್ಮ ನಿಲ್ಲಿಸಿದ್ದಳು. ಟಿ.ವಿ. ಧಾರಾವಾಹಿಯಂತೆ ಕುತೂಹಲಕಾರಿ ಘಟ್ಟದಲ್ಲಿ ವಿಷಯವನ್ನು ನಿಲ್ಲಿಸಿ ಎದ್ದು ಹೋಗುವುದು ಈಕೆಗೆ ಅಭ್ಯಾಸವಾಗಿದೆಯೇನೋ ಎಂದು ಅನಾಮಿಕಳಿಗೆ ಅನಿಸಿತ್ತು. ಮಧ್ಯದಲ್ಲಿ ಪ್ರಶ್ನೆ ಕೇಳಿದರೆ ಎಲ್ಲಿ ವಿಷಯಾಂತರವಾಗಿ ಬಿಡುತ್ತೋ ಎಂಬ ಭಯದಿಂದ ಅನಾಮಿಕ ಪ್ರಶ್ನೆಯನ್ನೂ ಕೇಳಿರಲಿಲ್ಲ.

ಇನ್ನೇನಿದ್ದರೂ ನಾಳೆ ಎಂಬಂತೆ ಸೇಸಮ್ಮ ಎದ್ದು ಹೋಗಿದ್ದಳು.

## ಹತ್ತು

**ರೇ**ವತಿಗೆ ಆ ರಾತ್ರಿ ನಿದ್ರೆ ಬರಲಿಲ್ಲ.

ಗಂಡನನ್ನು ಸೇರಿಸಲಾದ ಸರಕಾರಿ ಆಸ್ಪತ್ರೆಗೆ ಹೋಗಲು ಆಕೆಗೆ ಅನುಮತಿ ಲಭಿಸಿಲ್ಲವಾದರೂ ಪ್ರತಿದಿನ ಸಂಜೆ ಆತ ಕರೆ ಮಾಡುತ್ತಿದ್ದ. ಆಸ್ಪತ್ರೆಗೆ ಬರದಿರುವುದೇ ಉತ್ತಮ ಎಂದು ಆತನೇ ಹೇಳಿದ್ದ. ಆಸ್ಪತ್ರೆಯಲ್ಲಿ ಕೊರೋನಾ ಸೋಂಕಿತರ ದೊಡ್ಡ ಸಂಖ್ಯೆಯೇ ಇದೆ. ಅವರು ಎಲ್ಲೆಲ್ಲಿ ಸ್ಪರ್ಶಿಸಿದ್ದಾರೋ ಹೇಳಲಾಗದು. ನೀನು ಭೇಟಿ ಕೊಟ್ಟರೆ ಅದರಿಂದ ನಿನಗೂ ಸೋಂಕು ವರ್ಗಾವಣೆ ಆಗುವ ಸಾಧ್ಯತೆ ಇದೆ. ಅಲ್ಲದೇ, ಭೇಟಿಗೆ ಆಸ್ಪತ್ರೆಯೇ ಅವಕಾಶ ನೀಡುತ್ತಿಲ್ಲ ಎಂದೂ ಆಕೆಯನ್ನು





ಸಮಾಧಾನಿಸಿದ್ದ.

ಅಲ್ಲದೇ,

ಶಂಕರನಲ್ಲಿ ಕೊರೋನಾ ಸೋಂಕು ಕಾಣಿಸಿಕೊಂಡ ಬಳಿಕ ಮನೆ ಸೀಲ್‌ಡೌನ್ ಆಗಿದೆ. ಎಲ್ಲರೂ ಮನೆಯೊಳಗೆ ಬಂಧಿಯಾಗಿದ್ದಾರೆ. ರೇವತಿ ಮತ್ತು ಮಕ್ಕಳನ್ನು ಮನೆಯಿಂದ ಕೊಂಡುಹೋಗಿ ಬೇರೆ ಕಡೆ ಕ್ವಾರಂಟೈನ್‌ನಲ್ಲಿ ಇಡಬೇಕಾಗಿದ್ದರೂ ಹಾಗೆ ಮಾಡದೇ ಅಧಿಕಾರಿಗಳು ಮನೆಯಲ್ಲೇ ಕ್ವಾರಂಟೈನ್‌ಗೆ ಅವಕಾಶ ಮಾಡಿಕೊಟ್ಟಿರುವುದೇ ಹೆಚ್ಚು. ಮನೆಯಿಂದ ಹೊರಗೆ ಹೋಗಬಾರದು ಮತ್ತು ಮನೆಗೆ ಹೊರಗಿನಿಂದ ಯಾರೂ ಬರಬಾರದು ಎಂಬ ಕಠಿಣ ಎಚ್ಚರಿಕೆಯನ್ನು ಕೊಟ್ಟು ರೇವತಿ ಮತ್ತು ಮಕ್ಕಳನ್ನು ಮನೆಯಲ್ಲೇ ಇರಿಸಿಕೊಳ್ಳಲಾಗಿದೆ...

ಶಂಕರ ಮೊನ್ನೆ ಮಾಡಿದ ಕರೆಯನ್ನು ರೇವತಿ ಜ್ಞಾಪಿಸಿಕೊಂಡಳು...

ಅವರ ಧ್ವನಿ ಎಂದಿನಂತೆ ಇರಲಿಲ್ಲ ಎಂಬುದು ಆಕೆಗೆ ಮಾತಿನ ಆರಂಭದಲ್ಲೇ ಸ್ಪಷ್ಟವಾಗಿತ್ತು. ಮಾತಿಗಿಂತ ಹೆಚ್ಚು ಕೆಮ್ಮಿದ್ದರು. ಉಸಿರಾಡಲು ಕಷ್ಟವಾಗುತ್ತಿದೆ ಎಂದಿದ್ದರು. ಮಾತಾಡದೇ ಸ್ವಲ್ಪ ಹೊತ್ತು ಹಾಗೆಯೇ ಮೌನ ವಹಿಸಿದ್ದರು. ಅವರ ಆರೋಗ್ಯ ಬಿಗಡಾಯಿಸಿತೇ? ಹಾಗಿದ್ದರೆ ತನಗೇಕೆ ಮಾಹಿತಿಯನ್ನು ಕೊಟ್ಟಿಲ್ಲ? ದೇಶಾದ್ಯಂತ ಕೊರೋನಾ ಸೋಂಕಿತರ ಸಂಖ್ಯೆಯಲ್ಲಿ ಭಾರೀ ಪ್ರಮಾಣದಲ್ಲಿ ಹೆಚ್ಚಳವಾಗುತ್ತಿದೆ. ಸಾಯುವವರ ಸಂಖ್ಯೆಯೂ ಅಧಿಕವಾಗುತ್ತಿದೆ...

ದೇವಾ! ನನ್ನ ಗಂಡನ ಕಾಯಿಲೆಯನ್ನು ಗುಣಪಡಿಸು. ಅವರನ್ನು ನನ್ನಿಂದ ಕಸಿಯದಿರು. ಈ ಮಕ್ಕಳ ಮುಖವನ್ನು ನೋಡಿಯಾದರೂ ಉಳಿಸು..' ರೇವತಿಯ ಕೆನ್ನೆಗಳು ಒದ್ದೆಯಾದುವು.

ಯಾವಾಗ ನಿದ್ದೆ ಹತ್ತಿತ್ತೋ ಗೊತ್ತಿಲ್ಲ, ಮೊಬೈಲ್ ರಿಂಗ್‌ನ ಸದ್ದಿಗೆ ರೇವತಿ ಎಚ್ಚರಗೊಂಡಳು. ಗಡಿಬಿಡಿಯಿಂದ ಕರೆ ಸ್ವೀಕರಿಸಿದಳು.

'ಆಸ್ಪತ್ರೆಯಿಂದ ಕರೆ ಮಾಡುತ್ತಿದ್ದೇವೆ.'

'ಹಾಂ'

'ಶಂಕರನ ಮನೆಯಲ್ಲವೇ?'

'ಹಾಂ, ಹೌದು; ನಾನು ಅವರ ಪತ್ನಿ, ರೇವತಿ'– ಧ್ವನಿಯಲ್ಲಿ ನಡುಕ ಇತ್ತು.

'ತಕ್ಷಣ ಆಸ್ಪತ್ರೆಗೆ ಬನ್ನಿ' ಎಂದು ಕರೆ ಸ್ಥಗಿತಗೊಂಡಿತು.

ಯಾಕೆ, ಗಂಡನಿಗೆ ಏನಾಯಿತು ಅನ್ನುವ ಮಾತುಗಳೆಲ್ಲ ರೇವತಿಯ ಗಂಟಲಿನಲ್ಲೇ ಉಳಿದುಕೊಂಡಿತು.

ಮನೆಯನ್ನು ಸೀಲ್‌ಡೌನ್ ಮಾಡಿರುವುದರಿಂದ ಹೊರಗೆ ಹೋಗುವುದು ಹೇಗೆ ಅನ್ನುವ ಪ್ರಶ್ನೆ ರೇವತಿಯಲ್ಲಿ ಹುಟ್ಟಿಕೊಂಡಿತು. ರೇವತಿಗೆ ನಿಂತಲ್ಲಿ ನಿಲ್ಲಲಾಗಲಿಲ್ಲ.

ಜಗಲಿಗೆ ಬಂದಳು. ಪೊಲೀಸರೊಂದಿಗೆ ಮಾತಾಡುವುದು ಅವಳ ಉದ್ದೇಶವಾಗಿತ್ತು. ಆದರೆ, ಪೊಲೀಸರು ಎಂದಿನಂತಿಲ್ಲ ಎಂದು ಆಕೆಗೆ ಅನಿಸಿತು. ಏನೋ ಅನಾಹುತ ಆಗಿರುವಂತೆ ಪೊಲೀಸರು ಚುರುಕುಗೊಂಡಿದ್ದಾರೆ. ಗುಸುಗುಸು ಮಾತಾಡುತ್ತಿದ್ದಾರೆ. ರೇವತಿಗೆ ಭಯ. ಎದೆ ಢವಗುಟ್ಟತೊಡಗಿತು. ಅವರಿಗೆ ಏನಾದರೂ ಆಯಿತೇ? ತನ್ನನ್ನು ಆ ಕಾರಣಕ್ಕಾಗಿಯೇ ಬರ ಹೇಳಿದರೇ? ಆಕೆ ಓಡಿಕೊಂಡೇ ಮಕ್ಕಳನ್ನು ಎಬ್ಬಿಸಿದಳು. ಕಣ್ಣು ತುಂಬಿಕೊಳ್ಳುತ್ತಿತ್ತು. ಮನೆಯವರಿಗೆ ಕರೆ ಮಾಡಿದಳು. ಅಮ್ಮ ಕರೆ ಸ್ವೀಕರಿಸಿದಳು.

'ಆಸ್ಪತ್ರೆಯಿಂದ ಬರ ಹೇಳಿದ್ದಾರೆ ಅಮ್ಮ..' ರೇವತಿ ಅಳುತ್ತಿದ್ದಳು.

ಅಮ್ಮನ ಧ್ವನಿಯಲ್ಲೂ ಅಳುವಿನ ಸದ್ದು.

'ಯಾಕಮ್ಮ ಅಳುತ್ತೀ?'

'ನಾವೇ ಆ ಕಡೆಗೆ ಬರುತ್ತಿದ್ದೇವೆ ಮಗಳೇ, ನೀನು ಆಸ್ಪತ್ರೆಗೆ ಬರುವ ಹಾಗಿಲ್ಲವಂತೆ. ನೀನು ಕ್ವಾರಂಟೈನ್‌ನಲ್ಲಿ ಇರುವವಳಲ್ಲವೇ?'

'ಯಾಕಮ್ಮ ಅಳುತ್ತೀ? ನೀವೇಕೆ ಇಲ್ಲಿಗೆ ಬರುತ್ತೀರಿ?'

ಅಮ್ಮ ಮಾತಾಡಲಿಲ್ಲ.

ಸ್ವಲ್ಪ ಸಮಯದಲ್ಲೇ ಆಂಬುಲೆನ್ಸ್‌ನ ಸದ್ದು. ರೇವತಿಯ ಮನೆಯ ಮುಂದೆಯೇ ಆಂಬುಲೆನ್ಸ್ ನಿಂತಿತು. ದೇಹವನ್ನೆಲ್ಲ ಮುಚ್ಚಿಕೊಂಡ ನಾಲ್ಕೈದು ಮಂದಿ ಆಂಬುಲೆನ್ಸ್‌ನಿಂದ ಇಳಿದರು. ಶವಮಂಚವನ್ನು ರೇವತಿಯ ಮನೆಯ ಹೊರಗೆ ಇಟ್ಟರು. ರೇವತಿಯ ಅಮ್ಮ ಮತ್ತು ಸಹೋದರರು ತುಸು ದೂರದಲ್ಲಿ ತಲೆ ತಗ್ಗಿಸಿ ನಿಂತಿದ್ದರು. ರೇವತಿಗೆ ಹೇಗೆ ಪ್ರತಿಕ್ರಿಯಿಸಬೇಕೆಂದೇ ತೋಚಲಿಲ್ಲ. ಯಾಕೆ ನೀವೆಲ್ಲ ಗಂಡನ ಸಾವನ್ನು ಅಡಗಿಸಿಟ್ಟಿರಿ ಎಂದು ಪ್ರಶ್ನಿಸುವುದಕ್ಕೂ ಸಾಧ್ಯವಾಗಲಿಲ್ಲ. ಗಂಡ ದಿಢೀರ್ ಆಗಿ ಸಾವಿಗೀಡಾಗುವುದಕ್ಕೆ ಸಾಧ್ಯವಿಲ್ಲವಲ್ಲ. ಕೊನೇ ಕ್ಷಣದಲ್ಲಾದರೂ ತನಗೆ ತಿಳಿಸಬಹುದಿತ್ತಲ್ಲವೇ? ಕ್ವಾರಂಟೈನ್‌ನಲ್ಲಿ ಇದ್ದರೇನು, ಅಂತರ ಕಾಯ್ದುಕೊಂಡೇ ಅವರನ್ನೊಮ್ಮೆ ನೋಡಿ ಬರಬಹುದಿತ್ತಲ್ಲವೇ? ನನ್ನನ್ನು ನೋಡಿರುತ್ತಿದ್ದರೆ ಅವರು ಗೆಲುವಾಗುತ್ತಿದ್ದರೋ ಏನೋ...

'ನೀವೆಲ್ಲ ಸೇರಿ ನನ್ನ ಗಂಡನನ್ನು ಕೊಂದಿರಿ' ಎಂದು ಜೋರಾಗಿ ಅರಚಿದಳು. ಮಕ್ಕಳನ್ನು ಅಪ್ಪಿ ಹಿಡಿದು ಗಂಡನ ಶವದ ಹತ್ತಿರ ಬಂದಳು. ಆದರೆ ಆರೋಗ್ಯ ಕಾರ್ಯಕರ್ತರು ಆಕೆಯನ್ನು ಹತ್ತಿರ ಬರಲು ಬಿಡಲಿಲ್ಲ. ನೀವು ಹತ್ತಿರ ಹೋಗುವುದು ಸುರಕ್ಷಿತವಲ್ಲ ಎಂದು ವಿವರಿಸಿದರು. ರೇವತಿ ಪ್ರತಿಭಟಿಸಿದರೂ ಅವರು ಕೇಳಲಿಲ್ಲ. ಅಮ್ಮ ಮತ್ತು ಸಹೋದರರೂ ಆಕೆಯ ಹತ್ತಿರ ಬರಲಿಲ್ಲ. ಎಲ್ಲವೂ ಕಣ್ಸನ್ನೆ, ಕೈ ಸನ್ನೆಯ ಮೂಲಕ ಹೇಳುತ್ತಿದ್ದರು. ರೇವತಿಗೆ ದುಃಖ ಮತ್ತು ಸಿಟ್ಟು





ಜೊತೆಜೊತೆಗೇ ಬರುತ್ತಿತ್ತು. ಆಕೆ ಕಲ್ಲಾಗಿದ್ದಳು. ಅದೇವೇಳೆ,

'ಕೊರೋನಾಕ್ಕೆ ಜಿಲ್ಲೆಯಲ್ಲಿ ಮೊದಲ ಬಲಿ' ಎಂಬ ಶೀರ್ಷಿಕೆಯಲ್ಲಿ ಟಿ.ವಿ. ಚಾನೆಲ್‌ಗಳು ಬ್ರೇಕಿಂಗ್ ನ್ಯೂಸ್ ಬಿತ್ತರಿಸುತ್ತಿದ್ದುವು.

ಶವವನ್ನು ತುಂಬಿಕೊಂಡು ಆಂಬುಲೆನ್ಸ್ ಹೊರಟು ಹೋಯಿತು.

❖ ❖ ❖

ಸೇಸಮ್ಮ ನಿಲ್ಲಿಸಿದ್ದಳು. ಅನಾಮಿಕಳಲ್ಲಿ ಕುತೂಹಲ ತಣಿದಿರಲಿಲ್ಲ. ಕೊರೋನಾದಿಂದಾಗಿ ಸಾಯುವುದು, ಮನೆಯವರು ಕ್ವಾರಂಟೈನ್ ಆಗುವುದು, ಕೆಲವೊಮ್ಮೆ ಊರೇ ಸೀಲ್‌ಡೌನ್ ಆಗುವುದು.. ಇವೆಲ್ಲವನ್ನೂ ಆಕೆ ಮೊಬೈಲ್‌ಗೆ ಪ್ರತಿನಿತ್ಯ ಬಂದು ಬೀಳುತ್ತಿದ್ದ ವೀಡಿಯೋ, ಸುದ್ದಿಗಳಿಂದ ತಿಳಿದುಕೊಳ್ಳುತ್ತಿದ್ದಳು. ಆ ಸುದ್ದಿಗಳಲ್ಲಿ ವಿಶೇಷತೆ ಏನಿರಲಿಲ್ಲ. ಭಯ, ಭಯ, ಭಯ. ಆದರೆ ಸೇಸಮ್ಮ ಹೇಳುತ್ತಿರುವ ನೆಕ್ಕರೆಕಾಡು ಘಟನೆ ಹಾಗಲ್ಲ. ಅದು ಬರೇ ಕೊರೋನಾದ ಕತೆಯೂ ಅಲ್ಲ. ತುಳಿತಕ್ಕೊಳಗಾದ ಸಮುದಾಯವೊಂದರ ಕುಟುಂಬದ ಕತೆ ಅದು. ಶಂಕರ ಮತ್ತು ರೇವತಿಯ ಮೂಲಕ ಸಾಮಾನ್ಯ ಕುಟುಂಬವೊಂದರ ಒಳಬೇಗುದಿ ಅದರಲ್ಲಿದೆ. ಮಾಧ್ಯಮ ಸುದ್ದಿಗಳು, ವದಂತಿಗಳು ಮತ್ತು ದ್ವೇಷಪೂರಿತ ವಿಚಾರಧಾರೆಗಳು ಒಟ್ಟು ಸೇರಿ ಏನೆಲ್ಲ ಆಗಬಹುದು ಅನ್ನುವುದಕ್ಕೆ ಶಂಕರ ಒಂದು ಜೀವಂತ ಉದಾಹರಣೆಯಂತಿದ್ದಾನೆ.

ಶಂಕರನ ಬಗ್ಗೆ ಅನಾಮಿಕ ಆಸಕ್ತಿ ತಾಳುವುದಕ್ಕೆ ಇನ್ನೊಂದು ಕಾರಣವೂ ಇತ್ತು.

ಅದೇನೆಂದರೆ, ಆತನ ಹಿನ್ನೆಲೆ. ಸೇಸಮ್ಮ ಬರೇ ಕೊರೋನಾ ಪೀಡಿತ ಶಂಕರನ ಬಗ್ಗೆ ಮಾತ್ರ ಹೇಳುತ್ತಿದ್ದುದಲ್ಲ. ಆಕೆಗೆ ಕೊರೋನಾ ಒಂದು ನೆಪ ಅಷ್ಟೆ. ಆಕೆ ಶಂಕರನಿಗೆ ತಗುಲಿರುವ ಕೊರೋನಾದ ಬಗ್ಗೆ ಪ್ರಸ್ತಾಪಿಸುತ್ತಲೇ ಆತನ ಗತ ಕಾಲದ ಬದುಕನ್ನೂ ತೆರೆದಿಟ್ಟಿದ್ದಳು. ಹಾಗೆ ಸೇಸಮ್ಮಳ ಮೂಲಕ ತೆರೆದುಕೊಳ್ಳುತ್ತಾ ಹೋದ ಶಂಕರ ಮತ್ತು ಆತನ ತಂದೆಯ ಬಾಲ್ಯಕಾಲದ ಬದುಕಿನಲ್ಲಿ ಆಕೆ ತನ್ನನ್ನೇ ಕಾಣುತ್ತಿದ್ದಳು. ಕರ್ನೂಲು ಮತ್ತು ನೆಕ್ಕರೆಕಾಡು ಎಂಬ ಹೆಸರಿನ ನಡುವೆ ವ್ಯತ್ಯಾಸ ಇದೆಯೇ ಹೊರತು ಜಮೀನ್ದಾರರ ಶೋಷಣೆಯಲ್ಲಿ ಬಹುತೇಕ ಏಕರೂಪತೆ ಇದೆ ಎಂದಾಕೆಗೆ ಅನ್ನಿಸುತ್ತಿತ್ತು. ಆದ್ದರಿಂದಲೇ,

ಸೇಸಮ್ಮ ಹೇಳುವ ನೆಕ್ಕರೆ ಕಾಡು ಘಟನೆಯನ್ನು ಆಕೆ ತನ್ನದೇ ಬದುಕಿನ ಭಾಗವೆಂಬಂತೆ ಪರಿಗಣಿಸಿದ್ದಳು. ಅದರಲ್ಲೂ ಶಂಕರ ಆಕೆಗೆ ವಿಚಿತ್ರ ವ್ಯಕ್ತಿಯಾಗಿ ಕಾಣಿಸಿದ್ದ. ಶೋಷಣೆಯ ಹಸಿಹಸಿ ಗಾಯಗಳ ನೆನಪುಗಳನ್ನು ಇನ್ನೂ ತನ್ನೊಳಗೆ ಜೀವಂತ ಉಳಿಸಿಕೊಂಡಿರುವ ವ್ಯಕ್ತಿ, ಕುಮಾರ ಎಂಬ ಇನ್ನೂ ಬೆಳೆದಿಲ್ಲದ ಮತ್ತು ವರ್ಣ ವ್ಯವಸ್ಥೆಯನ್ನು ಅಂತರಂಗದಲ್ಲಿ ಪೋಷಿಸಿಕೊಂಡು ಬಂದಿರುವ ವ್ಯಕ್ತಿಯೊಂದಿಗೆ ಅದ್ಹೇಗೆ ವೈಚಾರಿಕ ಸಮಾನತೆಯನ್ನು ಸಾಧಿಸಿದ ಎಂಬುದು ಆಕೆಗೆ ಚೋದ್ಯವೆನಿಸಿತ್ತು.

ಕುಮಾರ ಪ್ರತಿನಿಧಿಸುವ ಸಮುದಾಯದಿಂದ ಶಂಕರನ ತಂದೆ ಪಡಬಾರದಷ್ಟು ಅವಮಾನ ಎದುರಿಸಿದ್ದಾನೆ. ಶಂಕರನ ಸ್ಥಿತಿಯೂ ಭಿನ್ನವಲ್ಲ. ಆತನಲ್ಲಿ ಈಗಲೂ ಆ ನೋವಿದೆ. ಆದರೆ, ಈ ನೋವಿಗೆ ಕಾರಣವಾದ ಸಮುದಾಯದ ತುಸು ಸುಧಾರಿತ ಪ್ರತಿನಿಧಿಯಂತಿರುವ ಕುಮಾರ ಈಗ ಇನ್ನೊಂದು ಸಮುದಾಯದ ವಿರುದ್ಧ ದ್ವೇಷದ ಬೀಜವನ್ನು ಶಂಕರನೊಳಗೆ ಬಿತ್ತುತ್ತಿದ್ದಾನೆ. ಅಚ್ಚರಿ ಏನೆಂದರೆ, ಶಂಕರ ಅದನ್ನು ಒಪ್ಪಿಕೊಳ್ಳುತ್ತಿದ್ದಾನೆ. ಕುಮಾರನ ಬಯಕೆಯಂತೆಯೇ ಬ್ಯಾರಿಗಳನ್ನು ದ್ವೇಷಿಸುತ್ತಿದ್ದಾನೆ. ಕುಮಾರನ ಪೂರ್ವಜರಿಂದ ಶೋಷಣೆಗೊಳಗಾದದ್ದೂ ಈತನೇ. ಈಗ ಕುಮಾರನ ಮೂಲಕ ದಾಳವಾಗಿ ಬಳಕೆಯಾಗುತ್ತಿರುವುದೂ ಈತನೇ.

ಅನಾಮಿಕಳಿಗೆ ವಿಚಿತ್ರ ಅನ್ನಿಸಿದ್ದೂ ಇದುವೇ.





# ಹನ್ನೊಂದು

**ರೇ**ವತಿ ಅಂಥದ್ದೊಂದು ಬೆಳವಣಿಗೆಯನ್ನು ಊಹಿಸಿಯೇ ಇರಲಿಲ್ಲ.

ಗಂಡನ ಶವವನ್ನು ಕಳುಹಿಸಿಕೊಟ್ಟು ಕಂಗಾಲಾಗಿ ಕುಳಿತಿದ್ದ ಆಕೆಗೆ ಆ ಸುದ್ದಿ ಬರಸಿಡಿಲಿನಂತೆ ಅಪ್ಪಳಿಸಿತ್ತು. ಆಕೆ ಅದನ್ನು ನಂಬುವುದಕ್ಕೆ ಸಾಧ್ಯವೇ ಇರಲಿಲ್ಲ. ತನಗೆ ಸಂಬಂಧಿಸಿ ಅಂಥದ್ದೊಂದು ಘಟನೆ ನಡೆದಿದ್ದರೂ ಆದನ್ನು ಸಹಿಸಿ ಕೊಳ್ಳಬಹುದಿತ್ತು. ಆದರೆ ಶಂಕರ ಯಾರು? ಅವರ ಆಲೋಚನೆಯೇನು? ಅವರು ಈವರೆಗೆ ಮಾತಾಡಿದ್ದೇನು? ಇಲ್ಲ ಹಾಗೆ ನಡೆಯಲು ಸಾಧ್ಯವೇ ಇಲ್ಲ. ಮಕ್ಕಳಿಬ್ಬರನ್ನು ಜೊತೆ

ಸೇರಿಸಿ ದಿಕ್ಕು ಕಾಣದೇ ಕುಳಿತಿದ್ದ ಆಕೆ, ಸುದ್ದಿಯನ್ನು ಜೀರ್ಣಿಸಿಕೊಳ್ಳಲು ಸಾಧ್ಯವಾಗದೇ ಟಿ.ವಿ. ಆನ್ ಮಾಡಿದಳು.

'ಕೊರೋನಾದಿಂದ ಸಾವಿಗೀಡಾದ ಜಿಲ್ಲೆಯ ಮೊದಲ ವ್ಯಕ್ತಿಯ ಶವ ಸಂಸ್ಕಾರಕ್ಕೆ ಸಾರ್ವಜನಿಕರಿಂದ ಅಡ್ಡಿ. ಅಧಿಕಾರಿಗಳು ಮನವರಿಕೆ ಮಾಡಿದರೂ ಒಪ್ಪದ ನಾಗರಿಕರು..'

ರೇವತಿ ತಕ್ಷಣ ಟಿ.ವಿ. ಬಂದ್ ಮಾಡಿದಳು ಮತ್ತು ಇಬ್ಬರು ಮಕ್ಕಳನ್ನು ಬಿಗಿದಪ್ಪಿ ಕಣ್ಣೀರು ಹರಿಸುತ್ತಾ ಹೇಳಿದಳು–

'ಈ ಜಗತ್ತಿನಲ್ಲಿರುವವರೆಲ್ಲ ಕೇವಲ ಮನುಷ್ಯರು ಮಕ್ಕಳೇ. ಯಾರೂ ಅನ್ಯರಿಲ್ಲ. ಎಲ್ಲರೂ ನಮ್ಮವರೇ. ಯಾರನ್ನೂ ಧರ್ಮದ ಕಾರಣಕ್ಕಾಗಿ ದ್ವೇಷಿಸಬೇಡಿ. ಕೆಟ್ಟವರು ಎಲ್ಲ ಧರ್ಮದಲ್ಲೂ ಇದ್ದಾರೆ. ಒಳ್ಳೆಯವರೂ ಎಲ್ಲ ಧರ್ಮದಲ್ಲಿ ಇದ್ದಾರೆ. ಕೆಟ್ಟವರ ಕೆಟ್ಟತನವನ್ನು ವಿರೋಧಿಸಿ. ಒಳ್ಳೆಯವರ ಒಳ್ಳೇತನವನ್ನು ಮೆಚ್ಚಿಕೊಳ್ಳಿ. ಇದರಾಚೆಗಿನ ಎಲ್ಲ ವಾದಗಳನ್ನೂ ತಿರಸ್ಕರಿಸಿ. ನಿಮ್ಮ ತಂದೆಯೇ ನಿಮಗೆ ಬಲು ದೊಡ್ಡ ಪಾಠ...'

ಮಕ್ಕಳಿಬ್ಬರೂ ಬಿಕ್ಕಿಬಿಕ್ಕಿ ಅಳತೊಡಗಿದರು.

❖ ❖ ❖

ಸೇಸಮ್ಮ ಮೌನವಾಗಿದ್ದಳು. ಅನಾಮಿಕಳ ಕಣ್ಣು ತುಂಬಿಕೊಳ್ಳುತ್ತಿತ್ತು. ಊಟಕ್ಕೆ ಹಾಕುವ ಉಪ್ಪಿನಕಾಯಿಯಂತೆ ಸ್ವಲ್ಪ ಸ್ವಲ್ಪವೇ ಹೇಳಿ ಮರುದಿನಕ್ಕೆ ಮುಂದೂಡುತ್ತಿದ್ದ ಘಟನೆಯ ಅಂತ್ಯ ಹೀಗಾಗಬಹುದು ಎಂದು ಅನಾಮಿಕ ಅಂದುಕೊಂಡಿರಲಿಲ್ಲ. ರೇವತಿ ಮತ್ತು ಮಕ್ಕಳು ಆ ರಾತ್ರಿ ಆಕೆಯನ್ನು ತೀವ್ರವಾಗಿ ಕಾಡಿದ್ದರು. ಶಂಕರನ ಸಾವಿಗಿಂತಲೂ ರೇವತಿಯ ಪ್ರಬುದ್ಧ ವರ್ತನೆ ಆಕೆಯನ್ನು ತೀವ್ರವಾಗಿ ಆವರಿಸಿಕೊಂಡಿತ್ತು.





# ಹನ್ನೆರಡು

**ಅ**ನಾಮಿಕ ನಿದ್ರಿಸಿಯೇ ಇರಲಿಲ್ಲ.

ಸುಮ್ಮನೆ ಮಲಗಿದ್ದಳು. ಆಕೆಯಲ್ಲಿ ಅಂಥದ್ದೊಂದು ಆತಂಕವೇನೂ ಇರಲಿಲ್ಲ. ಆವತ್ತು ಸಂಜೆಯಿಂದ ಆಕೆಯ ಮನಸ್ಸನ್ನಿಡೀ ಆವರಿಸಿದ್ದುದು ರೇವತಿ ಒಬ್ಬಳೇ. ತನ್ನ ಕಾಫಿ ಎಸ್ಟೇಟ್‌ನ ಪಕ್ಕದ ನೆಕ್ಕರೆಕಾಡಿನಲ್ಲಿ ಶಂಕರನಂಥ ವ್ಯಕ್ತಿ ಇದ್ದ ಎಂಬುದು ಆಕೆಯಲ್ಲಿ ಅಚ್ಚರಿ ತಂದಿರಲಿಲ್ಲ. ಆಕೆಯನ್ನು ಅಲುಗಾಡಿಸಿದ್ದು ರೇವತಿಯ ಪ್ರಬುದ್ಧ ವರ್ತನೆ. ಅದರಲ್ಲೂ ಶಂಕರನ ಅಂತ್ಯಸಂಸ್ಕಾರಕ್ಕೆ ವಿರೋಧ ವ್ಯಕ್ತವಾದ ಬಳಿಕ ಆಕೆ ತನ್ನ ಮಕ್ಕಳನ್ನು ಜೊತೆ ಸೇರಿಸಿ ಆಡುವ ಮಾತಿದೆಯಲ್ಲ, ಅನಾಮಿಕಳ ಎದೆಯೊಳಗೆ ನಾಟಿ ಕುಳಿತಿತ್ತು. ಎಂಥ ಉದಾತ್ತ

ಮಾತು, ಎಂಥ ಪ್ರಬುದ್ಧ ಮಾರ್ಗದರ್ಶನ. ಓರ್ವ ಪರಿಪೂರ್ಣ ತಾಯಿಗೆ ಮಾತ್ರ ಇಂಥ ಮಾತನ್ನಾಡಲು ಸಾಧ್ಯ ಎಂದಾಕೆಗೆ ಅನಿಸಿತು. ಓಹ್, ಈಗ ಈ ಘಟನೆ ಹೇಳಿದ ಸೇಸಮ್ಮಳನ್ನೂ ಈ ಕಾಫಿ ಎಸ್ಟೇಟನ್ನೂ ಬಿಟ್ಟು ಹೋಗುವೆನಲ್ಲ ಎಂದನಿಸಿತು ಆಕೆಗೆ. ಹಾಗಂತ, ಕಾಫಿ ಎಸ್ಟೇಟನ್ನು ಬಿಟ್ಟು ಹೋಗುವ ಬಗ್ಗೆ ನೂರ್‌ನ ಜೊತೆ ಸೇರಿ ನಿರ್ಧರಿಸಿದಂತೆ ರಾತ್ರಿ ಒಂದು ಗಂಟೆಯ ಹೊತ್ತಿಗೆ ಬೇವಿನ ಮರದಡಿ ತಲುಪಬೇಕೆಂಬುದನ್ನು ಆಕೆ ಎಷ್ಟು ಸಹಜವಾಗಿ ಪರಿಗಣಿಸಿದ್ದಳೆಂದರೆ, ಅದೊಂದು ಮಾಮೂಲಿ ಕೆಲಸ ಎಂಬಂತೆ. ಆಕೆಯ ಜೊತೆ ಆ ದೊಡ್ಡ ಕೋಣೆಯಲ್ಲಿ ಇನ್ನೂ 28 ಮಂದಿ ಮಹಿಳೆಯರು ಮಲಗಿದ್ದರು. ಎಲ್ಲರದ್ದೂ ಒಂದೊಂದು ಕತೆ. ಹೆಚ್ಚಿನವರು ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಮತ್ತು ಬಿಹಾರದವರು. ಹೊಟ್ಟೆಯ ಹಸಿವನ್ನು ತಡೆಯಲಾಗದೇ ಈ ಮಹಿಳೆಯರು ಈ ವರದರಾಜನ ಕಾಫಿ ಎಸ್ಟೇಟ್‌ನಲ್ಲಿ ದುಡಿಯಲು ಬಂದಿದ್ದರು. ಇವರಲ್ಲಿ ಕೆಲವರು ಕುಟುಂಬ ಸಮೇತ ಬಂದಿದ್ದರೆ, ಇನ್ನೂ ಕೆಲವರಲ್ಲಿ ಅನಾಮಿಕಳಂತೆ ವಿಧವೆಯರೂ ಇದ್ದರು.

ರುಕ್ಮಿಣಿ ಬಿಹಾರದವಳು. ಆಕೆ ಮೂರು ವರ್ಷಗಳ ಹಿಂದೆ ಇಲ್ಲಿಗೆ ಬರುವಾಗ ಕಂಕುಳಲ್ಲಿ ಪುಟ್ಟ ಮಗ ಇದ್ದ. ಗಂಡನೂ ಜೊತೆ ಇದ್ದ. ಬಿಹಾರದಲ್ಲಿ ಬೆಳಗ್ಗಿನಿಂದ ಸಂಜೆ ತನಕ ದುಡಿದರೂ 100 ರೂಪಾಯಿ ವೇತನ ಸಿಗಲ್ಲ ಅನ್ನುವುದು ಅವರಿಬ್ಬರೂ ಊರು ಬಿಡುವುದಕ್ಕೆ ಇದ್ದ ಕಾರಣ. ಅಲ್ಲಿ ಉದ್ಯೋಗದ ಕೊರತೆಯೂ ಇದೆ. ನಿರ್ಮಾಣ ಕಾಮಗಾರಿಗಳು ಶೂನ್ಯ ಅನ್ನುವಷ್ಟು ವಿರಳ. ಆದ್ದರಿಂದ ಬದುಕಬೇಕೆಂದರೆ ಗುಳೇ ಹೊರಡಲೇಬೇಕು ಅನ್ನುವ ಸ್ಥಿತಿ ಇದೆ.

ಹಾಗಂತ, ಇದು ರುಕ್ಮಿಣಿ ಒಬ್ಬಳ ಕತೆಯಲ್ಲ.

ಹಡಗೂರಿನ ಕಾಫಿ ಎಸ್ಟೇಟ್‌ನ ಆ ಕೋಣೆಯಲ್ಲಿ ಮಲಗಿರುವ 28 ಮಹಿಳೆಯರದ್ದೂ ಇಂಥದ್ದೇ ಕತೆ. ಅವರಲ್ಲಿ ಮೈದುನನ ಲೈಂಗಿಕ ದೌರ್ಜನ್ಯವನ್ನು ಸಹಿಸಲಾರದೇ ಓಡಿ ಬಂದ ಅಭಿಲಾಷಳದ್ದೂ ಒಂದು ಕತೆ. ಆಕೆಯ ಗಂಡ ಲಾರಿ ಚಾಲಕನಾಗಿದ್ದ. ಕುಡಿತ, ಸಿಗರೇಟು ಚಟ ಇತ್ಯಾದಿ ವ್ಯಸನಗಳಿದ್ದರೂ ಆತನಲ್ಲಿ ನಿಯತ್ತು ಇತ್ತು. ಇದ್ದೊಬ್ಬ ಮಗಳನ್ನು ಸಾಕಬೇಕೆಂಬ ಜವಾಬ್ದಾರಿ ಪ್ರಜ್ಞೆಯೂ ಇತ್ತು. ಆತನ ಲಾರಿ ಅಂತಾರಾಜ್ಯಕ್ಕೆ ಸಂಚರಿಸುವ ಕಾರಣ ವಾರಗಟ್ಟಲೆ ಮನೆಗೆ ಬರುತ್ತಿರಲಿಲ್ಲ. ಮನೆಯಲ್ಲಿ ಮೂವರು ತಮ್ಮಂದಿರು. ಅಭಿಲಾಷಳ ಗಂಡ ಮನೆಯಲ್ಲಿ ಹಿರಿಯವನಾಗಿರುವುದು ಮತ್ತು ಮನೆಯ ಪ್ರಧಾನ ಆದಾಯ ಮೂಲ ಆತನೇ ಆಗಿದ್ದುದು ಮನೆಯಲ್ಲಿ ಆತನಿಗೆ ಬಹಳಷ್ಟು ಗೌರವವನ್ನು ಸಂಪಾದಿಸಿಕೊಟ್ಟಿತ್ತು. ಆತ ಹಾಕಿದ ಗೆರೆಯನ್ನು ತಮ್ಮಂದಿರು ಮೀರುತ್ತಿರಲಿಲ್ಲ. ತಾಯಿಗೂ ಆತನೆಂದರೆ ಒಂದಿಷ್ಟು ಭಯ ಮಿಶ್ರಿತ ಗೌರವ. ಆತ ಓದಿದ್ದು ಕಡಿಮೆಯಾದರೂ ಲೋಕಜ್ಞಾನ ತುಂಬಾನೇ





ಇತ್ತು. ತನ್ನ ಮಗಳನ್ನು ಐಎಎಸ್ ಮಾಡಬೇಕೆಂದು ಆತ ಅಭಿಲಾಷಾಳೊಂದಿಗೆ ಆಗಾಗ ಹೇಳಿಕೊಳ್ಳುತ್ತಿದ್ದನಂತೆ. ಅದೇ ಉದ್ದೇಶದಿಂದ ಮಗಳನ್ನು ಎಲ್‌ಕೆಜಿ ಕ್ಲಾಸಿಗೆ ಸೇರ್ಪಡೆಗೊಳಿಸಿದ್ದನಂತೆ.

ಆದರೆ,

ಒಂದು ದಿನ ಹೊರ ರಾಜ್ಯದಲ್ಲಿ ನಡೆದ ಅಪಘಾತವೊಂದರಲ್ಲಿ ಆತ ಮೃತಪಟ್ಟ. ಇದರಿಂದ ಅಭಿಲಾಷ ಎಷ್ಟು ಕುಸಿದು ಹೋದಳೆಂದರೆ, ತನ್ನೆದುರು ಕತ್ತಲೆಯ ಹೊರತು ಇನ್ನೇನೂ ಇಲ್ಲ ಎಂದು ಅನಿಸಿತು. ಎಲ್‌ಕೆಜಿ ಕ್ಲಾಸಿನ ಹೆಣ್ಣು ಮಗಳು ಮತ್ತು ತಾನು – ಇದರ ಹೊರತು ತನ್ನದು ಅನ್ನುವ ಏನೂ ಆಕೆಯ ಬಳಿ ಇಲ್ಲ. ತವರು ಮನೆಗೆ ಹೋಗೋಣವೆಂದರೆ, ಅಲ್ಲಿಯದು ಇಲ್ಲಿಗಿಂತಲೂ ಧಾರುಣ ಸ್ಥಿತಿ. ಅಮ್ಮ ಮತ್ತು ಅಪ್ಪ ಇಬ್ಬರೂ ಆ ಮೊದಲೇ ತೀರಿಕೊಂಡಿದ್ದರು. ಇಬ್ಬರು ಸಹೋದರರಂತೂ ಅಪ್ಪ ಕಟ್ಟಿಸಿದ ಮನೆಯನ್ನು ಮಾರಿ ತಂತಮ್ಮ ಪಾಡಿಗೆ ತಾವು ಎಲ್ಲೆಲ್ಲೋ ನೆಲೆ ಕಂಡುಕೊಂಡಿದ್ದರು. ಕೊನೆಯವನಂತೂ ಎಲ್ಲಿದ್ದಾನೆಂದೇ ಪತ್ತೆಯಿಲ್ಲ. ಅಪ್ಪನಿಗೆ ಆಸ್ತಿ ಎಂದು ಇದ್ದುದು ಅದೊಂದೇ ಮನೆ. ಮೆಟ್ಟು ಹೊಲಿಯುವ ಕೆಲಸವನ್ನು ನಿಷ್ಠೆಯಿಂದ ಸಾಯುವವರೆಗೂ ನಿಭಾಯಿಸಿಕೊಂಡು ಬಂದವ ಆತ. ಮೆಟ್ಟು ಹೊಲಿದು ಆ ಮನೆಯನ್ನು ಕಟ್ಟಿದ. 4 ಸೆಂಟ್ಸ್ ಜಾಗವನ್ನು ಆತ ಖರೀದಿಸುವುದಕ್ಕೆ ಪಟ್ಟ ಪಾಡನ್ನು ಅಭಿಲಾಷಾ ಒಂದು ಸಂಜೆ ಅನಾಮಿಕಳೊಂದಿಗೆ ಹಂಚಿಕೊಂಡಿದ್ದಳು.

ಮುಂಗಡ ಹಣವನ್ನು ಕೊಟ್ಟಿದ್ದ ಅಪ್ಪ ನಿಗದಿತ ದಿನಾಂಕದಂದು ಉಳಿದ ಹಣವನ್ನು ಜಾಗದ ಒಡೆಯನಿಗೆ ಕೊಡಲು ವಿಫಲವಾಗಿದ್ದರಂತೆ. ಆ ನಾಲ್ಕು ಸೆಂಟ್ಸ್‌ನ ಒಡೆಯ ದೊಡ್ಡ ಜಮೀನ್ದಾರನಂತೆ. ಆತನಿಗೆ ಈ 4 ಸೆಂಟ್ಸ್ ಜಾಗ ಒಂದು ಲೆಕ್ಕವೇ ಅಲ್ಲ. ಆದರೆ, ಮಾತಿಗೆ ತಕ್ಕಂತೆ ಹಣ ಹೊಂದಿಸಿ ಕೊಡಲು ಅಪ್ಪ ವಿಫಲವಾದುದನ್ನು ಅನುಸರಿಸಿ ಆತ ಅಪ್ಪನನ್ನು ಬರ ಹೇಳಲು ಜನ ಕಳುಹಿಸಿಕೊಟ್ಟಿದ್ದನಂತೆ. ಅಪ್ಪ ಮೈಯೆಲ್ಲಾ ಹಿಡಿಯಷ್ಟಾಗಿ ಆ ಜಮೀನ್ದಾರನ ಎದುರು ನಿಂತರಂತೆ. ಅಪ್ಪನ ದೈನೇಸಿ ಸ್ಥಿತಿಯನ್ನು ಕಂಡೋ ಏನೋ ಆತ ಖರೀದಿ ಒಪ್ಪಂದವನ್ನು ರದ್ದುಪಡಿಸುವ ಬದಲು ಇನ್ನೊಂದು ದಿನಾಂಕವನ್ನು ಕೊಟ್ಟನಂತೆ. ಆದರೂ ಅಪ್ಪ ಅಲ್ಲಿಂದ ಕದಲಿರಲಿಲ್ಲವಂತೆ.

'ಏನು, ಜಾಗ ಬೇಡವೇ? ಆತ ಗಡಸು ದನಿಯಲ್ಲಿ ಪ್ರಶ್ನಿಸಿದ್ದನಂತೆ.'

'ಒಂದು ವೇಳೆ ಈ ದಿನಾಂಕಕ್ಕೂ ಮೊದಲು ಹಣ ಹೊಂದಿಸಲು ಸಾಧ್ಯವಾಗದಿದ್ದರೆ...'

ಅಪ್ಪ ಅತೀವ ಹಿಂಜರಿಕೆಯೊಂದಿಗೆ ನಾಲಿಗೆಯಿಂದ ಪದಗಳನ್ನು ಉರುಳಿಸಿದ್ದರಂತೆ.

ಹಾಗೇನಾದರೂ ಆದರೆ, ಒಪ್ಪಂದವನ್ನು ರದ್ದುಪಡಿಸಬೇಡಿ, ಹೇಗಾದರೂ ಮಾಡಿ ಹಣ ಹೊಂದಿಸಿಕೊಡುವೆ ಅನ್ನುವುದು ಅಪ್ಪನ ಮಾತಿನ ಇಂಗಿತವಾಗಿತ್ತು. ಜಮೀನ್ದಾರ

ತುಸು ಹೊತ್ತು ಆಲೋಚಿಸಿ ಹೇಳಿದನಂತೆ–

'ಒಂದು ಕೆಲ್ಸ ಮಾಡು. ನಿನ್ನ ಮಗನನ್ನು ಇಲ್ಲಿಗೆ ಕೆಲಸಕ್ಕೆ ಕಳುಹಿಸು. ಹೇಗೂ ಬೆಳೆದಿದ್ದಾನಲ್ಲ...'

ಅಪ್ಪ ಹಿಂತಿರುಗಿ ಬಂದು ಜೋಪಡಿಯಲ್ಲಿ ಎಲ್ಲರನ್ನೂ ಜೊತೆ ಸೇರಿಸಿ ಇಡೀ ಘಟನೆಯನ್ನು ವಿವರಿಸಿದ್ದರು. ಹೇಗಾದರೂ ಮಾಡಿ ಸ್ವಂತ ಮನೆಯೊಂದನ್ನು ಕಟ್ಟಲೇಬೇಕು, ಆ 4 ಸೆಂಟ್ಸ್ ಜಾಗವನ್ನು ಖರೀದಿಸಲೇಬೇಕು ಎಂಬ ಹಠ ಅಪ್ಪನಲ್ಲಿ ಇತ್ತು. ಆದರೆ ದೊಡ್ಡಣ್ಣ ಅಮೃತ ಅಪ್ಪನ ಮಾತನ್ನು ಒಪ್ಪಿಕೊಳ್ಳಲಿಲ್ಲ. ನಗರಕ್ಕೆ ಹೋಗಿ ದುಡಿಯುವುದು ಆತನ ಇಚ್ಛೆ. 'ಜಮೀನ್ದಾರನ ಜೀತದಾಳುವಿನಂತೆ ತಾನು ದುಡಿಯಲಾರೆ' ಎಂದಾತ ಖಡಾಖಂಡಿತವಾಗಿ ಹೇಳಿದ. ಉಳಿದಿಬ್ಬರು ತಮ್ಮಂದಿರು ದುಡಿಯುವಷ್ಟು ಬೆಳೆದಿರಲಿಲ್ಲ. ಇನ್ನು ಉಳಿದಿದ್ದುದು ತಾನು ಮತ್ತು ಅಮ್ಮ. ನನ್ನನ್ನು ಕೆಲಸಕ್ಕೆ ಕಳುಹಿಸಿಕೊಡುವುದಕ್ಕೆ ಅಪ್ಪನ ವಿರೋಧವಿತ್ತು. ಬೆಳೆದ ಹೆಣ್ಣು ಮಗಳು. ಜಮೀನ್ದಾರನ ತೋಟದಲ್ಲಿ ಹಲವಾರು ಮಂದಿ ದುಡಿಯುತ್ತಿದ್ದಾರೆ. ಅವರಲ್ಲಿ ಯುವಕರೂ ಇದ್ದಾರೆ. ನಾಳೆ ಏನಾದರೂ ಅನಾಹುತ ಆಗಿಬಿಟ್ಟರೆ... ಎಂಬ ಭಯ ಅಪ್ಪನದು.

ಕೊನೆಗೆ ಅಮ್ಮ ಸಿದ್ಧಳಾದಳು.

ಅಪ್ಪ ಮೌನವಾಗಿದ್ದ. ಅಮ್ಮ ಕೆಲಸಕ್ಕೆ ಹೋಗುವುದು ಆತನಿಗೆ ಇಷ್ಟವಿಲ್ಲ ಅನ್ನುವುದಕ್ಕೆ ಆತನ ಮುಖಭಾವವೇ ಪುರಾವೆಯಾಗಿತ್ತು. ಆದರೆ, ಬೇರೆ ದಾರಿ ಇಲ್ಲದೆ ಇರುವಾಗ ಅಪ್ಪನಾದರೂ ಏನು ಮಾಡಿಯಾನು?

ಹಾಗೆ ಅಪ್ಪ ಮತ್ತು ಅಮ್ಮನ ದಣಿವರಿಯದ ಶ್ರಮದಿಂದ ಆ ಮನೆ ಎದ್ದು ನಿಂತಿತ್ತು.

ಬಳಿಕ ಎಲ್ಲವೂ ರಪರಪನೆ ನಡೆದು ಹೋಯಿತು. ಮೊದಲು ನನ್ನ ಮದುವೆ. ಬಳಿಕ ದೊಡ್ಡಣ್ಣ ಅಮೃತ ಮತ್ತು ಅವನ ತಮ್ಮ ನವೀನನ ಮದುವೆ. ಆದರೆ ಕೊನೆಯವನ ಮದುವೆ ಅಪ್ಪ–ಅಮ್ಮ ಬಯಸಿದಂತೆ ಆಗಲಿಲ್ಲ. ಗೆಳತಿಯ ಮಗಳನ್ನು ಕೊನೆಯ ಮಗ ಸುಜಿತನಿಗೆ ತಂದು ಮನೆ ತುಂಬಿಸಿಕೊಳ್ಳಬೇಕೆಂಬುದು ಅಮ್ಮನ ಆಸೆಯಾಗಿತ್ತು. ಗೆಳತಿಗೂ ಆ ಬಗ್ಗೆ ಸಹಮತವಿತ್ತು. ಆ ಹುಡುಗಿಯೂ ನಮ್ಮ ಕುಟುಂಬಕ್ಕೆ ಅಪರಿಚಿತಳಾಗಿರಲಿಲ್ಲ. ಅಮ್ಮ ಒಂದು ದಿನ ಸುಜಿತನಲ್ಲಿ ಈ ವಿಷಯವನ್ನು ಗುಟ್ಟಾಗಿಯೆಂಬಂತೆ ಪ್ರಸ್ತಾಪಿಸಿದಳು. ಆದರೆ ಆತನ ಪ್ರತಿಕ್ರಿಯೆಯನ್ನು ಕೇಳಿ ಅಮ್ಮ ಎಷ್ಟು ನೊಂದುಕೊಂಡರೆಂದರೆ, ಅವರ ಆರೋಗ್ಯವನ್ನೂ ಅದು ಬಾಧಿಸಿತು ಎಂದೇ ಅನಿಸುತ್ತದೆ.





# ಹದಿಮೂರು

ಅಮ್ಮ ಯಾಕೆ ನೊಂದುಕೊಂಡರೆಂದರೆ,

ಸುಜಿತ ಓರ್ವಳನ್ನು ಪ್ರೀತಿಸುತ್ತಿದ್ದ.

ಅಮ್ಮನಿಗೆ ಆಘಾತವಾಗಿದ್ದುದು ಆತನ ಪ್ರೀತಿಯ ಸಂಗತಿ ಕೇಳಿ ಅಲ್ಲ. ಆತ ಪ್ರೀತಿಸುತ್ತಿದ್ದ ಹೆಣ್ಣು ಮಗಳ ಜಾತಿ ಕೇಳಿ. ಆತ ಪ್ರೀತಿಸುತ್ತಿದ್ದುದು ಮೇಲ್ಜಾತಿ ಹೆಣ್ಣು ಮಗಳನ್ನು. ಒಂದುವೇಳೆ, ಅವರಿಗೆ ಈ ಪ್ರೀತಿಯ ಸಂಗತಿ ತಿಳಿದು ಬಿಟ್ಟರೆ, ಏನಾದೀತು ಅನ್ನುವುದೇ ಅಮ್ಮನ ಆತಂಕ. ಮೇಲ್ಜಾತಿಯ ಮಂದಿ ಕೆಳಜಾತಿಯವರನ್ನು ಅತ್ಯಂತ ಕ್ರೂರವಾಗಿ ನಡೆಸಿಕೊಳ್ಳುತ್ತಿರುವುದಕ್ಕೆ ಅಭಿಲಾಷಾಳ ಬಿಹಾರ ಕುಪ್ರಸಿದ್ಧಿಯನ್ನು ಪಡೆದುಕೊಂಡಿತ್ತು. ಮೇಲ್ಜಾತಿಯ ಮಂದಿ ತಮ್ಮ ಹಿತಾಸಕ್ತಿಯನ್ನು ಕಾಪಾಡಲಿಕ್ಕಾಗಿ ಖಾಸಗಿ ಸೇನೆಯನ್ನೇ ತಯಾರಿಸಿಟ್ಟುಕೊಂಡಿದ್ದರು. ಅದನ್ನು ಮೇಲ್ಜಾತಿ ಹಿತಾಸಕ್ತಿಯನ್ನು ಕಾಪಾಡುವ ಸೇನೆ ಅನ್ನುವುದಕ್ಕಿಂತ ಕೆಳಜಾತಿಯನ್ನು ಹದ್ದುಬಸ್ತಿನಲ್ಲಿಡುವ ರೌಡಿ ಪಡೆ ಎಂದೇ ಹೇಳಬಹುದು. ಒಂದು ವೇಳೆ ಮಗನ ಪ್ರೇಮ ಪ್ರಕರಣ ಆ ಖಾಸಗಿ ಸೇನೆಗೆ ಗೊತ್ತಾಗಿ ಬಿಟ್ಟರೆ ಆ ಬಳಿಕ ಈ

ಮನೆ ಉಳಿದೀತೆ? ನಾವು ಉಳಿದೇವೇ ಎಂದು ಅಮ್ಮ ದಿಗಿಲುಕೊಂಡಳು.

ಅಮ್ಮನ ಈ ಆತಂಕಕ್ಕೆ ಹಸಿ ಹಸಿ ದೃಷ್ಟಾಂತವೂ ಇತ್ತು.

ನಮ್ಮ ಮನೆಯ ತುಸು ದೂರದಲ್ಲೇ ನಮ್ಮದೇ ಜಾತಿಯ ಇನ್ನೊಂದು ಮನೆಯೂ ಇತ್ತು. ನಾವು ಅಲ್ಲಿಗೆ ಹೋಗುವುದು-ಬರುವುದೂ ಇತ್ತು. ಆ ಮನೆಯ ತುಳಸಿಗೂ ನನ್ನಮ್ಮನಿಗೂ ದೂರದ ನೆಂಟಸ್ತನವೂ ಇತ್ತಂತೆ. ಆದರೆ, ಅಮ್ಮ ನೆಂಟರು ಎಂಬ ನೆಲೆಯಲ್ಲಿ ತುಳಸಿಯೊಂದಿಗೆ ಸಂಬಂಧ ಬೆಳೆಸಿದ್ದಲ್ಲ. ಅಮ್ಮ ಮತ್ತು ತುಳಸಿ ಬಹುತೇಕ ಒಂದೇ ಪ್ರಾಯದವರಾದುದರಿಂದಾಗಿ ಏಕವಚನದಲ್ಲಿ ಪರಸ್ಪರ ಸಂಬೋಧಿಸುವಷ್ಟು ಅವರ ನಡುವೆ ಸಲುಗೆ ಇತ್ತು. ತುಳಸಿ ಊರ ಜಮೀನ್ದಾರನ ಮನೆಗೆ ಕೆಲಸಕ್ಕೆ ಹೋಗುತ್ತಿದ್ದಳು. ಅವಳ ಗಂಡನದೂ ಅದೇ ಸ್ಥಿತಿ. ಆತನೂ ಜಮೀನ್ದಾರನ ಮನೆಯಲ್ಲೇ ದುಡಿಯುತ್ತಿದ್ದ.

ಅವರಿಬ್ಬರಿಗೆ ಇದ್ದುದು ಒಬ್ಬನೇ ಮಗ- ಪ್ರಶಾಂತ.

ಆತನನ್ನು ಅವರು ಬಹಳ ಮುದ್ದಿನಿಂದ ಸಾಕಿದ್ದರು. ಶಿಕ್ಷಣವನ್ನೂ ಕೊಡಿಸಿದರು. ಉಳಿದ ಹೆಚ್ಚಿನ ಮನೆಯ ಯುವಕರು ಜಮೀನ್ದಾರನ ಬಳಿ ಕೂಲಿ ಕೆಲಸ ಮಾಡುತ್ತಿರುವಾಗ ತುಳಸಿ ತನ್ನ ಮಗನನ್ನು ನಗರಕ್ಕೆ ಕಳುಹಿಸಿ ಓದಿಸಿದಳು. ಆತ ನಮ್ಮ ಊರಿನಲ್ಲಿದ್ದುದಕ್ಕಿಂತ ನಗರದಲ್ಲಿದ್ದುದೇ ಹೆಚ್ಚು. ಹಾಗೆಯೇ ಅಲ್ಲಿ ಒಂದು ಉದ್ಯೋಗವನ್ನೂ ಗಿಟ್ಟಿಸಿಕೊಂಡ. ಮದುವೆಯಾದ ಬಳಿಕ ಅಮ್ಮನನ್ನೂ ಅಪ್ಪನನ್ನೂ ನಗರಕ್ಕೆ ಕರೆಸಿಕೊಳ್ಳುವುದು ಎಂದೂ ತೀರ್ಮಾನಿಸಿದ್ದ. ಅದರಂತೆಯೇ ಒಂದು ದಿನ ಊರಿಗೆ ಬಂದು ತಾನು ಪ್ರೀತಿಸುತ್ತಿರುವ ಹುಡುಗಿಯ ಬಗ್ಗೆ ಅಮ್ಮ ತುಳಸಿಗೆ ವಿವರಿಸಿದ.

ಆದರೆ,

ಸುಜಿತನ ಪ್ರೇಮ ಪ್ರಕರಣವನ್ನು ಕೇಳಿ ನನ್ನ ಅಮ್ಮ ಹೇಗೆ ಬೆವೆತು ಹೋಗಿದ್ದಳೋ ಹಾಗೆಯೇ ಅಂದು ತುಳಸಿಯೂ ಬೆವೆತು ಹೋಗಿದ್ದಳು. ಹುಡುಗಿ ಮೇಲ್ಜಾತಿಯವಳು. ಮಗನ ಸಹಪಾಠಿ. ನಗರದ ಹುಡುಗಿ. ತುಳಸಿ ಎಲ್ಲ ವಿವರಗಳನ್ನೂ ಸಂಗ್ರಹಿಸಿದ ಬಳಿಕ ಸಂಭಾವ್ಯ ಅಪಾಯದ ಬಗ್ಗೆ ಮಗನಿಗೆ ತಿಳಿ ಹೇಳಿದಳು. ಆಕೆ ಮಗನ ಪ್ರೇಮಕ್ಕೆ ವಿರುದ್ಧವಾಗಿರಲಿಲ್ಲ. ಆದರೆ, ಜಾತಿ ಮೀರಿ ಪ್ರೇಮಿಸಿದರೆ ಅದರ ಅಂತಿಮ ಪರಿಣಾಮ ಹತ್ಯಾಕಾಂಡ ಅನ್ನುವುದನ್ನು ಆಕೆ ಬಲ್ಲಳು. ಪ್ರೇಮಿಸಿದ ಕೆಳಜಾತಿಯ ಯುವಕನನ್ನು ಆತನ ಕುಟುಂಬವನ್ನೂ ಸಮೂಲ ನಾಶ ಮಾಡುವುದು ಮೇಲ್ಜಾತಿಯ ಪ್ರತಿಕ್ರಿಯೆಯಾಗಿತ್ತು.

ತುಳಸಿಯ ನೆಂಟರ ಮನೆಯಲ್ಲೇ ಇಂಥದ್ದೊಂದು ಆಘಾತಕಾರಿ ಘಟನೆ ನಡೆದಿತ್ತು.

ತುಳಸಿ ಇನ್ನೂ ಎಳೆ ವಯಸ್ಸಿನಲ್ಲಿದ್ದಾಗ ಆಕೆಯ ತೀರಾ ಹತ್ತಿರದ ನೆಂಟರ





ಮನೆಯನ್ನು ಒಂದು ರಾತ್ರಿ ಮೇಲ್ಜಾತಿಯ ಖಾಸಗಿ ಸೇನೆ ಉರಿಸಿ ಹಾಕಿತ್ತು. ಅದರೊಳಗಡೆ ಮೇಲ್ಜಾತಿಯ ಹುಡುಗಿಯನ್ನು ಪ್ರೀತಿಸಿದ ಹುಡುಗ ಮತ್ತು ಆತನ ಕುಟುಂಬ ನಿದ್ದೆಯಲ್ಲೇ ಕರಟಿ ಹೋಗಿದ್ದರು. ಆ ಬಳಿಕ ಆ ಪ್ರಕರಣ ಹೇಗೆ ಮುಕ್ತಾಯ ಕಂಡಿತು ಅನ್ನುವುದಕ್ಕೆ ಆಕೆ ಸಾಕ್ಷಿಯಾಗಿದ್ದಳು. ಮನೆ ಸುಟ್ಟ ಪಾಪಿಗಳು ಯಾವ ತೊಂದರೆಯೂ ಇಲ್ಲದೇ ಎಲ್ಲರ ಎದುರೇ ಸಹಜವಾಗಿ ಬದುಕಿದ್ದರು. ಅವರನ್ನು ಪೊಲೀಸರು ಬಂಧಿಸಿದ್ದೂ ಇಲ್ಲ, ಅವರು ನ್ಯಾಯಾಲಯಕ್ಕೆ ಹಾಜರಾದದ್ದೂ ಇಲ್ಲ. ಮನೆಯೊಳಗಿನ ಒಲೆಯ ಬೆಂಕಿಯ ಕಿಡಿ ಚಿಮ್ಮಿ ಮನೆ ಉರಿದಿದೆ ಎಂಬ ಮಾತನ್ನು ಸುಟ್ಟವರೇ ತೇಲಿ ಬಿಟ್ಟರು. ಅದು ಬಾಯಿಯಿಂದ ಬಾಯಿಗೆ ಹರಿದಾಡಿ ಅದುವೇ ಬಿಸಿ ಸುದ್ದಿಯಾಗಿಬಿಟ್ಟಿತು. ಸುಟ್ಟ ಮನೆಯಲ್ಲಿ ಬೆಂದು ಹೋದ ಯುವಕನನ್ನು ಪ್ರೀತಿಸಿದ ಮೇಲ್ಜಾತಿ ತರುಣಿ ಆ ಬಳಿಕ ಮೇಲ್ಜಾತಿ ಯುವಕನನ್ನು ಮದುವೆಯಾಗಿ ದೂರದೂರಿಗೆ ಹೊರಟು ಹೋಗಿದ್ದಳು...

❖ ❖ ❖

ತುಳಸಿ ದೀರ್ಘ ನಿಟ್ಟುಸಿರೊಂದನ್ನು ಬಿಟ್ಟಳು. ಪ್ರಶಾಂತ ಅಮ್ಮನ ಮುಖವನ್ನೇ ನೋಡುತ್ತಿದ್ದ.

'ಯಾಕಮ್ಮಾ, ನಿನಗೆ ಇಷ್ಟವಿಲ್ಲವೇ?'

'ಇದು ಇಷ್ಟದ ವಿಷಯ ಅಲ್ಲ ಮಗನೇ. ಜಾತಿಯ ವಿಷಯ.'

'ನಾವು ಜಾತಿಯನ್ನು ಮೀರಿ ಬದುಕುತ್ತೇವೆ, ಅಮ್ಮಾ.'

'ಸಾಧ್ಯವಿಲ್ಲ ಮಗೂ. ಮೇಲ್ಜಾತಿಯಲ್ಲಿ ಹಣ ಬಲವೂ ಇದೆ. ಜನಬಲವೂ ಇದೆ. ಪೊಲೀಸೂ ಅವರದೇ.'

'ಇಲ್ಲಮ್ಮಾ, ನಾನು ಪ್ರೀತಿಸುತ್ತಿರುವ ಯುವತಿ ತನ್ನ ಮನೆಯವರನ್ನು ಒಪ್ಪಿಸುತ್ತೇನೆ ಅಂದಿದ್ದಾಳೆ...'

'ಅವರನ್ನು ನಂಬಬೇಡ ಮಗಾ.'

'ಇಲ್ಲಮ್ಮಾ, ಏನೂ ಆಗಲ್ಲ. ನೀನು ಧೈರ್ಯದಿಂದಿರು.'

ತುಳಸಿಯ ಮುಂದೆ ನೆಂಟರ ಮನೆ ಸುಟ್ಟು ಬೂದಿಯಾದ ದೃಶ್ಯ ಕುಣಿದಾಡುತ್ತಿತ್ತು. ಮಗನದ್ದು ಯೌವನದ ಹುಚ್ಚು ಆವೇಶ. ಆದರೆ, ಆ ಮೇಲ್ಜಾತಿ ಜನ ಹಾಗಿಲ್ಲ. ಅವರು ಜಾತಿ ವ್ಯಸನರು. ಕೆಳ ಜಾತಿಯ ಏಳಿಗೆಯನ್ನೇ ಸಹಿಸದವರು. ಅವರನ್ನು ದಮನಿಸುವುದಕ್ಕಾಗಿ ಯಾವ ಮಟ್ಟಕ್ಕೆ ಇಳಿಯಲೂ ಸಿದ್ಧರು. ಅಂಥಲ್ಲಿ ನನ್ನ ಮಗನ ಪ್ರೇಮದ ಭಾಷೆ ಅವರಿಗೆ ಎಲ್ಲಿ ಅರ್ಥವಾಗುವುದೋ?

ತುಳಸಿಯನ್ನು ತಬ್ಬಿ ಹಿಡಿದು, ಬೆನ್ನು ತಟ್ಟಿ ಪ್ರಶಾಂತ ಮತ್ತೆ ಪಟ್ಟಣಕ್ಕೆ ಹೊರಟು ಹೋಗಿದ್ದ. ಆ ಬಳಿಕ ಆತ ಮರಳಿದ್ದು ಶವವಾಗಿ.

ನಗರದಲ್ಲಿ ನಡೆದ ಅಪಘಾತವೊಂದರಲ್ಲಿ ಆತ ಸಾವಿಗೀಡಾಗಿದ್ದಾನೆ ಎಂದು ಹೇಳಲಾಯಿತು. ಆತ ರಸ್ತೆ ಬದಿಯಲ್ಲಿ ತನ್ನ ಕೋಣೆಗೆಂದು ಸಾಗುತ್ತಿದ್ದಾಗ ಹಿಂದಿನಿಂದ ಬಂದ ಕಾರೊಂದು ಆತನಿಗೆ ಡಿಕ್ಕಿ ಹೊಡೆದು ಪರಾರಿಯಾಗಿದೆ ಎಂಬ ವಿವರಣೆ. ಅದರಾಚೆಗೆ ತುಳಸಿಗೆ ತನ್ನ ಮಗನ ಸಾವಿನ ವಿಷಯದಲ್ಲಿ ಯಾವ ಮಾಹಿತಿಯೂ ಇಲ್ಲ. ಅದು ಯಾರ ಕಾರು, ಅವರು ಎಲ್ಲಿಯವರು, ಅವರ ಪತ್ತೆಯಾಗಿದೆಯೇ, ಕೇಸು ದಾಖಲಾಗಿದೆಯೇ ಎಂಬುದೆಲ್ಲಾ ಪ್ರಶಾಂತನ ಜೊತೆಗೆಯೇ ಮಣ್ಣಾಗಿ ಹೋಗಿತ್ತು...

ಸುಜಿತನ ಪ್ರೇಮ ಸಂಗತಿಯನ್ನು ಕೇಳಿ ಅಮ್ಮ ದಂಗಾದುದೂ ಇದೇ ಕಾರಣದಿಂದ.

ಅಮ್ಮನದು ಸಾಧು ಸ್ವಭಾವ. ಕಕ್ಕುಲಾತಿ ಹೆಚ್ಚು. ಸುಜಿತನದ್ದೋ ಆವೇಶ, ಯೌವನದ ಹುರುಪು. ಅಮ್ಮನ ಯಾವ ಮಾತನ್ನೂ ಕಿವಿಗೆ ಹಾಕಿಕೊಳ್ಳುವ ಸಹನೆ ಆತನಲ್ಲಿರಲಿಲ್ಲ. ಮನುಷ್ಯರೆಲ್ಲ ಸಮಾನ, ಜಾತಿಯನ್ನು ನಾವೇ ಹುಟ್ಟು ಹಾಕಿದ್ದು ಎಂದೆಲ್ಲಾ ಅಮ್ಮನ ಜೊತೆ ವಾಗ್ವಾದಕ್ಕಿಳಿದ. ಅಮ್ಮ ವಾಸ್ತವ ಜಗತ್ತನ್ನು ಎದುರಿಟ್ಟು ಮಾತಾಡುತ್ತಿದ್ದರೆ, ಸುಜಿತ ಮುಂದೆ ಕಟ್ಟಬೇಕಾದ ಸಮ ಸಮಾಜದ ಬಗ್ಗೆ ಮಾತಾಡುತ್ತಿದ್ದ. ಅಮ್ಮನ ಮುಂದೆ ಕ್ರೌರ್ಯದ ಹಸಿ ಹಸಿ ಜಗತ್ತಿತ್ತು. ಸುಜಿತನಿಗೆ ಮೇಲ್ಜಾತಿಯ ಈ ಕ್ರೌರ್ಯದ ಪರಿಚಯ ಇರಲಿಲ್ಲ ಎಂದಲ್ಲ.

ಪ್ರೇಮ ಪಾಶದಲ್ಲಿ ಸಿಲುಕಿದ್ದ ಆತನಿಗೆ ಆ ಕ್ರೌರ್ಯವೇ ತೃಣ ಸಮಾನ ಅನ್ನಿಸಿತ್ತು.

ಮೇಲ್ಜಾತಿ ಯುವತಿಯನ್ನು ಪ್ರೇಮಿಸುವುದು ಅಪಾಯಕಾರಿ ಎಂದು ಅಮ್ಮ ಸುಜಿತನಲ್ಲಿ ಪರಿಪರಿಯಾಗಿ ವಿನಂತಿಸಿದಳು. ಅವರು ನಮ್ಮನ್ನೇ ನಾಶ ಮಾಡಿಯಾರು ಎಂದು ಭಯಪಟ್ಟಳು. ಈ ಹಿಂದಿನ ಒಂದಕ್ಕಿಂತ ಹೆಚ್ಚು ಪ್ರೇಮ ಪ್ರಕರಣಗಳು ದುರಂತ ಅಂತ್ಯ ಕಂಡುದುದನ್ನು ಉಲ್ಲೇಖಿಸಿ ಎಚ್ಚರಿಸಿದಳು. ಆದರೆ ಸುಜಿತ ಒಪ್ಪುವ ಸ್ಥಿತಿಯಲ್ಲೇ ಇರಲಿಲ್ಲ. ನಮ್ಮಿಬ್ಬರನ್ನು ಬೇರ್ಪಡಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದಾತ ಗಟ್ಟಿ ಧ್ವನಿಯಲ್ಲಿ ಹೇಳಿದ್ದ.

ಬಹುಶಃ ದೇವನೇ ಹಾಗೆ ಮಾಡಿದನೋ ಏನೋ?

ಸುಜಿತ ಪ್ರೀತಿಸಿದ್ದ ಮೇಲ್ಜಾತಿ ಯುವತಿ ಈತನನೊಂದಿಗಿನ ಪ್ರೇಮ ಸಂಬಂಧವನ್ನು ಕಡಿದುಕೊಂಡು ತನ್ನದೇ ಜಾತಿಯ ಯುವಕನನ್ನು ವರಿಸಿದಳು. ಸುಜಿತ ಅದನ್ನು ನಿರೀಕ್ಷಿಸಿಯೇ ಇರಲಿಲ್ಲ. ಆತ ಹುಚ್ಚನಂತಾದ. ಅಮ್ಮ-ಅಪ್ಪ ಸಹಿತ ಯಾರಿಗೂ ತಿಳಿಸದೇ ರಾತ್ರೋ ರಾತ್ರಿ ಮನೆಬಿಟ್ಟು ಹೊರಟು ಹೋದ.

ಅಮ್ಮ ಮತ್ತು ಅಪ್ಪನ ಆರೋಗ್ಯಕ್ಕೆ ಕೇಡು ಬರಲು ಪ್ರಾರಂಭವಾದದ್ದೇ ಅಲ್ಲಿಂದ. ಮಗನ ಯಾತನೆಯಲ್ಲೇ ಕೊರಗಿದ ಅಪ್ಪ ಒಂದು ದಿನ ಹಠಾತ್ ಕಣ್ಮುಚ್ಚಿದ. ಅಪ್ಪ





ಹೊರಟು ಹೋದ ಎರಡೇ ದಿನದೊಳಗೆ ಅಮ್ಮನೂ ಹೊರಟು ಹೋದಳು. ಹೀಗಿರುತ್ತಾ ತನಗೆ ಅತ್ತೆ ಮನೆಯ ಹೊರತು ಬೇರೆ ಮನೆ ಎಂಬುದೇ ಇಲ್ಲದಾಯಿತು...'

ಅನಾಮಿಕಳೊಂದಿಗೆ ಕಾಫಿ ಎಸ್ಟೇಟ್‌ನಲ್ಲಿ ಕೆಲಸ ಮಾಡುತ್ತಾ ಇದ್ದಾಗ ಅಭಿಲಾಷಾ ತನ್ನ ವೃತ್ತಾಂತವನ್ನು ಹೀಗೆ ಹೇಳುತ್ತಾ ಮೌನವಾಗಿದ್ದಳು.

'ಯಾಕೆ ಮೌನ? ಇಲ್ಲಿಗೆ ಹೇಗೆ ಬಂದೆ?' ಅನಾಮಿಕ ಪ್ರಶ್ನಿಸಿದಳು.

'ಗಂಡ ಇರುವವರೆಗೆ ನಾನು ಅತ್ತೆ ಮನೆಯಲ್ಲಿ ರಾಣಿಯಂತೆ ಇದ್ದೆ. ಗಂಡ ಮೊದಲೇ ಮುಂಗೋಪಿ. ಅಜಾನುಬಾಹು ದೇಹ. ಅವರು ಹೇಳಿದಂತೆಯೇ ಮನೆ ನಡೆಯುತ್ತಿತ್ತು. ದೂರದೂರಿಗೆ ಸಾಗುವ ಲಾರಿಯ ಚಾಲಕನಾದುದರಿಂದ ಮನೆಗೆ ಬರುವಾಗಲೆಲ್ಲಾ ಚೀಲ ತುಂಬಾ ಸಾಮಾನುಗಳನ್ನು ತರುತ್ತಿದ್ದರು. ಅವರು ಮನೆಯಲ್ಲಿದ್ದಾರೆಂದರೆ, ಅವರ ತಮ್ಮಂದಿರೆಲ್ಲಾ ಇಲಿಯಂತೆ ಗಪ್‌ಚುಪ್. ಆದರೆ ಯಾವಾಗ ಅವರು ಅಪಘಾತದಲ್ಲಿ ಮೃತಪಟ್ಟರೋ ಅತ್ತೆಯಿಂದ ಹಿಡಿದು ಮೈದುನವರೆಗೆ ಎಲ್ಲರದ್ದೂ ಬಗೆಬಗೆಯ ದೌರ್ಜನ್ಯ. ರಾಣಿಯಂತಿದ್ದ ನಾನು ಮನೆಯ ಆಳಿನಂತಾದೆ. ಈ ನಡುವೆ ಮೈದುನನಿಂದ ಲೈಂಗಿಕ ಶೋಷಣೆಯ ಅಪಾಯವೂ ಎದುರಾಯಿತು. ಇನ್ನು ಇಲ್ಲಿ ನಿಂತರಾಗದು ಎಂದು ತೀರ್ಮಾನಿಸಿದ ನಾನು ಒಂದು ದಿನ ನನ್ನೆಲ್ಲಾ ಬಟ್ಟೆ-ಬರೆಗಳನ್ನು ಕಟ್ಟಿಕೊಂಡು, ಮಗಳ ಕೈ ಹಿಡಿದು ಮನೆಯಿಂದ ಹೊರಟು ಬಿಟ್ಟೆ.

ಎಲ್ಲಿಗೆ ಎಂದು ಗೊತ್ತಿರಲಿಲ್ಲ.

ಊಟಕ್ಕೆ ಮತ್ತು ನಿದ್ದೆಗೆ ಏನು ವ್ಯವಸ್ಥೆ ಎಂದೂ ಯೋಚಿಸಿರಲಿಲ್ಲ. ಆ ಮನೆಯಿಂದ ಒಮ್ಮೆ ತಪ್ಪಿಸಿಕೊಳ್ಳುವುದಷ್ಟೇ ನನ್ನ ಗುರಿಯಾಗಿತ್ತು. ತಪ್ಪಿಸಿಕೊಂಡೆ. ಆದರೆ, ನಾನು ಒಂಟಿಯಲ್ಲ. ಮಗಳಿದ್ದಾಳೆ, ಏನು ಮಾಡುವುದು?

ನಗರದಲ್ಲಿ ನಿಂತು ದಿಕ್ಕಿಲ್ಲದೇ ನೋಡುತ್ತಿದ್ದ ನನ್ನಲ್ಲಿ ಧೈರ್ಯ ತುಂಬಿದ್ದು ಅಂಗಡಿ ಮಾಲಕರಾದ ಸುಶೀಲ್ ಭಯ್ಯಾ. ಅವರಿಗೆ ಹಡಗೂರಿನ ಈ ಕಾಫಿ ಎಸ್ಟೇಟ್‌ನಲ್ಲಿ ಕೆಲಸಕ್ಕಿದ್ದ ಸುಮತಿ ಅಕ್ಕನ ಪರಿಚಯ ಇತ್ತು. ಅವರು ನನ್ನನ್ನು ಇಲ್ಲಿಗೆ ಕಳುಹಿಸಿಕೊಟ್ಟರು..'

ತಾನು ನಡೆದು ಬಂದ ದಾರಿಯ ಕುರಿತು ಹೇಳಿ ಮುಗಿಸಿದ ಅಭಿಲಾಷಾ ದೀರ್ಘ ನಿಟ್ಟುಸಿರೊಂದನ್ನು ಬಿಟ್ಟಿದ್ದಳು. ಆಗ ಸಂಜೆಯಾಗಿತ್ತು. ಬಳಿಕ ಇಬ್ಬರೂ ಕಾಫಿ ತೋಟದಿಂದ ನೇರವಾಗಿ ಕೋಣೆ ಸೇರಿಕೊಂಡಿದ್ದೆವು...

# ಹದಿನಾಲ್ಕು

ಆ ಅರ್ಧರಾತ್ರಿ ಮಲಗಿದ್ದಲ್ಲಿಂದ ಎದ್ದು ಕುಳಿತಿದ್ದ ಅನಾಮಿಕಾಳಿಗೆ ಮಂದವಾಗಿ ಉರಿಯುತ್ತಿದ್ದ ಬೆಳಕಿನಲ್ಲಿ ಮೊದಲು ಕಂಡದ್ದೇ ಅಭಿಲಾಷಾ. ಆಕೆಯ ಮಗು ಪಕ್ಕ ಮಲಗಿಕೊಂಡಿದೆ. ಕೋಣೆ ತುಂಬಾ ನಿಶ್ಶಬ್ದ. ನೂರ್‌ನೊಂದಿಗೆ ಮೊದಲೇ ಚರ್ಚಿಸಿದಂತೆ ತಾನೀಗ ಬೇವಿನ ಮರದಡಿಗೆ ತಲುಪಬೇಕು. ಅಭಿಲಾಷಾಳಿಗೆ ತಾನು ಹೋಗುತ್ತಿರುವ ಬಗ್ಗೆ ಮಾಹಿತಿ ಕೊಡುತ್ತಿದ್ದರೆ ಚೆನ್ನಾಗಿತ್ತೇನೋ ಎಂದು ಅನಿಸಿತಾದರೂ, 'ಬೇಡ, ಅದು– ಹೇಗಾದರೂ ಗೊತ್ತಾಗುತ್ತೆ' ಎಂದುಕೊಂಡಳು. ಅದರಲ್ಲೂ ಪ್ರತಿದಿನ ಬೆಳಿಗ್ಗೆ ಬಂದು ಸಂಜೆ ಹೋಗುವ ಹಿರಿ ಜೀವ





ಸೇಸಮ್ಮಳಲ್ಲಿ ಮತ್ತು ಎಸ್ಟೇಟ್ ರೈಟರ್ ಮಂಜಣ್ಣನಲ್ಲಿ ಹೇಳಬಹುದಿತ್ತು ಎಂದು ಅನಿಸಿತಾಕೆಗೆ. ಶಂಕರ ಮತ್ತು ರೇವತಿ ನಡುವಿನ ಇಡೀ ಘಟನೆಯನ್ನು ಅತ್ಯಂತ ಸೊಗಸಾಗಿ ವಿವರಿಸಿದವಳು ಸೇಸಮ್ಮಳಾದರೆ ಎಸ್ಟೇಟ್ ಮಾಲಿಕ ವರದರಾಜನ ಬಾಲ್ಯದಿಂದ ಹಿಡಿದು ಆತನ ಮದುವೆ ರಾದ್ಧಾಂತ, ಆತನ ಅಪ್ಪನ ಸಂಕಟ, ಸಾವು ಇತ್ಯಾದಿ ಎಲ್ಲವನ್ನೂ ಅನಾಮಿಕಳೊಂದಿಗೆ ಹಂಚಿಕೊಂಡವನು ಮಂಜಣ್ಣ. ತಾನು ಯಾರನ್ನಾದರೂ ಮಿಸ್ ಮಾಡಿಕೊಳ್ಳುವುದಿದ್ದರೆ ಅದು ಈ ಇಬ್ಬರನ್ನು ಎಂದವಳು ಅಂದುಕೊಂಡಳು.

# ಹದಿನೈದು

**ಮೊ**ದಲೇ ಸಿದ್ಧಪಡಿಸಿಟ್ಟಿದ್ದ ಬ್ಯಾಗನ್ನು ಎತ್ತಿಕೊಂಡ ಅನಾಮಿಕ ಕೊನೆಯ ಬಾರಿಯೆಂಬಂತೆ ತನ್ನ ಸಂಗಾತಿಗಳನ್ನೆಲ್ಲ ಒಮ್ಮೆ ಉದ್ದಕ್ಕೂ ನೋಡಿದಳು. ಎಲ್ಲರೂ ತಂತಮ್ಮ ಪಾಡಿಗೆ ತಾವು ಮಲಗಿದ್ದಾರೆ. ಕೆಲವರ ಪಕ್ಕ ಮಕ್ಕಳೂ ಮಲಗಿವೆ. ಒಂದುವೇಳೆ ಕೊರೋನಾದ ಹಿನ್ನೆಲೆಯಲ್ಲಿ ಸಾರ್ವತ್ರಿಕ ಲಾಕ್‌ಡೌನ್ ಘೋಷಣೆ ಆಗದೇ ಇರುತ್ತಿದ್ದರೆ ಇವರಲ್ಲಿ ಕೆಲವರಾದರೂ ತಮ್ಮೂರಿನಲ್ಲಿ ಇರುತ್ತಿದ್ದರೋ ಏನೋ? ಲಾಕ್‌ಡೌನ್‌ಗಿಂತ ಮೊದಲು ಸುಮತಿ, ಅನುಷಾ, ವಸುಂದರಾ ಮುಂತಾದವರು ಊರಿಗೆ ಹೋಗುವ ಬಗ್ಗೆ ಅನಾಮಿಕಳೊಂದಿಗೆ ಹೇಳಿಕೊಂಡೂ ಇದ್ದರು. ಸುಮತಿ ಉತ್ತರ ಪ್ರದೇಶದವಳು. ಅನುಷಾ ಮತ್ತು ವಸುಂದರಾ ಪಶ್ಚಿಮ ಬಂಗಾಳದವರು. ಮೊದಲು ಈ ಕಾಫಿ ಎಸ್ಟೇಟ್‌ಗೆ ಬಂದಿದ್ದು





ವಸುಂದರಾ. ಆ ಬಳಿಕ ಆಕೆ ಅನುಷಾಳನ್ನು ಕರೆ ತಂದಿದ್ದಳು. ಮೊನ್ನೆ ಬ್ಯಾಗು ಸಿದ್ಧಪಡಿಸುತ್ತಿದ್ದಾಗ ಅನುಷಾ ಮಾಮೂಲಿಯೆಂಬಂತೆ ಕೇಳಿದ್ದಳು,

'ಅನಾಮಿಕಾ, ಏನು ಪರಾರಿಯಾಗುವ ಉದ್ದೇಶವೇ?'

'ಹೇ, ಹೋಗುವಾಗ ನಿನ್ನಲ್ಲಿ ಹೇಳದೇ ಹೋಗುತ್ತೇನಾ...' ಎಂದು ಅನಾಮಿಕ ಹೇಳಿದ್ದಳಾದರೂ, ಹೇಳುವುದೋ ಬೇಡವೋ ಎಂಬ ಅನುಮಾನವೊಂದು ಆ ಕ್ಷಣದಲ್ಲಿ ಆಕೆಯಲ್ಲಿ ಸುಳಿದು ಹೋಗಿತ್ತು.

'ಹೇಳಿದರೇನು, ಹೋಗುವುದಕ್ಕಿಂತ ಮೊದಲು ಹೇಳಿಯೇ ಹೋಗುವುದು. ಏನಾಗುತ್ತೆ' ಎಂಬ ಹುಂಬ ಧೈರ್ಯವೊಂದೂ ಅವಳಲ್ಲಿತ್ತು.

ಅನಾಮಿಕಾಳ ಸ್ವಭಾವವೇ ಅಂಥದ್ದು. ಚಿಕ್ಕಂದಿನಲ್ಲೇ ಆಕೆ ಹಠವಾದಿ. ಕೇಳಿದ್ದೇ ಬೇಕು, ಹೇಳಿದ್ದೇ ಆಗಬೇಕು. ಹತ್ತನೇ ತರಗತಿಯಲ್ಲಿ ತೇರ್ಗಡೆಯಾದ ಬಳಿಕ ಆಕೆಯನ್ನು ಕಾಲೇಜಿಗೆ ಕಳುಹಿಸುವುದಕ್ಕೆ ಅಪ್ಪ-ಅಮ್ಮ ತೀರ್ಮಾನಿಸಿದಾಗ ಬಿಹಾರದ ಕರ್ನೂರಿನ ಆ ಪುಟ್ಟ ಗ್ರಾಮವಾಸಿಗಳ ಕಣ್ಣು ನೆತ್ತಿಗೇರಿತ್ತು. ಆ ಊರಿನಲ್ಲಿ ಹತ್ತನೇ ತರಗತಿ ಪಾಸು ಮಾಡಿಕೊಂಡ ಬೆರಳೆಣಿಕೆಯ ಹುಡುಗಿಯರಲ್ಲಿ ಅನಾಮಿಕಳೂ ಒಬ್ಬಳು. ಆದರೆ, ಅದರಾಚೆಗೆ ಯಾವ ಹೆಣ್ಣು ಮಕ್ಕಳೂ ಆ ಗ್ರಾಮದಿಂದ ಮೇಲಿನ ತರಗತಿಗೆಂದು ಹೋದದ್ದಿಲ್ಲ. ಅದಕ್ಕೆ ಕಾಲೇಜು ಊರಲ್ಲಿಲ್ಲದಿರುವುದು ಒಂದು ಕಾರಣವಾದರೆ, ಹೆಣ್ಣು ಮಕ್ಕಳು ಕಾಲೇಜು ಪ್ರವೇಶಿಸಿದರೆ, ಪ್ರೀತಿ-ಪ್ರೇಮ ಎಂದು ಇಲ್ಲದ ರಗಳೆ ಸೃಷ್ಟಿಸುತ್ತಾರೆ ಅನ್ನುವುದು ಇನ್ನೊಂದು ಕಾರಣ.

ಅನಾಮಿಕ ಕಾಲೇಜಿಗೇನೋ ಸೇರಿಕೊಂಡಳು. ಆದರೆ, ಕಾಲೇಜು ದೂರದಲ್ಲಿರುವುದರಿಂದ ದಿನಾ ಮನೆಗೆ ಬಂದು ಹೋಗುವುದು ಸಾಧ್ಯವಿರಲಿಲ್ಲ. ವಾಹನ ಸೌಲಭ್ಯವೂ ಆಕೆಯ ಊರಿಗೆ ದುರ್ಲಭವಾದುದರಿಂದ ನಗರದ ಸರಕಾರಿ ವಸತಿ ನಿಲಯದಲ್ಲಿ ತಂಗಬೇಕಾದುದು ಅನಿವಾರ್ಯವಾಗಿತ್ತು. ಅನಾಮಿಕಾಳಿಗೆ ಮನೆ ಬಿಟ್ಟು ಒಂಟಿಯಾಗಿ ನಿಲ್ಲುವುದು ಸುತಾರಾಂ ಇಷ್ಟವಿರಲಿಲ್ಲ.

ಹಾಗಂತ,

ಕೂಲಿ ಕೆಲಸ ಮಾಡುವ ಅಮ್ಮ ಮತ್ತು ಅಪ್ಪನಿಗೆ ಮಗಳು ಓದಿ ದೊಡ್ಡ ಆಫೀಸರ್ ಆಗಬೇಕೆಂಬ ಆಸೆ. ಆದರೆ ವಸತಿ ನಿಲಯದ ವಾತಾವರಣಕ್ಕೆ ಒಗ್ಗಿಕೊಳ್ಳಲು ಅನಾಮಿಕಳಿಂದ ಸಾಧ್ಯವಾಗಲಿಲ್ಲ. ಕಾಲೇಜಿಗೆ ಹೋಗುವುದಕ್ಕಿಂತ ಹೆಚ್ಚು ವಸತಿ ನಿಲಯದಲ್ಲಿ ಉಳಿಯುವುದೇ ಹೆಚ್ಚಾಯಿತು. ಜ್ವರ, ನೆಗಡಿ, ಹೊಟ್ಟೆ ನೋವು, ತಲೆ ನೋವು, ಬೇಧಿ.. ಹೀಗೆ ಏನಾದರೊಂದು ಕಾಯಿಲೆ ಆಕೆಯನ್ನು ಪ್ರತಿದಿನ ಕಾಡುತ್ತಲೇ ಇತ್ತು. ಅಂತೂ ಇಂತೂ ಒಂದು ವರ್ಷವನ್ನು ಹೇಗೋ ಪೂರ್ತಿಗೊಳಿಸಿದಳು. ಈ ಒಂದು ವರ್ಷದಲ್ಲಿ ಅರ್ಧ ಭಾಗವನ್ನು ಆಕೆ ಕಳೆದುದೂ ವಸತಿ ನಿಲಯದಲ್ಲೇ.

ಕೊನೆಗೆ, ತನಗೆ ಕಾಲೇಜು ಬೇಡ ಎಂದು ನಿರ್ಧರಿಸಿದ ಆಕೆ ಅಪ್ಪ-ಅಮ್ಮನಲ್ಲಿ ಒಂದು ಮಾತೂ ಕೇಳದೆಯೇ ಬಟ್ಟೆ-ಬರೆಗಳನ್ನು ಕಟ್ಟಿಕೊಂಡು ಒಂದು ಮಧ್ಯಾಹ್ನ ದಿಢೀರನೆ ಮನೆ ಪ್ರವೇಶಿಸಿದಳು. ಅಪ್ಪ-ಅಮ್ಮ ಇಬ್ಬರೂ ಮನೆಯಲ್ಲಿರಲಿಲ್ಲ. ಸಂಜೆ ಬಂದು ನೋಡಿದರೆ ಅನಾಮಿಕ. ಅವರಿಗದು ಅಚ್ಚರಿ ತಂದಿತಾದರೂ ಅನಿರೀಕ್ಷಿತವಾಗಿ ಕಾಣಿಸಲಿಲ್ಲ. ಮಗಳ ಅನಾರೋಗ್ಯದ ಬಗ್ಗೆ ಅವರಿಗೆ ಅರಿವಿತ್ತು. ನಗರದ ಬದುಕು ಮಗಳಿಗೆ ಒಗ್ಗುತ್ತಿಲ್ಲ ಎಂದು ಅವರು ಅದಾಗಲೇ ಮಾತಾಡಿಕೊಂಡಿದ್ದರು.

ಹಾಗೆ ಬಂದ ಅನಾಮಿಕ ಮರುದಿನವೇ ಅಪ್ಪ-ಅಮ್ಮನ ಜೊತೆ ಕೂಲಿ ಕೆಲಸಕ್ಕೆ ತಯಾರಾಗಿ ನಿಂತಿದ್ದಳು.

ಮಗಳು ಹೇಳದೇ ಕೇಳದೇ ಕಾಲೇಜು ಬಿಟ್ಟು ಬಂದುದಕ್ಕಿಂತ ಅವರಿಗೆ ಹೆಚ್ಚು ಅಚ್ಚರಿ ತಂದುದು ಮಗಳ ಈ ನಡವಳಿಕೆ.

ಮಗಳು ತಮ್ಮಂತೆ ಕೂಲಿ ಕಾರ್ಮಿಕೆ ಆಗಬಾರದೆಂಬುದು ಅವರ ಬಯಕೆ. ಆದರೆ ಆಕೆ ಅದೇ ಆಗುವುದಕ್ಕೆ ಸಿದ್ಧವಾಗಿ ನಿಂತಿದ್ದಳು. ತಾವು ಹೇಳಿದರೆ ಕೇಳುವ ಜಾಯಮಾನ ಆಕೆಯದಲ್ಲ ಎಂಬುದು ಆ ಹೆತ್ತವರಿಗೆ ಗೊತ್ತು. ಬೇರೆ ದಾರಿಯಿಲ್ಲದೇ ಅವರು ಮಗಳನ್ನು ಜೊತೆ ಸೇರಿಸಿಕೊಂಡು ಕೂಲಿ ಕೆಲಸಕ್ಕೆ ಹೋಗತೊಡಗಿದರು. ಸಮಸ್ಯೆ ಎದುರಾದದ್ದೂ ಅಲ್ಲೇ. ಗಂಡುಡುಗರ ನಡುವೆ ಅನಾಮಿಕ ಕೆಲಸ ಮಾಡುವುದೆಂದರೆ ಅದು ಸದಾ ಅಪಾಯಕಾರಿ. ಕಣ್ಣಿಗೆ ಎಣ್ಣೆ ಬಿಟ್ಟು ಕಾಯಬೇಕಾದ ಪರಿಸ್ಥಿತಿ. ತುಸು ಎಚ್ಚರ ತಪ್ಪಿದರೂ ಆಕೆಯನ್ನು ಹುರಿದು ಮುಕ್ಕಲು ಗಂಡುಡುಗರು ಸಿದ್ಧವಿದ್ದಾರೆ ಎಂಬ ಭೀತಿ ಆ ಹೆತ್ತವರಲ್ಲಿ ಇದ್ದೇ ಇತ್ತು. ಆದರೆ ಅನಾಮಿಕ ಇವಾವುದನ್ನೂ ಗಂಭೀರವಾಗಿ ಪರಿಗಣಿಸಿದಂತೆ ಕಂಡೇ ಇರಲಿಲ್ಲ.

ಆಕೆ ಸಹಜವಾಗಿಯೇ ಇರುತ್ತಿದ್ದಳು.

ಕ್ಯಾರೇ ಅನ್ನದ ಆಕೆಯ ಸ್ವಭಾವವೂ ಇದಕ್ಕೆ ಒಂದು ಕಾರಣ ಇದ್ದಿರಬಹುದು. ಗಂಡುಡುಗರು ಏನಾದರೂ ಕಿಚಾಯಿಸಲು ಬಂದರೆ ಮುಖಕ್ಕೆ ರಾಚುವಂತೆ ಉತ್ತರಿಸುತ್ತಿದ್ದಳು. ಆಕೆಯಲ್ಲಿ ಒಮ್ಮೆ ಮಾತಾಡಿದ ಯಾವುದೇ ಯುವಕ ಮತ್ತೊಮ್ಮೆ ಮಾತಾಡುವ ಮೊದಲು ನೂರುಬಾರಿ ಯೋಚಿಸುತ್ತಿದ್ದ. ಅಷ್ಟು ತೀಕ್ಷ್ಣ, ಅಷ್ಟು ಎದೆಗಾರಿಕೆಯ ಮಾತು ಆಕೆಯದು.

ಏನಿದ್ದರೂ ಮಗಳನ್ನು ಹೀಗೆಯೇ ಕೂಲಿ ಕೆಲಸಕ್ಕೆ ಕರೆದುಕೊಂಡು ಹೋಗುವುದು ಸೆರಗಿನಲ್ಲಿ ಕೆಂಡ ಇಟ್ಟುಕೊಂಡಂತೆ ಎಂದು ಅನಾಮಿಕಳ ಅಪ್ಪ-ಅಮ್ಮ ಅಂದುಕೊಂಡರು. ಓರ್ವ ಯುವಕನನ್ನು ಹುಡುಕಿ ತಾಳಿ ಕಟ್ಟಿಸಿಬಿಟ್ಟರೆ ಜವಾಬ್ದಾರಿ ಮುಗಿಯುತ್ತದೆ ಎಂದು ತೀರ್ಮಾನಿಸಿದರು.

ಹೀಗೇ ಒಂದು ದಿನ ಅನಾಮಿಕ ಮತ್ತು ಅವಿನಾಶ್‌ರ ನಡುವೆ ಮದುವೆ





ನಡೆಯಿತು. ಆತನೂ ಕೂಲಿ ಕಾರ್ಮಿಕ.

ಮೊದ ಮೊದಲು ಸಂಸಾರವೇನೋ ಚೆನ್ನಾಗಿಯೇ ಸಾಗಿತ್ತು. ಅವಿನಾಶ್‌ನಲ್ಲಿ ಕುಡಿತದ ಸ್ವಭಾವವನ್ನು ಬಿಟ್ಟರೆ ಉಳಿದಂತೆ ಬೇರೆ ಕೆಟ್ಟ ಚಟಗಳೇನೂ ಇರಲಿಲ್ಲ. ಅನಾಮಿಕಳನ್ನು ತಕ್ಕ ಮಟ್ಟಿಗೆ ಚೆನ್ನಾಗಿಯೇ ನೋಡಿಕೊಂಡಿದ್ದ. ಅವರ ಪ್ರೀತಿಯ ಕುರುಹಾಗಿ ಕುಟುಂಬದಲ್ಲಿ ಗಂಡು ಮಗುವಿನ ಪ್ರವೇಶವೂ ಆಯಿತು. ಮದುವೆಯ ಆರಂಭದಲ್ಲಿ ಆತನ ಜೊತೆ ಕೆಲಸಕ್ಕೆ ಹೋಗುತ್ತಿದ್ದ ಅನಾಮಿಕ ಗರ್ಭ ಧರಿಸಿದ ಬಳಿಕ ಕೆಲಸಕ್ಕೆ ಹೋಗುವುದನ್ನು ನಿಲ್ಲಿಸಿದಳು.

ಪ್ರಸವದ ಬಳಿಕವೂ ಇದು ಮುಂದುವರಿಯಿತು.

ಅವಿನಾಶ್ ಸಂಪಾದಿಸುತ್ತಿದ್ದ ಹಣ ಮನೆ ಖರ್ಚು-ಕುಡಿತಕ್ಕೆ ಸಾಲದಾಯಿತು. ಮನೆಯಲ್ಲಿ ಜಗಳ-ಬೈಗುಳ ಶುರುವಾಯಿತು. ಅವಿನಾಶ್ ಹಣದ ಚಿಂತೆಯಲ್ಲಿ ಹಿಂದಿಗಿಂತ ಹೆಚ್ಚೇ ಕುಡಿಯತೊಡಗಿದ. ಅನಾಮಿಕ ವಿರೋಧಿಸತೊಡಗಿದಳು. ಮಾತಿಗೆ ಮಾತು ಬೆಳೆಯತೊಡಗಿತು. ಅನಾಮಿಕಳೇನೂ ಬಿಟ್ಟುಕೊಡುವವಳಲ್ಲ. ಒಂದು ದಿನ ರಾತ್ರಿ ಜಗಳ ತಾರಕಕ್ಕೇರಿತು. ಅವಿನಾಶ್ ಕಂಠಪೂರ್ತಿ ಕುಡಿದಿದ್ದ. ಅನಾಮಿಕ ಆತನನ್ನು ತರಾಟೆಗೆ ತೆಗೆದುಕೊಂಡಳು. ಆತ ಉಟ್ಟ ಬಟ್ಟೆಯಲ್ಲೇ ಚಪ್ಪಲಿಯನ್ನೂ ಧರಿಸದೇ ಎದ್ದು ಹೊರಟು ಹೋಗಿದ್ದ. ಮರುದಿನ ಆತನ ಶವ ಊರ ಹೊರಗಿನ ಕೆರೆಯಲ್ಲಿ ಪತ್ತೆಯಾಗಿತ್ತು.

ಅಂದಿಗೇ ಕೊನೆ. ಇನ್ನು ನಾನು ಮದುವೆಯಾಗಲಾರೆ ಎಂದು ಅನಾಮಿಕ ನಿರ್ಧರಿಸಿದ್ದಳು.

ಆಕೆ ಅಳಲಿಲ್ಲ. ಕೆರೆಯಿಂದ ಗಂಡನ ಶವ ಎತ್ತುವಾಗ ಆಕೆ ಎಷ್ಟು ನಿರ್ಭಾವುಕಳಾಗಿದ್ದಳೆಂದರೆ, ಅವಿನಾಶ್‌ನ ಪತ್ನಿ ಈಕೆಯೇನೋ ಎಂದು ಶಂಕಿಸುವ ರೀತಿಯಲ್ಲಿತ್ತು. ಶವ ಸಂಸ್ಕಾರದ ಇಡೀ ಪ್ರಕ್ರಿಯೆಯಲ್ಲಿ ಆಕೆ ಓರ್ವ ಅಪರಿಚಿತ ಮಹಿಳೆಯಂತೆ ನಡೆದುಕೊಂಡಿದ್ದಳು. ಅವಳ ಅಪ್ಪ-ಅಮ್ಮ ಕಣ್ಣಲ್ಲಿ ನೀರು ತಂದುಕೊಂಡಾಗಲೂ ಆಕೆಯಿಂದ ಕಣ್ಣೀರ ಒಂದು ಹನಿಯೂ ಉದುರಿರಲಿಲ್ಲ. ಶವಸಂಸ್ಕಾರ ಮುಗಿದೊಡನೆ ಮಗನನ್ನು ಎತ್ತಿಕೊಂಡು ನೇರವಾಗಿ ತಾಯಿ ಮನೆಗೆ ತೆರಳಿದ್ದಳು.

ಎರಡು ವರ್ಷಗಳು ಉರುಳಿದವು.

ಅನಾಮಿಕ ಮನೆಯಲ್ಲೇ ಉಳಿದಿದ್ದಳು. ಅಪ್ಪ-ಅಮ್ಮನ ಜೊತೆ ಕೆಲಸಕ್ಕೆ ಹೋಗುವಂತೆ ಮನಸ್ಸು ಒತ್ತಾಯಿಸುತ್ತಿದ್ದರೂ ಮಗ ಸಣ್ಣವ ಅನ್ನುವುದು ಕೆಲಸಕ್ಕೆ ಹೋಗದಂತೆ ತಡೆಯುತ್ತಿತ್ತು. ಅಲ್ಲದೇ ಅಪ್ಪ-ಅಮ್ಮ ಕೂಡ ಇದೇ ಸಲಹೆಯನ್ನು ಕೊಟ್ಟಿದ್ದರು. ಅಪ್ಪ-ಅಮ್ಮನಿಗೆ ವಾರದಲ್ಲಿ ಸಿಗುತ್ತಿದ್ದುದು ಎರಡೋ ಮೂರೋ ದಿನಗಳ ಕೆಲಸ. ಆದ್ದರಿಂದ ತಾನೂ ಅವರ ಜೊತೆ ಸೇರಿಕೊಂಡರೆ ಕುಟುಂಬ ನಡೆಸುವುದು

ಸುಲಭ ಎಂಬುದು ಆಕೆಯ ಅಭಿಪ್ರಾಯ. ಅಲ್ಲದೇ ಮಗು ಕೆಲಸಕ್ಕೆ ತಡೆ ಅಲ್ಲ ಅನ್ನುವುದಕ್ಕೆ ಬೇಕಾದಷ್ಟು ಉದಾಹರಣೆಗಳೂ ಇದ್ದುವು. ಅನಾಮಿಕಳ ಪ್ರಾಯದ ಅನೇಕ ತಾಯಂದಿರು ತಮ್ಮ ಮಕ್ಕಳನ್ನು ಬದಿಯಲ್ಲಿ ಮಲಗಿಸಿ ಕೆಲಸ ಮಾಡುತ್ತಿದ್ದರು. ಇದು ಅಪ್ಪ-ಅಮ್ಮನಿಗೂ ಗೊತ್ತಿತ್ತು. ಆದರೂ, ಅನಾಮಿಕ ದುಡಿಯುವುದನ್ನು ಅವರು ಇಷ್ಟಪಟ್ಟಿರಲಿಲ್ಲ.

ನೀನು ಮನೆಯಲ್ಲಿ ಮಗುವನ್ನು ನೋಡಿಕೊಂಡಿರು. ಅಗತ್ಯ ಬಿದ್ದಾಗ ನಾವೇ ನಿನ್ನನ್ನು ಕೆಲಸಕ್ಕೆ ಸೇರಿಸಿಕೊಳ್ಳುತ್ತೇವೆ ಎಂದು ಹೇಳಿ ಅನಾಮಿಕಳ ದುಡಿಯುವ ಉತ್ಸಾಹಕ್ಕೆ ಅವರು ತಣ್ಣೀರೆರಚುತ್ತಿದ್ದರು.

ಹೀಗಿರುತ್ತಾ ಒಂದು ದಿನ ರಾತ್ರಿ ನಿರ್ಧಾರದ ದನಿಯಲ್ಲಿ ಅನಾಮಿಕ ಹೇಳಿದ್ದಳು–

'ಅಮ್ಮ ನಾನು ಹೋಗುತ್ತೇನೆ.'

'ಎಲ್ಲಿಗೆ?' ಅಮ್ಮನಲ್ಲಿ ಅಚ್ಚರಿ.

'ಎಲ್ಲಿಗಾದರೂ ಹೋಗಬೇಕು. ಈ ಬದುಕು ಸಾಕಾಗಿದೆ'– ಆಕೆಯ ಮಾತಿನಲ್ಲಿ ವಿಶ್ವಾಸ ತುಂಬಿ ತುಳುಕುತ್ತಿತ್ತು.

'ಎಲ್ಲಿಗಾದರೂ ಎಂದರೆ? ಯಾಕೆ ಹುಚ್ಚುಚ್ಚಾಗಿ ಮಾತಾಡುತ್ತಿ? ಮಗು ಇದೆ. ಎಲ್ಲಿಗೇಂತ ಹೋಗುತ್ತೀ? ಇಲ್ಲಿ ಏನಾಗಿದೆ?'– ಅಮ್ಮ ಗಲಿಬಿಲಿಯಿಂದ ಏನೇನೋ ಪ್ರಶ್ನೆಗಳನ್ನು ಕೇಳುತ್ತಾ ಹೋದಳು.

'ಹೀಗೆ ಎಷ್ಟು ಸಮಯಾಂತ ಬದುಕುವುದು? ಜೀವನದಲ್ಲಿ ಏನಾದರೂ ಸಾಧಿಸಬೇಕಮ್ಮ. ಕನಿಷ್ಠ ದುಡ್ಡನ್ನಾದರೂ ಮಾಡಬೇಕು...'

'ಮತ್ತೆ ಮಗುವನ್ನು ಏನು ಮಾಡುತ್ತೀ?'

'ನೀನು ನೋಡಬೇಕಮ್ಮಾ.'

'ಏನು ಮಾತಾಡುತ್ತಿದ್ದೀ ನೀನು? ಮಗುವನ್ನು ಬಿಟ್ಟು ಹೋಗುತ್ತಿದ್ದೀಯಾ?'

'ಹೌದಮ್ಮಾ, ಇವನನ್ನು ಓದಿಸಬೇಕೆಂದರೆ ಹಣ ಬೇಕು. ಇಲ್ಲದಿದ್ದರೆ ಸಾಯುವ ತನಕ ದುಡಿದರೂ ಏನನ್ನೂ ಮಾಡಲಾಗದು. ನಾನು ದುಡಿದು ಹಣ ತರುತ್ತೇನೆ. ಮಗನನ್ನು ಓದಿಸುತ್ತೇನೆ. ನಿಮ್ಮನ್ನೂ ಚೆನ್ನಾಗಿ ನೋಡಿಕೊಳ್ಳುತ್ತೇನೆ. ಬೇಡ ಅನ್ನಬೇಡಿ.'

ಏನೋ ಪ್ರಶ್ನಿಸಬೇಕೆಂದು ಅಮ್ಮ ಬಾಯಿ ತೆರೆದರೂ ಮಗಳ ಖಚಿತ ದನಿಗೆ ಸೋತು ಸುಮ್ಮನಾಗಿದ್ದರು.

ಹಾಗೇ,

ಮಗ ಏಳುವುದಕ್ಕಿಂತ ಮೊದಲೇ ಬೆಳ್ಳಂಬೆಳಗ್ಗೆ ಅನಾಮಿಕ ಮನೆ ಬಿಟ್ಟಿದ್ದಳು. ಊರೂರು ಸುತ್ತಿದಳು. ಕೆಲಸಕ್ಕೆ ಸೇರಿದಳು. ಕೆಲಸ ಬಿಟ್ಟಳು. ಅಂತಿಮವಾಗಿ ಹಡಗೂರಿನ ಈ ಕಾಫಿ ಎಸ್ಟೇಟ್ ಸೇರಿಕೊಂಡಳು.





# ಹದಿನಾರು

**ಬ್ಯಾ**ಗನ್ನು ಎತ್ತಿಕೊಂಡ ಅನಾಮಿಕ ತಡಮಾಡದೆ ಆ ಕೋಣೆಯಿಂದ ಹೊರಟಳು.

ರಾತ್ರಿ ಒಂದು ಗಂಟೆಯ ಸಮಯಕ್ಕೆ ಬೇವಿನ ಮರದ ಅಡಿಯಲ್ಲಿ ಸೇರುವುದೆಂದು ಈ ಮೊದಲೇ ನೂರ್‌ನ ಜೊತೆ ಸೇರಿ ಆಕೆ ನಿರ್ಧರಿಸಿದ್ದಳು. ನೂರ್ ಕಾಯುತ್ತಿರಬಹುದು ಎಂದಾಕೆಗೆ ಅನಿಸಿತು.

ಆತ ಪಶ್ಚಿಮ ಬಂಗಾಲದವ. ಪೂರ್ಣ ಹೆಸರು ನೂರುಲ್ ಇಸ್ಲಾಮ್. ಮೂರು ವರ್ಷಗಳ ಹಿಂದೆ ಕೆಲಸಕ್ಕೆಂದು ಆತ ಈ ಕಾಫಿ ಎಸ್ಟೇಟ್ ಸೇರಿಕೊಂಡಿದ್ದ. ಪತ್ನಿ-ಮಕ್ಕಳ ಮುಖವನ್ನು

ನೋಡಲಾಗದೇ ಆತ ಕೆಲಸ ಹುಡುಕಿಕೊಂಡು ಇಲ್ಲಿಗೆ ಬಂದಿದ್ದ. ಆತನ ತಂದೆ ಓರ್ವ ಧರ್ಮಗುರು. ಮಸೀದಿಯಲ್ಲಿ ನಮಾಝ್ ಮಾಡುವುದು, ಬಾಂಗ್ ಕೊಡುವುದು, ಮದ್ರಸದಲ್ಲಿ ಮಕ್ಕಳಿಗೆ ಅರಬಿ ಕಲಿಸುವುದು– ಹೀಗೆ ಎಲ್ಲವನ್ನೂ ಅವರೊಬ್ಬರೇ ಮಾಡುತ್ತಿದ್ದರು. ಆದರೆ ಅವರಿಗೆ ಸಿಗುತ್ತಿದ್ದುದು ಸಣ್ಣ ವೇತನ. ಅದರಲ್ಲಿ ತುಂಬು ಕುಟುಂಬವನ್ನು ಸಾಗಿಸುವುದಕ್ಕೆ ಅವರು ಪಡುತ್ತಿದ್ದ ಕಷ್ಟ ಹೇಳತೀರದ್ದು.

ಐವರು ಸಹೋದರರ ಪೈಕಿ ಹೆಚ್ಚು ಕಲಿತವನೆಂದರೆ ಇದೇ ನೂರ್. ಆತ ಕಲಿಕೆಯಲ್ಲಿ ಜಾಣ. ಉತ್ತಮ ಅಂಕದೊಂದಿಗೆ ಪದವಿ ಶಿಕ್ಷಣವನ್ನು ಪೂರೈಸಿ, ಸ್ನಾತಕೋತ್ತರ ಪದವಿಯನ್ನೂ ಪಡೆದಿದ್ದ. ಅಲ್ಲದೇ ಮೂರು ವರ್ಷಗಳ ಕಾಲ ಅತಿಥಿ ಉಪನ್ಯಾಸಕನಾಗಿ ಸೇವೆಯನ್ನೂ ಸಲ್ಲಿಸಿದ್ದ. ಈತನಿಗೆ ಇತಿಹಾಸ ಪಾಠ ಅಚ್ಚುಮೆಚ್ಚು. ಮೂರು ವರ್ಷಗಳ ಕಾಲ ಆತ ಕಲಿಸಿದ್ದೂ ಇತಿಹಾಸ ವಿಷಯವನ್ನು. ವಿವಿಧ ಸಾಧಕರ ಜೀವನಗಾಥೆಯನ್ನು ಓದುವುದು ನೂರ್‌ಗೆ ಬಹಳ ಇಷ್ಟದ ವಿಷಯವಾಗಿತ್ತು. ವೇತನ ಕಡಿಮೆಯಾಗಿದ್ದರೂ ಇತಿಹಾಸ ಪಾಠದ ಮೇಲಿನ ಹುಚ್ಚಿನಿಂದಾಗಿ ಉಪನ್ಯಾಸಕನಾಗಿ ಮುಂದುವರಿದಿದ್ದ ಆತನನ್ನು ಆತನದ್ದೇ ಸಹೋದ್ಯೋಗಿಗಳು ಪಿತೂರಿ ನಡೆಸಿ ಕಾಲೇಜಿನಿಂದ ಹೊರ ಹಾಕಿದ್ದರು. ವಿದ್ಯಾರ್ಥಿಗಳ ನಡುವೆ ಈತನ ಜನಪ್ರಿಯತೆ ದಿನೇ ದಿನೇ ಹೆಚ್ಚಾಗುತ್ತಿದ್ದುದನ್ನು ಕಂಡು ಕರುಬಿ ಸಹೋದ್ಯೋಗಿಗಳು ಈ ದ್ರೋಹ ಎಸಗಿದ್ದರು. ಆ ಬಳಿಕ ಒಂದೆರಡು ಕಾಲೇಜುಗಳಲ್ಲಿ ಉಪನ್ಯಾಸಕ ಹುದ್ದೆ ಸಿಕ್ಕರೂ ಅವರು ಕೊಡುತ್ತಿದ್ದ ಜುಜುಬಿ ಸಂಬಳದಿಂದ ಮನೆ ನಿರ್ವಹಣೆ ಅಸಾಧ್ಯ ಅನ್ನುವ ಸ್ಥಿತಿಗೆ ತಲುಪಿತ್ತು. ಕೊನೆಗೆ, ಒಂದು ದಿನ ತನ್ನ ಸರ್ಟಿಫಿಕೇಟ್‌ಗಳನ್ನೆಲ್ಲ ಚೀಲಕ್ಕೆ ತುಂಬಿ ಮಂಡಲ್‌ಗೆ ಕರೆ ಮಾಡಿ ಹೊರಟು ಬಂದಿದ್ದ. ಮಂಡಲ್ ಬಾಲ್ಯದ ಗೆಳೆಯ. ಈ ಕಾಫಿ ಎಸ್ಟೇಟ್‌ಗೆ ಬಂದು ನಾಲ್ಕೋ ಐದೋ ವರ್ಷಗಳಾಗಿತ್ತು. ಹಾಗೇ ನೂರ್ ಈ ಕಾಫಿ ಎಸ್ಟೇಟ್ ಸೇರಿಕೊಂಡಿದ್ದ.

ತಮಾಷೆ ಏನೆಂದರೆ,

ಈತನನ್ನು ಮಸೀದಿಯ ಧರ್ಮಗುರುವನ್ನಾಗಿ ಮಾಡಬೇಕು ಎಂದು ತಂದೆ ಬಯಸಿದ್ದರಂತೆ. ಅದರಂತೆ ಇತರೆಲ್ಲ ಮಕ್ಕಳಿಗಿಂತ ಹೆಚ್ಚು ಧಾರ್ಮಿಕ ವಿದ್ಯಾಭ್ಯಾಸವನ್ನೂ ಈತನಿಗೆ ಅವರು ನೀಡಿದ್ದರಂತೆ...

ಇವೆಲ್ಲವನ್ನೂ ಅನಾಮಿಕಳೊಂದಿಗೆ ಒಂದು ದಿನ ನೂರ್ ಹಂಚಿಕೊಂಡಿದ್ದ.

ಆದರೆ, ಈತ ತುಳಿದದ್ದೇ ಬೇರೆ ಹಾದಿ.

ಅನಾಮಿಕಳಿಗೆ ನೂರ್‌ನ ಸರಿಯಾದ ಪರಿಚಯವಾದದ್ದೇ ಕೊರೋನಾ ಲಾಕ್‌ಡೌನ್‌ನ ಸಮಯದಲ್ಲಿ. 28 ಮಂದಿ ಮಹಿಳಾ ಕೂಲಿ ಕಾರ್ಮಿಕರು ಮತ್ತು 53 ರಷ್ಟು ಪುರುಷ ಕೂಲಿ ಕಾರ್ಮಿಕರು ಈ ಕಾಫಿ ಎಸ್ಟೇಟ್‌ನಲ್ಲಿ ಇದ್ದರೂ ಪುರುಷರು ಮತ್ತು





ಮಹಿಳೆಯರು ಬೆರೆಯುತ್ತಿದ್ದುದು ಕಡಿಮೆ. ಕೆಲಸದ ಸಮಯದಲ್ಲಿ ಮಾತುಕತೆ ನಡೆಯುತ್ತಿತ್ತಾದರೂ ಅದು ಕೆಲಸದ ಉದ್ದೇಶದಿಂದಷ್ಟೇ ನಡೆಯುತ್ತಿದ್ದ ಮಾತುಕತೆಗಳಾಗಿರುತ್ತಿದ್ದುವು. ದಂಪತಿಗಳಾಗಿರುವ ಕೂಲಿ ಕಾರ್ಮಿಕರು ಪರಸ್ಪರ ಜೊತೆಯಾಗಿ ಉಣ್ಣುವುದು, ಮಲಗುವುದು, ಬೆರೆಯುವುದನ್ನು ಬಿಟ್ಟರೆ, ಉಳಿದಂತೆ ಇಂಥ ಯಾವ ಸಂಬಂಧವೂ ಇಲ್ಲದ ಗಂಡು ಮತ್ತು ಹೆಣ್ಣು ಕೂಲಿ ಕಾರ್ಮಿಕರು ಜೊತೆಯಾಗಿರುತ್ತಿದ್ದುದು ಕಡಿಮೆ. ಮಹಿಳಾ ಕಾರ್ಮಿಕರಿಗೆ ವಿಶ್ರಾಂತಿ ಪಡೆಯಲು ಮತ್ತು ನಿದ್ರಿಸಲು ಬೇರೆಯದೇ ಬಿಡಾರ ಇದ್ದರೆ ಪುರುಷರಿಗೆ ಬೇರೆಯದೇ ಆದ ಬಿಡಾರವಿತ್ತು. ಹಾಗಿದ್ದರೂ ಇವೆರಡೂ ಇದ್ದುದು ಕೂಗಳತೆಯ ದೂರದಲ್ಲೇ. ಪುರುಷರ ಕೆಲಸದ ಜಾಗ ದೂರವಿದ್ದರೆ ಮಹಿಳೆಯರದು ಹತ್ತಿರ. ಆದರೆ ಕೊರೋನಾ ಲಾಕ್‌ಡೌನ್ ಈ ಅಂತರವನ್ನು ಸಂಪೂರ್ಣ ಕಿತ್ತು ಹಾಕಿತ್ತು.

ಇದಕ್ಕೆ ಎರಡು ಕಾರಣಗಳಿದ್ದುವು.

ಒಂದು– ಲಾಕ್‌ಡೌನ್‌ನಿಂದಾಗಿ ಕಾಫಿ ತೋಟಕ್ಕೆ ಬೇಕಾದ ಗೊಬ್ಬರ ಇತ್ಯಾದಿಗಳು ಅಲಭ್ಯವಾದುದು.

ಎರಡು– ಲಾಕ್‌ಡೌನ್‌ನಿಂದಾಗಿ ತನ್ನ ಕಾರ್ಮಿಕರು ತಮ್ಮೂರಿಗೆ ಹೋಗದಂತೆ ತಡೆಯಬೇಕೆಂದು ಮಾಲಿಕ ವರದರಾಜ ತೀರ್ಮಾನಿಸಿದ್ದು.

ಕೊರೋನಾ ಕಾರಣದಿಂದ ದೇಶಾದ್ಯಾಂತ ದಿಢೀರ್ ಲಾಕ್‌ಡೌನ್ ಘೋಷಿಸಿದುದರಿಂದ ಕಾಫಿ ಎಸ್ಟೇಟ್‌ನ ಚಟುವಟಿಕೆಗಳೆಲ್ಲವೂ ಜರ್ರನೇ ಇಳಿದು ಬಿಟ್ಟಿತ್ತು. ಜನರು ಇದ್ದಲ್ಲೇ ಇರಬೇಕು. ಮನೆಯಿಂದ ಹೊರಬರಬಾರದು. ಅಗತ್ಯ ವಸ್ತುಗಳನ್ನು ಖರೀದಿಸುವುದಕ್ಕಾಗಿ ಮಾತ್ರ ಲಾಕ್‌ಡೌನ್‌ನಲ್ಲಿ ತುಸು ಸಡಿಲಿಕೆ.

ರಸ್ತೆಗೆ ರಸ್ತೆಯೇ ಖಾಲಿ ಖಾಲಿ.

ಅಂಗಡಿ, ಹೊಟೇಲು, ಮಾಲ್, ಜಿಮ್, ಬಾರ್, ಮಸೀದಿ, ಮಂದಿರ, ಚರ್ಚ್, ಗುರುದ್ವಾರ, ಸರಕಾರಿ ಕಚೇರಿಗಳು, ಅಂಚೆ ಸೇವೆ, ದಂತ ಚಿಕಿತ್ಸಾಲಯಗಳು ಎಲ್ಲವೂ ಮುಚ್ಚಿಕೊಂಡವು. ಹೊರಗಡೆ ವ್ಯಾಯಾಮ ಇಲ್ಲ. ವಾಕಿಂಗ್ ಇಲ್ಲ. ಒಂದು ರೀತಿಯ ಕರ್ಫ್ಯೂ ಸ್ಥಿತಿ ದೇಶಾದ್ಯಾಂತ ನಿರ್ಮಾಣವಾಯಿತು. ರಸ್ತೆ ತುಂಬಾ ಪೊಲೀಸರು, ಬ್ಯಾರಿಕೇಡ್‌ಗಳು. ತುರ್ತು ಆರೋಗ್ಯ ಕಾರಣದಿಂದಾಗಿ ಹೋಗುವುದಾದರೆ, ಸಕಾರಣಗಳನ್ನು ಪೊಲೀಸರಿಗೆ ತೋರಿಸಿ ಹೋಗಬೇಕು. ಪತ್ರಕರ್ತರಿಗೂ ಪಾಸ್. ಸೇವಾ ಚಟುವಟಿಕೆಯಲ್ಲಿ ನಿರತರಾದವರಿಗೂ ಪಾಸ್. ಎಲ್ಲೆಡೆ ಮುಖಕ್ಕೆ ಮಾಸ್ಕ್ ಧರಿಸಿದವರು. ಪತ್ರಿಕೆಗಳು ತಮ್ಮ ಪುಟಗಳನ್ನೇ ತಗ್ಗಿಸಿಕೊಂಡವು. ಕೆಲವು ಪ್ರಕಟಣೆಯನ್ನೇ ನಿಲ್ಲಿಸಿದುವು. ಪತ್ರಿಕೆ ಪ್ರಕಟಿಸಿದರೂ ಖರೀದಿಸಲು ಜನರಿಲ್ಲ ಮತ್ತು ಅದನ್ನು ಜನರಿಗೆ ತಲುಪಿಸುವುದಕ್ಕೆ ವ್ಯವಸ್ಥೆಯೂ ಇಲ್ಲ. ಎಲ್ಲೆಡೆ ಸ್ಯಾನಿಟೈಸರ್ ಬಾಟ್ಲಿಗಳು.

ಸಾಮಾಜಿಕ ಜಾಲತಾಣ ತುಂಬಾ ಕೊರೋನಾ ಸಾವಿನ ಸುದ್ದಿಗಳು.

ಮುನ್ನೆಚ್ಚರಿಕೆ ಕೈಗೊಳ್ಳುವಂತೆ ಪದೇ ಪದೇ ಟಿವಿ, ಮೊಬೈಲ್‌ನಲ್ಲಿ ಮಾಹಿತಿಗಳು. ಮೊಬೈಲ್ ಫೋನ್‌ನಲ್ಲಿ ಕರೆ ಮಾಡುವುದಕ್ಕಿಂತ ಮೊದಲು ಕೊರೋನಾ ಕುರಿತು ಏನೆಲ್ಲ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಧ್ವನಿಯನ್ನು ಕಡ್ಡಾಯವಾಗಿ ಆಲಿಸಲೇಬೇಕಿತ್ತು. ಸರಕಾರದ ವತಿಯಿಂದ ಇಂಥದ್ದೊಂದು ಜಾಹೀರಾತನ್ನು ನೀಡಲಾಗಿತ್ತು. ಸಣ್ಣ ಪುಟ್ಟ ಜ್ವರಕ್ಕೂ ಭಯಪಡಬೇಕಾದ ಸ್ಥಿತಿ. ಕ್ಲಿನಿಕ್‌ಗಳಲ್ಲಿ ವೈದ್ಯರು ಜ್ವರಕ್ಕೆ ಮದ್ದು ಕೊಡುವಂತಿಲ್ಲ. ಮೆಡಿಕಲ್‌ಗಳಲ್ಲಿ ಜ್ವರಕ್ಕೆ ಸಂಬಂಧಿಸಿ ಔಷಧಿ ನೀಡುವಂತಿಲ್ಲ. ಜ್ವರದ ಲಕ್ಷಣ ಇದ್ದವರು ತಕ್ಷಣ ನಿರ್ದಿಷ್ಟ ಸಂಖ್ಯೆಗೆ ಕರೆ ಮಾಡಬೇಕು. ತಕ್ಷಣ ಸರಕಾರಿ ಆರೋಗ್ಯ ಕಾರ್ಯಕರ್ತೆಯರು ವಾಹನದಲ್ಲಿ ಬಂದು ಅಂಥವರನ್ನು ಎತ್ತಿಕೊಂಡು ಹೋಗುತ್ತಾರೆ. ಗಂಟಲ ದ್ರವ ಮಾದರಿಯನ್ನು ಪರೀಶೀಲನೆಗೆ ಕಳುಹಿಸಿಕೊಡುತ್ತಾರೆ.

ಫಲಿತಾಂಶ ಬರುವವರೆಗೆ ಆಸ್ಪತ್ರೆಯಲ್ಲೇ ಇರಬೇಕು.

ಜ್ವರ, ತಲೆನೋವು, ಕೆಮ್ಮು, ಗಂಟಲು ಕೊರೆತ, ಶೀತ, ಭೇದಿ ಇತ್ಯಾದಿ ಲಕ್ಷಣಗಳನ್ನು ಕೊರೋನಾ ಲಕ್ಷಣಗಳು ಎಂದು ಪರಿಗಣಿಸಿ ಸರಕಾರ ಆ ಬಗ್ಗೆ ಎಚ್ಚರಿಕೆ ನೀಡಲುತ್ತಲೇ ಇತ್ತು. ಹೀಗಿರುವಾಗ ಯಾವ ಚಟುವಟಿಕೆಗಳೂ ನಡೆಯುವಂತಿಲ್ಲ. ಹಡಗೂರಿನ ಕಾಫಿ ಎಸ್ಟೇಟ್‌ನದ್ದೂ ಇದೇ ಸ್ಥಿತಿ.

ಕಾಫಿ ಬೀಜವನ್ನು ಸಾಗಿಸಬೇಕೆಂದರೆ ವಾಹನ ಸಂಚಾರಕ್ಕೆ ಅವಕಾಶ ಇರಬೇಕು. ಕಾಫಿ ತೋಟಕ್ಕೆ ಬೇಕಾದ ಸರಕುಗಳನ್ನು ಮಾರುಕಟ್ಟೆಯಿಂದ ತರಬೇಕೆಂದರೂ ವಾಹನದ ಅಗತ್ಯ ಇದ್ದೇ ಇದೆ. ಮಾರುಕಟ್ಟೆಯು ಮುಚ್ಚಿಕೊಂಡಿದ್ದರೆ ಮತ್ತು ಅಗತ್ಯದ ಯಾವ ವಸ್ತುಗಳೂ ಲಭಿಸುವುದಿಲ್ಲವೆಂದರೆ, ಕಾಫಿ ತೋಟದಲ್ಲಿ ಕೆಲಸ ಮಾಡುವುದಕ್ಕೆ ಏನಿರುತ್ತದೆ? ಕಾರ್ಮಿಕರು ಲಾಕ್‌ಡೌನ್‌ನ ಆರಂಭ ಕಾಲದಲ್ಲಿ ತೋಟದಲ್ಲಿ ದುಡಿದರಾದರೂ ಬರಬರುತ್ತಾ ಕೆಲಸವೇ ಇಲ್ಲದೇ ಕಸಿವಿಸಿಗೊಳ್ಳ ತೊಡಗಿದರು. ಮನೆಯ ನೆನಪೂ ಅವರನ್ನು ಕಾಡತೊಡಗಿತು. ಕೊರೋನಾ ಸೋಂಕು ವ್ಯಾಪಿಸುತ್ತಿರುವ ಸುದ್ದಿಯನ್ನು ಈ ಕಾರ್ಮಿಕರಲ್ಲಿ ಸ್ಮಾರ್ಟ್ ಫೋನ್ ಇರುವ ಕೆಲವು ಕಾರ್ಮಿಕರು ಉಳಿದ ಕಾರ್ಮಿಕರೊಂದಿಗೆ ಹಂಚಿಕೊಳ್ಳತೊಡಗಿದರು. ಊರಿನ ಪರಿಸ್ಥಿತಿಯ ಬಗ್ಗೆ ಈ ಕಾರ್ಮಿಕರಲ್ಲಿ ದಿನೇ ದಿನೇ ಆತಂಕ ಹೆಚ್ಚಾಗತೊಡಗಿತು. ಅಲ್ಲದೇ ಲಾಕ್‌ಡೌನ್ ಅನ್ನು ಉಲ್ಲಂಘಿಸುವವರನ್ನು ಪೊಲೀಸರು ಯದ್ವಾ ತದ್ವಾ ಥಳಿಸುವ ವೀಡಿಯೋಗಳು, ಆಹಾರವಿಲ್ಲದೇ ಬಡವರು ಕಷ್ಟ ಪಡುತ್ತಿರುವ ಸುದ್ದಿಗಳು, ಕಿಟ್‌ಗಳನ್ನು ಹಂಚುವ ಸ್ವಯಂ ಸೇವಾ ಸಂಸ್ಥೆಗಳು... ಹೀಗೆ ತರಹೇವಾರಿ ಸುದ್ದಿಗಳು ಈ ಕಾರ್ಮಿಕರ ನಡುವೆ ಪ್ರತಿದಿನ ರವಾನೆಯಾಗುತ್ತಿದ್ದುವು. ಅಲ್ಲದೇ,





ಅವರಿಗೆ ಊರಿನಿಂದಲೂ ಕರೆಗಳು ಬರುತ್ತಿದ್ದುವು.

ಜೀವನ ಮುಂದುವರಿಯುವುದು ಹೇಗೆ, ಮಕ್ಕಳ ಶಿಕ್ಷಣ ಹೇಗೆ, ಬಾಡಿಗೆ ಕೊಡುವುದು, ಮಕ್ಕಳ ಬಟ್ಟೆ–ಬರೆ ಎಲ್ಲವೂ ದೊಡ್ಡ ಪ್ರಶ್ನಾರ್ಥಕ ಚಿಹ್ನೆಯೊಂದಿಗೆ ಅವರ ಮುಂದೆ ಸುಳಿದು ಹೋಗತೊಡಗಿದುವು. ಇಲ್ಲಿ ಕೆಲಸ ಇಲ್ಲ. ಆದ್ದರಿಂದ ಸಂಬಳ ಸಿಗುವ ಸಾಧ್ಯತೆಯೂ ಇಲ್ಲ. ಇನ್ನು ಎಷ್ಟು ಸಮಯ ಇಲ್ಲಿ ಊಟ ಸಿಗುತ್ತದೆ ಎಂಬ ಖಾತ್ರಿಯೂ ಇಲ್ಲ ಎಂದು ಕಾರ್ಮಿಕರು ಅಂದುಕೊಳ್ಳ ತೊಡಗಿದರು. ಆದ್ದರಿಂದ,

ತಮ್ಮ ಈ ವರೆಗಿನ ಸಂಬಳವನ್ನು ಪಡೆದುಕೊಂಡು ಎದ್ದೊ ಬಿದ್ದೋ ಹೇಗಾದರೂ ಮಾಡಿಕೊಂಡು ಇಲ್ಲಿಂದ ಹೊರಟು ಹೋಗುವುದೇ ಉತ್ತಮ ಎಂಬ ಅಭಿಪ್ರಾಯ ಬಲ ಪಡೆಯತೊಡಗಿತು.

## ಹದಿನೇಳು

ಈ ಸುದ್ದಿ ವರದರಾಜನಿಗೂ ತಲುಪಿತು.

ವರದರಾಜ ಆಲೋಚಿಸಿದ. ಲಾಕ್‌ಡೌನ್ ಸಡಿಲಿಕೆಯಾಗಿ ಇವರು ಎಲ್ಲಾದರೂ ಇಲ್ಲಿಂದ ಹೊರಟು ಹೋದರೆ, ಮತ್ತೆ ಇವರನ್ನು ಕರೆ ತರುವುದು ಕಷ್ಟ. ಹಾಗಾದರೆ ಮುಂದೆ ಕಾರ್ಮಿಕರ ಅಭಾವ ತಲೆದೋರಬಹುದು. ಊರಿನ ಯುವಕರಂತೂ ಕಾಫಿ ಎಸ್ಟೇಟ್‌ನಲ್ಲಿ ಕಾರ್ಮಿಕರಾಗಿ ದುಡಿಯಲು ಮುಂದೆ ಬರುತ್ತಲೂ ಇಲ್ಲ. ಒಂದುವೇಳೆ, ದುಡಿಯಲು ಒಪ್ಪಿಕೊಂಡರೂ ಅವರು ತುಂಬಾ ದುಬಾರಿ. ಅವರ ಒಂದು ದಿನದ ವೇತನವು ಹೊರ ರಾಜ್ಯದ ಮೂವರು ಕಾರ್ಮಿಕರಿಗೆ ಕೊಡುವ ವೇತನದಷ್ಟಿದೆ.





ಅಲ್ಲದೆ ಈ ಯುವಕರು ಹೊರ ರಾಜ್ಯದ ಕಾರ್ಮಿಕರಂತೆ ನಡುಬಗ್ಗಿಸಿ ದುಡಿಯುವುದಿಲ್ಲ. ಒಂದು ದಿನ ಬಂದರೆ ಮರು ದಿನ ಬರುವುದಿಲ್ಲ. ಕಾರ್ಮಿಕ ಸಂಘ, ಆ ಸಂಘ, ಈ ಸಂಘ ಎಂದು ಇವರಿಂದ ಕಿರಿಕಿರಿಯ ಅಪಾಯ ಇದ್ದೇ ಇರುತ್ತದೆ. ಆದ್ದರಿಂದ,

ಈ ಕಾರ್ಮಿಕರನ್ನು ಕಳುಹಿಸಿಕೊಡುವುದಕ್ಕಿಂತ ಇಲ್ಲೇ ಉಳಿಸಿಕೊಳ್ಳುವುದೇ ಜಾಣತನ. ಅವರಿಗೆ ಲಾಕ್‌ಡೌನ್ ಸಮಯದ ಕಷ್ಟವನ್ನು ಮನವರಿಕೆ ಮಾಡಿಸಿದರೆ, ವೇತನಕ್ಕೆ ಒತ್ತಾಯ ಮಾಡಲಾರರು. ಅಷ್ಟೂ ಒತ್ತಾಯಿಸಿದರೆ, ಅರ್ಧ ವೇತನವನ್ನು ಕೊಡುವುದು. ಇನ್ನು, ಊಟ ಕೊಡುವ ಬಗ್ಗೆ ಚಿಂತಿಸಬೇಕಾಗಿಲ್ಲ. ರಾಜಕೀಯವಾಗಿ ತನಗಿರುವ ಪ್ರಭಾವವನ್ನು ಬಳಸಿಕೊಂಡು ಸರಕಾರದಿಂದ ಸಿಗುವ ಉಚಿತ ಆಹಾರ ಧಾನ್ಯಗಳನ್ನು ಪಡೆದುಕೊಳ್ಳುವುದಕ್ಕೆ ಬೇಕಾದ ಏರ್ಪಾಟು ಮಾಡಬಹುದು...

ವರದರಾಜನ ಈ ತಂತ್ರ ಫಲಿಸಿತು.

ಆತನೇ ಒಂದು ದಿನ ಖುದ್ದು ಕಾರ್ಮಿಕರಿರುವಲ್ಲಿಗೇ ಬಂದು ಲಾಕ್‌ಡೌನ್ ಸಮಯದ ಕಷ್ಟ, ಆರ್ಥಿಕ ಕುಸಿತ, ಕಾಫಿ ಕೃಷಿಗೆ ಬಿದ್ದಿರುವ ಹೊಡೆತ ಇತ್ಯಾದಿಗಳನ್ನೆಲ್ಲಾ ಭಾವುಕವಾಗಿ ಹಂಚಿಕೊಂಡ. ಲಾಕ್‌ಡೌನ್ ಕಾಲದಲ್ಲಿ ವೇತನಕ್ಕೆ ಒತ್ತಾಯಿಸದಂತೆ ವಿನಂತಿಸಿಕೊಂಡ. ಸಾಧ್ಯವಾದರೆ ಲಾಕ್‌ಡೌನ್ ಮುಗಿದ ಆರು ತಿಂಗಳ ಬಳಿಕ ಲಾಕ್‌ಡೌನ್ ಸಂದರ್ಭದ ಅರ್ಧ ವೇತನವನ್ನು ಕೊಡುವುದಾಗಿಯೂ ಭರವಸೆ ನೀಡಿದ. ಊಟ-ಉಪಚಾರದ ವ್ಯವಸ್ಥೆ ಮಾಡುವುದಾಗಿಯೂ ಹೇಳಿದ.

ಒಂದಿಬ್ಬರು ಕೈ ಸನ್ನೆ, ಕಣ್ಸನ್ನೆಯಿಂದ ತಮ್ಮ ಅಸಮಾಧಾನವನ್ನು ಪರಸ್ಪರ ಕುಳಿತಲ್ಲಿಂದಲೇ ಹಂಚಿಕೊಂಡರಾದರೂ, ಅದು ಒಂದು ಅಭಿಪ್ರಾಯವಾಗಿ ವರದರಾಜನ ಮುಂದೆ ಬರಲೇ ಇಲ್ಲ.

ಮಾತಾಡಿದ್ದು ಅನಾಮಿಕ ಒಬ್ಬಳೇ.

'ಊರಲ್ಲಿ ನಮ್ಮ ಕುಟುಂಬ ಇದೆ. ತಂದೆ-ತಾಯಿ-ಮಕ್ಕಳಿದ್ದಾರೆ. ಅವರೂ ಕೆಲಸವಿಲ್ಲದೆ ಮನೆಯಲ್ಲೇ ಇದ್ದಾರೆ. ಅವರಿಗೆ ಭರವಸೆಯಾಗಿ ಇರುವುದು ನಾವು ಮಾತ್ರ. ಆದ್ದರಿಂದ ಅರ್ಧ ವೇತನವನ್ನಾದರೂ ಈ ಸಂದರ್ಭದಲ್ಲಿ ನೀವು ಕೊಡಲೇಬೇಕು. 6 ತಿಂಗಳ ಬಳಿಕ ಉಳಿದರ್ಧ ವೇತನವನ್ನು ಕೊಟ್ಟರೆ ಅದನ್ನು ನಿಮ್ಮ ಔದಾರ್ಯ ಎಂದು ನಾವು ಪರಿಗಣಿಸುತ್ತೇವೆ...'

ಅನಾಮಿಕಾಳನ್ನು ವರದರಾಜ ಕಣ್ಣಲ್ಲಿ ಕಣ್ಣಿಟ್ಟು ನೋಡಿದ. ಆಕೆಯ ಧೈರ್ಯವನ್ನು ಮೆಚ್ಚಿಕೊಂಡ. ಅದೇವೇಳೆ,

ಕಾರ್ಮಿಕರ ಗುಂಪಿನಲ್ಲಿ ಗುಸುಗುಸು ಆರಂಭವಾಯಿತು. ಕೈ ಸನ್ನೆ, ಕಣ್ಸನ್ನೆಯ ಮೂಲಕ ವರದರಾಜನ ಮಾತಿಗೆ ಪರಸ್ಪರ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಿದ್ದ ಕಾರ್ಮಿಕರು

ಅನಾಮಿಕ ಬಾಯಿ ತೆರೆದುದರಿಂದ ತುಸು ಗೆಲುವಾದರು. ಅವರ ತುಟಿಗಳು ಚಲಿಸ ತೊಡಗಿದುವು. ಅನಾಮಿಕಳ ಅಭಿಪ್ರಾಯಕ್ಕೆ ಬೆಂಬಲ ಸೂಚಿಸಲು ಒಬ್ಬೊಬ್ಬರೇ ತಯಾರಾಗತೊಡಗಿದರು.

'ನಮ್ಮ ವೇತನವೇನೂ ದೊಡ್ಡ ಮೊತ್ತವಲ್ಲ. ನಮ್ಮ ಕಷ್ಟ ಕಾಲದಲ್ಲಿ ಕೊರೋನಾವನ್ನು ತೋರಿಸಿ ವೇತನವನ್ನು ರದ್ದುಪಡಿಸುವುದು ಸರಿಯಲ್ಲ'– ಎಂದು ಮಂಡಲ್ ತನ್ನ ಪಕ್ಕ ಕುಳಿತಿದ್ದ ನಂದ ಕಿಶೋರನ ಕಿವಿಯಲ್ಲಿ ಗುಟ್ಟಿನಲ್ಲೆಂಬಂತೆ ಹೇಳಿದ.

'ಕಾಫಿ ಬೀಜಕ್ಕೆ ರೇಟು ಜಾಸ್ತಿಯಾಗಿದ್ದಾಗ ನಮಗೇನು ಅದರ ಲಾಭ ಕೊಟ್ಟಿದ್ದರೇ ಈ ಎಸ್ಟೇಟ್ ದಣಿ? ಮತ್ತೆ ಈಗ ಯಾಕೆ ನಾವು ಅವರ ಕಷ್ಟದ ಜವಾಬ್ದಾರಿಯನ್ನು ನಮ್ಮ ಮೇಲೆ ಎಳೆದುಕೊಳ್ಳುವುದು?'– ಎಂದು ರಮೇಶನೊಂದಿಗೆ ಶಂಸುದ್ದೀನ್ ಹೇಳಿದ.

'ಒಂದೋ ಲಾಕ್‌ಡೌನ್ ಕಾಲದ ವೇತನ ಕೊಡಬೇಕು. ಇಲ್ಲದಿದ್ದರೆ ನಾವಿಲ್ಲಿಂದ ಲಾಕ್‌ಡೌನ್ ಸಡಿಲಿಕೆಯಾದಾಗ ಹೊರಟು ಹೋಗುವ'– ಎಂದು ತುಸು ಆವೇಶದಿಂದಲೇ ಇನ್ನೊಬ್ಬ ಹೇಳಿದ. ತಮಾಷೆ ಏನೆಂದರೆ,

ಈ ಎಲ್ಲವೂ ನಡೆಯುತ್ತಿದ್ದುದು ಕಿವಿಯಿಂದ ಕಿವಿಗೆ.

ಒಬ್ಬ ಇನ್ನೊಬ್ಬನ ಕಿವಿಯಲ್ಲಿ, ಆತ ಮತ್ತೊಬ್ಬನ ಕಿವಿಯಲ್ಲಿ ಅಭಿಪ್ರಾಯ ಹೇಳಿಕೊಳ್ಳುತ್ತಿದ್ದರೇ ವಿನಃ ಆ ಅಭಿಪ್ರಾಯಕ್ಕೆ ಗಟ್ಟಿ ದನಿಯನ್ನು ನೀಡಿ ಎಲ್ಲರಿಗೂ ಕೇಳಿಸುವಂತೆ ಹೇಳುವ ಧೈರ್ಯ ಯಾರೂ ಪ್ರದರ್ಶಿಸುತ್ತಿರಲಿಲ್ಲ. ಆಗ ಎದ್ದು ನಿಂತು ಮಾತಾಡಿದ್ದು ನೂರುಲ್ ಇಸ್ಲಾಮ್.

'ಅನಾಮಿಕಳ ಅಭಿಪ್ರಾಯಕ್ಕೆ ನನ್ನ ಸಹಮತವೂ ಇದೆ. ಈ ಕಷ್ಟ ಕಾಲದಲ್ಲಿ ವೇತನ ಕೊಡದಿದ್ದರೆ ನಮ್ಮನ್ನೇ ನಂಬಿರುವ ಕುಟುಂಬ ಹಸಿವೆಯಿಂದ ಸಾಯಬೇಕಾದೀತು. ನೀವು ನಿಮ್ಮ ಅಭಿಪ್ರಾಯವನ್ನು ಮತ್ತೊಮ್ಮೆ ಪರಿಶೀಲಿಸಬೇಕು...' ಎಂದ.

ಒಂದಿಬ್ಬರು ಕಾರ್ಮಿಕರು ಜೊತೆಯಾಗಿ 'ಹೌದು ಹೌದು' ಎಂದು ಹೇಳಿದರು. ಸದ್ಯ ಇಲ್ಲಿಂದ ಪಾರಾಗುವುದೇ ಸರಿಯಾದ ನಿರ್ಧಾರ ಎಂದು ವರದರಾಜ ಅಂದುಕೊಂಡ. ಕಾರ್ಮಿಕ ಗುಂಪಿನಲ್ಲಿ ಧೈರ್ಯ ಮೂಡಿರುವಂತಿದೆ. ಇನ್ನು ಒಬ್ಬೊಬ್ಬರೇ ಮಾತಿಗೆ ನಿಂತರೆ? ವೇತನ ಕೊಡದಿದ್ದರೆ ತಾವು ಊರಿಗೆ ಹೋಗುವುದಾಗಿ ಹೇಳಿಬಿಟ್ಟರೆ? ಮತ್ತೆ ಅದನ್ನು ನಿಭಾಯಿಸುವುದು ಕಷ್ಟ ಸಾಧ್ಯ. ಅದಕ್ಕಿಂತ ಏನಾದರೊಂದು ಸಬೂಬು ಹೇಳಿಕೊಂಡು ಜಾಗ ಖಾಲಿ ಮಾಡುವುದೇ ಶ್ರೇಯಸ್ಕರ ಎಂದಾತ ತೀರ್ಮಾನಿಸಿದ. ಕಾರ್ಮಿಕರ ನಡುವಿನ ಗುಸುಗುಸು ಮಾತು ಬಲ ಪಡೆಯುತ್ತಿತ್ತು. ವರದರಾಜ ಮಾತಿಗೆ ಸಿದ್ಧನಾದ. ಗಂಟಲು ಸರಿಪಡಿಸಿಕೊಂಡ. ತಮ್ಮ ತಮ್ಮಲ್ಲೇ ಮಾತಾಡುತ್ತಿದ್ದ ಕಾರ್ಮಿಕರನ್ನು ಸುಮ್ಮನಿರುವಂತೆ ಕೈ ಸನ್ನೆಯಲ್ಲಿ





ಆಜ್ಞಾಪಿಸಿದ. ಗುಂಪು ಮೌನವಾಯಿತು.

ವರದರಾಜ ಮಾತಿಗೆ ಶುರುವಿಟ್ಟ–

'ನಿಮ್ಮ ನೋವು ನನಗೆ ಅರ್ಥವಾಗಿದೆ. ನೀವೆಲ್ಲ ಸಂಸಾರಸ್ಥರು. ನನಗೂ ಸಂಸಾರವಿದೆ. ಕೊರೋನಾದ ಲಾಕ್‌ಡೌನ್‌ನಿಂದಾಗಿ ನಿಮ್ಮೂರಲ್ಲಿರುವ ನಿಮ್ಮ ಕುಟುಂಬಕ್ಕೆ ಹಣದ ಅಗತ್ಯವಿದೆ ಅನ್ನುವುದನ್ನು ನಾನು ನಿರಾಕರಿಸುವುದಿಲ್ಲ. ಯಾವುದಕ್ಕೂ ನಾನು ಒಂದಷ್ಟು ಆಲೋಚಿಸಿ ಹೇಳುತ್ತೇನೆ. ನಿಮಗೆ ಪೂರ್ಣ ವೇತನ ನೀಡಬೇಕೆಂಬುದೇ ನನ್ನ ಬಯಕೆ. ನೀವೇನೂ ಚಿಂತಿಸಬೇಡಿ. ನಿಮಗೆ ಶೀಘ್ರ ವಿಷಯ ಮುಟ್ಟಿಸುತ್ತೇನೆ...' ಎಂದು ಹೇಳಿ ಕಾರ್ಮಿಕರೆಡೆಗೆ ದೃಷ್ಟಿ ಬೀರಿ ಅವರ ಪ್ರತಿಕ್ರಿಯೆಗೂ ಕಾಯದೇ ಲಗುಬಗೆಯಿಂದ ಹೊರಟು ಹೋದ.

ವರದರಾಜನೆದುರು ಮಾತಾಡಿದ ನೂರ್‌ನನ್ನು ಅನಾಮಿಕ ಮೆಚ್ಚಿಕೊಂಡಳು.

## ಹದಿನೆಂಟು

ಲಾಕ್‌ಡೌನ್ ಕಾಲದಲ್ಲಿ ಕೆಲಸ ಇಲ್ಲ ಎಂಬ ಕಾರಣವನ್ನು ಒಡ್ಡಿ ವೇತನ ನೀಡದೆ ಇರುವುದನ್ನು ಎಸ್ಟೇಟ್ ಮಾಲಿಕ ವರದರಾಜನ ಮುಂದೆ ಆಕ್ಷೇಪಿಸಿದ ಬಳಿಕ ತಾನು ಅಷ್ಟೂ ಕಾರ್ಮಿಕರ ನಡುವೆ ಗುರುತಿಗೀಡಾಗಿದೆ. ಮಹಿಳೆ ಮತ್ತು ಪುರುಷ ಕಾರ್ಮಿಕರೆಲ್ಲರೂ ತನ್ನನ್ನು ಅಭಿಮಾನದಿಂದ ನೋಡ ತೊಡಗಿದರು. ತನ್ನ ಹಿನ್ನೆಲೆಯ ಬಗ್ಗೆ ಆಸಕ್ತಿ ತೋರತೊಡಗಿದರು. ತನ್ನ ಊರು, ತನ್ನ ಕೌಟುಂಬಿಕ ಪರಿಸ್ಥಿತಿ, ತನ್ನ ಶಿಕ್ಷಣ ಇತ್ಯಾದಿಗಳೆಲ್ಲ ಕಾರ್ಮಿಕರಿಗೆ ಕುತೂಹಲದ ಸಂಗತಿಯಾಗಿ ಬಿಟ್ಟಿತು.

ಈ ಕುತೂಹಲ ಅಷ್ಟಕ್ಕೇ ನಿಲ್ಲಲಿಲ್ಲ.





ಕಾರ್ಮಿಕರ ಜೊತೆ ಮಾತಾಡಿ ವರದರಾಜ ಹೋದ ಬಳಿಕ, ಮುಂದೇನು ಅನ್ನುವ ಪ್ರಶ್ನೆಯೊಂದು ಕಾರ್ಮಿಕರ ನಡುವೆ ಹುಟ್ಟಿಕೊಂಡಿತು. ವೇತನ ಕೊಡುವ ಬಗ್ಗೆ ವರದರಾಜ ಸ್ಪಷ್ಟವಾಗಿ ಏನನ್ನೂ ಹೇಳಿಲ್ಲ. ಆತ ವೇತನ ಕೊಡಲೂಬಹುದು, ಕೊಡದಿರಲೂ ಬಹುದು. ಕೊಡುತ್ತೇನೆಂದು ಹೇಳಿ ತಿಂಗಳು ದೂಡಲೂಬಹುದು. ಆತನಿಗೆ ಈಗ ನಾವು ಮುಖ್ಯ. ನಮ್ಮನ್ನು ಕಳಕೊಳ್ಳುವುದರಿಂದ ನಮಗಿಂತ ಆತನಿಗೇ ನಷ್ಟ ಹೆಚ್ಚು. ಆದ್ದರಿಂದಲೇ ಆತ ನಮ್ಮ ಬೇಡಿಕೆಯನ್ನು ತಕ್ಷಣ ತಿರಸ್ಕರಿಸುವ ಧೈರ್ಯ ತೋರಿಲ್ಲ. ನಾವು ಕೆಲಸ ಮಾಡದೇ ಇರುವುದಕ್ಕೆ ನಾವು ಕಾರಣ ಅಲ್ಲ. ಆತ ಕೆಲಸ ಕೊಟ್ಟರೆ ಕೆಲಸ ಮಾಡುವುದಕ್ಕೆ ನಮ್ಮದೇನೂ ಅಭ್ಯಂತರವೂ ಇಲ್ಲ. ಲಾಕ್‌ಡೌನ್ ಘೋಷಣೆಯಾಗಿ ಒಂದು ತಿಂಗಳು ಆಗುತ್ತಾ ಬಂತು. ಇನ್ನೊಂದೋ, ಮತ್ತೊಂದೋ ತಿಂಗಳವರೆಗೆ ಲಾಕ್‌ಡೌನ್ ಮುಂದುವರಿಯಲೂಬಹುದು.

ಅಲ್ಲಿವರೆಗೆ ನಾವು ವೇತನವಿಲ್ಲದೇ ಬದುಕುವುದು ಹೇಗೆ?

ನಾವು ಸುಮ್ಮನೆ ಕುಳಿತರಾಗದು. ಈ ಬಗ್ಗೆ ಚರ್ಚಿಸಬೇಕು ಎಂಬ ಮನೋಭಾವ ಕಾರ್ಮಿಕರಲ್ಲಿ ಬೆಳೆಯತೊಡಗಿತು. ಹೇಗೂ ತೋಟದಲ್ಲಿ ಕೆಲಸ ಬಹುತೇಕ ಸ್ಥಗಿತಗೊಂಡಿತ್ತು. ಇದ್ದರೂ ಒಂದೆರಡು ಗಂಟೆಯೊಳಗೆ ಮುಗಿಸುವಂಥ ಕೆಲಸಗಳ ಹೊರತು ಲಾಕ್‌ಡೌನ್‌ಗಿಂತ ಮೊದಲಿನ ಸ್ಥಿತಿ ಈಗಿಲ್ಲ. ಆದ್ದರಿಂದ ಕಾರ್ಮಿಕರೆಲ್ಲ ಒಂದೆಡೆ ಕೂತಿರುವಾಗ ವೇತನ, ಕುಟುಂಬ, ಲಾಕ್‌ಡೌನ್‌ಗಳೇ ಹೆಚ್ಚು ಚರ್ಚೆಗೊಳಗಾಗುವುದೂ ಸಹಜ. ಪುರುಷ ಮತ್ತು ಮಹಿಳಾ ಕಾರ್ಮಿಕರ ನಡುವೆ ಸಣ್ಣ ಮಟ್ಟಿನಲ್ಲಿ ಆರಂಭವಾದ ಚರ್ಚೆ–ಜಿಜ್ಞಾಸೆಗಳು ಕ್ರಮೇಣ ಒಂದು ಮೂರ್ತ ರೂಪ ಪಡೆಯತೊಡಗಿದುವು. ಹಾಗಂತ,

ಯಾವ ಚರ್ಚೆಗೂ ಒಂದು ನಿರ್ದಿಷ್ಟ ಚೌಕಟ್ಟು ಅಂತ ಬೇಕಲ್ಲ. ಯಾರಾದರೊಬ್ಬರು ಚರ್ಚೆಗೆ ನೇತೃತ್ವ ಕೊಡಬೇಕಲ್ಲ. ವರದರಾಜ ಬಂದು ಹೇಗೆ ಕಾರ್ಮಿಕರನ್ನೆಲ್ಲಾ ಒಟ್ಟುಗೂಡಿಸಿ ಸಭಾ ಚೌಕಟ್ಟು ತಂದು ಸಭೆಗೆ ನೇತೃತ್ವ ಕೊಟ್ಟರೋ ಅದೇ ಮಾದರಿಯಲ್ಲಿ ನಾವೂ ಸಭೆ ನಡೆಸಬೇಕಲ್ಲ. ಅಲ್ಲಲ್ಲಿ ಒಬ್ಬೊಬ್ಬರು ಒಂದೊಂದು ಮಾತಾಡಿಕೊಂಡು ಕುಳಿತರೆ ಏಕ ಅಭಿಪ್ರಾಯ ರೂಪಿಸುವುದು ಹೇಗೆ?

ಇದು ಯಾರಾದರೊಬ್ಬರ ಖಾಸಗಿ ಪ್ರಶ್ನೆಯಲ್ಲ.

ಎಲ್ಲ ಕಾರ್ಮಿಕರೂ ಲಾಕ್‌ಡೌನ್ ಕಾಲದಲ್ಲಿ ವೇತನವನ್ನು ಬಯಸುತ್ತಿದ್ದಾರೆ. ಅವರು ಕೆಲಸ ಮಾಡಲಿಕ್ಕೂ ತಯಾರಿದ್ದಾರೆ. ಆದ್ದರಿಂದ ವೇತನಕ್ಕಾಗಿ ಆಗ್ರಹಿಸುವುದಕ್ಕೆ ಹಿಂಜರಿಯಬೇಕಿಲ್ಲ ಎಂಬ ಮಾತುಗಳು ಪರಸ್ಪರ ಕಾರ್ಮಿಕರ ನಡುವೆ ನಡೆದುದಲ್ಲದೇ ಎಲ್ಲರೂ ಅಭಿಪ್ರಾಯವನ್ನು ಮುಕ್ತವಾಗಿ ಮಂಡಿಸುವುದಕ್ಕೆ ಸೂಕ್ತ ವೇದಿಕೆಯನ್ನು ಉಂಟುಮಾಡಬೇಕೆಂದು ಅಭಿಪ್ರಾಯ ಪಟ್ಟುಕೊಂಡರು.

ಆಗ ಅವರು ಆರಿಸಿಕೊಂಡದ್ದೇ ನನ್ನನ್ನು.

ಒಂದು ದಿನ ಸಂಜೆಯ ಹೊತ್ತು ಪುರುಷ ಕಾರ್ಮಿಕರು ಮಹಿಳಾ ಕಾರ್ಮಿಕರಿದ್ದ ಬಿಡಾರಕ್ಕೆ ಬಂದರು. ನನ್ನಲ್ಲಿ ವಿಷಯವನ್ನು ವಿವರಿಸಿದರು. ನಾನೇ ಸಭೆಯ ನೇತೃತ್ವವನ್ನು ವಹಿಸಿಕೊಳ್ಳಬೇಕೆಂದು ವಿನಂತಿಸಿದರು. ಪುರುಷ ನಿಯೋಗಕ್ಕೆ ನೇತೃತ್ವ ನೀಡಿದ್ದು ನೂರ್. ಆತನೇ ನನ್ನಲ್ಲಿ ನೇರವಾಗಿ ಬಂದು ಈ ವಿಷಯ ಪ್ರಸ್ತಾಪಿಸಿದ.

ನನಗೆ ಅಚ್ಚರಿ ಅನಿಸಿದ್ದು ನನ್ನ ನೇತೃತ್ವದಲ್ಲೇ ಸಭೆ ನಡೆಯಲಿದೆ ಮತ್ತು ಅಂತಿಮ ತೀರ್ಮಾನವೊಂದನ್ನು ಮಾಡುವ ಹೊಣೆಗಾರಿಕೆ ನನ್ನ ಮೇಲಿದೆ ಎಂಬುದಕ್ಕಾಗಿ ಅಲ್ಲ. ಓರ್ವ ಮಹಿಳೆಯ ನೇತೃತ್ವದಲ್ಲಿ ಸಭೆ ನಡೆಸಲು ಪುರುಷರು ಮುಂದೆ ಬಂದರಲ್ಲ, ಎಂಬುದಕ್ಕಾಗಿ.

ಸಾಮಾನ್ಯವಾಗಿ, ಮಹಿಳೆ ಎಷ್ಟೇ ಚತುರೆ, ಜಾಣೆ, ಬುದ್ಧಿವಂತೆಯಾಗಿದ್ದರೂ ಪುರುಷರು ಮೊದಲು ನೋಡುವುದು ಪುರುಷರತ್ತಲೇ. ಅಲ್ಲದೇ, ಪುರುಷರು ಅಧಿಕವಿರುವ ಸಭೆಯಲ್ಲಿ ಮಹಿಳೆ ನೇತೃತ್ವ ಸ್ಥಾನದಲ್ಲಿರುವುದು ಅಪರೂಪದಲ್ಲಿ ಅಪರೂಪ. ಆಕೆ ಒಂದುವೇಳೆ, ವೇದಿಕೆಯಲ್ಲಿ ಉಪಸ್ಥಿತಳಿದ್ದರೂ ಸಭೆಯ ನೇತೃತ್ವವನ್ನು ಆಕೆಗೆ ವಹಿಸಿಕೊಡುವ ಸನ್ನಿವೇಶ ಶೂನ್ಯ ಅನ್ನುವಷ್ಟು ಕಡಿಮೆ. ಇದೊಂದು ಅಲಿಖಿತ ನಿಯಮವಾಗಿ ಸಾಮಾಜಿಕ ಬದುಕಿನಲ್ಲಿ ಚಾಲ್ತಿಯಲ್ಲಿದೆ. ಮನೆಯಲ್ಲೂ ಅಷ್ಟೇ–

ಪುರುಷನದ್ದೇ ಅಂತಿಮ ತೀರ್ಮಾನ.

ಆತ ತನ್ನ ತೀರ್ಮಾನಕ್ಕಿಂತ ಮೊದಲು ಮನೆಯ ಮಹಿಳೆಯರಲ್ಲಿ ಚರ್ಚಿಸಬೇಕಿಲ್ಲ. ಚರ್ಚಿಸಿದರೂ ಅವರ ಅಭಿಪ್ರಾಯವನ್ನು ಪರಿಗಣೀಸಬೇಕಿಲ್ಲ. ಪುರುಷನ ಅಭಿಪ್ರಾಯಕ್ಕಿಂತ ಹೆಚ್ಚು ರಚನಾತ್ಮಕ ಮತ್ತು ಪ್ರಾಯೋಗಿಕ ಅಭಿಪ್ರಾಯವನ್ನು ಮಹಿಳೆ ವ್ಯಕ್ತಪಡಿಸಿದರೂ ಅದನ್ನು ತಿರಸ್ಕರಿಸಿ ತನ್ನದೇ ಅಭಿಪ್ರಾಯವನ್ನು ಆತ ಹೇರಬಲ್ಲ.

ಮಹಿಳೆ ಎಂದರೆ, ಮನೆಯ ಅಡುಗೆ ವಿಷಯಗಳ ಬಗ್ಗೆ ಮತ್ತು ಮಕ್ಕಳ ಬಗ್ಗೆ ಆಲೋಚಿಸುತ್ತಾ ಇರಬೇಕಾದವಳು ಎಂಬ ಭಾವ ಪುರುಷ ವಲಯದಲ್ಲಿ ಗಟ್ಟಿಯಾಗಿಯೇ ತಳವೂರಿದೆ. ಇದು, ಇವತ್ತು–ನಿನ್ನೆಯಿಂದ ಬೆಳೆದು ಬಂದ ವಾತಾವರಣವಲ್ಲ.

ಅದಕ್ಕೆ ಪುರಾತನ ಕಾಲದ ಇತಿಹಾಸವಿದೆ.

ನಡೆಯುತ್ತಿದ್ದ ಅನಾಮಿಕ ಎಡವಿದಳು. ಬಾಗಿ ನೋಡಿದರೆ ಪುಟ್ಟ ಕಲ್ಲು. ಅದನ್ನು ಪಕ್ಕಕ್ಕೆ ತಳ್ಳಿದಳು. ನೆನಪುಗಳು ಮತ್ತೆ ಮುತ್ತಿಕೊಂಡವು.





# ಹತ್ತೊಂಬತ್ತು

ಮನೆಯಲ್ಲಿ ಅಪ್ಪ ಅಜ್ಞಾಧಿಕಾರಿ ಮತ್ತು ಅಮ್ಮ ವಿಧೇಯ ವಿದ್ಯಾರ್ಥಿ ಪಾತ್ರದಲ್ಲಿ ದಿನಾ ಮಿಂಚುತ್ತಿರುತ್ತಾರೆ. ಅಮ್ಮ ಅದಕ್ಕೇ ಸಹಜವಾಗಿ ಒಗ್ಗಿಯೂ ಹೋಗಿರುತ್ತಾಳೆ. ಅಪ್ಪನಿಗೂ ತನ್ನ ಪಾತ್ರದ ಬಗ್ಗೆ ಯಾವ ತಕರಾರೂ ಇರುವುದಿಲ್ಲ. ತಾನು ಹೀಗೆ ಆಜ್ಞಾಧಿಕಾರಿಯಾಗುವುದಕ್ಕಿಂತ ಪತ್ನಿಯ ಮಾತನ್ನು ಆಲಿಸಿ, ವಿಚಾರ ವಿಮರ್ಶೆ ನಡೆಸಿ, ಆಕೆಯ ಅಭಿಪ್ರಾಯವೇ ಉತ್ತಮ ಎಂದು ಅನಿಸಿದರೆ ಅದನ್ನು ಒಪ್ಪಿಕೊಳ್ಳುವುದು ಉತ್ತಮ ಎಂದು ಅಂದುಕೊಳ್ಳುವುದಿಲ್ಲ. ಹೆಣ್ಣಿನ ಅಭಿಪ್ರಾಯವನ್ನು ಒಪ್ಪಿಕೊಳ್ಳುವುದು, ಒಂದು ವಿಷಯದ ಮೇಲೆ ಆಕೆಯೊಂದಿಗೆ ಚರ್ಚಿಸುವುದೆಂದರೆ

ಅದು ಗಂಡುತನಕ್ಕೆ ಎಸಗುವ ಅಪಚಾರ ಎಂದು ಪುರುಷ ಭಾವಿಸುತ್ತಾನೆ. ಅದನ್ನು ಮನೆಯ ಮಕ್ಕಳು ನೋಡುತ್ತಾ ಬೆಳೆಯುತ್ತಾರೆ. ಗಂಡೆಂದರೆ ಅಜ್ಞಾಪಿಸುವವ, ಹೆಣ್ಣೆಂದರೆ ಮರುಮಾತಾಡದೇ ಆಜ್ಞೆಯನ್ನು ಸ್ವೀಕರಿಸಿ ವಿಧೇಯವಾಗಿ ನಡಕೊಳ್ಳುವವಳು ಎಂಬ ಭಾವ ಯಾರೂ ಹೇಳದೆಯೇ ಮತ್ತು ಹೇರದೆಯೇ ಮಕ್ಕಳು ಕಲಿಯುತ್ತಾ ಬೆಳೆಯುತ್ತವೆ. ಅದನ್ನು ಅವು ತಮ್ಮ ಬದುಕಿನಲ್ಲಿ ಪಾಲಿಸುತ್ತವೆ.

ನನ್ನೂರು ಕರ್ನೂರನ್ನು ಎತ್ತಿಕೊಂಡರೂ ಸಿಗುವುದು ಇದೇ ದೃಶ್ಯ.

ಹತ್ತನೇ ತರಗತಿ ಪಾಸು ಮಾಡಿದ ಹೆಣ್ಣು ಮಕ್ಕಳಲ್ಲಿ ನಾನು ಮೊದಲಿಗಳಲ್ಲದೇ ಇರಬಹುದು. ಆದರೆ 11ನೇ ಕ್ಲಾಸಿಗೆ ಹೋದವಳು ನನ್ನೂರಿನಲ್ಲಿ ನಾನೇ ಮೊದಲಿಗಳು. ಇತರ ಯಾವ ಹೆಣ್ಣು ಮಕ್ಕಳನ್ನೂ ಅವರ ಹೆತ್ತವರು 11ನೇ ಕ್ಲಾಸಿಗೆ ಕಳುಹಿಸಲಿಲ್ಲ. ಇದಕ್ಕೆ ಎರಡು ಕಾರಣಗಳಿದ್ದುವು ಎಂಬುದು ನಿಜ. ಆದರೆ, ಆ ಎರಡು ಕಾರಣಗಳು ಗಂಡು ಮಕ್ಕಳಿಗೂ ಸಮಾನವಾಗಿ ಅನ್ವಯವಾಗಿತ್ತಲ್ಲ. ಆ ಕಾರಣಗಳಲ್ಲಿ,

1. ಹತ್ತನೇ ತರಗತಿಯ ನಂತರದ ಕಲಿಕೆಗೆ ನಗರಕ್ಕೆ ಹೋಗಬೇಕಾಗಿತ್ತು.
2. ನಗರಕ್ಕೆ ಹೋಗಲು ವಾಹನ ಸೌಲಭ್ಯ ಇರಲಿಲ್ಲ.

ಇವೆರಡೂ ಯಾವುದೇ ಗಂಡು–ಹೆಣ್ಣಿಗೂ ಸಮಾನ ಅಡೆ–ತಡೆಗಳು. ನಮ್ಮೂರಿನಿಂದ ನಗರಕ್ಕೆ ಹೋಗಲು ಗಂಡು ಎಷ್ಟು ದೂರ ನಡೆಯಬೇಕೋ ಅಷ್ಟು ದೂರ ಹೆಣ್ಣೂ ನಡೆಯಬೇಕು. ಒಂದುವೇಳೆ ದಿನಾ ನಡೆಯುತ್ತಾ ಕಾಲೇಜಿಗೆ ಹೋಗುವುದು ಗಂಡಿಗೆ ಅಸಾಧ್ಯ ಅಥವಾ ನಡೆದು ಹೋಗುವಷ್ಟು ಸಮೀಪ ಕಾಲೇಜು ಇಲ್ಲ ಎಂದಾದರೆ ಹೆಣ್ಣಿಗೂ ಅದು ಸಮಾನವಾಗಿ ಅನ್ವಯವಾಗಬೇಕು.

ಆದರೆ,

ಕರ್ನೂರಿನ ಯಾವ ಮನೆಯಲ್ಲೂ ಈ ಬಗೆಯ ಚರ್ಚೆ ನಡೆದೇ ಇಲ್ಲ. 10ನೇ ತರಗತಿಯನ್ನು ಪಾಸು ಮಾಡಿಕೊಂಡ ಹುಡುಗರ ಮುಂದಿನ ಶಿಕ್ಷಣಕ್ಕಾಗಿ ಮನೆಯಲ್ಲಿ ತಯಾರಿ ನಡೆಯುವಂತೆ ಹುಡುಗಿಯ ಶಿಕ್ಷಣದ ಬಗ್ಗೆ ತಯಾರಿ ನಡೆಯುತ್ತಲೇ ಇರಲಿಲ್ಲ. ನಗರದ ಸರಕಾರಿ ವಸತಿನಿಲಯದಲ್ಲಿ ತಮ್ಮ ಮಕ್ಕಳನ್ನು ಸೇರಿಸಿ ಶಿಕ್ಷಣ ಕೊಡಿಸುವುದಕ್ಕೆ ಗಂಡು ಮಕ್ಕಳ ಹೆತ್ತವರು ಮುತುವರ್ಜಿ ತೋರುವಂತೆ ಹೆಣ್ಣು ಮಕ್ಕಳ ಹೆತ್ತವರು ಮುತುವರ್ಜಿ ತೋರುತ್ತಿರಲಿಲ್ಲ. ಕರ್ನೂರಿನ ಹತ್ತನೇ ತರಗತಿ ಪರೀಕ್ಷೆಯಲ್ಲಿ ಯಾವಾಗಲೂ ಹೆಚ್ಚು ಅಂಕ ಪಡೆಯುವವರು ಹೆಣ್ಣು ಮಕ್ಕಳೇ. ಶಾಲಾ ಬೋರ್ಡ್‌ನಲ್ಲಿ ತೂಗು ಹಾಕಿರುವ ಉತ್ತಮ ಅಂಕ ಪಡೆದ ಮಕ್ಕಳ ಫೋಟೋಗಳಲ್ಲಿ ಮೊದಲೆರಡು ಸಾಲುಗಳಲ್ಲಿ ಇರುತ್ತಿದ್ದುದೂ ಹೆಣ್ಣುಮಕ್ಕಳೇ. ಆದರೆ ಕಾಲೇಜು ಮೆಟ್ಟಲು ಹತ್ತುತ್ತಿದ್ದುದು ಮಾತ್ರ ಗಂಡು ಮಕ್ಕಳು. ಆದ್ದರಿಂದಲೇ,

ಈ ಬೆಳವಣಿಗೆಗೆ ಲಿಂಗ ತಾರತಮ್ಯ ಕಾರಣವೇ ಹೊರತು ಬೇರೇನಲ್ಲ ಎಂದು





ನನಗೆ ಅನಿಸುತ್ತಿದ್ದುದು.

ಗಂಡೆಂದರೆ ಏನೋ ಒಂದು ಹೆಚ್ಚುಗಾರಿಕೆ. ಆತನ ಬಗ್ಗೆ ಹೆತ್ತವರಿಗೆ ವಿಶೇಷ ಭರವಸೆ. ಆತ ಚೆನ್ನಾಗಿ ಓದಿ ಉದ್ಯೋಗ ಪಡೆದುಕೊಂಡು, ಮದುವೆಯಾಗಿ ತಂದೆ–ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆ ಎಂಬ ನಂಬಿಕೆಯೂ ಇದಕ್ಕೊಂದು ಕಾರಣ. ಸಾಮಾಜಿಕ ಸತ್ಯವೂ ಇದುವೇ. ಅಪ್ಪ ಮತ್ತು ಅಮ್ಮ ತಮ್ಮ ಕೊನೆಗಾಲದಲ್ಲಿ ಗಂಡು ಮಕ್ಕಳ ಪೈಕಿ ಯಾರಾದರೊಬ್ಬರ ಬಳಿ ಇರುವುದೇ ಹೆಚ್ಚು. ಆದರೆ ಹೆಣ್ಣು ಮಕ್ಕಳು ಹಾಗಿಲ್ಲವಲ್ಲ. ಚೆನ್ನಾಗಿ ಓದಿಸಿದೆವೆಂದೇ ಇಟ್ಟುಕೊಳ್ಳೋಣ. ನೌಕರಿಯೂ ಸಿಕ್ಕಿತು. ಆದರೆ, ಮದುವೆಯಾದ ಮೇಲೆ ಆಕೆ ಗಂಡನ ಮನೆಗೆ ಹೋಗುತ್ತಾಳೆ. ಆತ ಹೇಳಿದಂತೆ ಕೇಳುತ್ತಾಳೆ. ಆಕೆಯ ದುಡಿಮೆಯ ಫಲ ಏನಿದ್ದರೂ ಆಕೆಯ ಗಂಡ–ಅತ್ತೆ ಮನೆಯವರ ನಿರ್ದೇಶನದಂತೆ ವ್ಯಯ ಆಗತೊಡಗುತ್ತದೆ. ಅಲ್ಲದೆ, ಹೆತ್ತವರು ತಮ್ಮ ಕೊನೆಗಾಲವನ್ನು ಆಕೆಯ ಮನೆಯಲ್ಲಿ ಕಳೆಯುವುದಕ್ಕೂ ಅವಕಾಶ ಕಡಿಮೆ. ಅದಕ್ಕೆ ಆಕೆಯ ಗಂಡ ಸಮ್ಮತಿಸಬೇಕು, ಅತ್ತೆ ಮನೆಯವರ ಒಪ್ಪಿಗೆ ಬೇಕು. ಇದಕ್ಕಿಂತ ಮಗನನ್ನೇ ನೆಚ್ಚಿಕೊಳ್ಳುವುದು ಒಳಿತು ಎಂದು ಭಾವಿಸುತ್ತಾರೆ. ಆದರೆ,

ಈ ಬಗೆಯ ನಿಲುವಿಗೆ ಅನಾಮಿಕ ಮೊದಲಿನಿಂದಲೂ ವಿರೋಧಿ.

ನಡೆಯುತ್ತಿದ್ದ ಅನಾಮಿಕ ಒಮ್ಮೆ ಬೆಚ್ಚಿಬಿದ್ದಳು. ಕ್ರೀಮ್ ಕ್ರೀಮ್ ಸದ್ದು. ಅತ್ತಿತ್ತ ನೋಡಿದಳು. ಯಾವುದೋ ಕಾಡು ಜೀವಿಯೊಂದು ವಿಲಕ್ಷಣವಾಗಿ ದನಿ ಹೊರಡಿಸುತ್ತಿತ್ತು. ಈ ಅರ್ಧರಾತ್ರಿಯಲ್ಲಿ ಈ ಹುಳ–ಹುಪ್ಪಟೆಯಲ್ಲದೇ ಮತ್ತೆ ಮನುಷ್ಯರು ಇರುತ್ತಾರಾ ಎಂದು ನಕ್ಕು ಮುಂದಕ್ಕೆ ನಡೆಯತೊಡಗಿದಳು...

ಎಂಟನೇ ಕ್ಲಾಸಿನಲ್ಲಿ ಒಂದು ಚರ್ಚಾಗೋಷ್ಠಿ ನಡೆದಿತ್ತು. ಲಿಂಗ ತಾರತಮ್ಯದ ಸುತ್ತ ನಡೆಸಲಾದ ಚರ್ಚೆಗೋಷ್ಠಿ. ಗಂಡು ಮತ್ತು ಹೆಣ್ಣು ಸಮಾನರೇ ಅನ್ನುವುದು ಚರ್ಚೆಯ ಕೇಂದ್ರೀಯ ವಿಷಯವಾಗಿತ್ತು. ಎಂಟನೇ ಕ್ಲಾಸಿನ ಮುಖ್ಯ ಟೀಚರ್ ರಚಿತಾ ಮೇಡಂ ಪ್ರಗತಿಪರ ಮನೋಭಾವದ ಮಹಿಳೆಯಾಗಿದ್ದರು. ಅವರ ಪಾಠವೂ ವಿದ್ಯಾರ್ಥಿಗಳಿಗೆಲ್ಲ ಅಚ್ಚುಮೆಚ್ಚು. ಅವರು ಲಿಂಗತಾರತಮ್ಯದ ವಿಧಾನಗಳು ಮತ್ತು ಪರಂಪರಾಗತವಾಗಿ ರೂಢಿಸಿಕೊಂಡು ಪಾಲಿಸಿಕೊಂಡು ಬರುತ್ತಿರುವ ರೀತಿಗಳನ್ನು ಆಗಾಗ ಹೇಳುತ್ತಿದ್ದರು. ವಿದ್ಯಾರ್ಥಿಗಳ ನಡುವೆ ಚರ್ಚೆ, ಸಂವಾದವನ್ನು ಪ್ರೋತ್ಸಾಹಿಸುತ್ತಿದ್ದುದೇ ಅವರು.

ಅವರ ತರಗತಿಯೆಂದರೆ ವಿದ್ಯಾರ್ಥಿನಿಯರಿಗೆಲ್ಲ ಅಪಾರ ಆಸಕ್ತಿ. ಅವರು ಯಾವಾಗಲೂ ಹೆಣ್ಣು ಮಕ್ಕಳ ಸಾಹಸದ, ಧೈರ್ಯದ, ಜಾಣ್ಮೆಯ ಕತೆಗಳನ್ನಷ್ಟೇ ಹೇಳುತ್ತಿದ್ದರು. ಅಸಾಧ್ಯ ಅನ್ನಬಹುದಾದ ಸಾಹಸಕಾರೀ ಕೆಲಸಗಳನ್ನು ಈ ಹಿಂದೆ ಮಹಿಳೆಯರು ಮಾಡಿರುವುದನ್ನು ರೋಮಾಂಚನಕಾರಿಯಾಗಿ ವಿವರಿಸುತ್ತಿದ್ದರು. ಅವರ

ತರಗತಿ ಆಲಿಸುವಾಗಲೆಲ್ಲ ಹೆಣ್ಣೆಂದರೆ ಅಬಲೆಯಲ್ಲ, ವಿಚಾರರಹಿತಳಲ್ಲ, ಇತರರ ಆದೇಶಗಳನ್ನು ಮಾತ್ರ ಆಲಿಸುತ್ತಾ ಮತ್ತು ಪಾಲಿಸುತ್ತಾ ಹಾಗೂ ತನ್ನದೇ ಆದ ಯಾವ ಅಭಿಪ್ರಾಯವೂ ಇಲ್ಲದವಳಂತೆ ಬದುಕುತ್ತಾ ಇರಬೇಕಾದವಳಲ್ಲ ಎಂದು ಪದೇ ಪದೇ ಅನಿಸುತ್ತಿತ್ತು. ಅವರು ಮಹಿಳಾ ಸಾಧಕರ ಕತೆಗಳನ್ನು ವಿವರಿಸುತ್ತಿದ್ದರೆ ನಮ್ಮೊಳಗೆ ಆ ಸಾಧಕ ಮಹಿಳೆಯರೆಲ್ಲಾ ಪರಕಾಯ ಪ್ರವೇಶ ಪಡೆದುಕೊಂಡಂತೆ ಅನುಭವಕ್ಕೆ ಬರುತ್ತಿತ್ತು.

ಚರ್ಚಾಗೋಷ್ಠಿ ಪ್ರಾರಂಭವಾಯಿತು.

ಒಂದು ಕಡೆ ಗಂಡು ಮಕ್ಕಳಿದ್ದರೆ ಇನ್ನೊಂದು ಕಡೆ ಹೆಣ್ಣು ಮಕ್ಕಳು. ಗಂಡು ಶ್ರೇಷ್ಠ ಎಂದು ವಾದಿಸುವುದಕ್ಕೆ ಗಂಡು ಮಕ್ಕಳು ಹೆಚ್ಚು ಶ್ರಮ ಪಡಬೇಕಾದ ಅಗತ್ಯ ಇರಲಿಲ್ಲ. ಅವರು ಮನೆಯಲ್ಲಿ ಕಂಡುಂಡ ಮತ್ತು ಹೆತ್ತವರಿಂದ ಕೇಳಿಸಿಕೊಂಡ ಮಾತುಗಳೇ ಧಾರಾಳ ಇತ್ತು. ಅಲ್ಲದೇ, ಗಂಡು ಮಕ್ಕಳ ವಾದವೂ ಸರಿ ಸುಮಾರು ಹಾಗೆಯೇ ಇತ್ತು. ಗಂಡು ಹೊರಗೆ ದುಡಿದು ತರುತ್ತಾನೆ, ಹೆಣ್ಣು ಮಾಡಲಾಗದ ಇಂತಿಂಥ ಶ್ರಮದ ಕೆಲಸಗಳನ್ನು ಮಾಡುತ್ತಾನೆ, ದೇಶದ ಪ್ರಧಾನಿಗಳ ಪೈಕಿ ಮಹಿಳೆ ಒಬ್ಬರೇ, ರಾಷ್ಟ್ರಪತಿಗಳಲ್ಲಿ ಪುರುಷರೇ ಅಧಿಕ, ಓಟದ ಸ್ಪರ್ಧೆಯಲ್ಲಿ ಗಂಡು–ಹೆಣ್ಣಿಗಿಂತ ವೇಗವಾಗಿ ಓಡುತ್ತಾನೆ... ಇತ್ಯಾದಿ ಸಾಮಾನ್ಯ ವಾದಗಳನ್ನು ಗಂಡು ಮಕ್ಕಳು ಮಂಡಿಸಿದರು. ಅದಕ್ಕೆ,

ನಾವೂ ನಮ್ಮ ವಿಶೇಷತೆಗಳನ್ನು ಹೇಳಿಕೊಂಡೆವು. ಗರ್ಭಧರಿಸಲು ಗಂಡಿಗೆ ಸಾಧ್ಯವಿಲ್ಲ, ಅಡುಗೆ ಮಾಡುವುದರಲ್ಲೂ ಹೆಣ್ಣೇ ಮೇಲು, ಮೆಹಂದಿ ಹಾಕುವುದರಲ್ಲಿ ಹೆಣ್ಣೇ ಮುಂದು, ಕಲಿಕೆಯಲ್ಲಿ ಹೆಣ್ಣು ಮಕ್ಕಳೇ ಮೊದಲು... ಇತ್ಯಾದಿ ವಾದಗಳನ್ನು ನಾವೂ ಮುಂದಿಟ್ಟೆವು. ಹೀಗೆ ಚರ್ಚೆ ಸಾಗುತ್ತಿದ್ದಾಗ ಸಮಂತರಾಯ್ ಎದ್ದು ನಿಂತು ವಾದಕ್ಕೆ ನಿಂತ. ಅದು ಆತನ ಮನೆಯಲ್ಲಿ ನಡೆಯುತ್ತಿದ್ದ ಚರ್ಚೆಯೇ ಆಗಿದ್ದಿರಬಹುದು ಎಂದು ನನಗೆ ಈಗ ಅನಿಸುತ್ತಿದೆ.

ಆತ ಹೇಳಿದ,

ತಂದೆ–ತಾಯಿಯನ್ನು ಅವರ ವೃದ್ಧಾಪ್ಯದಲ್ಲಿ ನೋಡಿಕೊಳ್ಳುವುದಕ್ಕೆ ಗಂಡಿಗೆ ಸಾಧ್ಯವೇ ಹೊರತು ಹೆಣ್ಣಿಗಲ್ಲ. ಆಕೆ ಮದುವೆ ಮಾಡಿಕೊಂಡು ಹೊರಟು ಹೋಗುತ್ತಾಳೆ. ಹೆತ್ತವರನ್ನು ನೋಡಿಕೊಳ್ಳುವುದಕ್ಕೆ ಆಕೆಯ ಗಂಡ ಬಿಟ್ಟರಷ್ಟೇ ಸಾಧ್ಯ. ಇನ್ನು ಆಕೆಯಲ್ಲಿ ದುಡ್ಡಾದರೂ ಎಲ್ಲಿರುತ್ತದೆ? ಗಂಡ ಕೊಡಬೇಕು. ಆದರೆ ಗಂಡು ಹಾಗಲ್ಲ. ಆತ ದುಡಿಯುತ್ತಾನೆ, ಹೆತ್ತವರನ್ನು ನೋಡಿಕೊಳ್ಳುವುದಕ್ಕೆ ಪತ್ನಿಯ ಅನುಮತಿ ಪಡಕೊಳ್ಳುವ ಅಗತ್ಯವೂ ಇರುವುದಿಲ್ಲ. ನನ್ನ ಮನೆಯಲ್ಲಿ ನನ್ನಪ್ಪನ ತಂದೆ–ತಾಯಿ ಇದ್ದಾರೆ. ಆದರೆ ಅಮ್ಮನ ಹೆತ್ತವರು ನಮ್ಮ ಮನೆಯಲ್ಲಿ ಇಲ್ಲ. ಅವರು ಅಮ್ಮನ





ಅಣ್ಣನ ಮನೆಯಲ್ಲಿದ್ದಾರೆ. ಗಂಡು ಮಾತ್ರ ನಾಯಕ ಆಗಬಲ್ಲ. ಬಯಸಿದ್ದನ್ನು ಸಾಧಿಸಬಲ್ಲ... ಎಂದಾತ ಒಂದೇ ದನಿಯಲ್ಲಿ ಹೇಳಿ ಕುಳಿತುಕೊಂಡಿದ್ದ.

ನನಗೆ ರೇಗಿ ಹೋಯಿತು.

ನಾನೂ ಬಿಡಲಿಲ್ಲ.

ಹೆತ್ತವರನ್ನು ಸಾಕುವುದೆಂಬುದು ಗಂಡಿನ ಶ್ರೇಷ್ಠತೆಗೆ ಪುರಾವೆ ಅಲ್ಲ. ಅದು ಹೊಣೆಗಾರಿಕೆ. ಅದನ್ನು ಗಂಡೂ ಮಾಡಬಹುದು ಹೆಣ್ಣೂ ಮಾಡಬಹುದು. ಆಕೆ ಮದುವೆಯಾಗಿ ಗಂಡನ ಮನೆಗೆ ಹೋಗುತ್ತಾಳೆ ಅನ್ನುವುದೇ ತಪ್ಪು. ಆಕೆ ಗಂಡನ್ನು ಮದುವೆಯಾಗುತ್ತಾಳೆಯೇ ಹೊರತು ಗಂಡಿನ ಮನೆಯನ್ನಲ್ಲ. ಆಕೆ ಗಂಡನ್ನು ಮದುವೆಯಾಗುತ್ತಾಳೆ ಎಂದು ಹೇಳುವಂತೆಯೇ ಗಂಡು ಆಕೆಯನ್ನು ಮದುವೆಯಾಗುತ್ತಾನೆ ಎಂದೂ ಹೇಳಬಹುದು. ಗಂಡು ದುಡಿಯುವಂತೆಯೇ ಹೆಣ್ಣೂ ದುಡಿಯಬಲ್ಲಳು.

ಹೆತ್ತವರನ್ನು ಗಂಡಿನಂತೆಯೇ ಸಾಕಬಲ್ಲಳು.

ಗಂಡನ ಜೊತೆ ಸೇರಿ ಪ್ರತ್ಯೇಕ ಮನೆ ಮಾಡಿಯೂ ಇರಬಲ್ಲಳು. ತನ್ನ ಹೆತ್ತವರನ್ನು ಜೊತೆ ಇರಿಸಿಕೊಳ್ಳಬಲ್ಲಳು. ತವರು ಮನೆ ಎಂಬುದು ಗಂಡಿನ ಪರಿವಾರದವರು ಮಾತ್ರ ಇರಬೇಕಾದ ಮನೆ ಎಂಬ ನಿಯಮ ಎಲ್ಲೂ ಇಲ್ಲ. ಅಂಥ ನಿಯಮವನ್ನು ಹೆಣ್ಣು ಪಾಲಿಸಬೇಕಾಗಿಯೂ ಇಲ್ಲ. ಗಂಡಿನ ಹೆತ್ತವರು ತವರು ಮನೆಯಲ್ಲಿ ಇರುವಂತೆಯೇ ಹೆಣ್ಣಿನ ಹೆತ್ತವರೂ ಅಲ್ಲಿ ಇರಬಲ್ಲರು. ಅದಕ್ಕೆ ಗಂಡು ತಡೆಯೊಡ್ಡುತ್ತಾನೆಂದರೆ ಆತನನ್ನು ತೊರೆದು ಬರುವ ಅವಕಾಶ ಹೆಣ್ಣಿಗೆ ಇದೆ. ಮದುವೆ ಅಂದರೆ, ಬೇರ್ಪಡಲೇಬಾರದ ಸಂಗತಿ ಅಲ್ಲ. ಅದು ಒಂದು ಕರಾರಿನಂತೆ. ಜೊತೆಯಾಗಿ ಸಾಗಲು ಸಾಧ್ಯವಾಗುವವರೆಗೆ ಜೊತೆಯಾಗಿರುವುದು, ಅಸಾಧ್ಯವೆಂದಾದರೆ, ಬೇರೆ ಬೇರೆಯಾಗುವುದು...

ಒಂದೇ ಉಸಿರಿನಲ್ಲಿ ಹೇಳಿ ಕುಳಿತು ರಚಿತಾ ಮೇಡಂರ ಮುಖ ನೋಡಿದ್ದೆ. ಅವರು ಕಣ್ಣಲ್ಲೇ ಮೆಚ್ಚುಗೆ ಸೂಚಿಸಿದ್ದರು.

ನನ್ನ ಹೆತ್ತವರಿಗೆ ನಾನು ಒಬ್ಬಳೇ ಮಗಳಾದುದರಿಂದಲೋ ಏನೋ ನಾನು ಬೆಳೆದದ್ದೇ ಹಾಗೆ. ಅಪ್ಪನದೂ ಸಾಧು ಸ್ವಭಾವ. ಅವರು ಅಮ್ಮನ ಮೇಲೆ ಅಧಿಕಾರ ಚಲಾಯಿಸುತ್ತಿದ್ದುದು ಕಡಿಮೆ. ಅವರು ನನ್ನನ್ನು ನನ್ನಿಷ್ಟದಂತೆ ಬೆಳೆಯಲು ಬಿಟ್ಟಿದ್ದರು. ಗಂಡಿಗಿಂತ ಕೀಳು ಎಂಬ ಭಾವವನ್ನು ಒಮ್ಮೆಯೂ ಅವರು ನನ್ನ ಮೇಲೆ ಹೇರಿರಲಿಲ್ಲ. ಅಪ್ಪನ ವರ್ತನೆಯೂ ಹಾಗಿರಲಿಲ್ಲ. ಒಂದು ವೇಳೆ ನನಗೆ ಅಣ್ಣನೋ ತಮ್ಮನೋ ಇರುತ್ತಿದ್ದರೆ ನಾನು ಹೀಗೆ ಬೆಳೆಯುತ್ತಿರಲಿಲ್ಲವೋ ಏನೋ? ಅಪ್ಪ ಮತ್ತು ಅಮ್ಮ ನನಗೆ ಕೊಟ್ಟ ಈ ಸಲುಗೆಯೇ ನನ್ನನ್ನು ಹಠವಾದಿಯನ್ನಾಗಿಸಿದ್ದು. ನನ್ನೂರಿನಿಂದ ಕಾಲೇಜಿಗೆ ಹೋದ ಮೊದಲ ಹೆಣ್ಣು ಮಗಳು ನಾನಾದುದಕ್ಕೂ ಇದೇ ಕಾರಣ.

ನನ್ನ ಈ ಸ್ವತಂತ್ರ ಮನೋಭಾವ ನನ್ನ ಮದುವೆಯ ಬಳಿಕವೂ ಮುಂದುವರಿಯಿತು. ಆದರೆ,

ಗಂಡು ಶ್ರೇಷ್ಠ ವ್ಯಸನದ ಕುಟುಂಬದಲ್ಲೇ ಬೆಳೆದಿದ್ದ ಗಂಡ ಅವಿನಾಶನಿಗೆ ನಾನು ಎಲ್ಲರಂಥಲ್ಲ ಅನ್ನುವ ಅನುಭವ ಮದುವೆಯ ಮೊದಲ ದಿನದಂದೇ ಆಗಿತ್ತು.

ಮೊದಲ ರಾತ್ರಿ ಕೋಣೆಯಲ್ಲಿ ಅಪಾರ ನಾಚಿಕೆಯಿಂದ ನಾನು ಮೈಯೆಲ್ಲಾ ಹಿಡಿಯಷ್ಟಾಗಿ ಕುಳಿತಿದ್ದೆ. ಆತ ನನ್ನ ಪಕ್ಕವೇ ಕುಳಿತು ಮಾತಿಗೆಳೆಯತೊಡಗಿದ್ದ. ನಾನು ಆತನನ್ನು ದೂರ ತಳ್ಳಿದೆ. ಹಾಲಿನ ಲೋಟ ಆತನ ಪಕ್ಕ ಇದ್ದುದು ನನಗೂ ಗೊತ್ತಿರಲಿಲ್ಲ. ಆತನಿಗೂ ಗೊತ್ತಿರಲಿಲ್ಲ. ಹಾಲು ಕುಡಿದು ಲೋಟವನ್ನು ಆತ ಅಲ್ಲೇ ಇಟ್ಟಿದ್ದ. ನಾನು ದೂಡಿದ ರಭಸಕ್ಕೆ ಆತನ ಕೈ ಆ ಲೋಟಕ್ಕೆ ತಾಗಿ ಅದು ಮಂಚದಿಂದ ಟಣ್ ಅಂತ ಕೆಳಕ್ಕೆ ಬಿತ್ತು. ಆತ ಅರ್ಧ ಸಿಟ್ಟು ಅರ್ಧ ಆದೇಶದ ದನಿಯಲ್ಲಿ ಲೋಟದತ್ತ ಕೈ ತೋರಿಸಿ, ಹೆಕ್ಕು ಎಂದು ಹೇಳಿದ. ಆತ ಹೇಳದಿರುತ್ತಿದ್ದರೆ ನಾನಾಗಿಯೇ ಹೆಕ್ಕುತ್ತಿದ್ದೆನೋ ಏನೋ. ಆದರೆ ಆತ ಹೇಳಿದ ರೀತಿ ಆದೇಶದಂತಿತ್ತು. ನನಗದು ಸರಿ ಕಾಣಲಿಲ್ಲ.

ನೀನೇ ಹೆಕ್ಕು ಎಂದೆ.

ಆತನ ಅಹಂಗೆ ನಾನು ಕೊಟ್ಟ ಮೊದಲ ಏಟು ಅದು. ಆ ಬಳಿಕವೂ ನಾನು ನನ್ನತನವನ್ನು ಬಿಟ್ಟುಕೊಟ್ಟಿರಲಿಲ್ಲ. ಆತ ಗಂಡು ಶ್ರೇಷ್ಠ ವ್ಯಸನವನ್ನು ಪ್ರದರ್ಶಿಸಿದಾಗಲೆಲ್ಲ ಅಷ್ಟೇ ತೀವ್ರವಾಗಿ ಪ್ರತಿ ಏಟನ್ನೂ ಕೊಡುತ್ತಿದ್ದೆ. ಇದೇ ಕಾರಣದಿಂದಾಗಿ ಮಾತಿಗೆ ಮಾತು ಬೆಳೆದಿದೆ. ಹ್ಯೊ ಕೈವರೆಗೂ ಜಗಳ ಕಾದಿದ್ದೇವೆ. ಆದರೆ ನಾನು ಕನಿಷ್ಠ ಅನ್ನುವ ಭಾವ ಅವಿನಾಶನಲ್ಲಿ ಮೂಡುವುದಕ್ಕೆ ಅವಕಾಶವನ್ನೇ ಕೊಟ್ಟಿರಲಿಲ್ಲ...

ಇದೀಗ ಪುರುಷ ಕಾರ್ಮಿಕರೆಲ್ಲ ಒಟ್ಟು ಸೇರಿ ನನ್ನನ್ನೇ ಸಭಾ ನಾಯಕಿಯಾಗಿ ಆರಿಸಿದ್ದಾರೆ. ನಾನು ಖುಷಿಯಿಂದ ಒಪ್ಪಿಕೊಂಡೆ. ಸಂಜೆಗೆ ಸಭೆ ನಡೆಸುವ ನಿರ್ಧಾರವಾಯಿತು.





# ಇಪ್ಪತ್ತು

**ಕಾ**ರ್ಮಿಕ ಸಭೆ ಪ್ರಾರಂಭವಾಯಿತು.

ಎಲ್ಲರೂ ನೆಲದಲ್ಲೇ ಗುಂಪುಗೂಡಿ ಕುಳಿತಿದ್ದರು. ಅನಾಮಿಕ ಮತ್ತು ನೂರ್ ಗುಂಪಿನಿಂದ ತುಸು ಪ್ರತ್ಯೇಕವಾಗಿ ಎಲ್ಲರಿಗೂ ಕಾಣುವಂತೆ ಕುಳಿತಿದ್ದರು. ಎಲ್ಲರ ಕಣ್ಣಿದ್ದುದೂ ಅನಾಮಿಕಾಳ ಮೇಲೆ.

'ನಮ್ಮ ಬೇಡಿಕೆಗೆ ವರದರಾಜ ಹಾಂ, ಹೂಂ ಎಂದಿಲ್ಲ. ವೇತನ ಕೊಡುತ್ತಾನೋ ಇಲ್ಲವೋ ಅನ್ನುವ ಮಾಹಿತಿ ಇಲ್ಲ. ಆತನ ಮುಖಭಾವ ನೋಡಿದರೆ ಲಾಕ್‌ಡೌನ್ ಕಾಲದ ವೇತನ ಕೊಡುವ ಸಾಧ್ಯತೆ ತೀರಾ ಕಡಿಮೆ. ಆತ ಕೊಡುತ್ತಾನೋ ಇಲ್ಲವೋ ಎಂದು ನಮಗೆ ಗೊತ್ತಾಗುವುದು ಹೇಗೆ? ಎಲ್ಲಿಯ

ವರೆಗೆ ಕಾಯಬಹುದು'– ಎಂದು ನೂರ್ ಮಾತು ಪ್ರಾರಂಭಿಸಿದ.

ಸಭೆಯಲ್ಲಿ ಗುಸುಗುಸು ಪ್ರಾರಂಭವಾಯಿತು.

'ಪ್ರತಿಯೊಬ್ಬರೂ ಅಭಿಪ್ರಾಯ ಹೇಳಬೇಕು. ತಮ್ಮತಮ್ಮಲ್ಲೇ ಮಾತಾಡುವುದರಿಂದ ಸಮಯ ವ್ಯರ್ಥ. ನಾವೆಲ್ಲರೂ ಒಟ್ಟು ಸೇರಿ ಒಂದು ತೀರ್ಮಾನಕ್ಕೆ ಬರಬೇಕು. ತೀರ್ಮಾನವನ್ನು ಒಪ್ಪದವರಿಗೆ ಅವರಿಷ್ಟದಂತೆ ಇರುವ ಹಕ್ಕಂತೂ ಇದ್ದೇ ಇದೆ...' ಎಂದು ಅನಾಮಿಕ ಹೇಳಿದಳು.

ಒಬ್ಬೊಬ್ಬರೇ ಅಭಿಪ್ರಾಯ ಹಂಚಿಕೊಳ್ಳಲು ಪ್ರಾರಂಭಿಸಿದರು. ವೇತನ ಬೇಡವೆಂದು ಯಾರೂ ಹೇಳಲಿಲ್ಲ. ಆದರೆ, ವೇತನ ಕೊಡದಿದ್ದರೆ ಏನು ಮಾಡುವುದು ಎಂಬ ಬಗ್ಗೆ ಖಚಿತ ಅಭಿಪ್ರಾಯ ಹೆಚ್ಚಿನವರಲ್ಲಿ ಇರಲಿಲ್ಲ.

ಊರಿಗೆ ಹೋಗೋಣ ಎಂದು ಒಬ್ಬರು ಹೇಳಿದರೆ, ಹೋಗಿ ಏನು ಮಾಡುವುದೆಂಬುದು ಇನ್ನೊಬ್ಬರ ಚಿಂತೆ.

'ಲಾಕ್‌ಡೌನ್ ಇದೆ, ಈಗ ಹೋಗುವಂತಿಲ್ಲ. ಲಾಕ್‌ಡೌನ್ ಸಡಿಲಿಕೆಯಾಗಿ ಊರಿಗೆ ಹೋದರೂ ಅಲ್ಲೇನು ಮಾಡುವುದು? ವರದರಾಜನಿಗೆ ಹೇಳದೆ ಅಥವಾ ಅನುಮತಿ ಪಡೆಯದೇ ನಾವು ಹೋದೆವೆಂದೇ ಇಟ್ಟುಕೊಳ್ಳೋಣ, ಮರಳಿ ಬಂದರೆ ಇಲ್ಲಿ ಕೆಲಸ ಸಿಗಬಹುದೇ? ಸಿಗದಿದ್ದರೆ ಏನು ಮಾಡುವುದು...' ಚಟರ್ಜಿ ಆತಂಕ ತೋಡಿಕೊಂಡ.

ನಮಗೆ ಅವರಿಗಿಂತ ನಾವು ಅವರಿಗೆ ಅಗತ್ಯ ಎಂದು ಇಸ್ಮಾಈಲ್ ಹೇಳಿದ. ಮಹಿಳೆಯರೂ ತಮ್ಮ ಅಹವಾಲನ್ನು ತೋಡಿಕೊಂಡರು. ಅವರಲ್ಲಿ ಮಕ್ಕಳು ಮತ್ತು ಪತಿ ಜೊತೆಗಿದ್ದವರು ಊರಿಗೆ ಹೋಗುವುದಕ್ಕೆ ವಿರುದ್ಧವಾಗಿದ್ದರೆ, ಇನ್ನು ಕೆಲವರು ಊರಿಗೆ ಹೋಗುವುದರ ಪರ ಇದ್ದರು. ಒಂದು ರೀತಿಯ ಗೊಂದಲವನ್ನು ಆ ಇಡೀ ಕಾರ್ಮಿಕ ಗುಂಪಿನಲ್ಲಿ ಸ್ಪಷ್ಟವಾಗಿ ಗುರುತಿಸಬಹುದಿತ್ತು. ಸೂರ್ಯ ಮುಳುಗಿದರೂ ಕಾರ್ಮಿಕರ ಮಾತುಗಳು ನಿಲ್ಲುವ ಸೂಚನೆ ಕಾಣಿಸಲಿಲ್ಲ. ಕೆಲವರು ಈ ಲಾಕ್‌ಡೌನ್‌ಗಿಂತ ಮೊದಲಿನ ವಿಷಯಗಳನ್ನು ಎತ್ತತೊಡಗಿದರು. ವೇತನ ತಾರತಮ್ಯದ ಬಗ್ಗೆ ಪ್ರಸ್ತಾಪಿಸಿದರು. ಒಂದಿಬ್ಬರು ವೈಯಕ್ತಿಕ ವಿಷಯಗಳನ್ನು ಎತ್ತಿದರು. ಮಾತಿಗೆ ಮಾತು ಬೆಳೆಯುವ ಹಂತಕ್ಕೆ ಪರಿಸ್ಥಿತಿ ಬಿಗಡಾಯಿಸುವ ಸೂಚನೆ ಸಿಗತೊಡಗಿತು. ಒಬ್ಬ ಇನ್ನೊಬ್ಬನ ಮೇಲೆ ಏರಿಹೋದ. ಕೈ ಮಿಲಾಯಿಸುವ ಹಂತದಲ್ಲಿ ಉಳಿದವರು ಅವರಿಬ್ಬರನ್ನೂ ಬೇರ್ಪಡಿಸಿದರು.

ಇನ್ನೂ ಸಭೆಯನ್ನು ಮುಂದುವರಿಸಿದರೆ ವೇತನಕ್ಕಿಂತ ಜಗಳವನ್ನು ಬಿಡಿಸುವುದೇ ಮುಖ್ಯ ಸವಾಲಾದೀತೆಂದು ಮನಗಂಡ ಅನಾಮಿಕ ನಿರ್ಧಾರದ ಧನಿಯಲ್ಲೆಂಬಂತೆ ಹೇಳಿದಳು,

'ಇನ್ನೊಂದು ತಿಂಗಳು ಕಾಯೋಣ. ಈ ನಡುವೆ ವರದರಾಜ ಏನು ಹೇಳುತ್ತಾನೆ





ಅನ್ನುವುದು ಗೊತ್ತಾಗಬಹುದು. ಆತ ಹೇಳದಿದ್ದರೆ ಆತ ವೇತನ ಕೊಡುವುದಿಲ್ಲವೆಂದು ಅರ್ಥ. ಆ ಬಳಿಕ ಇಲ್ಲೇ ಉಳಿಯಬೇಕೆಂದು ಬಯಸುವವರು ಇಲ್ಲೇ ಉಳಿಯುವುದು ಮತ್ತು ಹೋಗುವ ಇಚ್ಛೆಯುಳ್ಳವರು ಹಾಗೆ ನಡೆದುಕೊಳ್ಳುವುದು. ಇದಕ್ಕೆ ವರದರಾಜ ಅಡ್ಡ ಬಂದರೆ, ಆಗ ನಾವೆಲ್ಲ ಒಗ್ಗಟ್ಟಾಗಿ ಅದನ್ನು ಪ್ರತಿಭಟಿಸೋಣ...'

ಈ ಸಭೆ ಮುಗಿದ ಬಳಿಕ ಆದ ದೊಡ್ಡ ಬದಲಾವಣೆಯೇನೆಂದರೆ, ನೂರ್ ಮತ್ತು ಅನಾಮಿಕರ ನಡುವಿನ ಗೆಳೆತನ ಗಟ್ಟಿಯಾದುದು.

ನೂರ್ ಎಲ್ಲ ಕಾರ್ಮಿಕರಂತೆ ಅಲ್ಲ ಅನ್ನುವುದನ್ನು ಈ ಸಭೆಗಿಂತ ಮೊದಲೇ ಅನಾಮಿಕ ಗುರುತಿಸಿದ್ದಳು. ಆತನಲ್ಲಿ ಶಿಸ್ತಿತ್ತು. ಮಾತಿನಲ್ಲಿ ನಿಯಂತ್ರಣವಿತ್ತು. ತನಗೊಂದು ಭಿನ್ನ ಐಡೆಂಟಿಟಿಯನ್ನು ಆತ ಅಷ್ಟೂ ಕಾರ್ಮಿಕರ ನಡುವೆ ಪಡೆದುಕೊಂಡಿದ್ದ ಅನ್ನುವುದೂ ಆಕೆಗೆ ಮನದಟ್ಟಾಗಿತ್ತು. ಆತ ಧರಿಸುವ ಬಟ್ಟೆ, ನೀಟಾಗಿ ಇಟ್ಟುಕೊಂಡಿರುವ ಗಡ್ಡ, ತಲೆಯಿಂದ ಎಂದೂ ತಪ್ಪದ ಸ್ಕಲ್ ಟೋಪಿ, ಮೂರನೇ ದರ್ಜೆಯ ಜೋಕ್ಸ್ ಗುಂಪಿನಲ್ಲಿ ಸೇರದೇ ಇರುವುದು, ಮಹಿಳೆಯರ ಜೊತೆ ಮಾತನಾಡುವಾಗ ಗಂಭೀರವಾಗಿರುವುದು, ಮಾತು–ಕೃತಿಯಲ್ಲಿ ಪ್ರೌಢತೆಯನ್ನು ಕಾಪಾಡಿಕೊಂಡಿರುವುದು– ಇತ್ಯಾದಿಗಳು ಆಕೆಯ ಗಮನಕ್ಕೆ ಬಂದಿದ್ದುವು. ಇದೀಗ ಈ ಸಭೆಯ ಬಳಿಕ ನೂರ್‌ನನ್ನು ಇನ್ನಷ್ಟು ಹತ್ತಿರದಿಂದ ಗಮನಿಸಲು ಆಕೆಗೆ ಸಾಧ್ಯವಾಯಿತು.

ಪರಸ್ಪರ ಮಾತಾಡುವಷ್ಟು ಸಲುಗೆಯೂ ಸೃಷ್ಟಿಯಾಯಿತು.

ನೂರ್ ಪ್ರತಿದಿನ ಸಂಜೆ ಕುರ್‌ಆನ್ ಓದುತ್ತಿದ್ದ. ಆತನ ಓದು ಒಂದಿಷ್ಟು ದೂರದ ವರೆಗೆ ಕೇಳಿಸುವಷ್ಟು ಜೋರಾಗಿತ್ತು. ಓದುವಾಗ ಆತ ಅದರಲ್ಲೇ ಲೀನನಾದವನಂತೆ ಓದುತ್ತಿದ್ದ. ಅಪಾರ ತನ್ಮಯತೆ, ಭಾವುಕತೆ. ಆತನ ದನಿಯೂ ಬಹಳ ಇಂಪು. ಬಹಳ ಸುಶ್ರಾವ್ಯವಾಗಿ ಆತನ ಓದು ಕೇಳಿಸುತ್ತಿತ್ತು.

ಆತ ಇಲ್ಲಿಗೆ ಬಂದ ಹೊಸದರಲ್ಲಿ ಆತನ ಈ ಜೋರು ದನಿಯ ಕುರ್‌ಆನ್ ಓದನ್ನು ಇತರ ಕಾರ್ಮಿಕರು ಆಕ್ಷೇಪಿಸಿದ್ದರಂತೆ. 'ನಿನ್ನ ಓದು ನಿನ್ನಲ್ಲಿರಲಿ, ನಮಗ್ಯಾಕೆ ಕೇಳಿಸುತ್ತೀ...' ಎಂದು ತರಾಟೆಗೆ ತೆಗೆದುಕೊಂಡಿದ್ದರಂತೆ. ನೂರ್ ಪ್ರತಿಯಾಗಿ ಏನನ್ನೂ ಅಂದಿರಲಿಲ್ಲವಂತೆ. ಆ ಬಳಿಕ ದನಿಯನ್ನು ತಗ್ಗಿಸಿ ಓದುತ್ತಿದ್ದ ಆತ ನಿಧಾನಕ್ಕೆ ದನಿಯನ್ನು ಏರಿಸುತ್ತಾ ಬಂದನಂತೆ. ಆತನ ದನಿಯಲ್ಲಿದ್ದ ಇಂಪು ಮತ್ತು ಸುಶ್ರಾವ್ಯ ಓದು ಈ ಮೊದಲು ಆಕ್ಷೇಪಿಸಿದ್ದ ಕಾರ್ಮಿಕರನ್ನೇ ಮರುಳುಗೊಳಿಸಿತಂತೆ. ಬಳಿಕ ಆತ ಜೋರು ದನಿಯಲ್ಲೇ ಓದಲಿ ಎಂದು ಅವರೇ ಬಯಸಿದರಂತೆ.

ಇದನ್ನು ಅನಾಮಿಕಳಿಗೆ ಹೇಳಿದ್ದೇ ನೂರ್.

# ಇಪ್ಪತ್ತೊಂದು

ನೂರ್ ನಮಾಝ್ ಮಾಡುತ್ತಿದ್ದುದೂ ಹಾಗೆ. ಹೊರಗೆ ವಿಶಾಲ ಬಯಲಿನಲ್ಲಿ ತನ್ನಷ್ಟಕ್ಕೇ ಚಾಪೆ ಹಾಸಿ ನಮಾಝ್‌ಗೆ ನಿಂತನೆಂದರೆ, ಉಳಿದ ಕಾರ್ಮಿಕರೆಲ್ಲ ಆತನ ನಮಾಝ್‌ಗೆ ಭಂಗವುಂಟಾಗಬಾರದೆಂದು ಮೌನವಾಗುತ್ತಿದ್ದರು. ಕೆಲವರು ಸುಮ್ಮನೆ ಆತನ ಜೊತೆ ನಮಾಝ್ ಮಾಡುತ್ತಿದ್ದುದೂ ಇತ್ತು. ಉಪವಾಸದ ಸಮಯದಲ್ಲಿ ಆತನ ದಿನಚರಿಯೇ ಭಿನ್ನವಾಗಿತ್ತು. ಸಂಜೆಯಾಗುತ್ತಲೇ ಆತ ಉಪವಾಸ ಬಿಡುವ ತಯಾರಿಯಲ್ಲಿ ನಿರತನಾಗುತ್ತಿದ್ದ. ಒಂದು ತುಂಡು ಖರ್ಜೂರ ಮತ್ತು ನೀರನ್ನು ಇಟ್ಟು ಸಮಯಕ್ಕಾಗಿ ಕಾಯುತ್ತಿದ್ದ. ಆತನಿಂದಾಗಿ ಇತರ





ಮುಸ್ಲಿಮ್ ಕಾರ್ಮಿಕರೂ ಉಪವಾಸ ಇರುವುದಕ್ಕೆ ಶುರು ಮಾಡಿದರು. ಆತ ಇಲ್ಲಿಗೆ ಬರುವುದಕ್ಕಿಂತ ಮೊದಲು ಉಪವಾಸ ಹಿಡಿಯದವರು ಮತ್ತು ನಮಾಝ್ ಮಾಡದವರೆಲ್ಲ ಆತನಿಂದಾಗಿ ಉಪವಾಸಿಗರು ಮತ್ತು ನಮಾಝಿಗರಾದರು ಎಂದು ಅನಾಮಿಕಳೊಂದಿಗೆ ಒಮ್ಮೆ ಕುಸುಮ ಹೇಳಿದ್ದಳು. ಕುಸುಮಳಿಗೆ ಅದು ಗೊತ್ತಾದದ್ದು ಆಕೆಯ ಗಂಡನಿಂದ.

ಒಂದು ದಿನ ನೂರ್ ಇರುವ ಬಿಡಾರಕ್ಕೆ ಹೋಗಿ ಆತನ ಜೊತೆ ಅನಾಮಿಕ ಬಿಡುಬೀಸಾಗಿ ಪ್ರಶ್ನಿಸಿದ್ದಳು–

'ನಿನಗೆಷ್ಟು ಮಕ್ಕಳು?'

'ಮೂವರು.'

'ಪತ್ನಿ?'

ನೂರ್ ಉತ್ತರಿಸುವ ಬದಲು ಅನಾಮಿಕಳ ಮುಖವನ್ನೇ ಪ್ರಶ್ನಾರ್ಥಕ ದೃಷ್ಟಿಯಿಂದ ನೋಡಿದ್ದ. ಈಕೆ ಪ್ರಶ್ನಿಸುತ್ತಿದ್ದಾಳೋ ವ್ಯಂಗ್ಯ ಮಾಡುತ್ತಿದ್ದಾಳೋ ಅನ್ನುವ ಅನುಮಾನ ಆತನ ಕಣ್ಣಲ್ಲಿತ್ತು. ಅನಾಮಿಕ ಮತ್ತೊಮ್ಮೆ ಪ್ರಶ್ನೆಯನ್ನು ಪುನರಾವರ್ತಿಸಿದ್ದಳು,

'ಅದೇ ಎಷ್ಟು ಪತ್ನಿಯರು ಅಂತ?'

ಅರ್ಧ ನಗು, ಅರ್ಧ ತುಂಟತನದಿಂದ ಕೂಡಿತ್ತು ಪ್ರಶ್ನೆ.

'ಒಬ್ಬಳು– ಸಾರಾ.'

ಮುಸ್ಲಿಮರೆಂದರೆ ನಾಲ್ಕು ನಾಲ್ಕು ಮದುವೆಯಾಗುವವರು, 25 ಮಕ್ಕಳನ್ನು ಹೊಂದುವವರು ಅನ್ನುವ ಮಾತು ಅನಾಮಿಕಳಿಗೆ ತಿಳಿಯದ್ದೇನಲ್ಲ. ಅಂಥ ಮಾತುಗಳನ್ನು ಆಕೆ ಸಂಪೂರ್ಣ ತಿರಸ್ಕರಿಸುವ ಸ್ಥಿತಿಯಲ್ಲೂ ಇರಲಿಲ್ಲ. ಆಕೆಯ ಮೊಬೈಲ್‌ಗೆ ಬರುತ್ತಿದ್ದ ಮೆಸೇಜುಗಳಲ್ಲಿ ಅಂಥ ಸುದ್ದಿಗಳಿಗೇನೂ ಬರ ಇರಲಿಲ್ಲ. ಮುಸ್ಲಿಮರೆಂದರೆ ಗೋಹತ್ಯೆ ನಡೆಸುವವರು, ಹಿಂದೂಗಳನ್ನು ಕಾಫಿರರೆಂದು ಕರೆದು ಕೊಲ್ಲಲು ಆದೇಶಿಸುವವರು, ಜಿಹಾದ್ ನಡೆಸುವವರು, ಹಿಂದೂ ಹೆಣ್ಮಕ್ಕಳನ್ನು ಪುಸಲಾಯಿಸಿ ಲವ್ ಜಿಹಾದ್‌ಗೆ ಬೀಳಿಸಿ ಮತಾಂತರ ಮಾಡುವವರು– ಇತ್ಯಾದಿ ಸಂದೇಶಗಳನ್ನು ಆಕೆಯೂ ಓದಿದ್ದಳು. ಮುಸ್ಲಿಮರ ಗ್ರಂಥ ಕುರಾನಿನಲ್ಲಿ ಹಿಂದೂಗಳನ್ನು ಹತ್ಯೆಗೈಯುವ ಆದೇಶ ಇದೆ ಎಂಬುದೂ ಅಂಥ ಸಂದೇಶಗಳಲ್ಲಿ ಒಂದು. ಅನಾಮಿಕ ಇಂಥ ಸಂದೇಶಗಳಲ್ಲಿ ಸಂಪೂರ್ಣ ನಂಬಿಕೆ ಇರಿಸಿಲ್ಲದಿದ್ದರೂ ಅವು ಪೂರ್ಣ ಸುಳ್ಳು ಇರಲಾರದು ಎಂಬ ಭಾವನೆಯೂ ಅವಳಲ್ಲಿತ್ತು.

ಆಕೆಗೆ ಇದ್ದ ಇನ್ನೊಂದು ತಕರಾರು ಏನೆಂದರೆ, ಬುರ್ಖಾ.

ಮುಸ್ಲಿಮ್ ಮಹಿಳೆಯರನ್ನು ಬುರ್ಖಾದ ಒಳಗಡೆ ಯಾಕೆ ಅಡಗಿಸಿ ಕೂರಿಸುತ್ತೀರಿ ಎಂಬ ಪ್ರಶ್ನೆ ಆಕೆಯಲ್ಲಿ ಈ ಮೊದಲಿನಿಂದಲೇ ಇತ್ತು.

'ಯಾಕೆ ಪ್ರಶ್ನೆ?' ಈಗ ಉತ್ತರಿಸಬೇಕಾದ ಸರದಿ ಅನಾಮಿಕಳದ್ದು.

'ಸುಮ್ಮನೆ ಕೇಳಿದೆ ಅಷ್ಟೇ. ನಿಮ್ಮವರು ನಾಲ್ಕು ನಾಲ್ಕು ಮದುವೆಯಾಗುತ್ತಾರೆ, ಡಜನ್ನು ಮಕ್ಕಳನ್ನು ಮಾಡುತ್ತಾರೆ ಅಂತ ಹೇಳುತ್ತಾರಲ್ಲ, ನೀನೂ ಹಾಗೇನಾ ಅಂತ ಸ್ಪಷ್ಟಪಡಿಸಿಕೊಂಡೆ ಅಷ್ಟೇ.'

'ಯಾರು ಹೇಳಿದ್ದು ನಾಲ್ಕು ನಾಲ್ಕು ಮದುವೆ ಆಗುತ್ತಾರೆ ಎಂದು?'

'ಹಾಗಂತ ನಿಮ್ಮ ಕುರಾನಿನಲ್ಲಿ ಇದೆಯಂತೆ. ನೀನು ಓದುತ್ತಿರುವ ಕುರಾನಿನಲ್ಲಿ ಅದು ಇಲ್ವೇ?' ಪ್ರಶ್ನೆಯಲ್ಲಿ ತುಂಟತನವೂ ಇತ್ತು.

'ಇದೆ.' ನೂರ್ ಯಾವ ಸಂಕೋಚವೂ ಇಲ್ಲದೇ ಹೇಳಿದ.

ಅನಾಮಿಕ ಅದನ್ನು ನಿರೀಕ್ಷಿಸಿರಲಿಲ್ಲ. ಈತ ನಿರಾಕರಿಸುತ್ತಾನೆ ಎಂದೇ ಆಕೆ ಅಂದುಕೊಂಡಿದ್ದಳು. ಇವರ ಗ್ರಂಥದಲ್ಲೇ ಹಾಗಿದೆ ಎಂದ ಮೇಲೆ ಇವರ ಬಗ್ಗೆ ಆಡಿಕೊಳ್ಳುವುದರಲ್ಲಿ ತಪ್ಪೇನಿದೆ ಎಂದು ಆಕೆಗೆ ಅನಿಸಿತು.

'ನಿನ್ನ ಊರು ಕರ್ನೂರು ತಾನೆ. ಅಲ್ಲಿ ಎಷ್ಟು ಮುಸ್ಲಿಮರ ಮನೆಗಳಿವೆ?' ನೂರ್ ಪ್ರಶ್ನಿಸಿದ.

'20–25ರಷ್ಟು ಇರಬಹುದು'– ಅನಾಮಿಕ ಅನುಮಾನಿಸುತ್ತಾ ಅಂದಳು.

'ಅವರಲ್ಲಿ ನಾಲ್ಕು ಮಂದಿ ಪತ್ನಿಯರನ್ನು ಹೊಂದಿದವರು ಎಷ್ಟಿದ್ದಾರೆ?'

ಈಗ ಅನಾಮಿಕ ಪೇಚಿಗೆ ಸಿಲುಕಿಕೊಂಡಳು. ಆಕೆ ಈ ರೀತಿಯಲ್ಲಿ ಒಮ್ಮೆಯೂ ಆಲೋಚಿಸಿರಲಿಲ್ಲ. ಮುಸ್ಲಿಮ್ ಪುರುಷರು ನಾಲ್ಕು ಪತ್ನಿಯರನ್ನು ಇಟ್ಟುಕೊಳ್ಳುತ್ತಾರೆ ಎಂಬ ಮಾತನ್ನು ಆಕೆ ಸಹಜವಾಗಿ ಹೇಳುತ್ತಿದ್ದಳೇ ಹೊರತು ಅದನ್ನು ಈ ರೀತಿಯಲ್ಲಿ ಪರಿಶೀಲನೆಗೆ ಒಡ್ಡಬಹುದು ಎಂಬುದಾಗಿ ಆಕೆ ಊಹಿಸಿಯೇ ಇರಲಿಲ್ಲ. ತಾನೇಕೆ ಈವರೆಗೂ ಹೀಗೆ ಆಲೋಚಿಸಿಲ್ಲ ಎಂದು ಕೈ ಕೈ ಹಿಸುಕಿಕೊಂಡಳು. ಆಕೆ ತನ್ನೂರಿನ ಅಷ್ಟೂ ಮುಸ್ಲಿಮ್ ಮನೆಗಳನ್ನು ಒಮ್ಮೆ ಕಣ್ಣೆದುರು ತಂದುಕೊಂಡಳು. ಅನೀಸುರ್ರಹ್ಮಾನ್, ನೂರ್ ಇಬ್ರಾಹೀಮ್, ಅಬ್ದುಲ್ ಕಾದರ್ ಖಾಜಿ, ಸುಲ್ತಾನ್ ಫಕೀರ್, ಅಬ್ದುಲ್ಲಾ ಬೀರಾನ್, ಸಮೀವುಲ್ಲಾ ಸೇಠ್… ಎಲ್ಲರನ್ನೂ ಪ್ರತ್ಯಪ್ರತ್ಯೇಕವಾಗಿ ಮನಸ್ಸಲ್ಲೇ ಅಳೆದಳು. ಎಲ್ಲರೂ ಪರಿಚಿತರೇ. ಎಲ್ಲರೂ ಸಂಸಾರಸ್ಥರೇ. ಅವರಾರಿಗೂ ಇಬ್ಬರು ಪತ್ನಿಯರೇ ಇಲ್ಲ. ಸಮೀವುಲ್ಲಾ ಸೇಠ್‌ಗೆ ಐವರು ಮಕ್ಕಳಿದ್ದಾರೆ. ಸುಲ್ತಾನ್ ಫಕೀರ್‌ಗೆ ಇಬ್ಬರು. ಬೀರಾನ್‌ಗೆ ನಾಲ್ಕು ಮಕ್ಕಳು. ಆದರೆ ಈ ಮಕ್ಕಳನ್ನೆಲ್ಲಾ ಇವರು ಒಬ್ಬಳೇ ಪತ್ನಿಯಿಂದ ಪಡೆದುಕೊಂಡಿದ್ದಾರೆ…

'ಎಷ್ಟಿದ್ದಾರೆ' – ನೂರ್ ಮತ್ತೆ ಪ್ರಶ್ನಿಸಿದ್ದ.

ಅನಾಮಿಕಳಲ್ಲಿ ತಪ್ಪಿತಸ್ಥ ಭಾವ ಮೂಡಿತು. ಆಕೆ ತುಸು ತಗ್ಗಿದ ದನಿಯಲ್ಲಿ ಹೇಳಿದಳು–





'ಒಬ್ಬಳಿಗಿಂತ ಹೆಚ್ಚು ಪತ್ನಿಯನ್ನು ಹೊಂದಿದವರು ನಮ್ಮೂರಲ್ಲಿ ಯಾರೂ ಇಲ್ಲ.'

ನೂರ್ ಆಕೆಯನ್ನು ಆಕ್ಷೇಪಿಸಲಿಲ್ಲ.

'ಕುರಾನಿನಲ್ಲಿ ಇದೆ ಅಂದೆನಲ್ಲ, ಅದು ನಿಜ. ಇದೆ. ನೀನು ಕುರಾನ್ ಓದಿರುವೆಯಾ?'

'ಇಲ್ಲ.'

ಆತ ತನ್ನ ಪಕ್ಕದಲ್ಲೇ ಇದ್ದ ಕುರಾನನ್ನು ಆಕೆಯ ಕೈಗಿತ್ತ. ಆಕೆ ಅದನ್ನು ಪಡೆದುಕೊಳ್ಳಲು ಹಿಂಜರಿದಳು. ಆತ ಒತ್ತಾಯದಿಂದ ಆಕೆಯ ಕೈಗೆ ನೀಡಿದ. ಅನಾಮಿಕಳಿಗೆ ಅದು ಹೊಸ ಅನುಭವ. ಆಕೆ ಆವರೆಗಿನ ಬದುಕಿನಲ್ಲಿ ಧರ್ಮಗ್ರಂಥವನ್ನು ಸ್ಪರ್ಶಿಸಿದ್ದು ಅದೇ ಮೊದಲು. ವೇದ, ಉಪನಿಷತ್ತು, ಭಗವದ್ಗೀತೆ.. ಈ ಯಾವುದನ್ನೂ ಗ್ರಂಥರೂಪದಲ್ಲಿ ಆಕೆ ಓದಿಯೇ ಇರಲಿಲ್ಲ.

'ನಿನಗೆ ಬಂಗಾಳಿ ಭಾಷೆ ಬರುತ್ತದೆಯೇ?' ನೂರ್ ಪ್ರಶ್ನಿಸಿದ.

'ಇಲ್ಲ'– ಅನಾಮಿಕಳ ಉತ್ತರದಲ್ಲಿ ಸಂಕೋಚವೇ ಹೆಚ್ಚಿತ್ತು.

'ಕುರಾನಿನ ಭಾಷೆ ಅರಬಿ. ಅರಬಿ ಭಾಷೆ ಬಾರದವರಿಗೆ ಅದು ಅರ್ಥವಾಗಬೇಕಲ್ಲ; ಅದಕ್ಕಾಗಿ ಅದನ್ನು ಬಂಗಾಳಿ ಭಾಷೆಗೆ ಅನುವಾದಿಸಿದ್ದಾರೆ. ಇದು ಕುರಾನಿನ ಬಂಗಾಳಿ ಭಾಷೆಯ ಅನುವಾದ ಗ್ರಂಥ. ನಿನಗೆ ಬಂಗಾಳಿ ಭಾಷೆ ಬರುತ್ತಿದ್ದರೆ ಅನುವಾದವನ್ನು ನೀನೇ ಓದಿಕೊಳ್ಳಬಹುದಿತ್ತು'– ನೂರ್ ವಿವರಿಸಿದ.

ಅನಾಮಿಕ ಕುರಾನನ್ನು ಹಿಡಿದು ಆತನ ಮುಖವನ್ನು ನೋಡಿದಳು. ಆತ ಅದನ್ನು ಬಿಡಿಸಿ ಆಕೆಯ ಕೈಗಿತ್ತ ಮತ್ತು ಹೇಳಿದ,

'ಇದು ಕುರಾನಿನ ನಾಲ್ಕನೇ ಅಧ್ಯಾಯ. ಹೆಸರು ಅನ್ನಿಸಾ ಅಂತ. ಅರಬಿಯಲ್ಲಿ ಅನ್ನಿಸಾ ಅಂದರೆ ಸ್ತ್ರೀ ಎಂದರ್ಥ. ಓರ್ವ ಪುರುಷನು ನಾಲ್ಕು ಮಂದಿ ಪತ್ನಿಯರನ್ನು ಹೊಂದಬಹುದು ಎಂದು ನಾನು ಹೇಳಿದೆನಲ್ಲ, ಅದಿರುವುದು ಇದೇ ಅಧ್ಯಾಯದಲ್ಲಿ. ಈ ಅಧ್ಯಾಯದ 3ನೇ ವಚನದಲ್ಲಿ ಹೀಗಿದೆ–

'ಅನಾಥರೊಂದಿಗೆ ನ್ಯಾಯಯುತವಾಗಿ ನಡೆದುಕೊಳ್ಳಲು ಸಾಧ್ಯವಾಗದೆಂಬ ಆಶಂಕೆ ನಿಮಗುಂಟಾದರೆ ಸ್ತ್ರೀಯರಲ್ಲಿ ನಿಮಗೆ ಮೆಚ್ಚಿದ ಇಬ್ಬರನ್ನೋ ಮೂವರನ್ನೋ ನಾಲ್ವರನ್ನೋ ವಿವಾಹ ಮಾಡಿಕೊಳ್ಳಿರಿ.'

ನಿನ್ನ ಪ್ರಶ್ನೆ ನಿಂತಿರುವುದು ಇದೇ ವಚನದ ಆಧಾರದಲ್ಲಿ. ವಿಷಯ ಏನೆಂದರೆ, ಇಬ್ಬರನ್ನೋ ಮೂವರನ್ನೋ ಅಥವಾ ನಾಲ್ವರನ್ನೋ ವಿವಾಹವಾಗಲಿ ಎಂಬ ಈ ವಾಕ್ಯ ಆರಂಭಗೊಳ್ಳುವುದು ಅನಾಥರನ್ನು ಉಲ್ಲೇಖಿಸಿಕೊಂಡು. ಹೀಗೇಕೆ ಎಂದು ಒಮ್ಮೆ ಆಲೋಚಿಸಿದರೂ ನಿಜ ಏನು ಎಂಬುದು ಗೊತ್ತಾಗುತ್ತದೆ.

ಪ್ರವಾದಿ ಮುಹಮ್ಮದರ ಕಾಲದಲ್ಲಿ ಇಲ್ಲಿ ಜಾತಿಗಳಿರುವಂತೆ ಅಲ್ಲಿ ಗೋತ್ರಗಳಿದ್ದುವು.

ಅವುಗಳ ನಡುವೆ ಮೇಲ್ಮೆಗಾಗಿ ಜಗಳಗಳು, ಯುದ್ಧಗಳೂ ನಡೆಯುತ್ತಿದ್ದುವು. ಅದು ಅರಬ್ ಸಂಸ್ಕೃತಿ. ಪ್ರವಾದಿಯವರು ಈ ಯುದ್ಧ ಸಂಸ್ಕೃತಿಯಲ್ಲಿ ಸಾಕಷ್ಟು ಬದಲಾವಣೆ ತಂದರು. ಗೋತ್ರಗಳ ನಡುವಿನ ವೈರತ್ವವನ್ನು ತಗ್ಗಿಸಿದರು. ಅವುಗಳ ನಡುವಿನ ಮೇಲ್ಮೆ ಭಾವವನ್ನು ಕೊನೆಗಾಣಿಸಿದರು. ಸರ್ವರೂ ಸಮಾನರು ಎಂಬ ಪ್ರಜ್ಞೆ ಮೂಡಿಸುವುದಕ್ಕೆ ಅವಿರತ ಶ್ರಮಿಸಿದರು. ಹಾಗಿದ್ದರೂ ಯುದ್ಧವನ್ನು ಬದುಕಿನ ಭಾಗವೇ ಆಗಿ ಪರಿಗಣಿಸಿದ್ದ ಮತ್ತು ಒಂದು ಸಂಸ್ಕೃತಿಯೆಂಬಂತೆ ಪೋಷಿಸಿಕೊಂಡು ಬಂದಿದ್ದ ಅರಬರು ಪ್ರವಾದಿ ಜೊತೆ ಯುದ್ಧಕ್ಕೆ ನಿಂತರು. ತಮಗಾಗದವರನ್ನು ಶಸ್ತ್ರಾಸ್ತ್ರಗಳೊಂದಿಗೆ ಎದುರಿಸುವುದು ಅಂದಿನ ಕಾಲದ ಸಹಜ ಸಂಸ್ಕೃತಿಯಾಗಿತ್ತು.

ಹಾಗೆ ನಡೆದ ಯುದ್ಧದ ಹೆಸರು ಉಹುದ್ ಎಂಬುದು.





## ಇಪ್ಪತ್ತೆರಡು

ಅನಾಮಿಕ ಮಂಡಿಗೆ ತಲೆಯಿಟ್ಟು ಆಲಿಸಿದ್ದಳು. ನೂರ್ ಮುಂದುವರಿಸಿದ್ದ–

ಉಹುದ್ ಅನ್ನುವ ಪರ್ವತದ ಕೆಳಗಡೆ ನಡೆದ ಆ ಯುದ್ಧದಲ್ಲಿ ಪ್ರವಾದಿ ಮುಹಮ್ಮದರ ಸಾಕಷ್ಟು ಅನುಯಾಯಿಗಳು ಸಾವಿಗೀಡಾದರು. ಇದೊಂದು ಸವಾಲಿನ ಸಂದರ್ಭವಾಗಿತ್ತು. ಯುದ್ಧದಲ್ಲಿ ಸಾಮಾನ್ಯವಾಗಿ ಸಾವಿಗೀಡಾಗುವುದು ಪುರುಷರು ತಾನೇ. ಹೀಗೆ ಸಾವಿಗೀಡಾದ ಪುರುಷರ ಪತ್ನಿ ವಿಧವೆಯಾದರೆ, ಅವರ ಮಕ್ಕಳು ಅನಾಥರಾದರು. ಪ್ರವಾದಿ ಮುಹಮ್ಮದರ ವಿಚಾರಧಾರೆಯನ್ನು ಒಪ್ಪಿಕೊಂಡು ಅವರ ಜೊತೆ ಸೇರಿದ್ದವರಲ್ಲಿ

ಸಾಕಷ್ಟು ಪುರುಷರು ಯುದ್ಧಭೂಮಿಯಲ್ಲಿ ಮೃತಪಡುವುದು ಮತ್ತು ಅವರನ್ನು ಅವಲಂಬಿಸಿದ್ದ ಮಹಿಳೆ ಮತ್ತು ಮಕ್ಕಳು ದಿಕ್ಕಿಲ್ಲದಂತಾಗುವ ಸ್ಥಿತಿ. ಇಂಥ ಕಠಿಣ ಸನ್ನಿವೇಶ ನಿರ್ಮಾಣವಾದಾಗ ದೇವನಿಂದ ಅವತೀರ್ಣಗೊಂಡ ವಚನ ಇದು. ಆದ್ದರಿಂದಲೇ,

ಈ ವಚನದ ಆರಂಭವು ಅನಾಥರೊಂದಿಗೆ ನ್ಯಾಯಯುತವಾಗಿ ನಡೆದುಕೊಳ್ಳಲು ಸಾಧ್ಯವಾಗದೆಂಬ ಆಶಂಕೆ ನಿಮಗುಂಟಾದರೆ... ಎಂದಿದೆ. ಯುದ್ಧದಲ್ಲಿ ಮೃತಪಟ್ಟ ಮುಸ್ಲಿಮ್ ಯೋಧರ ಅನಾಥ ಮಕ್ಕಳಿಗೆ ಇತರ ಮುಸ್ಲಿಮರು ಆಶ್ರಯ ಒದಗಿಸಬೇಕು. ಅವರ ಜೊತೆ ಅವರ ವಿಧವೆ ಪತ್ನಿಯರೂ ಇರುವುದು ಸಹಜ. ಅವರ ಆಶ್ರಯವೂ ನಿಮ್ಮ ಹೊಣೆಯಲ್ಲಿದೆ. ಆದರೆ ಇವರೆಲ್ಲರಿಗೆ ಆಶ್ರಯ ಕೊಟ್ಟ ಹೆಸರಲ್ಲಿ ನೀವು ಅವರ ಮೇಲೆ ಅಧಿಕಾರ ಸ್ಥಾಪಿಸಬಾರದು. ಅವರನ್ನು ಲೈಂಗಿಕವಾಗಿ ಶೋಷಿಸಬಾರದು. ಹಾಗೊಂದು ವೇಳೆ, ಅಂಥ ಸನ್ನಿವೇಶ ನಿರ್ಮಾಣವಾಗುವ ಸಂದರ್ಭ ಎದುರಾದರೆ, ಅವರನ್ನು ಪತ್ನಿಯಾಗಿ ಸ್ವೀಕರಿಸಿ ಆಶ್ರಯ ಕಲ್ಪಿಸಬೇಕು ಎಂಬುದು ಈ ವಚನದ ಸಾರಾಂಶ.

ಇದು ಯುದ್ಧದ ಸಂದರ್ಭದಲ್ಲಿ ಉಂಟಾದ ವಿಷಮ ಪರಿಸ್ಥಿತಿಗೆ ನೀಡಲಾದ ಪರಿಹಾರವೇ ಹೊರತು ನಾಲ್ವರು ಪತ್ನಿಯರನ್ನು ಸಾರಾಸಗಟು ಹೊಂದಲು ಪ್ರೇರೇಪಿಸುವ ಅಥವಾ ಅನುಮತಿಸುವ ವಚನ ಅಲ್ಲ.

ಒಂದುವೇಳೆ, ಇದು ಮುಸ್ಲಿಮರ ಸಂಸ್ಕೃತಿ ಎಂದಾಗಿದ್ದರೆ, ಪ್ರತಿ ಊರಿನಲ್ಲೂ ಇಂಥವರು ಧಾರಾಳ ಕಾಣಸಿಗಬೇಕಿತ್ತು. ಮಾತ್ರವಲ್ಲ, ಮುಸ್ಲಿಮ್ ಸಮುದಾಯದಲ್ಲಿ ಹೆಣ್ಮಕ್ಕಳ ಕೊರತೆಯಾಗಿ ಹಾಹಾಕಾರ ಏಳಬಹುದಿತ್ತು. ಒಬ್ಬೊಬ್ಬ ನಾಲ್ಕು ನಾಲ್ಕು ಹೆಣ್ಮಕ್ಕಳನ್ನು ಮದುವೆಯಾದರೆ, ಗಂಡು–ಹೆಣ್ಣಿನ ಅನುಪಾತ ಎಷ್ಟಿರಬೇಕು ಹೇಳು? ಒಂದು ಗಂಡು ಮಗುವಿಗೆ ನಾಲ್ಕು ಹೆಣ್ಣು ಮಗು ಬೇಡವೇ? ಅಂಥದ್ದೊಂದು ಅನುಪಾತ ಜಗತ್ತಿನ ಎಲ್ಲಾದರೂ ಇದೆಯೇ? ನಮ್ಮ ಭಾರತದಲ್ಲೇ ಎಷ್ಟಿದೆ? 1000 ಗಂಡು ಮಕ್ಕಳಿಗೆ 950ಕ್ಕಿಂತ ಕಡಿಮೆ ಹೆಣ್ಣು ಮಕ್ಕಳಿದ್ದಾರೆ. ಒಬ್ಬನಿಗೆ ಒಂದು ಹೆಣ್ಣೇ ಸಿಗದ ಸ್ಥಿತಿ ಇರುವಾಗ ಇನ್ನು, ನಾಲ್ಕನ್ನು ಎಲ್ಲಿಂದ ತರುವುದು ಹೇಳು?'

ಅನಾಮಿಕ ನಕ್ಕಳು. ನೂರ್‌ನೂ ನಕ್ಕ.

ಆದರೆ ಅನಾಮಿಕಳ ನಗುವಿನ ಹಿಂದೆ ಅಚ್ಚರಿಯೂ ಇತ್ತು.

ಈತ ಇಷ್ಟೊಂದು ಜ್ಞಾನವನ್ನು ಎಲ್ಲಿಂದ ಪಡಕೊಂಡ? ಈತನ ಟೊಪ್ಪಿ, ಗಡ್ಡ, ನಮಾಜು, ಕುರಾನು ಪಠಣವನ್ನು ನೋಡಿ ಕರ್ಮಠ ಮುಸ್ಲಿಮನಿರಬೇಕು ಅಂದುಕೊಂಡರೆ, ಇವನು ಕುರಾನನ್ನು ಅರೆದು ಕುಡಿದವನಂತೆ ಮಾತಾಡುತ್ತಿದ್ದಾನಲ್ಲ. ನಾನು ಈವರೆಗೆ ಆಲೋಚಿಸಿಯೇ ಇಲ್ಲದ ದಾರಿಯಲ್ಲಿ ಆಲೋಚಿಸುವಂತೆ ಮಾಡಿದನಲ್ಲ. ಆತನ ವಾದ





ಒಪ್ಪಿಕೊಳ್ಳುವಂಥದ್ದೇ ಅಲ್ಲವೇ? ನಾಲ್ಕು ಮದುವೆಯಾದ ಮುಸ್ಲಿಮ್ ಪುರುಷರು ಎಲ್ಲಿದ್ದಾರೆ, ಎಷ್ಟಿದ್ದಾರೆ? ನಾನೇಕೆ ಈ ರೀತಿಯಾಗಿ ಆಲೋಚಿಸಿಯೇ ಇಲ್ಲ? ಕುರಾನಿನ ವಚನಕ್ಕೆ ಈ ರೀತಿಯ ಹಿನ್ನೆಲೆ ಇದೆಯೆಂದು ನನಗೆ ಯಾರೂ ಈವರೆಗೆ ಹೇಳಿಯೂ ಇಲ್ಲವಲ್ಲ. ತಪ್ಪು ಧರ್ಮಗ್ರಂಥದ್ದೋ ಅಥವಾ ಅದನ್ನು ತಪ್ಪಾಗಿ ಓದುವವರದ್ದೋ? ಕುರಾನು ಹೋಗಲಿ, ನಾನು ಭಗವದ್ಗೀತೆಯನ್ನು ಓದಿದ್ದೇನಾ? ಅದರಲ್ಲಿ ಯಾವ ವಿಷಯವನ್ನು ಯಾವ ಹಿನ್ನೆಲೆಯಲ್ಲಿ ಹೇಳಲಾಗಿದೆ ಎಂಬುದು ತನಗೆ ಗೊತ್ತಿದೆಯೇ?

ಆಕೆಗೆ ನೂರ್‌ನ ಬಗ್ಗೆ ಅಭಿಮಾನ ಮೂಡಿತು. ಈತ ನಾನು ಗ್ರಹಿಸಿದ್ದಕ್ಕಿಂತ ಭಿನ್ನ ವ್ಯಕ್ತಿ ಎಂದು ಅನಿಸಿತು.

# ಇಪ್ಪತ್ತಮೂರು

**ವ**ರದರಾಜನ ಕಾಫಿ ಎಸ್ಟೇಟ್‌ನ ಕಾರ್ಮಿಕ ಶಿಬಿರದಲ್ಲಿ ನೂರ್‌ನ ಜೊತೆ ಮಾತಾಡುತ್ತಾ, ಆತನ ಧಾರ್ಮಿಕ ಪಾಂಡಿತ್ಯವನ್ನು ಅಚ್ಚರಿ ಮತ್ತು ಅಭಿಮಾನದಿಂದ ಅನಾಮಿಕ ತನ್ನಲ್ಲೇ ಅವಲೋಕಿಸುತ್ತಿದ್ದಳು. ನಾಲ್ಕು ಮಂದಿ ಪತ್ನಿಯರನ್ನು ಹೊಂದುವ ಬಗ್ಗೆ ತಾನು ಈವರೆಗೆ ಅರಿತಿದ್ದ ಜ್ಞಾನ ಮತ್ತು ನೂರ್ ಅದಕ್ಕೆ ಕುರಾನಿನ ಮೂಲಕವೇ ನೀಡಿದ ಉತ್ತರ ಹಾಗೂ ತರ್ಕವನ್ನು ಆಕೆಯ ಮನಸ್ಸು ನಿಧಾನಕ್ಕೆ ಜೀರ್ಣಿಸಿಕೊಳ್ಳುತ್ತಿತ್ತು. ಆಕೆ ಮೌನವಾಗಿರುವುದನ್ನು ಕಂಡು ನೂರ್ ಮಾತಿಗೆಳೆದ–

'ಒಂದು ತಮಾಶೆ ಗೊತ್ತಾ?'





'ಏನು?'

'ಇಸ್ಲಾಮ್ ಧರ್ಮ ಖಡ್ಗದಿಂದ ಹರಡಿತು. ಒಂದು ಕೈಯಲ್ಲಿ ಕುರಾನು ಮತ್ತು ಇನ್ನೊಂದು ಕೈಯಲ್ಲಿ ಖಡ್ಗವನ್ನು ಹಿಡಿದು ಮುಸ್ಲಿಮರು ಭಾರತಕ್ಕೆ ಬಂದರು. ಬಲವಂತದಿಂದ ಈ ದೇಶದ ಮೂಲನಿವಾಸಿಗಳನ್ನು ಮತಾಂತರಿಸಿದರು... ಎಂದೆಲ್ಲಾ ಹೇಳಿರುವುದನ್ನು ಕೇಳಿರುವೆಯಾ?'

'ಹೌದು.'

'ನಿನಗೆ ನಿಜ ಅಂತ ಅನಿಸಿಲ್ಲವೇ?'

ಅನಾಮಿಕ ಮಾತಾಡಲಿಲ್ಲ. ಆದರೆ ಆಕೆಯ ಮೌನದಲ್ಲಿ ನಿಜ ಅನ್ನುವ ಭಾವ ಇತ್ತು. ಆಕೆ ಈ ಬಗೆಯ ಆರೋಪಗಳ ಮೆಸೇಜ್‌ಗಳನ್ನು ಸಾಕಷ್ಟು ಓದಿದ್ದಳು.

'ಅಂಥ ಭಾವ ನಿನ್ನಲ್ಲಿದ್ದರೆ, ಅದು ನಿನ್ನ ತಪ್ಪಲ್ಲ. ನಮ್ಮ ತಪ್ಪೂ ಇದೆ.'

'ಹೇಗೆ?'

'ನಿನ್ನ ಕೈಯಲ್ಲಿರುವ ಈ ಕುರಾನಿನಲ್ಲಿ 114 ಅಧ್ಯಾಯಗಳಿವೆ. ಇದರಲ್ಲಿ 2ನೇ ಅಧ್ಯಾಯದ ಹೆಸರು 'ಅಲ್ ಬಕರಾ' ಅಂತ. ಅಲ್ ಬಕರಾ ಅಂದರೆ ಅರ್ಥ ಏನು ಗೊತ್ತಾ– ಕರು ಅಂತ. ಈ ಅಧ್ಯಾಯದಲ್ಲಿ ಒಂದು ವಚನ ಇದೆ.

'ಧರ್ಮದಲ್ಲಿ ಯಾವುದೇ ಒತ್ತಾಯ–ಬಲಾತ್ಕಾರಗಳಿಲ್ಲ' ಅಂತ. ಇದನ್ನು ಅತ್ಯಂತ ಪ್ರಾಯೋಗಿಕವಾಗಿ ನಿರೂಪಿಸಿದವರು ಪ್ರವಾದಿ ಮುಹಮ್ಮದರು.'

ಅನಾಮಿಕ ಕುರಾನನ್ನು ನೂರ್‌ನ ಕೈಯಲ್ಲಿ ಇಟ್ಟು ಗೋಡೆಗೆ ಒರಗಿ ಕುಳಿತುಕೊಂಡಳು.

ಪ್ರವಾದಿ ಮುಹಮ್ಮದರು ಹುಟ್ಟುವುದಕ್ಕಿಂತ ಮೊದಲೇ ಅವರ ಅಪ್ಪ ತೀರಿಕೊಂಡಿದ್ದರು. ಅವರಿಗೆ 6 ವರ್ಷವಾದಾಗ ಅಮ್ಮನೂ ತೀರಿಕೊಂಡರು. ಹೀಗೆ ಅವರು ಅನಾಥ ಸ್ಥಿತಿಗೆ ತಲುಪಿದಾಗ ಅವರ ದೊಡ್ಡಪ್ಪ ಅಬೂತಾಲಿಬ್ ಎಂಬವರು ಅವರ ಪಾಲನೆ–ಪೋಷಣೆಯ ಹೊಣೆಯನ್ನು ವಹಿಸಿಕೊಂಡರು. ಪ್ರವಾದಿ 40ನೇ ವರ್ಷಕ್ಕೆ ತಲುಪಿದ ಬಳಿಕ ಅವರಿದ್ದ ಮಕ್ಕಾ ಪ್ರದೇಶದ ಸರಿ–ತಪ್ಪುಗಳನ್ನು ಬಹಿರಂಗವಾಗಿ ಪ್ರಶ್ನಿಸುವುದಕ್ಕೆ ಪ್ರಾರಂಭಿಸಿದರು. ಸರಿ ಯಾವುದು, ತಪ್ಪು ಯಾವುದು, ಕೆಡುಕು ಏನು, ಒಳಿತು ಏನು, ದೇವನು ಒಬ್ಬ, ವರದಕ್ಷಿಣೆ ತಪ್ಪು, ಆಸ್ತಿಯಲ್ಲಿ ಹೆಣ್ಣಿಗೂ ಪಾಲು ಕೊಡಬೇಕು, ಮದುವೆ ಹೀಗಿರಬೇಕು, ವಿಚ್ಛೇದನ ಹೀಗಿರಬೇಕು, ಬಡ್ಡಿ ಪಡೆಯಬಾರದು, ಮದ್ಯಪಾನ ಮಾಡಬಾರದು, ವಿಗ್ರಹಗಳನ್ನು ಪೂಜಿಸಬಾರದು, ಸತ್ತ ಮೇಲೆ ಇನ್ನೊಂದು ಜೀವನ ಇದೆ, ಅಲ್ಲಿ ದೇವನು ನಮ್ಮ ಭೂಮಿಯ ಜೀವನದ ಮೌಲ್ಯಮಾಪನ ಮಾಡಿ ಶಿಕ್ಷೆ ಅಥವಾ ಪುರಸ್ಕಾರ ನೀಡುತ್ತಾನೆ.. ಎಂಬಿತ್ಯಾದಿ ಮಾತುಗಳನ್ನು ಎಲ್ಲೆಡೆ ಪ್ರಚಾರ ಮಾಡತೊಡಗಿದರು.

ಮಕ್ಕಾದ ಜನರಿಗೆ ಅವರ ಈ ಮಾತುಗಳು ಹೊಸತು.

ಅಲ್ಲದೇ, ಅವರ ಆವರೆಗಿನ ಪಾರಂಪರಿಕ ಬದುಕನ್ನು ಪ್ರಶ್ನಿಸುವಂಥದ್ದೂ ಆಗಿತ್ತು. ನಮ್ಮ ನಡುವೆಯೇ ಬೆಳೆದ ಯುವಕ ಈಗ ನಮ್ಮ ಬದುಕಿನ ಪರಿಕಲ್ಪನೆಯನ್ನೇ ಪ್ರಶ್ನಿಸುತ್ತಿದ್ದಾನೆ ಎಂಬುದನ್ನು ಅವರಲ್ಲಿ ಹೆಚ್ಚಿನವರಿಗೆ ಸಹಿಸಲಾಗಲಿಲ್ಲ. ಹೀಗೆ ಪ್ರವಾದಿ ಮುಹಮ್ಮದರ ಮಾತನ್ನು ಮೊದಲು ಪ್ರತಿಭಟಿಸಿದವರೇ ಅವರ ಚಿಕ್ಕಪ್ಪರಾದ ಅಬೂಲಹಬ್, ಅಬೂಜಹಲ್ ಮುಂತಾದವರು– ನೂರ್ ಮಾತನ್ನು ನಿಲ್ಲಿಸಿದ.

ಏನಾಯ್ತು? ಅನಾಮಿಕ ಕುತೂಹಲ ವ್ಯಕ್ತಪಡಿಸಿದಳು.

ಪ್ರವಾದಿ ಮುಹಮ್ಮದರ ವಿರೋಧಿ ಗುಂಪು ದಿನೇ ದಿನೇ ಬಲ ಪಡೆಯತೊಡಗಿತು. ಅವರು ಹೋದಲ್ಲೆಲ್ಲ ಅವರ ಚಿಕ್ಕಪ್ಪಂದಿರೇ ಅವರನ್ನು ಹಿಂಬಾಲಿಸಿ ಹೀಯಾಳಿಸತೊಡಗಿದರು. ಅವರ ವಿರುದ್ಧ ಜನರನ್ನು ಛೂ ಬಿಟ್ಟರು. ಜನರು ಕಲ್ಲೆಸೆದರು. ಹಿಂಸಿಸಿದರು. ನಿನ್ನ ಪ್ರಚಾರವನ್ನು ನಿಲ್ಲಿಸದಿದ್ದರೆ ಕೊಲ್ಲುವುದಾಗಿ ಬೆದರಿಕೆ ಹಾಕಿದರು.

ವಿಶೇಷ ಏನೆಂದರೆ,

ಆಗಲೂ ಪ್ರವಾದಿ ಮುಹಮ್ಮದರು ದೊಡ್ಡಪ್ಪ ಅಬೂತಾಲಿಬ್ ಎಂಬವರ ಸುಪರ್ದಿಯಲ್ಲೇ ಇದ್ದರು. ಹಾಗಂತ, ಮಕ್ಕಾದಲ್ಲಿ ಕೆಲವರು ಪ್ರವಾದಿ ಮುಹಮ್ಮದರ ವಿಚಾರಧಾರೆಯನ್ನು ಒಪ್ಪಿಕೊಂಡರಾದರೂ ಅವರ ಈ ದೊಡ್ಡಪ್ಪ ಒಪ್ಪಿಕೊಂಡಿರಲಿಲ್ಲ. ಆದರೆ, ಮುಹಮ್ಮದರಿಗೆ ರಕ್ಷಣೆ ನೀಡುವುದನ್ನೂ ನಿಲ್ಲಿಸಿರಲಿಲ್ಲ. ಇದು ಮಕ್ಕಾದ ಮುಹಮ್ಮದರ ವಿರೋಧಿಗಳನ್ನು ರೇಗಿಸಿತು. ಅವರ ಚಿಕ್ಕಪ್ಪಂದಿರನ್ನು ಸಿಟ್ಟಾಗಿಸಿತು. ಈ ನಡುವೆ ಪ್ರವಾದಿ ಮುಹಮ್ಮದರ ಹಲವು ಅನುಯಾಯಿಗಳು ಹಿಂಸೆಯನ್ನು ತಾಳಲಾರದೇ ಇತಿಯೋಪಿಯಾಕ್ಕೆ ವಲಸೆ ಹೋಗಿದ್ದರು. ವಿರೋಧಿಗಳು ಒಂದು ತೀರ್ಮಾನಕ್ಕೆ ಬಂದರು.

ಮುಹಮ್ಮದರನ್ನು ತಮ್ಮ ಕೈಗೆ ಒಪ್ಪಿಸುವಂತೆ ಅಬೂತಾಲಿಬ್‌ರಲ್ಲಿ ಕೇಳಿಕೊಳ್ಳುವುದು. ಅವರು ಒಪ್ಪದಿದ್ದರೆ ಅವರು ವಾಸಿಸುವ ಇಡೀ ಕಾಲನಿಗೇ ಬಹಿಷ್ಕಾರ ಹಾಕುವುದು.

ಆದರೆ,

ಮುಹಮ್ಮದರ ವಿಚಾರಧಾರೆಯೊಂದಿಗೆ ಅಬೂತಾಲಿಬ್‌ರಿಗೆ ಸಹಮತ ಇಲ್ಲದಿದ್ದರೂ ವಿರೋಧಿಗಳ ಕೈಗೆ ಅವರನ್ನು ಒಪ್ಪಿಸಲು ಅವರು ಸಿದ್ಧರಾಗಲಿಲ್ಲ.

ಕೊನೆಗೆ ಅವರು ವಾಸಿಸುವ ಕಾಲನಿಗೇ ಬಹಿಷ್ಕಾರ ಘೋಷಿಸಲಾಯಿತು. ಎಷ್ಟು ಕಟು ಬಹಿಷ್ಕಾರ ಅದಾಗಿತ್ತೆಂದರೆ, ಎಲೆ–ಸೊಪ್ಪುಗಳನ್ನು ತಿಂದು ಆ ಕಣಿವೆಯ ನಿವಾಸಿಗಳು ಬದುಕಬೇಕಾಯಿತು. ಇವರ ಮೇಲೆ ಸಹಾನುಭೂತಿ ಇದ್ದವರು ರಾತ್ರಿ ಕತ್ತಲಲ್ಲಿ ಇವರಿಗೆ ಆಹಾರವನ್ನು ಒದಗಿಸುತ್ತಿದ್ದುದೂ ಇತ್ತು. ಹೀಗೆ ಮೂರು ವರ್ಷಗಳ





ಬಳಿಕ ಬಹಿಷ್ಕಾರ ಕೊನೆಗೊಂಡಿತು. ಆದರೂ ಅಬೂತಾಲಿಬ್‌ರು ತಮ್ಮ ತಮ್ಮನ ಮಗನನ್ನು ಬಿಟ್ಟುಕೊಡಲಿಲ್ಲ. ಅವರ ವಿಚಾರಧಾರೆಯನ್ನು ಒಪ್ಪಿಕೊಳ್ಳಲೂ ಇಲ್ಲ. ಎಲ್ಲಿಯ ವರೆಗೆಂದರೆ, ಅವರು ತನ್ನ ಮೂಲ ಧರ್ಮದಲ್ಲಿದ್ದುಕೊಂಡೇ ನಿಧನರಾದರು.

ಅಂದರೆ

ಅವರು ಪ್ರವಾದಿ ಮುಹಮ್ಮದರನ್ನು ಪ್ರೀತಿಸಿದರು. ಕೊನೆತನಕ ರಕ್ಷಣೆಯನ್ನೂ ಕೊಟ್ಟರು. ಆದರೆ ಅವರ ವಿಚಾರಧಾರೆಯನ್ನು ಒಪ್ಪಿಕೊಳ್ಳಲಿಲ್ಲ. ಪ್ರವಾದಿ ತನ್ನ ವಿಚಾರಧಾರೆಯನ್ನು ಅವರ ಮೇಲೆ ಹೇರಲೂ ಇಲ್ಲ.

ಇಸ್ಲಾಮ್‌ನ ಸಹಿಷ್ಣು ಗುಣಕ್ಕೆ ಇದಕ್ಕಿಂತ ಉತ್ತಮ ವ್ಯಾಖ್ಯಾನ ಬೇರೆ ಇಲ್ಲ ಎಂದು ಅನಿಸುತ್ತದೆ'– ಎಂದು ಮಾತು ಮುಗಿಸಿದ.

'ಅಂದರೆ, ಬಲವಂತದಿಂದ ಮತಾಂತರ ನಡೆದೇ ಇಲ್ಲ ಎಂದು ಹೇಳುತ್ತೀಯಾ?'– ಆತನ ಮಾತು ಮುಗಿಯಲು ಕಾದು ಕುಳಿತವಳಂತೆ ಅನಾಮಿಕ ಪ್ರಶ್ನಿಸಿದಳು.

'ಇಲ್ಲ, ಹಾಗೆ ಹೇಳಲ್ಲ. ಮುಸ್ಲಿಮರೆಲ್ಲ ಸುಭಗರು, ಅವರಿಂದ ತಪ್ಪು ಸಂಭವಿಸಲು ಸಾಧ್ಯವೇ ಇಲ್ಲ ಅನ್ನುವ ಮೂರ್ಖತನ ನನ್ನದಲ್ಲ. ತಪ್ಪು ಯಾರು ಮಾಡಿಲ್ಲ ಅನಾಮಿಕ? ತಪ್ಪು ಮಾಡುವುದಕ್ಕೆ ಅವರು ಮುಸ್ಲಿಮರೋ ಹಿಂದೂಗಳೋ ಆಗಬೇಕಿಲ್ಲ. ಹಿಂದುವೋ ಮುಸ್ಲಿಮೋ ಆಗಿದ್ದುಕೊಂಡು ಅವರು ತಪ್ಪು ಮಾಡುವುದೂ ಇಲ್ಲ. ಅವರು ತಪ್ಪು ಮಾಡುತ್ತಾರೆ. ನಾವದನ್ನು ಅವರ ಧರ್ಮಕ್ಕೆ ಅಂಟಿಸಿ ಬಿಡುತ್ತೇವೆ. ಈ ದೇಶದಲ್ಲೇ ಹುಟ್ಟಿ ಬೆಳೆದ ಬೌದ್ಧ ಧರ್ಮ, ಇವತ್ತು ಈ ದೇಶದಿಂದಲೇ ನಾಪತ್ತೆಯಾಗಿ ಪರದೇಶಗಳಲ್ಲಿ ಮುಖ್ಯ ಧರ್ಮವಾಗಿರುವುದಕ್ಕೆ ಕಾರಣ ಏನು ಹೇಳು? ಜಪಾನು, ಮಂಗೋಲಿಯಾ, ಭೂತಾನ್, ಟಿಬೆಟ್, ಶ್ರೀಲಂಕಾ ಮುಂತಾದ ದೇಶಗಳಲ್ಲಿ ವಿಪುಲವಾಗಿ ಹರಡಿರುವ ಬೌದ್ಧ ಧರ್ಮವು ಹುಟ್ಟಿದ ಈ ದೇಶದಲ್ಲಿ ತೀರಾ ನಗಣ್ಯವಾಗಿರುವುದು ಏನಕ್ಕೆ? ಒಂದು ಕಾಲದಲ್ಲಿ ಬೌದ್ಧ ಧರ್ಮಕ್ಕೆ ಈ ದೇಶದಲ್ಲಿ ಎಂಥ ಸ್ಥಾನಮಾನವಿತ್ತು? ಎಷ್ಟು ಕ್ಷಿಪ್ರವಾಗಿ ಹರಡಿಕೊಂಡಿತ್ತು? ಆದರೆ,

❖ ❖ ❖

ಗೋಡೆಗೆ ಒರಗಿದ್ದ ಅನಾಮಿಕ ನೇರವಾಗಿ ಕುಳಿತುಕೊಂಡಳು.

'ಏನು ಬೋರ್ ಆಗುತ್ತಿದೆಯೇ?' ನೂರ್ ಪ್ರಶ್ನಿಸಿದ.

'ಇಲ್ಲ, ಮುಂದುವರಿಸು' ಎಂದಳು ಅನಾಮಿಕ.

ಆತ ಹೇಳತೊಡಗಿದ.

## ಇಪ್ಪತ್ತನಾಲ್ಕು

ಆದರೆ,

ಆ ಬಳಿಕ ನಡೆದದ್ದೇನು?

ಬೌದ್ಧ ಅನುಯಾಯಿಗಳ ಮೇಲೆ ಈ ದೇಶದಲ್ಲಿ ಎಂತೆಂಥ ದೌರ್ಜನ್ಯಗಳು ನಡೆದುವು? ಅವರ ಸ್ತೂಪಗಳನ್ನು ಹೇಗೆ ನೆಲಸಮ ಮಾಡಲಾಯಿತು? ಅವರಿಗೆ ಕೊಟ್ಟ ಕಿರುಕುಳ, ಹಿಂಸೆ, ಹಲ್ಲೆಗಳ ಇತಿಹಾಸವೇನು? ಇದಕ್ಕೆ ಯಾರನ್ನು ಹೊಣೆ ಯಾಗಿಸಬೇಕು– ಹಿಂದೂ ಧರ್ಮವನ್ನೋ ಅಥವಾ ಹಿಂಸೆ ಎಸಗಿದವರನ್ನೋ?

ನಮ್ಮ ಭಾಷಾ ಬಳಕೆಯ ಸ್ವರೂಪ ಬದಲಾಗಿದೆ ಅನಾಮಿಕ.





ಹಿಂದೂಗಳು ಬೌದ್ಧರನ್ನು ಓಡಿಸಿದರು ಎಂಬುದು ಈಗ ಬಳಕೆಯಲ್ಲಿರುವ ಸಹಜ ಭಾಷಾಕ್ರಮ. ನಿಜಕ್ಕೂ ಹಿಂದೂಗಳು ಬೌದ್ಧರನ್ನು ಥಳಿಸಿದರೇ, ಹೊಡೆದರೇ, ಓಡಿಸಿದರೇ? ಹಿಂದೂವಾಗಿದ್ದುಕೊಂಡು ಓರ್ವ ಇತರರಿಗೆ ಕೇಡು ಬಗೆಯಲು ಸಾಧ್ಯವೇ? ಥಳಿಸಲು ಸಾಧ್ಯವೇ? ದೌರ್ಜನ್ಯ ಎಸಗಲು ಸಾಧ್ಯವೇ?'

ಹೇಳು ಅನಾಮಿಕ?

'ನೀನೇ ಹೇಳು'– ಅನಾಮಿಕ ಉತ್ತರಿಸಿದಳು.

'ಇಲ್ಲ ಎಂಬುದೇ ನನ್ನ ನಂಬಿಕೆ. ಬೌದ್ಧರ ಮೇಲೆ ದಾಳಿ ನಡೆಸಿದವ ಹಿಂದೂ ಧರ್ಮದ ಅನುಯಾಯಿ ಆಗಿರಬಹುದು. ಆದರೆ, ದಾಳಿ ನಡೆಸಿದ್ದು ಹಿಂದೂ ಧರ್ಮ ಅಲ್ಲ. ದಾಳಿ ನಡೆಸುವಾಗ ಆತ ಹಿಂದೂ ಧರ್ಮದ ಅನುಯಾಯಿ ಆಗಿರುವುದೂ ಇಲ್ಲ. ಆತ ಪಾಪಿ ಮನುಷ್ಯನಷ್ಟೇ ಆಗಿರುತ್ತಾನೆ. ನಾವೇನು ಮಾಡುತ್ತೇವೆಂದರೆ, ಆತನ ಹೆಸರನ್ನು ನೋಡಿ, ಆತನ ತಪ್ಪನ್ನು ಆತನ ಧರ್ಮಕ್ಕೆ ಅಂಟಿಸಿ ಬಿಡುತ್ತೇವೆ. ಕೊನೆಗೆ ಆತನ ಹೆಸರು ನಗಣ್ಯವಾಗುತ್ತದೆ. ಆತನ ಧರ್ಮವೇ ಮುಖ್ಯವಾಗುತ್ತದೆ. ಆತನ ಧರ್ಮವೇ ಈ ಎಲ್ಲ ಕ್ರೌರ್ಯಕ್ಕೆ ಪ್ರಚೋದನೆ ಕೊಟ್ಟಿದೆ ಎಂದು ವಾದಿಸುತ್ತೇವೆ. ಆತನ ಧರ್ಮಗ್ರಂಥದ ಯಾವ ವಚನ, ಯಾವ ಅಧ್ಯಾಯದಲ್ಲಿ ಈ ಕ್ರೌರ್ಯಕ್ಕೆ ಸಮರ್ಥನೆ ಇದೆ ಎಂದು ಹುಡುಕಾಡುತ್ತೇವೆ. ಯಾವುದೋ ಒಂದು ವಾಕ್ಯವನ್ನು ಎತ್ತಿಕೊಂಡು ಅದರ ಹಿಂದು–ಮುಂದು, ಅದಕ್ಕಿರುವ ಐತಿಹಾಸಿಕ ಹಿನ್ನೆಲೆ, ಸಾಂದರ್ಭಿಕ ಕಾರಣಗಳನ್ನು ಪರಿಶೀಲಿಸದೆಯೇ ಅಥವಾ ಅಡಗಿಸಿಟ್ಟು ಆ ಧರ್ಮವೇ ಹಾಗೆ ಎಂದು ಷರಾ ಬರೆಯುತ್ತೇವೆ...

ನಿನಗೊಂದು ಮಾತು ಹೇಳಲಾ ಅನು?

ಅನಾಮಿಕ ಕಣ್ಣರಳಿಸಿದಳು. ತನ್ನನ್ನು ಈವರೆಗೆ ಅನಾಮಿಕ ಎಂದು ಪೂರ್ಣ ನಾಮದೊಂದಿಗೆ ಕರೆಯುತ್ತಿದ್ದವ ಈಗ ಅನು ಎಂದು ಕರೆದುದು ಆಕೆಗೆ ಇಷ್ಟವಾಗಿತ್ತು. ಆ ಪದ ಬಳಕೆಯಲ್ಲಿ ಪ್ರೀತಿ–ಆಪ್ತತೆಯನ್ನು ಆಕೆ ಕಂಡುಕೊಂಡಳು.

'ಹೇಳು ನೂರ್.'

ಕುರಾನಿನ ಎರಡನೇ ಅಧ್ಯಾಯದಲ್ಲಿ ಒಂದು ವಚನ ಹೀಗಿದೆ–

'ಸತ್ಯನಿಷೇಧಿಗಳನ್ನು ಕಂಡಲ್ಲಿ ವಧಿಸಿರಿ.'

'ಹೌದು, ನಾನೂ ಈ ವಾಕ್ಯದ ಬಗ್ಗೆ ಕೇಳಿದ್ದೇನೆ. ಕುರಾನಿನಲ್ಲಿ ಇರುವುದು ನಿಜವೇ? ಯಾಕೆ ಕೊಲ್ಲುವುದು? ಏನು ಮಾಡಿದ್ದಾರೇಂತ ಈ ಶಿಕ್ಷೆ?'– ಅನಾಮಿಕ ಕುತೂಹಲ ಪ್ರಕಟಿಸಿದಳು.

'ಹೌದು, ಕುರಾನಿನಲ್ಲಿ ಈ ವಾಕ್ಯ ಇರುವುದು ನಿಜ. ಸತ್ಯನಿಷೇಧಿಗಳು ಅಂದರೆ, ಸತ್ಯ ಏನೆಂದು ಅರಿತಿದ್ದೂ ಅದನ್ನು ನಿಷೇಧಿಸುವವರು. ಅಥವಾ ಇನ್ನೂ ಸರಳವಾಗಿ

ಹೇಳುವುದಾದರೆ, ಪ್ರವಾದಿ ಮುಹಮ್ಮದರ ವಿಚಾರಧಾರೆಯನ್ನು ಸಂಪೂರ್ಣ ತಿಳಿದಿದ್ದೂ ನಿಷೇಧಿಸಿ ಬದುಕುವವರು.

ಒಂದುವೇಳೆ, ಈ ವಾಕ್ಯದ ಅರ್ಥ ಇದುವೇ ಎಂದಾಗಿದ್ದರೆ, ಪ್ರವಾದಿ ಮೊತ್ತಮೊದಲು ಯಾರನ್ನು ವಧಿಸಬೇಕಿತ್ತು ಹೇಳು?

'ಯಾರನ್ನು?'

ಅವರಿಗೆ ರಕ್ಷಣೆ ಕೊಟ್ಟಿದ್ದ ದೊಡ್ಡಪ್ಪ ಅಬೂತಾಲೀಬ್‌ರನ್ನು. ಅವರ ಕುಟುಂಬ ಪರಿವಾರದಲ್ಲಿದ್ದ ಚಿಕ್ಕಪ್ಪಂದಿರನ್ನು, ಅವರ ಮಕ್ಕಳು, ತಾಯಂದಿರನ್ನು...

ಪ್ರವಾದಿ ಮೃತಪಡುವಾಗ ಅವರ ಯುದ್ಧಕವಚ ಓರ್ವ ಶ್ರೀಮಂತ ಯಹೂದಿಯ ಬಳಿ ಅಡವಿಟ್ಟ ಸ್ಥಿತಿಯಲ್ಲಿತ್ತು. ಈ ವಚನದ ಪ್ರಕಾರ, ಅವರ ದೇಶದಲ್ಲಿ ಯಹೂದಿ ಇರುವುದಕ್ಕೆ ಸಾಧ್ಯವೇ ಇಲ್ಲ. ಆತನನ್ನೂ ವಧಿಸಿರಬೇಕಿತ್ತು. ಹಾಗಿದ್ದರೆ ಈ ವಾಕ್ಯದ ಅರ್ಥ ಏನು?

ಅದಕ್ಕೊಂದು ಹಿನ್ನೆಲೆ ಇದೆ.

'ಪ್ರವಾದಿ ತನ್ನ ವಿಚಾರಧಾರೆಯನ್ನು ಮೊದಲು ಪ್ರಚಾರ ಮಾಡಲು ಆಯ್ದುಕೊಂಡದ್ದು ತನ್ನ ಹುಟ್ಟೂರು ಮಕ್ಕಾವನ್ನು ನೋಡು. ಆದರೆ ಮಕ್ಕಾದ ಜನರು ಅವರನ್ನು ಯಾವೆಲ್ಲ ರೀತಿಯಲ್ಲಿ ವಿರೋಧಿಸಿದ್ದರು ಎಂದು ನಿನಗೆ ನಾನು ಈಗಾಗಲೇ ಹೇಳಿದೆನಲ್ಲವೇ? ಮುಹಮ್ಮದರ ವಿಚಾರಧಾರೆಯನ್ನು ಒಪ್ಪಿಕೊಂಡವರ ಮೇಲೆ ಮಕ್ಕಾದ ಜನರು ಎಂತೆಂಥ ಕ್ರೌರ್ಯಗಳನ್ನು ಎಸಗುತ್ತಿದ್ದರೆಂದರೆ, ಅವರನ್ನು ಮರಳಿನಲ್ಲಿ ಅಂಗಾತ ಮಲಗಿಸಿ ಎದೆಯ ಮೇಲೆ ಭಾರ ಕಲ್ಲುಗಳನ್ನಿಡುತ್ತಿದ್ದರು. ಸುಡುವ ಮರಳ ಮೇಲೆ ಬರಿಮೈಯಲ್ಲಿ ಬೋರಲು ಮಲಗಿಸಿ ಎಳೆಯುತ್ತಿದ್ದರು. ಕೆಂಡದಂತಹ ಬಿಸಿ ಸಲಾಕೆಗಳಿಂದ ಅವರ ದೇಹವನ್ನು ಘಾಸಿಗೊಳಿಸುತ್ತಿದ್ದರು. ಸಾಮಾಜಿಕ ಬಹಿಷ್ಕಾರ ಹೇರುತ್ತಿದ್ದರು. ಹತ್ಯೆಯ ಸಂಚು ಹೆಣೆಯುತ್ತಿದ್ದರು.

ಇದೊಂದು ದೊಡ್ಡ ಹಿಂಸಾ ಸರಣಿ.

ಈ ಹಿಂಸೆಯಿಂದ ಪಾರಾಗುವುದಕ್ಕಾಗಿ ಪ್ರವಾದಿಯ ಅನುಯಾಯಿಗಳು ಇತಿಯೋಪಿಯಾಕ್ಕೆ ವಲಸೆ ಹೋದರು. ಕೊನೆಗೆ ಹಿಂಸೆ ತಡೆಯಲಾರದೆ ಸ್ವತಃ ಪ್ರವಾದಿಯವರೇ ಹುಟ್ಟೂರು ಮಕ್ಕಾವನ್ನು ಬಿಟ್ಟು ಮದೀನಾಕ್ಕೆ ವಲಸೆ ಹೋದರು. ಆಗಲೂ ಅವರ ವಿರೋಧಿಗಳು ಬಿಡಲಿಲ್ಲ. ಬೆನ್ನಟ್ಟಿದರು. ಮದೀನಾಕ್ಕೂ ದಾಳಿಯಿಡುವ ಸಂಚು ಹೆಣೆದರು. ಮದೀನಾದ ನಾಗರಿಕರನ್ನು ಅವರ ವಿರುದ್ಧ ಎತ್ತಿ ಕಟ್ಟಿದರು. ಅಲ್ಲಿಯ ವಿವಿಧ ಗೋತ್ರಗಳೊಂದಿಗೆ ಪ್ರವಾದಿಯನ್ನು ಹಣಿಯುವ ಒಪ್ಪಂದ ಮಾಡಿಕೊಂಡರು. ಕೊನೆಗೆ ಯುದ್ಧಸಿದ್ಧತೆ ನಡೆಸಿದರು. ಕೊನೆಗೆ ಮಕ್ಕಾದಿಂದ ಬೃಹತ್ ಸೇನೆಯು ಮದೀನಾಕ್ಕೆ ದಾಳಿಯಿಡುವ ಸೂಚನೆಗಳು ಲಭಿಸತೊಡಗಿದುವು. ಈ





ಸಂದರ್ಭದಲ್ಲಿ ಈ ವಚನ ಪ್ರವಾದಿಗೆ ಅವತೀರ್ಣವಾಯಿತು...

'ಯುದ್ಧದ ಸಮಯದಲ್ಲಿ ನೀವು ಮುಲಾಜು ತೋರಬೇಕಿಲ್ಲ. ನಿಮ್ಮ ಎದುರು ಭಾಗದಲ್ಲಿರುವವರು ನಿಮ್ಮ ಸಂಬಂಧಿಕರಾಗಿದ್ದರೂ ಅವರು ನಿಮ್ಮ ಸಮೂಲನಾಶ ಮಾಡುವ ಉದ್ದೇಶದಿಂದ ಬಂದಿದ್ದಾರೆ. ಆದ್ದರಿಂದ ಯುದ್ಧದ ಭಾಗವಾಗಿ ಅವರನ್ನು ಕಾಣಬೇಕೇ ಹೊರತು ಸಂಬಂಧಿಕರೆಂಬ ಭಾವದಲ್ಲಲ್ಲ. ಹಾಗೇನಾದರೂ ಆದರೆ, ನೀವು ಪರಾಜಯವನ್ನು ಹೊಂದಬೇಕಾದೀತು' ಎಂಬ ಎಚ್ಚರಿಕೆಯ ವಚನ ಅದು. ಅಲ್ಲದೇ, ಪ್ರವಾದಿಯ ವಿಚಾರಧಾರೆಯನ್ನು ಒಪ್ಪದ ಕಾರಣಕ್ಕಾಗಿ ಅವರನ್ನು ವಧಿಸಬೇಕೆಂದು ಹೇಳಿದ್ದಲ್ಲ...

ನೂರ್ ದೀರ್ಘ ಉಸಿರೆಳೆದುಕೊಂಡ.

'ಅಂದರೆ, ಮುಸ್ಲಿಮರು ಬಲವಂತದಿಂದ ಮತಾಂತರ ಮಾಡಿಲ್ಲ ಎಂಬುದು ನಿನ್ನ ಅಭಿಪ್ರಾಯವೇ?' ಅನಾಮಿಕ ತುಸು ಅಸಹನೆಯಿಂದ ಪ್ರಶ್ನಿಸಿದಳು.

'ಅಲ್ಲ, ನಾನು ಹಾಗೆ ವಾದಿಸಲ್ಲ. ಬಲವಂತದಿಂದ ಮತಾಂತರ ಮಾಡಿರಬಹುದು. ಆದರೆ ಅದಕ್ಕೆ ಇಸ್ಲಾಮ್ ಹೊಣೆಯಲ್ಲ. ಅದು ಆ ವ್ಯಕ್ತಿಯ ತಪ್ಪು. ಅದಕ್ಕಾಗಿ ಆತನನ್ನು ಖಂಡಿಸಬೇಕು. ದಂಡಿಸಬೇಕು. ಆದರೆ ಆತನ ತಪ್ಪನ್ನು ಒಂದು ಧರ್ಮದ ಮೇಲೆ ಹೊರಿಸಿ ಆ ಧರ್ಮವೇ ಹಾಗೆ, ಖಡ್ಗದ ಭಾಷೆಯಲ್ಲೇ ಮಾತಾಡುತ್ತದೆ ಎಂದು ಹೇಳುವುದು ಸರಿಯಲ್ಲ. ಬಲವಂತದ ಮತಾಂತರವನ್ನು ಇಸ್ಲಾಮ್ ಅಂಗೀಕರಿಸುವುದೇ ಇಲ್ಲ. ಸ್ವತಃ ಕುರಾನೇ ಹಾಗೆ ನೇರವಾಗಿ ಹೇಳಿರುವಾಗ, ಆ ಬಗ್ಗೆ ಸಂದೇಹ ಪಡುವುದಕ್ಕೆ ಏನಿದೆ? ಯಾರಾದರೂ ಮತಾಂತರವಾಗು ಎಂದು ಖಡ್ಗ ಹಿಡಿದು ದಬಾಯಿಸಿದರೆಂದಾದರೆ ಅವರು ಪ್ರಥಮವಾಗಿ ಕುರಾನನ್ನು ನಿಷೇಧಿಸುತ್ತಿದ್ದಾರೆ ಎಂದರ್ಥ. ಆತ ರಾಜನೇ ಆಗಿರಲಿ, ವಿದ್ವಾಂಸನೇ ಆಗಿರಲಿ. ಕುರಾನ್‌ಗಿಂತ ಅವರಾರೂ ದೊಡ್ಡವರು ಅಲ್ಲವಲ್ಲ...'

ಅನಾಮಿಕ ಅಭಿಮಾನದಿಂದ ನೂರ್‌ನತ್ತ ದೃಷ್ಟಿ ಬೀರಿದ್ದಳು.

ಆಕೆ ಸಾಮಾನ್ಯವಾಗಿ ಯಾರಿಗೂ ಸೋಲುತ್ತಿರಲಿಲ್ಲ. ಒಂದು ಬಗೆಯ ಹಠ, ಧೈರ್ಯ ಅವಳ ಜೊತೆಗೆ ಸದಾ ಇರುತ್ತಿತ್ತು. ಯಾರು ಏನೇ ಹೇಳಿದರೂ ಪ್ರತಿಯಾಗಿ ಪ್ರಶ್ನೆ ಹಾಕುವುದು ಆಕೆಗೆ ಅಭ್ಯಾಸವಾಗಿ ಹೋಗಿತ್ತು. ಸುಲಭದಲ್ಲಿ ಯಾವುದನ್ನೂ ಒಪ್ಪಿಕೊಳ್ಳಬಾರದು ಎಂಬ ನಿಲುವು ಆಕೆಯದು. ಆದರೆ ನೂರ್ ಆಕೆಯ ಪ್ರಶ್ನಾ ಮನೋಭಾವವನ್ನೇ ಧರಾಶಾಹಿಗೊಳಿಸಿದ್ದ. ನೂರ್‌ನ ವಿಚಾರಗಳನ್ನು ಪ್ರತಿ ಪ್ರಶ್ನೆಯ ಮೂಲಕ ನಿಕಷಕ್ಕೆ ಒಡ್ಡಬೇಕಾದವಳು ಮಾತು ಮರೆತು ಆತನ ಪಾಂಡಿತ್ಯಕ್ಕೆ ಬೆರಗಾಗಿ ನಿಂತಿದ್ದಳು. ಆಕೆಯ ಬದುಕಿನಲ್ಲಿ ಧರ್ಮದ ಬಗ್ಗೆ ಇಷ್ಟೊಂದು ಖಚಿತವಾಗಿ ಮಾತಾಡುವವನನ್ನು ಕಂಡದ್ದು ಇದೇ ಮೊದಲು.

ಆತ ಧರ್ಮಿಷ್ಠ ಮಾತ್ರವಲ್ಲ, ತಾನೇಕೆ ತನ್ನ ಧರ್ಮದ ಅನುಯಾಯಿ ಎಂಬುದನ್ನು ಸ್ಪಷ್ಟವಾಗಿ ಹೇಳಬಲ್ಲ ಜ್ಞಾನಿ.

ಕುಳಿತಲ್ಲಿಂದ ತನ್ನ ಬಿಡಾರಕ್ಕೆ ಹೊರಟು ನಿಂತ ಆಕೆ ನೂರ್‌ನೊಂದಿಗೆ ಪ್ರಶ್ನಿಸಿದಳು,

'ಇಷ್ಟು ಪಾಂಡಿತ್ಯವನ್ನು ನೀನು ಹೇಗೆ ಪಡೆದೆ?'

'ನನ್ನ ತಂದೆಯಿಂದ'– ನಗುತ್ತಾ ಹೇಳಿದ.

'ನನ್ನ ತಂದೆ ಮಸೀದಿಯ ಧರ್ಮಗುರು ಎಂದು ಹೇಳಿದೆನಲ್ಲ. ಅವರು ಸಂದರ್ಭಾನುಸಾರ ನನಗೆ ವಿವಿಧ ವಿಷಯಗಳನ್ನು ವಿವರಿಸುತ್ತಿದ್ದರು. ಕುರಾನಿನ ಅರ್ಥವನ್ನು ಮತ್ತು ಹಿನ್ನೆಲೆಯನ್ನು ಹೇಳಿಕೊಡುತ್ತಿದ್ದರು. ಪುಸ್ತಕಗಳನ್ನು ತಂದು ಓದಿಸುತ್ತಿದ್ದರು. ಹಾಗೆ ಓದಿ, ಕೇಳಿ ಕಲಿತ ಒಂದಿಷ್ಟು ತಿಳುವಳಿಕೆಯಷ್ಟೇ ನನ್ನ ಬಳಿ ಇದೆ.'





# ಇಪ್ಪತ್ತೈದು

**ಬೇ**ವಿನ ಮರದಡಿಗೆ ತಲುಪುವುದಕ್ಕೆ ಇನ್ನೂ ಒಂದಿಷ್ಟು ದೂರವಿತ್ತು.

ರಾತ್ರಿ ಒಂದು ಗಂಟೆಗೆ ಅಲ್ಲಿರುವುದೆಂದು ನೂರ್ ಮತ್ತು ಅನಾಮಿಕ ಜಂಟಿಯಾಗಿ ತೀರ್ಮಾನಿಸಿದ್ದರು. ಲಾಕ್‌ಡೌನ್‌ನ ಸಮಯದಲ್ಲಿ ಕಾಫಿ ಎಸ್ಟೇಟ್ ಮಾಲಿಕ ವರದರಾಜ ದಿಢೀರ್ ಆಗಿ ಕಾರ್ಮಿಕರನ್ನು ಭೇಟಿಯಾದುದು, ಆ ಸಂದರ್ಭದಲ್ಲಿ ತಾನು ಮಾತಾಡಿದುದು, ನೂರ್ ದನಿಗೂಡಿಸಿದ್ದು, ಬಳಿಕ ಕಾರ್ಮಿಕ ಸಭೆಯ ನಾಯಕತ್ವವನ್ನು ತಾನು ವಹಿಸಿಕೊಂಡದ್ದು, ಬಳಿಕ ತನಗೂ ನೂರ್‌ಗೂ ನಡುವೆ ಆತ್ಮೀಯತೆ ಬೆಳೆದದ್ದು

ಮತ್ತು ತಮ್ಮಿಬ್ಬರ ನಡುವೆ ಸುದೀರ್ಘ ಸಮಯ ಧಾರ್ಮಿಕ ಚರ್ಚೆ ನಡೆದುದು ಎಲ್ಲವನ್ನೂ ಅನಾಮಿಕ ಮೆಲುಕು ಹಾಕುತ್ತಾ ಆ ಅರ್ಧರಾತ್ರಿ ಬೇವಿನ ಮರದಡಿಗೆ ನಡೆಯುತ್ತಿದ್ದಳು. ಬೇವಿನ ಮರದಡಿಯಲ್ಲಿ ಒಟ್ಟಾಗುವುದು ಮತ್ತು ಅಲ್ಲಿಂದ ಇಬ್ಬರೂ ಜೊತೆಸೇರಿ ಆ ಕಾಫಿ ಎಸ್ಟೇಟ್‌ನಿಂದ ಪರಾರಿಯಾಗುವುದು– ಅವರಿಬ್ಬರ ತೀರ್ಮಾನವಾಗಿತ್ತು.

ಈ ಪರಾರಿಯ ಹಿಂದೆಯೂ ಒಂದು ಕಾರಣ ಇತ್ತು.

ಕಾರ್ಮಿಕರ ಬೇಡಿಕೆಗೆ ಯಾವ ಸ್ಪಷ್ಟ ಉತ್ತರವನ್ನೂ ಕೊಡದೇ ವರದರಾಜ ಹೋದನಲ್ಲ, ಆ ಬಳಿಕ ಕಾರ್ಮಿಕರ ನಡುವೆ ಸಂದೇಹ, ಅನುಮಾನ ಸ್ಫೋಟಗೊಂಡಿತ್ತು. ಲಾಕ್‌ಡೌನ್ ಕಾಲದ ವೇತನವನ್ನು ವರದರಾಜ ಕೊಡುವ ಬಗ್ಗೆ ಯಾರಲ್ಲೂ ಖಚಿತತೆ ಇರಲಿಲ್ಲ. ಆರಂಭದಲ್ಲಿ ಆತ ಹೇಳಿದ್ದೂ ಹಾಗೆಯೇ– ವೇತನ ಕೊಡಲ್ಲ ಎಂದು. ಆ ಬಳಿಕ ಅನಾಮಿಕ ಅದನ್ನು ಪ್ರತಿಭಟಿಸಿದಾಗ– ನೋಡೋಣ ಹೇಳುತ್ತೇನೆ ಎಂದು ಹೇಳಿ ಹೊರಟು ಹೋಗಿದ್ದ. ಆ ಬಳಿಕ ಅನಾಮಿಕಳ ನೇತೃತ್ವದಲ್ಲಿ ಕಾರ್ಮಿಕರದ್ದೇ ಒಂದು ಸಭೆ ನಡೆಯಿತು. ಇದಾಗಿ ಒಂದು ತಿಂಗಳು ಹತ್ತಿರ ಹತ್ತಿರವಾದರೂ ವರದರಾಜನ ಕಡೆಯಿಂದ ಯಾವ ಉತ್ತರವೂ ಬಂದಿರಲಿಲ್ಲ. ಅನ್ನ, ಸಾಂಬಾರಿಗೆ ಬೇಕಾದ ವ್ಯವಸ್ಥೆಯನ್ನು ಮಾಡಲಾಗಿದೆ ಎಂಬುದನ್ನು ಬಿಟ್ಟರೆ, ಉಳಿದಂತೆ ಕೆಲಸವೂ ಇಲ್ಲ, ವೇತನವೂ ಇಲ್ಲ ಎಂಬ ಸ್ಥಿತಿ ನಿರ್ಮಾಣವಾಗಿತ್ತು.

ಈ ನಡುವೆ ಲಾಕ್‌ಡೌನ್ ಸಡಿಲಿಕೆಯೂ ಆಯಿತು.

ಒಂದು ತಿಂಗಳಿಗಿಂತ ಹೆಚ್ಚು ಸಮಯ ಇದ್ದಲ್ಲೇ ಇದ್ದ ದೇಶದ ವಿವಿಧೆಡೆಯ ಕಾರ್ಮಿಕರು ಕಾಲ್ನಡಿಗೆಯಲ್ಲೇ ತಮ್ಮೂರಿಗೆ ಹೊರಡಲು ಪ್ರಾರಂಭಿಸಿದ್ದರು. ಸರಕಾರ ರೈಲು ಇಲ್ಲವೇ ವಾಹನ ವ್ಯವಸ್ಥೆ ಮಾಡದೇ ಇರುವುದರಿಂದ ಸಾವಿರಾರು ಕಿಲೋಮೀಟರ್ ದೂರದ ತಮ್ಮ ಊರಿಗೆ ಕಾರ್ಮಿಕರು ಕಾಲ್ನಡಿಗೆಯಲ್ಲೇ ನಡೆದು ಸಾಗುವ ಅಭೂತಪೂರ್ವ ಸಾಹಸಕ್ಕೆ ಮುಂದಾಗಿದ್ದರು. ಇಂಥ ವಲಸೆ ಕಾರ್ಮಿಕರು ಸಾಗುವ ಫೋಟೋಗಳು, ವೀಡಿಯೋಗಳು ಮೊಬೈಲ್‌ಗಳಲ್ಲಿ ಸಾಲು ಸಾಲು ಬರತೊಡಗಿದುವು. ಚಪ್ಪಲಿಯೂ ಇಲ್ಲದೇ ಬರಿಗಾಲಲ್ಲಿ ಮಕ್ಕಳು, ಸಾಮಾನು–ಸರಂಜಾಮುಗಳನ್ನು ಎತ್ತಿಕೊಂಡು ಅತೀವ ದಯನೀಯ ಸ್ಥಿತಿಯಲ್ಲಿ ವಲಸೆ ಕಾರ್ಮಿಕರು ನಡೆಯುತ್ತಿರುವ ಕರುಳು ಹಿಂಡುವ ದೃಶ್ಯವನ್ನು ನೋಡಿ ಅನಾಮಿಕ ಮತ್ತು ನೂರ್ ತಲೆ ತಗ್ಗಿಸಿದ್ದರು.

'ಈ ನಗರವನ್ನು ಕಟ್ಟಿದವರು ಈ ವಲಸೆ ಕಾರ್ಮಿಕರು, ಇಲ್ಲಿನ ರಸ್ತೆಯನ್ನು ಸುಂದರಗೊಳಿಸಿದವರು ಈ ಕಾರ್ಮಿಕರು, ಇಲ್ಲಿನ ಸೇತುವೆಯನ್ನು ಕಟ್ಟಿದವರು ಈ ಕಾರ್ಮಿಕರು, ಮಣ್ಣಿನ ರಸ್ತೆಯನ್ನು ಡಾಂಬಾರು ಅಥವಾ ಕಾಂಕ್ರೀಟೀಕರಣಗೊಳಿಸಿದವರು ಈ ವಲಸೆ ಕಾರ್ಮಿಕರು, ರಾಜಕಾರಣಿಗಳ ರಾಜಕೀಯ ಸಭೆಗಾಗಿ ಚಪ್ಪರವನ್ನು,





ನೆಲ ಹಾಸನ್ನು, ಮೈದಾನ ಸಜ್ಜೀಕರಣವನ್ನು ನಡೆಸಿದವರು ಈ ವಲಸೆ ಕಾರ್ಮಿಕರು, ನಗರವನ್ನು ಶುಚಿಗೊಳಿಸುವವರು ಈ ವಲಸೆ ಕಾರ್ಮಿಕರು.

ಆದರೆ ಈಗಿನ ಅವರ ಸ್ಥಿತಿ ನೋಡಂತೆ.

ಅವರನ್ನು ಆದರಿಸುವುದಕ್ಕೆ ಸರಕಾರವೇ ಇಲ್ಲ, ಅವರನ್ನು ಕರೆ ತಂದು ಕೆಲಸಕ್ಕೆ ಸೇರಿಸಿದವರೂ ಇಲ್ಲ. ಎಲ್ಲ ನಡುದಾರಿಯಲ್ಲಿ ಬಿಟ್ಟಿದ್ದಾರೆ. ಈ ಕಾರ್ಮಿಕರಿಗೆ ಒಪ್ಪೊತ್ತಿಗೆ ಸರಿಯಾಗಿ ಊಟ, ವಸತಿ, ವೇತನ ಸೌಲಭ್ಯವನ್ನು ಒದಗಿಸಿದ್ದಿದ್ದರೆ ಅವರ್‍ಯಾಕೆ ಈ ಕಷ್ಟಕಾಲದಲ್ಲಿ ಊರಿಗೆ ಹೊರಡುತ್ತಿದ್ದರು? ಕೈಯಲ್ಲಿರುವ ಕಾಸು ಖರ್ಚಾಗಿ ಉದ್ಯೋಗವೇ ಇಲ್ಲದೇ ಮತ್ತು ಲಾಕ್‌ಡೌನ್‌ನ ಆರಂಭದಲ್ಲಿ ಕಿಟ್ ಕೊಟ್ಟು ಆದರಿಸಿದ ಸ್ವಯಂ ಸೇವಾ ಸಂಸ್ಥೆಗಳೂ ಈಗ ದಣಿದಿರುವಾಗ ಅವರು ಹೊರಡದೇ ಮತ್ತೇನು ಮಾಡುವುದು...' ನೂರ್ ಪ್ರಶ್ನಿಸಿ ತುಸು ಹೊತ್ತು ಮೌನವಾದ. ಬಳಿಕ ಹೇಳಿದ,

'ಏನು ಗೊತ್ತಾ ಅನಾಮಿಕ?'

'ಏನು?'

ನಮ್ಮಂಥ ವಲಸೆ ಕಾರ್ಮಿಕರಿದ್ದೇವಲ್ಲ, ನಾವೆಲ್ಲ ಬಳಸಿ ಎಸೆಯುವ ವಸ್ತುಗಳ ಹಾಗೆ. ಅವರವರ ಅಗತ್ಯ ಮುಗಿಯುವವರೆಗೆ ಮಾತ್ರ ನಮಗೆ ಗೌರವ. ಆ ಬಳಿಕ ನಮ್ಮನ್ನು ಕೇಳೋರೇ ಇಲ್ಲ. ಒಂದು ರೀತಿಯಲ್ಲಿ ಚಪ್ಪಲಿಯಂತೆ. ನಮಗೂ ಕುಟುಂಬ ಇದೆ. ಪತ್ನಿ–ಮಕ್ಕಳು–ಹೆತ್ತವರಿದ್ದಾರೆ. ನಮಗೂ ಭಾವನೆಗಳಿವೆ ಎಂಬ ಪರಿವೆಯೇ ನಮ್ಮನ್ನು ದುಡಿಸಿಕೊಂಡವರಿಗೆ ಇಲ್ಲ. ವರದರಾಜನನ್ನೇ ನೋಡು. ನಮ್ಮೊಂದಿಗೆ ಮಾತಾಡಿ ಒಂದು ತಿಂಗಳಾಗುತ್ತಾ ಬಂತು. ಆತ ಏನಾದರೂ ಉತ್ತರ ನೀಡಿದನೇ?

ಅನಾಮಿಕ ಹೌದೆಂದು ತಲೆಯಾಡಿಸಿದ್ದಳು.

ಇಡೀ ದೇಶಕ್ಕೇ ಲಾಕ್‌ಡೌನ್ ಅಂದಮೇಲೆ ನಮ್ಮ ಪಶ್ಚಿಮ ಬಂಗಾಳದಲ್ಲಿರುವ ನನ್ನ ಪತ್ನಿ–ಮಕ್ಕಳಿಗೂ ಅದರ ಬಿಸಿ ತಟ್ಟುತ್ತೆ. ಬಿಹಾರದ ಕರ್ನೂರಿನಲ್ಲಿರುವ ನಿನ್ನ ಕುಟುಂಬಕ್ಕೂ ಅದರ ಬಿಸಿ ತಟ್ಟುತ್ತೆ. ಅವರು ಅವಲಂಬಿಸಿರುವುದು ನಮ್ಮನ್ನೇ. ಹೀಗಿರುವಾಗ ವೇತನವೇ ಇಲ್ಲದೇ ನಾವು ಇಲ್ಲಿ ನಿಂತರೆ ಅವರ ಹೊಟ್ಟೆ ತುಂಬುವುದು ಹೇಗೆ? ನನಗಂತೂ ವರದರಾಜನ ಮೇಲೆ ವಿಶ್ವಾಸವೇ ಹೊರಟು ಹೋಗಿದೆ. ಆತ ನ್ಯಾಯಬೆಲೆ ಅಂಗಡಿಯೊಂದಿಗೆ ಒಳಒಪ್ಪಂದ ಮಾಡಿಕೊಂಡು ಬಡತನ ರೇಖೆಗಿಂತ ಕೆಳಗಿನವರಿಗೆ ಸಲ್ಲಬೇಕಾದ ಉಚಿತ ಅಕ್ಕಿಯನ್ನು ಇಲ್ಲಿ ತಂದಿಡುತ್ತಿದ್ದಾನೆ. ಬೇಳೆಯೂ ಅಲ್ಲಿಯದ್ದೇ. ನಮ್ಮಿಂದಾಗಿ ಆತನಿಗೆ ನಯಾಪೈಸೆ ನಷ್ಟವಾಗಿಲ್ಲ ಎಂದೇ ನನ್ನ ನಂಬಿಕೆ.

'ಅದು ಹೇಗೆ ಅಷ್ಟು ಖಚಿತವಾಗಿ ಹೇಳುತ್ತೀ?'– ಅನಾಮಿಕ ಮಧ್ಯಪ್ರವೇಶಿಸಿದ್ದಳು.

'ಆ ಅಕ್ಕಿಯನ್ನು ಪರಿಶೀಲಿಸಿದೆಯಾ? ನನ್ನದು ಬಡತನ ರೇಖೆಗಿಂತ ಕೆಳಗಿನವರ ಪಡಿತರ ಚೀಟಿ. ಊರಿನಲ್ಲಿರುವಾಗ ನಾನೇ ಅಂಗಡಿಗೆ ಹೋಗಿ ಆ ಅಕ್ಕಿಯನ್ನು

ತರುತ್ತಿದ್ದೆ. ನನಗೆ ಅದರ ರುಚಿ, ಬಣ್ಣ, ಗುಣ ಗೊತ್ತು. ಇಲ್ಲಿನ ಅಕ್ಕಿಯೂ ಅದುವೇ. ಸಾಮಾನ್ಯ ದಿನಸಿ ಅಂಗಡಿಯಲ್ಲಿ ಸಿಗುವ ಅಕ್ಕಿಯಂತೆ ಅದಿಲ್ಲ. ನೀನೇನು ಅಂಬಾನಿಯ ಮನೆಯಲ್ಲಿ ಹುಟ್ಟಿದವಳಾ? ನಿನಗೆ ಪಡಿತರ ಅಕ್ಕಿ ಮತ್ತು ಸಾಮಾನ್ಯ ಅಕ್ಕಿಗಳ ನಡುವೆ ವ್ಯತ್ಯಾಸ ಗೊತ್ತಿಲ್ಲವೇ? ಯಾವ ಅಕ್ಕಿಯಿಂದ ತಯಾರಿಸಿದ ಅನ್ನ ರುಚಿ ಮತ್ತು ಬಣ್ಣದಲ್ಲಿ ಹೇಗೆ ಭಿನ್ನ ಭಿನ್ನವಾಗಿರುತ್ತೆ ಅನ್ನುವುದನ್ನು ತಿಳಿದಿಲ್ಲವೇ?'– ನೂರ್ ತುಸು ಏರಿದ ದನಿಯಲ್ಲಿ ಪ್ರಶ್ನಿಸಿದ್ದ.

ಅನಾಮಿಕಳಿಗೂ ಅದು ಸರಿಯೆನಿಸಿತು.

ಇಬ್ಬರೂ ಸ್ವಲ್ಪ ಹೊತ್ತು ಮೌನವಾದರು.

ಅವರಿಬ್ಬರು ಮಾತನಾಡುತ್ತಿದ್ದ ಜಾಗಕ್ಕಿಂತ ತುಸು ದೂರದಲ್ಲಿ ಪುರುಷ ಕಾರ್ಮಿಕರ ಕಬಡ್ಡಿ ಆಟ ನಡೆಯುತ್ತಿತ್ತು. ಮಹಿಳಾ ಕಾರ್ಮಿಕರು ಗುಂಪುಗೂಡಿ ಏನನ್ನೋ ಚರ್ಚಿಸುತ್ತಿದ್ದರು. ಕೆಲವು ಪುರುಷರು ತಮ್ಮಷ್ಟಕ್ಕೇ ಪಟ್ಟಾಂಗ ಹೊಡೆಯುತ್ತಿದ್ದರು. ವರದರಾಜನಿಂದ ಅತ್ತ ಭರವಸೆಯೂ ಸಿಗದೆ ಮತ್ತು ಲಾಕ್‌ಡೌನ್ ಸಡಿಲಿಕೆಯಾಗಿದ್ದರೂ ವಾಹನ ಸೌಲಭ್ಯಗಳ ವ್ಯವಸ್ಥೆಯೂ ಆಗದೇ ಊರಿಗೆ ಹೋಗುವುದೋ ಅಥವಾ ಇಲ್ಲೇ ಇದ್ದು ಲಾಕ್‌ಡೌನ್ ಮುಗಿದು ಕೆಲಸ ಪ್ರಾರಂಭವಾಗುವ ವರೆಗೆ ಕಾದು ಬಳಿಕ ಹೊಂದಿಕೊಳ್ಳುವುದೋ ಅನ್ನುವ ಗೊಂದಲದಲ್ಲಿ ಅನೇಕರಿದ್ದರು.

ಇನ್ನು ಇಲ್ಲಿಂದ ಹೋಗುವುದಾದರೂ ಹೇಗೆ?

'ವರದರಾಜನಿಗೆ ಸಂಗತಿ ಗೊತ್ತಾದರೆ ಆತ ಬಿಟ್ಟುಬಿಡುವ ಅಸಾಮಿಯಲ್ಲ. ಈಗಾಗಲೇ ಕಾವಲುಗಾರರಿಗೆ ಈ ಬಗ್ಗೆ ಎಚ್ಚರಿಕೆಯನ್ನೂ ಕೊಟ್ಟಿರಬಹುದು. ಇಲ್ಲಿಂದ ತಪ್ಪಿಸಿಕೊಂಡು ಹೋಗುವವರನ್ನು ಮರಳಿ ಇಲ್ಲೇ ಕರೆತಂದು ಕೂರಿಸಿ ಪೊಲೀಸರಿಂದ ಧಮಕಿ ಹಾಕಿಸುವುದಕ್ಕೂ ಆತ ಹೇಸಲ್ಲ. ಹೇಗೂ ರಾಜಕೀಯ ಪ್ರಭಾವ ಇದೆ. ನಗರದಲ್ಲಿ ಸಾಕಷ್ಟು ರಾಜಕೀಯ ಭಾಷಣ ಮಾಡಿ ಸಾಕಷ್ಟು ಅನುಯಾಯಿಗಳನ್ನು ಗಿಟ್ಟಿಸಿಕೊಂಡಿದ್ದಾನೆ ಎಂದೂ ಸುದ್ದಿಯಿದೆ. ಏನು ಮಾಡುವುದೋ...' ಎಂಬ ಭೀತಿಯನ್ನು ಕಟ್ಟುಮಸ್ತಿನ ಯುವಕ ಮಂಡಲ್ ವಾರದ ಹಿಂದೆ ನೂರ್‌ನೊಂದಿಗೆ ಹಂಚಿಕೊಂಡೂ ಇದ್ದ.





## ಇಪ್ಪತ್ತಾರು

ಬೇವಿನ ಮರದಡಿಗೆ ನಡೆಯುತ್ತಿದ್ದ ಅನಾಮಿಕಳನ್ನು ನೆನಪುಗಳು ಮುತ್ತುತ್ತಿದ್ದುವು.

ಒಮ್ಮೆ ಮಾತಿನ ಮಧ್ಯೆ ನೂರ್ ಏನೋ ಹೊಳೆದವನಂತೆ ಅನಾಮಿಕಳನ್ನು ಪ್ರಶ್ನಿಸಿದ್ದ,

'ನಾವಿಲ್ಲಿಂದ ಹೋದರೆ ಹೇಗೆ?'

'ಎಲ್ಲಿಗೆ?'

'ನಮ್ಮ ನಮ್ಮ ಊರಿಗೆ. ಈಗ ಹೇಗೂ ಕಾರ್ಮಿಕರು ನಡಿಗೆಯ ಮೂಲಕವೇ ತಂತಮ್ಮ ಊರಿಗೆ ಹೊರಟಿದ್ದಾರಲ್ಲ. ನಾವೂ ಹಾಗೆಯೇ ನಡೆಯುವುದು. ಮುಂದೆ ಏನೇನು ಸವಾಲು ಎದುರಾಗುತ್ತೋ ಅದನ್ನು ನೋಡಿಕೊಂಡು ನಿಭಾಯಿಸುತ್ತಾ

ಹೋಗೋದು.'

'ಯಾಕಿಷ್ಟು ತುರ್ತು? ದಿಢೀರ್ ಅಂತ ನಿನಗೆ ಈ ಯೋಚನೆ ಬಂದದ್ದೇಕೆ?'– ಅನಾಮಿಕ ಅರ್ಧ ನಿರುತ್ಸಾಹ, ಅರ್ಧ ಕುತೂಹಲದಿಂದ ಪ್ರಶ್ನಿಸಿದ್ದಳು.

'ನಿನಗೆ ನಿನ್ನ ಮಗು, ತಂದೆ–ತಾಯಿಯನ್ನು ನೋಡಬೇಕೆಂದು ಅನಿಸುತ್ತಿಲ್ಲವೇ? ನನಗಂತೂ ನನ್ನ ಮಕ್ಕಳು–ಪತ್ನಿಯನ್ನು ನೋಡಲೇಬೇಕೆಂಬ ಬಯಕೆ ಆಗುತ್ತಿದೆ. ಈ ವರದರಾಜನನ್ನು ನಂಬಿ ಇಲ್ಲಿ ನಿಂತರೆ ಮುಂದೆ ಏನಾಗುತ್ತೋ ಎಂದು ಹೇಳಲಾಗದು. ಕಷ್ಟವೋ ಸುಖವೋ ಊರಿಗೆ ತಲುಪಿ ಕುಟುಂಬವನ್ನು ಸೇರಬೇಕೆಂದು ಅನಿಸುತ್ತಿದೆ. ಈ ಲಾಕ್‌ಡೌನ್ ರಗಳೆ ಎಲ್ಲ ಕೊನೆಗೊಂಡ ಬಳಿಕ ಪರಿಸ್ಥಿತಿ ತಿಳಿಯಾದರೆ, ಮತ್ತೆ ಮರಳಿ ಬರುವ ಸಿದ್ಧತೆ ನಡೆಸುವುದು. ಈ ವರದರಾಜನ ಎಸ್ಟೇಟ್ ಅಲ್ಲದಿದ್ದರೆ ಪಕ್ಕದ ರಾಮಕೃಷ್ಣ ಅಪ್ಪಯ್ಯ, ಜಯರಾಜ ಅಣ್ಣಯ್ಯರ ಎಸ್ಟೇಟೂ ಇದೆ. ಅದರಲ್ಲೂ ಕೆಲಸ ಸಿಗಬಹುದು. ದೇವನೇನೂ ವರದರಾಜನನ್ನು ನೋಡಿ ನಮ್ಮನ್ನು ಸೃಷ್ಟಿಸಿದ್ದಾ? ಕೆಲಸದ ಬಗ್ಗೆ ನನಗೆ ಭಯವೇನೂ ಇಲ್ಲ...' ನೂರ್ ಅನಾಮಿಕಳ ಮುಖ ನೋಡಿದ್ದ.

ಅನಾಮಿಕ ತಕ್ಷಣ ಪ್ರತಿಕ್ರಿಯಿಸಲಿಲ್ಲ.

ನೂರ್‌ನ ಮಾತು ಎಷ್ಟು ಪ್ರಾಯೋಗಿಕ, ಆತ ಭಾವುಕವಾಗಿ ಮಾತಾಡುತ್ತಿರುವನೋ ಎಂದಾಕೆ ಪರೀಕ್ಷಿಸಿದಳು. ನೂರ್ ಸುಮ್ಮನೆ ಮಾತಾಡುವುದಿಲ್ಲ. ಆತನ ಅಭಿಪ್ರಾಯದಲ್ಲಿ ಗಟ್ಟಿತನ ಇರುತ್ತದೆ. ವರದರಾಜನ ಬಗ್ಗೆ ಆತನ ಅಭಿಪ್ರಾಯವನ್ನು ತಳ್ಳಿ ಹಾಕುವಂತಿಲ್ಲ. ಆತನಿಗೆ ಅನಗತ್ಯವೆಂದು ಕಂಡರೆ ಯಾವ ಸಂದರ್ಭದಲ್ಲೂ ಆತ ಸಾಗಹಾಕಬಹುದು. ಹಾಗಂತ ಕಾಲ್ನಡಿಗೆಯಲ್ಲಿ ಎಷ್ಟೂಂತ ಹೋಗುವುದು? ನಡೆದುಕೊಂಡು ಸಾಗುವಷ್ಟು ಸಣ್ಣ ದಾರಿಯೇ ನನ್ನದು? ನೂರ್‌ನದೂ ಅಷ್ಟೇ. ಅಷ್ಟು ದೂರಕ್ಕೆ ಕಾಲ್ನಡಿಗೆಯಲ್ಲಿ ನಡೆದರೆ, ಅನಾರೋಗ್ಯ ಕಾಡದೇ? ಆಗ ಏನು ಮಾಡುವುದು? ಹೊಟ್ಟೆ ಹಸಿವನ್ನು ತಣಿಸಿಕೊಳ್ಳುವುದು ಹೇಗೆ? ರಾತ್ರಿ ಮಲಗುವುದು ಎಲ್ಲಿ?

'ಅನಾಮಿಕ'– ನೂರ್ ಆಕೆಯನ್ನು ತಟ್ಟಿ ಎಚ್ಚರಿಸಿದ.

'ಹಾಂ' ಆಕೆ ಕಣ್ಣರಳಿಸಿದಳು.

'ನೂರ್– ನೀನು ಹೇಳುವುದೇನೋ ಸರಿ. ಮಗುವಿನ ನೆನಪು ನನಗೂ ಆಗುತ್ತದೆ. ಹೆತ್ತವರನ್ನು ನೋಡಬೇಕೆಂಬ ಬಯಕೆಯೂ ಇದೆ. ಆದರೆ, ಅದನ್ನು ಈಡೇರಿಸಿ ಕೊಳ್ಳುವುದಕ್ಕೆ ನಡೆದು ಸಾಗುವುದು ಸಾಧ್ಯವೇ? ಅಷ್ಟಕ್ಕೂ ನಮ್ಮಲ್ಲಿ ಏನು ತಯಾರಿಯಿದೆ? ನಮ್ಮ ಲಗೇಜೇ ಒಂದು ಭಾರ. ಅದನ್ನು ಹೊತ್ತುಕೊಂಡು ಎಷ್ಟು ನಡೆಯಬಹುದು? ರಾತ್ರಿ ಎಲ್ಲಿ ತಂಗೋದು? ಊಟಕ್ಕೇನು ಮಾಡೋದು?'– ಅನಾಮಿಕ ಆತಂಕ ತೋಡಿಕೊಂಡಳು.





ನೂರ್ ನಕ್ಕ.

'ವರದರಾಜನ ಮುಂದೆ ದನಿಯೆತ್ತಿದ ಅನಾಮಿಕಳಂತೆ ನೀನೀಗ ಕಾಣಿಸುತ್ತಿಲ್ಲ'– ನೂರ್ ಕುಟುಕಿದ.

'ಇದು ಧೈರ್ಯದ ಪ್ರಶ್ನೆ ಅಲ್ಲ ನೂರ್. ಒಂದು ದೀರ್ಘ ಪ್ರಯಾಣದ ಸಿದ್ಧತೆಯ ಪ್ರಶ್ನೆ'– ಅನಾಮಿಕ ಸಮರ್ಥಿಸಿಕೊಂಡಳು.

'ಪ್ರಯಾಣ ದೂರದ್ದೋ ಹತ್ತಿರದ್ದೋ ಅನ್ನುವುದು ಮುಖ್ಯ ಅಲ್ಲ ಅನು. ನಮ್ಮ ಮನಸ್ಸಿಗೆ ಯಾವ ಸಂದೇಶವನ್ನು ರವಾನಿಸುತ್ತೇವೆ ಅನ್ನುವುದು ಮುಖ್ಯ. ನಾನು ನನ್ನೂರು ಕರ್ನೂರಿಗೆ ನಡಕೊಂಡೇ ಹೋಗುತ್ತೇನೆ ಎಂಬ ಸಂದೇಶವನ್ನು ನಿನ್ನ ಮೆದುಳಿಗೆ ಪದೇ ಪದೇ ರವಾನಿಸುತ್ತಲೇ ಇದ್ದರೆ ನಿನ್ನ ಮೆದುಳು ಪಾಸಿಟಿವ್ ಸಂದೇಶಗಳನ್ನು ಮನಸ್ಸಿಗೆ ಪಂಪ್ ಮಾಡುತ್ತಲೇ ಇರುತ್ತದೆ. ನಿನ್ನಿಂದ ಸಾಧ್ಯ ಎಂಬ ಧೈರ್ಯದ ಶಕ್ತಿ ನಿನ್ನ ದೇಹವನ್ನು ಆವರಿಸಿ ಬರಬರುತ್ತಾ ಪ್ರಯಾಣಕ್ಕೆ ನಿನ್ನನ್ನು ಸಿದ್ಧಗೊಳಿಸುತ್ತದೆ. ಆಗ ನಿನಗೆ ಊಟಕ್ಕೆ ಏನು, ನಿದ್ದೆಗೆ ಏನು, ಬಾಯಾರಿಕೆಗೆ ಏನು ಅನ್ನುವ ಪ್ರಶ್ನೆಗಳೆಲ್ಲ ಪ್ರಯಾಣದ ತಡೆಗಳಾಗಿ ಎದುರು ಬರುವುದೇ ಇಲ್ಲ. ಅಷ್ಟಕ್ಕೂ, ಸವಾಲು ಎಲ್ಲಿಲ್ಲ ಹೇಳು?

ನೀನು ಕರ್ನೂರ್‌ನಿಂದ ಮನೆ ಬಿಟ್ಟು ಬಂದೆಯಲ್ಲ, ಆಗ ನಿನ್ನಲ್ಲಿ ಪ್ರಯಾಣದ ಸಿದ್ಧತೆ ಏನಿತ್ತು? ಮುಂದೇನು ಅನ್ನುವುದು ನಿನಗೆ ಗೊತ್ತಿತ್ತೇ? ಇಲ್ಲಿಗೆ ತಲುಪುವೆನೆಂದು ನಿನಗೆ ತಿಳಿದಿತ್ತೇ? ಊಟಕ್ಕೆ, ನೀರಿಗೆ, ನಿದ್ದೆಗೆ ಬೇಕಾದ ಏರ್ಪಾಡುಗಳನ್ನೆಲ್ಲ ಮಾಡಿಕೊಂಡು ನೀನು ಹೊರಟಿದ್ದಿಯೇ? ಇಲ್ಲವಲ್ಲ. ಧೈರ್ಯವೇ ಸಿದ್ಧತೆ. ಪಾಸಿಟಿವ್ ಆಗಿರುವುದೇ ಬದುಕು...'

'ಆದರೆ ಈಗ ವಾಹನ ಸೌಲಭ್ಯವೇ ಇಲ್ಲವಲ್ಲ'– ಅನಾಮಿಕ ಮಧ್ಯ ಪ್ರವೇಶಿಸಿದಳು.

'ನಾವು ಭರವಸೆ ಇಡಬೇಕಾದುದು ನಮ್ಮ ಮೇಲೆ. ನಮ್ಮ ಅಂಗಾಂಗಗಳ ಮೇಲೆ. ಬಸ್ಸು–ರೈಲುಗಳೆಲ್ಲ ನಮ್ಮದಲ್ಲ. ಅವು ಚಲಿಸುತ್ತಾ ಒಂದು ನಿರ್ಜನ ಪ್ರದೇಶದಲ್ಲಿ ಕೈ ಕೊಡಬಹುದು. ಇಲ್ಲವೇ ಅಪಘಾತಕ್ಕೆ ಒಳಗಾಗಬಹುದು. ನಮ್ಮ ಜೀವವೂ ಅಪಾಯಕ್ಕೆ ಸಿಲುಕಬಹುದು. ಯಾವ ರೀತಿಯ ಪ್ರಯಾಣವೂ ಸುರಕ್ಷಿತವಲ್ಲ ಅನು. ಕಾಲ್ನಡಿಗೆಯೂ ಅಷ್ಟೇ. ಅದೊಂದು ಪ್ರಯಾಣ. ನೀನು ಮಾನಸಿಕವಾಗಿ ಸಿದ್ಧವಾದರೆ ದಣಿವು ಅನ್ನುವುದು ಮುಖ್ಯವಾಗುವುದಿಲ್ಲ. ನಮ್ಮ ನಿತ್ಯದ ಕೆಲಸದಲ್ಲಿ ದಣಿವಾದಾಗ ನಾವು ಹೇಗೆ ವಿಚಲಿತರಾಗುವುದಿಲ್ಲವೋ ಹಾಗೆ, ಇಲ್ಲೂ ವಿಚಲಿತರಾಗಲಾರೆವು. ಕೆಲಸದ ಸಮಯದಲ್ಲಿ ದಣಿವಾದಾಗ ಕುಳಿತುಕೊಳ್ಳುತ್ತೇವೆ. ದಣಿವಾರಿಸಿಕೊಳ್ಳುತ್ತೇವೆ. ಮತ್ತೆ ಕೆಲಸದಲ್ಲಿ ತೊಡಗಿಕೊಳ್ಳುತ್ತೇವೆ...

ಇವೂ ಹಾಗೆಯೇ.

ನಾವು ಸಕಾರಾತ್ಮಕವಾಗಿ ಇದ್ದರೆ ಪ್ರಕೃತಿಯೇ ನಮ್ಮನ್ನು ಕಾಪಾಡುತ್ತದೆ. ನಾವು ನಡೆಯುತ್ತಿರುವಾಗಲೇ ಯಾವುದಾದರೊಂದು ವಾಹನ ನಮ್ಮನ್ನು ಹತ್ತಿಸಿ ಕೊಂಡು ಹೋಗಲೂಬಹುದು ಅಥವಾ ಬೀದಿಯಲ್ಲಿರುವ ಕಾರ್ಮಿಕರನ್ನು ಕಂಡು ಸರಕಾರವೇ ವಾಹನ ಸೌಲಭ್ಯ ಏರ್ಪಡಿಸಲೂ ಬಹುದು. ಇವೆಲ್ಲ ಸಾಧ್ಯತೆಗಳು. ಆದರೆ, ಅದನ್ನು ಅವಲಂಬಿಸಿಕೊಂಡು ನಾವು ಪ್ರಯಾಣ ಹೊರಡಬಾರದು. ನಮ್ಮ ನಂಬಿಕೆ ನಮ್ಮ ಮೇಲೆ.'

'ಅಂದರೆ, ನೀನು ಇಲ್ಲಿಂದ ಹೊರಟು ಹೋಗುತ್ತೀಯಾ?' ಅನಾಮಿಕ ತುಸು ಆತಂಕದಿಂದ ಪ್ರಶ್ನಿಸಿದಳು.

'ಹಾಂ, ನೀನು ಬರಲ್ವೇ?' ನೂರ್‌ನ ಪ್ರಶ್ನೆಯಲ್ಲಿ ಕಾಳಜಿಯೂ ಇತ್ತು.

ಅನಾಮಿಕ ತಕ್ಷಣಕ್ಕೆ ಉತ್ತರಿಸಲಿಲ್ಲ. ನೂರ್‌ನ ಮಾತನ್ನು ಆಲಿಸುವಾಗ ಆತ ಎಲ್ಲಕ್ಕೂ ಸಿದ್ಧವಾಗಿರುವಂತಿದೆ. ಆದರೂ ಕಾಲ್ನಡಿಗೆ ಪ್ರಯಾಣ ಅಂದರೆ ಸುಮ್ನೇನಾ? ಧೈರ್ಯವೊಂದಿದ್ದರೆ ಪ್ರಯಾಣ ಸಾಧ್ಯವಾ? ದಾರಿಮಧ್ಯೆ ದಣಿವೋ ಅನಾರೋಗ್ಯವೋ ಆಗಿಬಿಟ್ಟರೆ ಯಾರಿದ್ದಾರೆ? ಕೊರೋನಾ ಸೋಂಕು ತಗುಲಿಬಿಟ್ಟರೆ? ಸುಮ್ಮನೆ ಅಪಾಯವನ್ನು ಎಳೆದುಕೊಳ್ಳುವುದಕ್ಕಿಂತ ಇಲ್ಲೇ ಇದ್ದು ಬಿಡುವುದು ಉತ್ತಮ ವಲ್ಲವೇ ಎಂದು ಮನಸ್ಸು ಒಮ್ಮೆ ಹೇಳಿದರೆ, ಹೋಗು ಎಂದು ಇನ್ನೊಮ್ಮೆ ಹೇಳುತ್ತಿತ್ತು. ಸಾವಿರಾರು ವಲಸೆ ಕಾರ್ಮಿಕರು ಈಗ ಕಾಲ್ನಡಿಗೆಯಲ್ಲಿ ಹೋಗುತ್ತಿಲ್ಲವೇ? ಅವರ ಪ್ರಯಾಣದ ಅಸಂಖ್ಯ ವೀಡಿಯೋಗಳು, ಚಿತ್ರಗಳು ಮೊಬೈಲ್‌ನಲ್ಲಿ ಬಂದು ರಾಶಿ ಬಿದ್ದಿವೆ. ಅವರೆಲ್ಲ ಯಾವ ಧೈರ್ಯದಿಂದ ಹೊರಟಿದ್ದಾರೆ? ಅವರಿಗಿಲ್ಲದ ಭಯ ನನಗ್ಯಾಕೆ ಎಂದು ಮನಸ್ಸು ಇನ್ನೊಮ್ಮೆ ಕೇಳುತ್ತಿತ್ತು. ಒಂದುಕಡೆ ನೂರ್‌ನ ಮಾತನ್ನು ಆಲಿಸಿದ ಬಳಿಕ ಉಂಟಾದ ಮಗುವನ್ನು ನೋಡಬೇಕೆಂಬ ತುಡಿತ, ಇನ್ನೊಂದು ಕಡೆ ಭಯ– ಅನಾಮಿಕ ಗೊಂದಲಕ್ಕೆ ಬಿದ್ದಳು.

'ಬರಲ್ವ?' ನೂರ್ ಮತ್ತೆ ಪ್ರಶ್ನಿಸಿದ.

'ಬರುತ್ತೇನೆ'– ಅನಾಮಿಕಳ ಮಾತಿನಲ್ಲಿ ಧೈರ್ಯ ಮತ್ತು ಆತ್ಮವಿಶ್ವಾಸವಿತ್ತು. ನೂರ್‌ನ ಮುಖ ಅರಳಿತು. ಕಣ್ಣಿನಲ್ಲೇ ಧನ್ಯವಾದ ಅರ್ಪಿಸಿದ ಆತ, ಬಳಿಕ ಗುಟ್ಟಿನಲ್ಲೆಂಬಂತೆ ಹೇಳಿದ,

'ಈ ವಿಷಯ ನಮ್ಮಿಬ್ಬರ ಹೊರತು ಇಲ್ಲಿರುವ ಯಾವ ಕಾರ್ಮಿಕರಿಗೂ ಗೊತ್ತಾಗಬಾರದು.'

'ಯಾಕೆ?'

'ಎರಡು ಕಾರಣಗಳಿವೆ.

ಒಂದು– ಇಲ್ಲಿರುವ ಕಾರ್ಮಿಕರೆಲ್ಲ ನಮ್ಮ ಜೊತೆ ಹೊರಡಬಹುದು. ಇಲ್ಲವೇ





ನಮ್ಮನ್ನು ಹೋಗದಂತೆ ತಡೆಯಬಹುದು. ಇವೆರಡೂ ನಮ್ಮ ಪಾಲಿಗೆ ಸಮಸ್ಯೆಯೇ. ಇನ್ನೊಂದು– ನಾವು ಹೋಗುವ ಮಾಹಿತಿ ವರದರಾಜನಿಗೆ ತಲುಪಬಹುದು. ಆತ ಏನು ತೀರ್ಮಾನಿಸಬಹುದು ಎಂದು ಈಗಲೇ ಹೇಳಲಾಗದು. ಹೋಗುವವರು ಹೋಗಲಿ ಎಂದು ಆತ ಸುಮ್ಮನಾಗುತ್ತಾನೆ ಎಂದು ಖಚಿತವಾಗಿ ಹೇಳಲಾಗದು. ಆತ ನಮ್ಮನ್ನು ಇಲ್ಲಿ ಉಳಿಸಿಕೊಂಡಿರುವುದು ಬರೇ ನಮ್ಮ ಮೇಲಿನ ಮಾನವೀಯ ಕಾಳಜಿಯಿಂದ ಎಂಬುದು ಅರ್ಧ ಸತ್ಯ ಎಂದೇ ನನ್ನ ನಂಬಿಕೆ. ಆತನಿಗೆ ನಾವು ಬೇಕು. ಲಾಕ್‌ಡೌನ್ ಮುಗಿದು ಕೊರೋನಾ ನಿರ್ಮೂಲನವಾದ ಬಳಿಕ ಕಾರ್ಮಿಕರ ಕೊರತೆ ಉಂಟಾಗಬಾರದು ಎಂಬ ಉದ್ದೇಶದಿಂದಲೇ ಆತ ನಮ್ಮನ್ನೆಲ್ಲ ಇಲ್ಲಿ ಉಳಿಸಿಕೊಂಡಿದ್ದಾನೆ ಎಂದೇ ಅನಿಸುತ್ತದೆ. ಆದ್ದರಿಂದ ಇಲ್ಲಿಂದ ಯಾವ ಕಾರ್ಮಿಕನೂ ಹೊರಹೋಗುವುದನ್ನು ಆತ ಒಪ್ಪಲಾರ. ನಾವಿಬ್ಬರು ಹೋಗುವುದಕ್ಕೆ ಅನುಮತಿ ಕೊಟ್ಟರೆ, ಅದು ಮುಂದೆ ಇತರ ಕಾರ್ಮಿಕರಿಗೆ ಪ್ರೇರಣೆ ಒದಗಿಸುವುದಕ್ಕೂ ಅವಕಾಶವಂತೂ ಇದ್ದೇ ಇದೆ. ಈ ಕಾರಣದಿಂದಲೂ ಆತ ನಮ್ಮನ್ನು ಹೊರ ಹೋಗುವುದಕ್ಕೆ ಬಿಡಲಾರ. ಆದ್ದರಿಂದ ಗೌಪ್ಯತೆ ಕಾಯಬೇಕಾದುದು ಅಗತ್ಯವೆಂದು ಕಾಣುತ್ತದೆ.'

'ನಿನ್ನ ಮಾತಿನ ಅರ್ಥ ಏನು? ನಾವು ಯಾರಿಗೂ ಗೊತ್ತಾಗದಂತೆ ಕತ್ತಲೆಯಲ್ಲಿ ಪರಾರಿಯಾಗಬೇಕು ಎಂದೇ?' ಅನಾಮಿಕಳ ಪ್ರಶ್ನೆ.

'ಹೌದು, ಪ್ರೇಮಿಗಳು ಪರಾರಿಯಾಗುತ್ತಾರಲ್ಲ, ಹಾಗೆ'– ನೂರ್ ಕಣ್ಣೊತ್ತಿದ್ದ. ಅನಾಮಿಕ ಭುಜ ಹಾರಿಸಿ ನಕ್ಕಿದ್ದಳು.

'ಯಾವಾಗ?'

'2ನೇ ತಾರೀಕು ರಾತ್ರಿ ಒಂದು ಗಂಟೆಗೆ. ಓ ಅಲ್ಲಿ ಕಾಣುವ ಬೇವಿನ ಮರದಡಿಯಲ್ಲಿ ನಾವಿಬ್ಬರೂ ಒಟ್ಟು ಸೇರೋಣ. ಅಲ್ಲಿಂದ ಜೊತೆಯಾಗಿ ಪಯಣ ಪ್ರಾರಂಭಿಸೋಣ'– ನೂರ್ ಮೊದಲೇ ಕಾರ್ಯತಂತ್ರ ರೂಪಿಸಿದವನಂತೆ ಹೇಳಿದ್ದ. ಅನಾಮಿಕ ತಲೆಯಲ್ಲಾಡಿಸಿದ್ದಳು...

# ಇಪ್ಪತ್ತೇಳು

ಆಕೆಯಿನ್ನೂ ಬೇವಿನ ಮರದಡಿ ತಲುಪಿರಲಿಲ್ಲ...

❖ ❖ ❖

ಕೊರೋನಾ ಲಾಕ್‌ಡೌನ್‌ನ ಮೊದಲು ಇಂಥದ್ದೊಂದು ಸನ್ನಿವೇಶ ಸೃಷ್ಟಿಯಾಗಬಹುದೆಂದು ಆಕೆ ಊಹಿಸುವುದು ಬಿಡಿ, ಕನಸನ್ನೂ ಕಂಡಿರಲಿಲ್ಲ. ಕಾರ್ಮಿಕರೊಂದಿಗೆ ಕಾಫಿ ಎಸ್ಟೇಟ್ ಮಾಲಿಕ ವರದರಾಜ ಮಾಡಿದ ಸಭೆಯಲ್ಲಿ ಪರಿಚಯವಾದ ನೂರ್ ಆ ಬಳಿಕ ತನ್ನನ್ನು ಹೇಗೆಲ್ಲ ಪ್ರಭಾವಿಸಿ ಬಿಟ್ಟ ಎಂದು ಆಕೆಗೆ ಆಶ್ಚರ್ಯವಾಯಿತು. ಆತನ ಗಡ್ಡ, ಟೋಪಿಯನ್ನು ಕಂಡು ಆತನೋರ್ವ ಕರ್ಮಠ ಮುಸ್ಲಿಮ್ ಇರಬೇಕು ಎಂಬ ತನ್ನ ಗ್ರಹಿಕೆಯನ್ನು ಆತ ಹೇಗೆ ಸುಳ್ಳು ಮಾಡಿದ ಎಂದು





ಯೋಚಿಸುತ್ತಾ ಚಕಿತಳಾದಳು. ನಾನೇ ಧೈರ್ಯವಂತೆ, ಬುದ್ಧಿವಂತೆ ಎಂಬ ಜಂಭವೊಂದು ನನ್ನೊಳಗೆ ನನಗಿಷ್ಟವಿದ್ದೋ ಇಲ್ಲದೆಯೋ ಸೇರಿಕೊಂಡಿತ್ತು. ಅದನ್ನು ನಾನು ನನಗರಿವಿಲ್ಲದೆಯೇ ಪೋಷಿಸಿಕೊಂಡೂ ಬಂದಿದ್ದೆ. ಮಹಿಳಾ ಕಾರ್ಮಿಕರ ಜೊತೆ ಮಾತಾಡುವಾಗ ನನ್ನ ಈ ಜಂಭದ ಪ್ರದರ್ಶನ ಆಗಾಗ ಆಗುತ್ತಿತ್ತು. ನನ್ನ ಅಭಿಪ್ರಾಯವೇ ಸರಿ ಎಂಬಂತೆ ನಡೆದುಕೊಳ್ಳುತ್ತಿದ್ದೆ. ಸಮಸ್ಯೆ ಏನೇ ಆಗಿದ್ದರೂ ಮತ್ತು ಯಾರದೇ ಆಗಿದ್ದರೂ ಮಧ್ಯಪ್ರವೇಶ ಮಾಡುತ್ತಿದ್ದೆ. ವಾದಿಸುತ್ತಿದ್ದೆ. ಪ್ರಾಯದಲ್ಲಿ ನನಗಿಂತ ಹಿರಿಯರು ಎಂಬ ಮುಲಾಜನ್ನೂ ತೋರುತ್ತಿರಲಿಲ್ಲ.

ಆದರೆ,

ನನ್ನ ಈ ಜಂಭಕ್ಕೆ ಮೊದಲ ಏಟು ಕೊಟ್ಟವನೇ ನೂರ್. ಆತ ನನ್ನ ಮಾತುಗಳನ್ನು ತಿರಸ್ಕರಿಸಲಿಲ್ಲ. ಬದಲು ಆತನ ಜ್ಞಾನವನ್ನಷ್ಟೇ ನನ್ನ ಮುಂದಿಡುತ್ತಿದ್ದ. ಆದರೆ ಆತನ ಜ್ಞಾನದ ವ್ಯಾಪ್ತಿ ಎಷ್ಟು ವಿಸ್ತಾರವಾಗಿತ್ತೆಂದರೆ, ಅದು ನನ್ನ ಜಂಭವೆಂಬ ಕಿರೀಟಕ್ಕೆ ಹೊಡೆತವನ್ನು ಕೊಡುತ್ತಾ ಹೋಯಿತು.

ಆತ ಮಾತಾಡಿದಷ್ಟೂ ಬೆಳೆಯುತ್ತಲೇ ಹೋದ.

ಧರ್ಮದ ವಿಷಯ ಪ್ರಸ್ತಾಪಿಸಿದಾಗ ಆತ ನೀಡಿದ ಉತ್ತರ ಯಾವ ಪಂಡಿತನಿಂದಲೂ ಸುಲಭದಲ್ಲಿ ನಿರೀಕ್ಷಿಸಲಾಗದಂಥದ್ದು. ಆತನಲ್ಲಿ ಇಸ್ಲಾಮಿನ ಬಗ್ಗೆ ಮಾತ್ರ ಪಾಂಡಿತ್ಯ ಇರುವುದಲ್ಲ. ಭಾರತದ ವಿಸ್ತಾರ ಚರಿತ್ರೆಯ ತಿಳುವಳಿಕೆಯೂ ಇದೆ. ಬೌದ್ಧ ಧರ್ಮದ ಅಳಿವಿನ ಬಗ್ಗೆ ಆತ ಎಷ್ಟು ಚೆನ್ನಾಗಿ ಮತ್ತು ರಾಗ–ದ್ವೇಷದ ಯಾವ ಹುಳುಕೂ ಇಲ್ಲದೇ ವಿವರಿಸಿದನೆಂದರೆ, ಆತ ಓರ್ವ ತತ್ವಜ್ಞಾನಿಯಂತೆ ನನಗೆ ಕಂಡ. ಎದುರು ಕುಳಿತವರಿಗೆ ಪ್ರಶ್ನೆಗೆ ಅವಕಾಶವಿಲ್ಲದಂತೆ ಮಾತಾಡುವ ಅಪೂರ್ವ ಕಲೆ ಆತನಲ್ಲಿದೆ. ಇಲ್ಲದಿದ್ದರೆ ಈ ಅರ್ಧರಾತ್ರಿ ನಾನು ಹೀಗೆ ಯಾರಿಗೂ ಗೊತ್ತಾಗದೇ ಪರಾರಿಯಾಗುವ ಸಾಧ್ಯತೆ ಇತ್ತೇ?

ನಾನೂ ಊಹಿಸಿಯೂ ಇರಲಿಲ್ಲ.

ನನಗೆ ಇಷ್ಟವಾದದ್ದು ಊರಿಗೆ ಕಾಲ್ನಡಿಗೆಯಲ್ಲಿ ಹೋಗುವುದನ್ನು ಆತ ಸಮರ್ಥಿಸಿಕೊಂಡ ರೀತಿ. ಕಾಲ್ನಡಿಗೆಯಲ್ಲಿ ಊರಿಗೆ ಹೊರಟವರ ವೀಡಿಯೋಗಳನ್ನು ಮೊಬೈಲ್‌ನಲ್ಲಿ ನೋಡಿ, ಇವರಿಗೇನು ಹುಚ್ಚೇ ಎಂದು ಅಂದುಕೊಂಡಿದ್ದೆ. ಏನು ಸಿದ್ಧತೆ ಇದೆ, ಊಟ–ನಿದ್ರೆಗೆ ಏನು ವ್ಯವಸ್ಥೆಯಿದೆ ಎಂದು ನನ್ನೊಳಗೆ ಪ್ರಶ್ನಿಸಿಕೊಂಡು ಅವರ ತಿಳಿಗೇಡಿತನಕ್ಕೆ ನಕ್ಕಿದ್ದೆ. ಆದರೆ ನೂರ್ ಆ ಎಲ್ಲಕ್ಕೂ ಕೊಟ್ಟ ವ್ಯಾಖ್ಯಾನ ಎಂಥದ್ದು? ಪ್ರಯಾಣ ಸಿದ್ಧತೆ ಎಂಬುದನ್ನು ಆತ ವಿವರಿಸಿದ ರೀತಿ ಹೇಗೆ? ಕಾಲ್ನಡಿಗೆಯಲ್ಲಿ ಹೊರಟಿದ್ದವರನ್ನು ಗೇಲಿ ಮಾಡಿದ ನಾನೇ ಆತನ ಮಾತಿಗೆ ಮರುಳಾಗಿ ನನ್ನೂರಿಗೆ ಕಾಲ್ನಡಿಗೆಯಲ್ಲೇ ಹೊರಡಲು ಸಿದ್ಧವಾಗಿರುವೆನೆಂದರೆ,

ಅದರ ಅರ್ಥವೇನು?

ನೂರ್ ಚತುರ ಮಾತುಗಾರ ಅಷ್ಟೇ ಅಲ್ಲ, ಬುದ್ಧಿವಂತ...

ಮೆಲುಕು ಹಾಕುತ್ತಾ ನಡೆದ ಅನಾಮಿಕಾಳಿಗೆ ಬೇವಿನ ಮರದಡಿ ತಲುಪಿದ್ದೇ ಗೊತ್ತಾಗಲಿಲ್ಲ.

ಆದರೆ,

ನೂರ್ ಅಲ್ಲಿರಲಿಲ್ಲ.

ಅನಾಮಿಕ ಸುತ್ತಲೂ ನೋಡಿದಳು. ನಿತ್ಯ ಮಲಗುವ ಬಿಡಾರದ ಹೊರಗಡೆ ಬಲ್ಬ್ ತಣ್ಣಗೆ ಉರಿಯುತ್ತಿತ್ತು. ಆ ಬೆಳಕಿನ ಮಸುಕು ಮಸುಕು ಕಿರಣ ಬೇವಿನ ಮರವನ್ನು ತಾಗಲೋ ಬೇಡವೋ ಎಂಬಂತೆ ನೋಡುತ್ತಿತ್ತು. ದೂರದಿಂದ ಬರುವವರಿಗೆ ಬೇವಿನ ಮರದಡಿಯಲ್ಲಿ ಅನಾಮಿಕ ಇದ್ದಾಳೆ ಎಂದು ಗೊತ್ತಾಗದಷ್ಟು ಕಡಿಮೆ ಬೆಳಕಿನ ಕಿರಣವಷ್ಟೇ ಅಲ್ಲಿತ್ತು. ಅನಾಮಿಕ ಮತ್ತೊಮ್ಮೆ ಸುತ್ತಲೂ ನೋಡಿದಳು. ಸಮಯವನ್ನೂ ಖಚಿತಪಡಿಸಿಕೊಂಡಳು. ರಾತ್ರಿ ಒಂದು ಗಂಟೆ ಕಳೆದು 5 ನಿಮಿಷವಾಗಿದೆ. ನೂರ್ ನನ್ನನ್ನು ಬಿಟ್ಟು ಹೋದನೇ ಅಥವಾ ಆತ ಇನ್ನೂ ಬಂದಿಲ್ಲವೇ? ಇನ್ನೂ ಒಂದು ಸಾಧ್ಯತೆಯನ್ನೂ ಆಕೆ ಲೆಕ್ಕ ಹಾಕಿದಳು–

ಆತ ಸುಳ್ಳು ಹೇಳಿರಬಹುದೇ?

ನೂರ್‌ನ ಆವರೆಗಿನ ವರ್ತನೆಯನ್ನು ಪರಿಶೀಲಿಸಿದರೆ, ಆತ ಮೋಸಗಾರನಂತೆ ಕಾಣುವುದಿಲ್ಲ. ಆತ ಆವರೆಗೂ ಹೇಳಿದ ಮಾತಿಗೆ ತಪ್ಪಿಲ್ಲ. ಸುತ್ತು ಬಳಸಿ ಮಾತಾಡಿಯೂ ಇಲ್ಲ. ಆದ್ದರಿಂದ ವಂಚಿಸಲಾರ ಎಂದು ಮನಸು ಹೇಳಿದರೂ ಸಂದೇಹದ ಒಂದು ಮೊನೆಯನ್ನು ಹೃದಯದಲ್ಲಿಟ್ಟುಕೊಳ್ಳುವುದು ಅಪರಾಧ ಅಲ್ಲ ಎಂದೂ ಹೇಳಿತು. ಈಗಿನ ಕಾಲದಲ್ಲಿ ವಂಚಿಸುವ ತರಹೇವಾರಿ ವಿಧಾನಗಳಿವೆ. ವರ್ಷಗಟ್ಟಲೆ ಜೊತೆಗಿದ್ದವರೇ ಒಂದು ಮುಂಜಾನೆ ಎಲ್ಲವನ್ನೂ ದೋಚಿಕೊಂಡು ಗೆಳೆಯನನ್ನೇ ಬೀದಿಪಾಲು ಮಾಡಿದ ಉದಾಹರಣೆಯಿದೆ. ದಶಕಗಳ ಕಾಲ ಜೊತೆಗಿದ್ದ ಪತ್ನಿಗೆ ಒಂದು ಮಾತೂ ಹೇಳದೇ ಪ್ರೇಯಸಿಯೊಂದಿಗೆ ಹೊರಟು ಹೋಗುವ ಪುರುಷರಿದ್ದಾರೆ. ಮಾಲಕನ ಹತ್ಯೆ ಮಾಡಿ ಕೆಲಸದಾಳು ಸಂಪತ್ತನ್ನು ದೋಚಿದ ದೃಷ್ಟಾಂತಗಳಿವೆ. ಯಾರನ್ನೂ ಒಂದೇ ಏಟಿಗೆ ನಂಬಬಾರದು. ಯಾರೂ ಸುಭಗರಲ್ಲ.. ಅಂದಿತು ಮನಸ್ಸು.

ಅನಾಮಿಕ ಮನಸ್ಸಿನ ಮಾತನ್ನು ಅಷ್ಟು ಬೇಗ ಒಪ್ಪಲಿಲ್ಲ. ಆದರೂ ನೂರ್‌ನ ಪತ್ತೆಯಿಲ್ಲ.

ಅನಾಮಿಕಳಲ್ಲಿ ಅಸಹನೆ ಹೆಚ್ಚಾಯಿತು. ಹೀಗೆ ಕಾಯುತ್ತಾ ಕೂರುವುದು ಸರಿಯಲ್ಲ ಎಂದು ಅನಿಸಿತು. ಇನ್ನೈದು ನಿಮಿಷ ಕಾಯೋದು, ಮತ್ತೂ ನೂರ್ ಬರದಿದ್ದರೆ





ನೇರವಾಗಿ ಪುರುಷ ಕಾರ್ಮಿಕರು ಮಲಗುವ ಬಿಡಾರಕ್ಕೆ ತೆರಳಿ ನೂರ್ ಇದ್ದಾನೋ ಎಂದು ಪರೀಕ್ಷಿಸುವುದು. ಇದ್ದಾನೆ ಎಂದಾದರೆ ಎಲ್ಲರೆದುರೇ ತರಾಟೆಗೆ ತೆಗೆದುಕೊಳ್ಳುವುದು, ಇಲ್ಲ ಎಂದಾದರೆ, ಆತ ಪರಾರಿಯಾಗಿರುವುದನ್ನು ಅಲ್ಲೇ ಘೋಷಿಸುವುದು– ಎಂದು ತೀರ್ಮಾನಿಸಿದಳು. ಕೊನೆಯ ಬಾರಿಯೆಂಬಂತೆ ಆಕೆ ಕರೆ ಮಾಡಿದಳು.

ಹಿಂದಿನಂತೆಯೇ ಸ್ವಿಚ್ಡ್ ಆಫ್ ಸಂದೇಶ ಬಂತು.

ಆಕೆಯಲ್ಲಿ ಅನುಮಾನ ಹೆಚ್ಚಾದದ್ದೂ ಈ ಸ್ವಿಚ್ಡ್ ಆಫ್‌ನಿಂದಾಗಿಯೇ. ಈ ಅಪರಾತ್ರಿಯಲ್ಲಿ ಆತ ಮೊಬೈಲನ್ನು ಆಫ್ ಮಾಡಿ ಇಟ್ಟಿರುವುದೇಕೆ? ಆತ ತನ್ನನ್ನು ಬಿಟ್ಟು ಪರಾರಿಯಾದನೇ, ಹಾಗೆ ಮಾಡುವುದರಿಂದ ಆತನಿಗಿರುವ ಲಾಭವೇನು? ನಾನಿದ್ದರೆ ಆತನಿಗೆ ಅನುಕೂಲವೇ ಹೊರತು ತೊಂದರೆ ಏನಿಲ್ಲ. ಜೊತೆಗಾರ್ತಿ ಸಿಕ್ಕಂತಾಗುತ್ತದೆ ಅಥವಾ ಮೊಬೈಲ್ ಕೈಕೊಟ್ಟಿತೇ? ಅಥವಾ ಚಾರ್ಜ್ ಖಾಲಿಯಾಗಿದೆಯೇ?

ಸಂದೇಹ ಮತ್ತು ಗೊಂದಲ ಎರಡೂ ಸೇರಿ ಆಕೆಯನ್ನು ಹೈರಾಣಗೊಳಿಸಿದುವು. ನೂರ್‌ನನ್ನು ಅನುಮಾನಿಸುವಂತೆಯೂ ಇಲ್ಲ, ಅನುಮಾನಿಸದೇ ಇರುವಂತೆಯೂ ಇಲ್ಲ ಎಂಬ ಇಬ್ಬಗೆಯ ಸ್ಥಿತಿಯಲ್ಲಿ ಆಕೆ ಬೇಯತೊಡಗಿದಳು. ಆಗಲೇ ಆಕೆಗೆ ಆಕೃತಿಯೊಂದು ಅವಳತ್ತಲೇ ಬರುವುದು ಕಾಣಿಸಿತು.

ನೂರ್.

ಹತ್ತಿರ ತಲುಪುತ್ತಲೇ ಸ್ಸಾರಿ, ಸ್ಸಾರಿ, ಸ್ಸಾರಿ ಅನು ಎಂದು ವಿನೀತನಾಗಿ ಹೇಳಿದ. ಬೆನ್ನಿನಲ್ಲಿ ಬ್ಯಾಗಿತ್ತು. ಮುಖಭಾವ ಹೇಗಿದೆ ಎಂಬುದನ್ನು ಪರೀಕ್ಷಿಸಲು ಮಂದ ಬೆಳಕು ಅವಕಾಶ ಕೊಡಲಿಲ್ಲ. ಅನಾಮಿಕ ತಕ್ಷಣವೇ ಮಾತಾಡಲಿಲ್ಲ. ಆಕೆಯ ಸಿಟ್ಟು ಇನ್ನೂ ಇಳಿದಿರಲಿಲ್ಲ. ಅನಾಮಿಕಳ ಕೈ ಹಿಡಿಯಲೆಂದು ಕೈ ಮುಂದೆ ಮಾಡಿದ ಆತ ಬಳಿಕ ಕೈ ಹಿಂತೆಗೆದುಕೊಂಡು 'ಬಾ, ಹೋಗೋಣ' ಎಂದು ಅವಸರ ತೋರಿದ. ಅನಾಮಿಕ ಕದಲದೇ ನಿಂತೇ ಇದ್ದಳು.

'ಏನಾಯ್ತು, ಯಾಕೆ ನಿಂತಿದ್ದೀ?' ನೂರ್‌ನ ಪ್ರಶ್ನೆಯಲ್ಲಿ ಆತಂಕವಿತ್ತು.

'ಯಾಕೆ ಲೇಟು?'

'ಓಹ್, ಅದಾ, ನಡೆಯುತ್ತಾ ಹೇಳ್ತೇನೆ. ಇಲ್ಲಿಂದ ಬೇಗ ಹೋಗುವ' ಆತ ಹೊರಟ. ಅನಾಮಿಕಾಳೂ ಹೊರಟಳು.

'ಹೇಳು, ಯಾಕೆ ಲೇಟು?' ಅನಾಮಿಕಾಳ ಸಿಟ್ಟು ಇನ್ನೂ ಕರಗಿರಲಿಲ್ಲ.

'ಏನು ಗೊತ್ತಾ, ನಾನು ಸಮಯಕ್ಕೆ ಸರಿಯಾಗಿ ಹೊರಟಿದ್ದೆ. ಆದರೆ, ನನ್ನ ಕೋಣೆಯಲ್ಲಿರುವವರಿಗೆ ಗೊತ್ತಾಗಬಾರದಲ್ಲ. ನಾನು ಮಲಗಿದಲ್ಲಿಂದ ಎದ್ದ ಕೂಡಲೇ ಯಾರೋ ಮಾತಾಡಿದ ಸದ್ದಾಯಿತು. ಪುನಃ ಅಲ್ಲಿಗೇ ಮಲಗಿದೆ. ತುಸು ಕಳೆದು ಎದ್ದೆ. ಕೋಣೆಯಲ್ಲಿ ಉರಿಯುತ್ತಿರುವ ಬಲ್ಬ್‌ನ ಬೆಳಕು ಇಡೀ ಕೋಣೆಯ

ಕತ್ತಲೆಯನ್ನು ಓಡಿಸಲು ಶಕ್ತವಾಗಿರಲಿಲ್ಲ ನೋಡು. ಆದ್ದರಿಂದ ಕೋಣೆಯ ಮೂಲೆಯಲ್ಲಿ ಮಲಗಿದವರು ನನ್ನನ್ನು ನೋಡುತ್ತಿರಬಹುದಾ ಎಂಬ ಸಂಶಯ. ಹಾಗೆ ಸ್ವಲ್ಪ ಹೊತ್ತು ಎಲ್ಲರನ್ನೂ ಗಮನಿಸುತ್ತಾ ಕುಳಿತೆ. ಮತ್ತೆ ಗೊರಕೆ ಸದ್ದು. ಅದರಲ್ಲಿ ಎಂಥ ವೈವಿಧ್ಯ ಗೊತ್ತಾ? ಸಂಗೀತದ ಎಲ್ಲ ಉಪಕರಣಗಳೂ ನಮ್ಮ ಕೋಣೆಯಲ್ಲಿವೆ ಎಂದು ಭಾವಿಸುವಂತಿತ್ತು ಗೊರಕೆ. ನೀನಲ್ಲಿರುತ್ತಿದ್ದರೆ ಹೆದರಿ ಓಡಿರುತ್ತಿದ್ದಿ.'

'ನಂಗೆ ಅಂಥ ಭಯವೇನೂ ಇಲ್ಲ.'

'ಅದು ನಿಜ ಅನ್ನು. ಭಯ ಇರುತ್ತಿದ್ದರೆ ಈ ಕಾಳರಾತ್ರಿಯಲ್ಲಿ ಈ ಮರದಡಿಯಲ್ಲಿ ನೀನು ಒಂಟಿಯಾಗಿ ನಿಲ್ಲಲು ಸಾಧ್ಯವೇ ಇರಲಿಲ್ಲ'– ನೂರ್ ಮೆಚ್ಚಿಕೊಂಡ ಮತ್ತು ಹೇಳಿದ,

'ಈ ಎಲ್ಲ ರಗಳೆಗಳಿಂದಾಗಿ ಹೊರಡುವಾಗ ತಡವಾಯಿತು. ನಿನ್ನನ್ನು ಕಾಯಿಸಿದೆ. ಸ್ಸಾರಿ.'

ಅನಾಮಿಕ ನಕ್ಕಳು. ಆಕೆಗೆ ಆತನ ವಿನೀತ ಗುಣ ಮತ್ತು ತಪ್ಪನ್ನು ಒಪ್ಪಿಕೊಳ್ಳುವ ಸ್ವಭಾವ ತುಂಬಾ ಇಷ್ಟವಾಯಿತು.





# ಇಪ್ಪತ್ತೆಂಟು

ಆ ಕಾಳರಾತ್ರಿಯಲ್ಲಿ ಅನಾಮಿಕ ಮತ್ತು ನೂರ್ ಇಬ್ಬರೂ ಕಾಲ್ನಡಿಗೆಯಲ್ಲಿ ಹೊರಟರು. ಬೆಳಕು ಹರಿಯುವಾಗ ವರದರಾಜನ ಕಾಫಿ ಎಸ್ಟೇಟನ್ನು ದಾಟಿ ರಸ್ತೆಯನ್ನು ಸೇರಿಕೊಳ್ಳುವುದು ಅವರಿಬ್ಬರ ಮೊದಲ ಗುರಿಯಾಗಿತ್ತು. ಇಬ್ಬರೂ ಟಾರ್ಚ್ ಬೆಳಕಿನ ಸಹಾಯದಿಂದ ಕತ್ತಲೆಯ ಎದೆಯನ್ನು ಸೀಳಿ, ಪೊದೆ–ಮರಗಳ ನಡುವೆ ದಾರಿ ಮಾಡಿಕೊಂಡು ಹೊರಟರು. ಅವರಿಗೆ ಆ ದಾರಿ ಹೊಸತೇನೂ ಆಗಿರಲಿಲ್ಲ. ಈ ಮೊದಲು ಅನೇಕ ಬಾರಿ ಆ ದಾರಿಯನ್ನು ತುಳಿದುಕೊಂಡೇ ಅವರು ನಗರವನ್ನು ಸಂಪರ್ಕಿಸುವ ರಸ್ತೆ ಪ್ರವೇಶಿಸಿದ್ದರು.

ನೂರ್ ಮುಂದಿದ್ದರೆ ಅನಾಮಿಕ ಹಿಂದಿದ್ದಳು. ಇಬ್ಬರ ನಡುವೆಯೂ ಮೆತ್ತಗೆ ಮಾತು.

ನೂರ್ ಹೇಳಿದ,

'ನಾಳೆ ಬೆಳಿಗ್ಗೆ ನಮ್ಮ ಬಿಡಾರದ ಸ್ಥಿತಿ ಹೇಗಿರಬಹುದು?'

'ದೊಡ್ಡ ರಂಪಾಟವೇ ನಡೆಯಬಹುದು..' ಅನಾಮಿಕ ದನಿ

ಸೇರಿಸಿದಳು.

‘ನಮ್ಮಿಬ್ಬರ ನಡುವೆ ಪ್ರೇಮ ಸಂಬಂಧ ಇದೆ ಅನ್ನುವುದು ಮೊದಲ ಸುದ್ದಿ ಸ್ಫೋಟ’ ನೂರ್ ನಕ್ಕ.

‘ನಾವಿಬ್ಬರೂ ಲೋಕ ಮರೆತು ಮಾತಾಡುತ್ತಿದ್ದೆವಲ್ಲ, ವಿವಿಧ ವಿಷಯಗಳ ಮೇಲೆ ಗಂಟೆಗಟ್ಟಲೆ ಚರ್ಚಿಸುತ್ತಿದ್ದೆವಲ್ಲ, ಆ ಎಲ್ಲಕ್ಕೂ ಅವರು ಬಗೆಬಗೆ ಕತೆ ಕಟ್ಟತೊಡಗುವರು. ಪ್ರತಿಯೊಂದಕ್ಕೂ ಹೊಸ ಅರ್ಥವನ್ನು ಹುಡುಕುವರು. ‘ಪ್ರೇಮಿಗಳಿಬ್ಬರು ಪರಾರಿ’ ಎಂಬ ಮಾಹಿತಿ ವರದರಾಜನಿಗೂ ತಲುಪಬಹುದು. ಆತ ನಮ್ಮನ್ನು ಹುಡುಕುವ ಪ್ರಯತ್ನ ಮಾಡದಿದ್ದರೆ ಸಾಕು’– ಅನಾಮಿಕ ಅಭಿಪ್ರಾಯ ಪಟ್ಟಳು.

‘ಸ್ವಾರಸ್ಯಕರ ಸಂಗತಿ ಏನು ಗೊತ್ತಾ ಅನು?’

‘ಏನು?’

ನಾವಿಬ್ಬರು ಆಗಾಗ ಮಾತಾಡುತ್ತಿದ್ದೆವಲ್ಲ, ನಮ್ಮನ್ನು ಬೇಹುಗಾರಿಕೆ ಮಾಡುವವರಂತೆ ಆ ಮಂಡಲ್, ಗೋಪಾಲ, ನಸೀಮುದ್ದೀನ್ ನಮ್ಮ ಅಕ್ಕ–ಪಕ್ಕ ಓಡುತ್ತಿದ್ದುದನ್ನು ಗಮನಿಸಿದ್ದೆಯಾ? ನಾವು ಮಾತಿಗೆ ಕುಳಿತ ಕೂಡಲೇ ಅವರು ತುಸು ದೂರ ನಿಂತು ಮಾತಾಡುತ್ತಿರುವಂತೆ ನಟಿಸುತ್ತಿದ್ದರು. ಅವರಿಗೆ ನಮ್ಮ ಮಾತು ಕೇಳಿಸಿಕೊಳ್ಳಬೇಕಿತ್ತು. ಪ್ರೇಮಿಗಳಾ ಅನ್ನುವ ಶಂಕೆ. ನಾಳೆ ಬೆಳಿಗ್ಗೆ ಅವರೇ ವದಂತಿ ಹಬ್ಬಿಸುವುದರಲ್ಲಿ ಮೊದಲಿರುತ್ತಾರೆ ನೋಡು–

‘ನಮಗೆ ಅಂದೇ ಅನುಮಾನ ಇತ್ತು, ಅವರನ್ನು ಹಾಗೆ ಮಾತುಕತೆಗೆ ಬಿಟ್ಟುಬಿಟ್ಟದ್ದೇ ತಪ್ಪು. ಮೂರು ಮಕ್ಕಳ ತಂದೆಗೆ ಎಂಥ ಪೊಗರು? ಅದೂ– ಧರ್ಮವಾದರೂ ಒಂದಾ? ಅದೂ ಬೇರೆ ಬೇರೆ. ಇನ್ನೇನು ಅನಾಮಿಕ ಆತನ ಧರ್ಮಕ್ಕೆ ಮತಾಂತರ ಆಗ್ತಾಳೆ, ಆತ ಕಟ್ಟಿಕೊಂಡವಳಿಗೆ ಕೈ ಕೊಡ್ತಾನೆ..’ ಹೀಗೆಲ್ಲಾ ಅವರು ಆಡಿಕೊಂಡರೂ ಅಚ್ಚರಿಯಿಲ್ಲ.’

‘ಮತ್ತೇನು?’ ಅನಾಮಿಕ ಅಸ್ಪಷ್ಟವಾಗಿ ಪ್ರಶ್ನಿಸಿದಳು.

‘ಅಂದರೆ?’

‘ನಾವಿಬ್ಬರೂ ಪ್ರೇಮಿಗಳು ಅಲ್ವೇ?’

ನೂರ್ ತಿರುಗಿ ನೋಡಿದ. ಆಕೆ ನಕ್ಕಳು.

‘ಪ್ರೇಮ ಅನ್ನುವುದು ಒಂದು ಅನುಭೂತಿ ಅನು. ವರ್ಷಗಟ್ಟಲೆ ಹೆಣ್ಣು–ಗಂಡು ಜೊತೆಗಿದ್ದರೂ ಈ ಅನುಭೂತಿ ದಕ್ಕಬೇಕೆಂದಿಲ್ಲ. ಅದೇವೇಳೆ, ಕ್ಷಣ ಹೊತ್ತು ಜೊತೆಗಿದ್ದರೂ ಅಥವಾ ಕೇವಲ ಒಂದು ಕ್ಷಣದ ನೋಟವೂ ಅದನ್ನು ದಕ್ಕಿಸೀತು. ಪ್ರೇಮ ಹೊರಗಡೆ ಇಲ್ಲ, ಒಳಗಡೆ ಇದೆ. ಆದರೆ ಹೆಚ್ಚಿನ ಪ್ರೇಮಗಳೆಲ್ಲ ಹೊರಗಡೆಯ ಕಾರಣಕ್ಕಾಗಿ ಆಗುತ್ತವೆ. ಅದು ನಿಜಕ್ಕೂ ಪ್ರೇಮವಲ್ಲ, ಆಕರ್ಷಣೆ. ಹೆಣ್ಣು–ಗಂಡು





ಜೊತೆಯಾಗಿರುವುದನ್ನು ನಾವು ಸಾಮಾನ್ಯವಾಗಿ ಪ್ರೇಮಿಗಳು ಎಂದು ಹೇಳುತ್ತೇವೆ. ನಮ್ಮದು ಬಾಹ್ಯನೋಟವನ್ನು ಆಧರಿಸಿರುವ ಹೇಳಿಕೆ. ಹೆಚ್ಚಿನ ಪ್ರೇಮಿಗಳ ಪ್ರೇಮವೂ ಹಾಗೆಯೇ– ಬಾಹ್ಯ ಆಕರ್ಷಣೆಯೇ ಅದರ ಬಂಡವಾಳ. ಇಂಥ ಪ್ರೇಮಿಗಳಲ್ಲಿ ಹೆಚ್ಚಿನವು ಮದುವೆಯಲ್ಲಿ ಮುಕ್ತಾಯವನ್ನು ಕಾಣುತ್ತವೆ. ನಿಜವಾದ ಪ್ರೇಮದ ಪರೀಕ್ಷೆ ಆರಂಭವಾಗುವುದೇ ಆ ಬಳಿಕ. ನಾನು ನಿನ್ನನ್ನು ಆಯ್ಕೆ ಮಾಡಿಕೊಂಡು ಕೆಟ್ಟೆ ಎಂದು ಅವಳೂ, ನಾನು ನಿನ್ನಿಂದಾಗಿ ಪ್ರಪಾತಕ್ಕೆ ಬಿದ್ದೆ ಎಂದು ಇವನೂ ಆಡಿಕೊಂಡು ಕಿತ್ತಾಟ ಶುರುವಾಗುವುದು ಮದುವೆಯ ಬಳಿಕ.

ಹಾಗಿದ್ದರೆ,

ಮದುವೆಯ ಮೊದಲೇಕೆ ಅವರಿಬ್ಬರ ನಡುವೆ ಇಂಥ ಮಾತುಗಳು ಹುಟ್ಟಿಕೊಳ್ಳಲಿಲ್ಲ? ಪ್ರೇಮ ಅಂದರೆ ಅದು ಮದುವೆಯ ಮೊದಲೂ ನಂತರವೂ ಏಕರೂಪದಲ್ಲಿರಬೇಕಲ್ಲವೇ?

ನಿಜವಾಗಿ,

ಅದೊಂದು ಮನಸ್ಸಿನ ಸ್ಥಿತಿ. ಅದೊಂದು ಕಾಳಜಿ. ಅದೊಂದು ನಿಷ್ಕಪಟತೆ. ಆರಾಧನೆ, ಆರೈಕೆ; ಬದುಕು, ತನ್ಮಯತೆ, ಸಂದರ್ಭ–ಸನ್ನಿವೇಶಗಳ ಹಂಗಿಲ್ಲದೇ ಪರಸ್ಪರರಿಗೆ ಶುಭ ಬಯಸುವುದು...

ಅಂಥ ಪ್ರೇಮಿಗಳು ಅಪರೂಪ.

ಆದರೆ ನಾವು ಎಲ್ಲ ಬಗೆಯ ಪ್ರೇಮವನ್ನೂ ಪ್ರೇಮ ಎಂಬ ಸಾಮಾನ್ಯ ಪದದಿಂದಲೇ ಗುರುತಿಸುತ್ತೇವೆ. ಒಂದು ರೀತಿಯಲ್ಲಿ, ಅದು ಪ್ರೇಮಕ್ಕೆ ಮಾಡುವ ಅವಮಾನ. ನೀನು ಗಮನಿಸಿದ್ದೀಯಾ? ಪ್ರೇಮಿಗಳು ವಿಷ ಸೇವಿಸುವ ಘಟನೆಗಳು ನಡೆಯುವುದಿದೆ. ತಮ್ಮ ಪ್ರೇಮಕ್ಕೆ ಮನೆಯವರು ಅನುಮತಿಸುವುದಿಲ್ಲವೆಂದೋ, ಮದುವೆಗೆ ಅಡ್ಡ ಬರುತ್ತಿದ್ದಾರೆಂದೋ ಅದಕ್ಕೆ ಕಾರಣಗಳನ್ನು ಕೂಡ ಕೊಡುವುದಿದೆ. ಅದೇ ಜೋಡಿ ಮದುವೆಯಾದರೂ ವಿಷ ಸೇವಿಸುವುದಿದೆ. ಅದಕ್ಕೆ ಕಾರಣ– ಮನಸ್ತಾಪ. ಜಗಳ. ಸಂಶಯ. ಒಂದುಕಡೆ ಪ್ರೇಮಕ್ಕಾಗಿ ಜೀವವನ್ನೇ ತ್ಯಾಗ ಮಾಡಲು ಸಿದ್ಧವಾಗುವುದು ಮತ್ತು ಇನ್ನೊಂದು ಕಡೆ ಮದುವೆಯಿಂದ ಮುಕ್ತಗೊಳ್ಳುವುದಕ್ಕಾಗಿ ಜೀವತ್ಯಾಗ ಮಾಡಲು ಪ್ರಯತ್ನಿಸುವುದು– ಇವೆರಡರ ಮೂಲವೂ ಪ್ರೇಮವೇ.

ಹಾಗಾದರೆ ಪ್ರೇಮ ಎಂದರೇನು?

ಮದುವೆಗಿಂತ ಮೊದಲು ಹೇಗೆ ಗಾಢವಾಗಿ ಪ್ರೀತಿಸಲು ಸಾಧ್ಯವಾಗುತ್ತದೋ ಮದುವೆ ನಂತರವೂ ಅಷ್ಟೇ ಗಾಢವಾಗಿ ಪ್ರೀತಿಸಲು ಸಾಧ್ಯವಾಗುವುದೇ ಪ್ರೇಮ. ಈ ಪ್ರೇಮದಲ್ಲಿ ಜಗಳ ಇರಲ್ಲ, ಮುನಿಸು, ಕಣ್ಣೀರು ಇರಲ್ಲ ಎಂದಲ್ಲ. ಅವು ಮದುವೆಗಿಂತ ಮೊದಲೂ ಇರುತ್ತದೆ. ಬಳಿಕವೂ ಇರುತ್ತದೆ. ಆದರೆ ಆ ಎಲ್ಲವೂ ಒಂದು ಪ್ರೇಮವನ್ನು ಇನ್ನಷ್ಟು ತಾಜಾಗೊಳಿಸುವ ಸಾಣೆಕಲ್ಲುಗಳೇ ಹೊರತು ಪ್ರೇಮದಲ್ಲಿ

ಬಿರುಕು ಮೂಡಿಸುವ ಸಿಡಿಮದ್ದುಗಳಲ್ಲ. ನನಗೆ ಎಷ್ಟೋ ಬಾರಿ ಅನಿಸಿದ್ದಿದೆ ಅನು. ಪ್ರೇಮಿಗಳ ಆತ್ಮಹತ್ಯೆ ಅಂತ ಸುದ್ದಿ ಬರುತ್ತಿರುತ್ತಲ್ಲ. ಪ್ರೇಮಿಗಳು ಯಾಕೆ ಆತ್ಮಹತ್ಯೆ ಮಾಡಿಕೊಳ್ಳಬೇಕು ಎಂದು ಎಷ್ಟೋ ಬಾರಿ ನಾನು ನನ್ನೊಂದಿಗೇ ಕೇಳಿಕೊಂಡಿದ್ದೇನೆ. ಓರ್ವ ಯುವತಿ– ಓರ್ವ ಯುವಕನನ್ನು ಪ್ರೀತಿಸುತ್ತಾಳೆ ಎಂದರೆ ಅವರಿಬ್ಬರೂ ಬಿಟ್ಟಿರಲಾರದೇ ಇರುವುದು ಎಂದರ್ಥವೇ? ಬೇರ್ಪಟ್ಟರೆ ಪ್ರೇಮ ಸಾಯುವುದೇ? ಪ್ರೇಮಿಗಳೇಕೆ ಜೊತೆಯಾಗಿಯೇ ಇರಬೇಕು? ದೂರವಿದ್ದೂ ಯಾಕೆ ಪ್ರೇಮಿಸಬಾರದು? ಪ್ರೇಮದ ಜೊತೆ ದೈಹಿಕ ಬಯಕೆಯೂ ಸೇರಿಕೊಂಡಾಗ ಹೀಗಾಗುತ್ತಿರಬಹುದೇ? ಪ್ರೇಮಕ್ಕೂ ದೈಹಿಕ ಬಯಕೆಗೂ ಏನು ಸಂಬಂಧ? ಎರಡು ಮನಸ್ಸುಗಳ ಅಂತರ್ ಸಂಬಂಧವೇ ಪ್ರೇಮ. ದೈಹಿಕ ಆಕರ್ಷಣೆ ಯಾಕೆ ಇದರ ಜೊತೆ ತಳಕು ಹಾಕಿಕೊಂಡಿದೆ? ದೈಹಿಕ ಸಂಬಂಧವಿಲ್ಲದೇ ಪ್ರೇಮವಿಲ್ಲವೇ...'

ನೂರ್ ಎಗ್ಗಿಲ್ಲದೇ ಮಾತಾಡಿದ. ಆತ ಮಾತಾಡುವ ರೀತಿ ನೋಡಿದರೆ ಎಲ್ಲೋ ಸುರಕ್ಷಿತ ಜಾಗದಲ್ಲಿ ಇದ್ದು ಹರಟೆ ಹೊಡೆಯುತ್ತಿದ್ದಾನೆಂದೇ ಅಂದುಕೊಳ್ಳಬೇಕು. ಆ ದಾರಿ ಆತನಿಗೆ ಪರಿಚಿತವಾಗಿದ್ದುದರಿಂದ ಆ ಕಾಳರಾತ್ರಿಯಲ್ಲೂ ಆತ ಸಹಜವಾಗಿಯೇ ಇದ್ದ.

'ಹಾಗಾದರೆ, ನನ್ನದೂ ನಿನ್ನದೂ ಯಾವ ಬಗೆಯ ಪ್ರೇಮ?' ಅನಾಮಿಕ ಕಿಚಾಯಿಸಿದಳು.

'ನಮ್ಮದು ಪ್ರೇಮವೇ?' ನೂರ್ ಸಂತನಂತೆ ಉತ್ತರಿಸಿದ.

ಇಬ್ಬರೂ ನಗುತ್ತಾ ಕಾಡಿನ ಮಧ್ಯೆ ದಾರಿ ಹುಡುಕುತ್ತಾ ಸಾಗಿದರು. ಈ ನಡುವೆ ಏನೋ ಹೊಳೆದವಳಂತೆ ಅನಾಮಿಕ ಪ್ರಶ್ನಿಸಿದಳು,

'ನಾನು ಆ ಬೇವಿನ ಮರದಡಿಯಲ್ಲಿ ನಿಂತು ನಿನಗೆ ಎಷ್ಟು ಕರೆ ಮಾಡಿದ್ದೆ. ನೀನು ಒಂದೇ ಒಂದು ಕರೆಯನ್ನೂ ಸ್ವೀಕರಿಸಿಲ್ಲವಲ್ಲ. ಅದೂ ಸ್ವಿಚ್ಡ್ ಆಫ್. ಏನಾಗಿತ್ತು ನಿನ್ನ ಮೊಬೈಲ್‌ಗೆ?'

'ನಾನು ಸುಮಾರು 12 ಗಂಟೆಯ ಸಮಯದಲ್ಲೇ ಮೊಬೈಲನ್ನು ಸ್ವಿಚ್ಡ್ ಆಫ್ ಮಾಡಿದ್ದೆ. ರಾತ್ರಿ ನಿನ್ನ ಕರೆ ಬಂದು ಮೊಬೈಲ್ ರಿಂಗುಣಿಸಿದರೆ, ಅದು ಕೋಣೆಯಲ್ಲಿ ಮಲಗಿದವರನ್ನು ಎಚ್ಚರಗೊಳಿಸಬಾರದಲ್ಲ. ಹಾಗೇನಾದರೂ ಆದರೆ, ನಮ್ಮ ಪರಾರಿ ಪ್ಲಾನೇ ವಿಫಲವಾಗುತ್ತದಲ್ಲ. ಅದಕ್ಕಾಗಿ ಸ್ವಿಚ್ಡ್ ಆಫ್ ಮಾಡಿಟ್ಟಿದ್ದೆ. ನಿನ್ನಲ್ಲಿ ಮೊದಲೇ ಹೇಳಲು ಮರೆತೆ. ತುಂಬಾ ಕರೆ ಮಾಡಿದ್ದೀಯ?'

'ಮತ್ತೇ, ಈಗಲಾದರೂ ಆ ಮೊಬೈಲ್‌ನ ಸ್ವಿಚ್ ಆನ್ ಮಾಡು. ಗೊತ್ತಾಗುತ್ತೆ ಎಷ್ಟೂಂತ'– ಅನಾಮಿಕ ಹುಸಿ ಕೋಪ ತೋರಿಸಿದಳು.

ಬೆಳಕು ಮೂಡುವ ಹೊತ್ತಿಗೇ ಅವರು ಕಾಡುದಾರಿಯಿಂದ ರಸ್ತೆ ಪ್ರವೇಶಿಸಿ ನಗರವನ್ನು ದಾಟಿಯಾಗಿತ್ತು.





## ಇಪ್ಪತ್ತೊಂಬತ್ತು

ಅನಾಮಿಕ ಮತ್ತು ನೂರ್

ನಗರವನ್ನು ದಾಟಿ ತುಂಬಾ ದೂರ ತಲುಪಿದ್ದರು. ನಡೆಯುತ್ತಿರುವಾಗಲೇ ಯಾವುದೋ ಸ್ವಯಂ ಸೇವಾ ಸಂಸ್ಥೆಯೊಂದು ನೀರಿನ ಬಾಟಲಿ ಮತ್ತು ಬೆಳಗ್ಗಿನ ತಿಂಡಿಯನ್ನು ನೀಡಿತು. ಅನಾಮಿಕ ಈವರೆಗೆ ಇಂಥ ದೃಶ್ಯವನ್ನು ಮೊಬೈಲ್ ವೀಡಿಯೋಗಳಲ್ಲಷ್ಟೇ ನೋಡಿದ್ದಳು. ವಲಸೆ ಕಾರ್ಮಿಕರು ದಿಕ್ಕಿಲ್ಲದೇ ನಡೆಯುವುದು ಮತ್ತು ಅಲ್ಲಲ್ಲಿ ಸ್ವಯಂ ಸೇವಕರು ಅವರಿಗೆ ಆಹಾರದ ಕಿಟ್‌ಗಳನ್ನು ನೀಡಿ ಸಾಂತ್ವನಿಸುವುದನ್ನು ಕಂಡಿದ್ದಳು. ಇದೀಗ ಆಕೆಯ ಪಾಲಿಗೆ ಅದು ನಿಜವಾಗುತ್ತಿದೆ.

ಆಕೆಗೆ ಆಕೆಯನ್ನೇ ನಂಬಲಾಗಲಿಲ್ಲ.

ಕೇವಲ ಒಂದು ವಾರದ ಹಿಂದೆ ತಾನು ಹೇಗಿದ್ದೆ, ಎಲ್ಲಿದ್ದೆ, ಏನೇನು ಮಾತಾಡುತ್ತಿದ್ದೆ. ಅವೆಲ್ಲಕ್ಕೂ ತದ್ವಿರುದ್ಧವಾಗಿ ಈಗ ಅವಳ ಬದುಕು ಸಾಗುತ್ತಿತ್ತು. ವರದರಾಜನ ಕಾಫಿ ಎಸ್ಟೇಟ್‌ನಲ್ಲಿ ಮಹಿಳಾ ಕಾರ್ಮಿಕರ ಜೊತೆ ದಿನ ದೂಡುತ್ತಿದ್ದಾಗ ಅನಾಮಿಕ ಈ ವಲಸೆ ಕಾರ್ಮಿಕರ ಮಹಾನ್ ಯಾತ್ರೆಯನ್ನು ಹುಚ್ಚು ಎಂದು ಅಂದುಕೊಂಡಿದ್ದಳು. ಹೀಗೆ ದಿಕ್ಕಿಲ್ಲದೇ ಹೋಗುವುದೆಲ್ಲಿಗೆ, ಸಾವಿರಾರು ಕಿಲೋಮೀಟರ್ ದೂರವನ್ನು ನಡೆದು ಕ್ರಮಿಸುವುದು ಏನು ಮಕ್ಕಳಾಟವೇ ಎಂದೆಲ್ಲಾ ತರ್ಕಿಸಿದ್ದಳು. ಆಗ ತಾನೂ ಇಂಥದ್ದೇ ಯಾತ್ರೆಯೊಂದನ್ನು ಮಾಡಬೇಕಾದೀತು ಎಂಬುದನ್ನು ಕನಸು–ಮನಸಲ್ಲೂ ಅವಳು ಊಹಿಸಿರಲಿಲ್ಲ. ಕಾಫಿ ಎಸ್ಟೇಟ್‌ನಲ್ಲಿ ಉಳಿದು ಕಾರ್ಮಿಕರ ಜೊತೆ ಇರುವುದು ಮತ್ತು ಕೊರೋನಾ ಸಡಿಲಿಕೆ ಯಾವಾಗ ಆಗುತ್ತೋ ಆವಾಗ ಕೆಲಸ ಪ್ರಾರಂಭಿಸುವುದು ಅನ್ನುವ ನಿಲುವು ಆಕೆಯದ್ದಾಗಿತ್ತು.

ಆ ಬಳಿಕ ಸಭೆಯ ಮೇಲೆ ಸಭೆ, ಚರ್ಚೆ, ವರದರಾಜನ ಮೇಲೆ ಅನುಮಾನ, ಕಾರ್ಮಿಕ ಸಭೆ, ನೂರ್‌ನೊಂದಿಗೆ ಮಾತುಕತೆ... ಇತ್ಯಾದಿಗಳೆಲ್ಲ ಕ್ಷಿಪ್ರವಾಗಿ ನಡೆದು ಹೋದುವು. ತಾನು ನಿರೀಕ್ಷಿಸದೇ ಇರುವ ಈ ಯಾತ್ರೆಗೂ ತಾನು ತಯಾರಾಗಬೇಕಾಯಿತು.

ಬದುಕು ಎಷ್ಟು ವಿಚಿತ್ರ ಎಂದು ಅನಾಮಿಕ ಅಂದುಕೊಂಡಳು.

ನಾವು ತೀರ್ಮಾನಿಸಿದಂತೆಯೇ ಬದುಕು ಸಾಗುತ್ತಿದ್ದರೆ, ನಾನು ಈ ರಸ್ತೆಯಲ್ಲಿ ಹೀಗೆ ನಡೆಯುವುದಕ್ಕೆ ಸಾಧ್ಯವೇ ಇರಲಿಲ್ಲ. ನೂರ್‌ನ ಗಡ್ಡ, ಟೋಪಿಯನ್ನು ಕಂಡು ಆತನನ್ನು ಅವತ್ತೇ ನಿರ್ಲಕ್ಷಿಸುತ್ತಿದ್ದರೆ, ಓರ್ವ ವಿಶಿಷ್ಟ ವ್ಯಕ್ತಿಯ ಪರಿಚಯವೂ ಆಗುತ್ತಿರಲಿಲ್ಲ. ಆತ ನನಗೆ ಪರಿಚಯವಾಗುವವರೆಗೆ ನಾನೇ ಧೈರ್ಯವಂತೆ, ಬುದ್ಧಿವಂತೆ ಎಂದು ಅಂದುಕೊಂಡಿದ್ದೆ.

ಆದರೆ,

ಆತ ನನ್ನ ಈ ಜಂಭವನ್ನು ಒಡೆದು ಹಾಕಿದ. ಮಾತ್ರವಲ್ಲ, ನನ್ನನ್ನು ಸಂಪೂರ್ಣವಾಗಿ ಆತ ಪ್ರಭಾವಿಸಿ ಬಿಟ್ಟ. ಗಂಡ ಅವಿನಾಶನ ಸಾವಿನ ಬಳಿಕ ಯಾವ ಗಂಡಸಿನೊಂದಿಗೂ ಸಲುಗೆ ಬೆಳೆಸದ ನಾನು, ಇವನ ಜೊತೆ ಸಲುಗೆ ಬೆಳೆಸಿದೆ. ನನ್ನ ಮನಸ್ಸು ಈತನ ಬಗ್ಗೆ ಯಾಕೋ ಆಗಾಗ್ಗೆ ನೆನಪಿಸುವ ಕೆಲಸವನ್ನೂ ಮಾಡುತ್ತಿದೆ. ಆಕರ್ಷಣೆಯೋ, ಪ್ರೀತಿಯೋ, ಕಾಳಜಿಯೋ ಯಾವುದೋ ಒಂದು ಆತನ ಬಗ್ಗೆ ನನ್ನ ಮನಸ್ಸಿನಲ್ಲಿದೆ. ಅವಿನಾಶರಿಂದ ಬೇಸತ್ತು ಈ ಗಂಡಸರೇ ಹೀಗೆ ಎಂದು ತಿರಸ್ಕಾರ ಭಾವದಲ್ಲಿದ್ದ ನನ್ನನ್ನು ತಿದ್ದಿದ್ದು–

ಈ ನೂರ್.

ಗಂಡಸರೆಲ್ಲ ಅವಿನಾಶ್ ಅಲ್ಲ ಅನ್ನುವುದನ್ನು ತನ್ನ ನೇರ, ಪ್ರಾಮಾಣಿಕ ಮತ್ತು





ಪ್ರಬುದ್ಧ ನಡವಳಿಕೆಯಿಂದ ನೂರ್ ಸಾಬೀತುಪಡಿಸಿದ್ದಾನೆ. ಇಲ್ಲದಿದ್ದರೆ, ಆತನ ಜೊತೆ ತಾನೇಕೆ ಆ ಅರ್ಧರಾತ್ರಿ ಹೊರಡಬೇಕಿತ್ತು? ತನಗೆ ಅಂಥ ಜರೂರತ್ತು ಏನಿತ್ತು? ಆತ ಹೊರಟಿದ್ದು ಆತನ ಪತ್ನಿ–ಮಕ್ಕಳನ್ನು ನೆನೆಸಿಕೊಂಡು ಆಗಿರಬಹುದು. ಆದರೆ ತಾನು? ಆತನಿರದ ಎಸ್ಟೇಟ್‌ನಲ್ಲಿ ತಾನು ಇರಲ್ಲ ಅನ್ನುವುದೇ ನನ್ನ ಮನಸ್ಸಿನ ಪಿಸುಮಾತು ಆಗಿತ್ತಲ್ಲವೇ? ಹಾಗಂತ,

ಆತನಿಗೂ ನನ್ನ ಬಗ್ಗೆ ಇಂಥದ್ದೇ ಮೋಹ ಇದ್ದೀತೆ? ಆತ ನನ್ನನ್ನು ಜೊತೆ ಕರೆದದ್ದೇಕೆ? ಆತನಿಗೊಬ್ಬನಿಗೇ ಹೊರಡಬಹುದಿತ್ತಲ್ಲವೇ? ಓರ್ವ ಹೆಣ್ಣು ರಸ್ತೆಯಲ್ಲಿ ಸಾವಿರಾರು ಕಿಲೋಮೀಟರ್ ನಡೆದು ಸಾಗುವುದು ತ್ರಾಸದಾಯಕ ಎಂದು ಆತನಿಗೆ ಅನ್ನಿಸಿಲ್ಲವೇ? ಏಕೆ ಆತ ನನ್ನನ್ನು ಕರೆದ? ಆತನ ಮನಸ್ಸೂ ನನ್ನ ಮನಸ್ಸಿನಂತೆ ಪಿಸು ಮಾತುಗಳನ್ನು ಆಡುತ್ತಿರಬಹುದೇ?

ನೂರ್...

ಅನಾಮಿಕ ಜೋರಾಗಿ ಕೂಗಿದಳು. ಮುಂದಿದ್ದ ನೂರ್ ತಿರುಗಿ ನೋಡಿದ.

'ಯಾಕೆ ಇಷ್ಟು ಹಿಂದುಳಿದು ಬಿಟ್ಟೆ?' ನೂರ್ ಪ್ರಶ್ನಿಸಿದ.

'ನೀನ್ಯಾಕೆ ನನ್ನನ್ನು ಬಿಟ್ಟು ಅಷ್ಟು ಮುಂದಕ್ಕೆ ಒಂಟಿಯಾಗಿ ಹೋದೆ?' ಅನಾಮಿಕ ಮರು ಪ್ರಶ್ನಿಸಿದಳು. ಸಣ್ಣ ಏದುಸಿರೂ ಆಕೆಯಲ್ಲಿತ್ತು.

ನಡೆಯುತ್ತಾ, ಆಲೋಚಿಸುತ್ತಾ ನಾನು ನನ್ನನ್ನೇ ಮರೆತುಬಿಟ್ಟೆ ಅನು. ನೀನೊಮ್ಮೆ ಹಿಂದಿರುಗಿ ನೋಡಂತೆ. ಹಾಗೆಯೇ ನಮ್ಮ ಮುಂದಿನ ದಾರಿಯ ಆ ಕೊನೆಯ ವರೆಗೂ ಒಮ್ಮೆ ದೃಷ್ಟಿ ಹಾಯಿಸಂತೆ.

ಇಡೀ ಭಾರತವೇ ಕಾಲ್ನಡಿಗೆಯಲ್ಲಿರುವಂತಿದೆ.

ಇಷ್ಟೆಲ್ಲ ಕಾರ್ಮಿಕರು ಹೀಗೆ ಕಾಲ್ನಡಿಗೆಯಲ್ಲಿ ಸಾಗಲು ಕಾರಣವೇನು? ಲಾಕ್‌ಡೌನ್‌ನ ಈ ಸಮಯದಲ್ಲಿ ಅವರ ಬದುಕು ಹೇಗಿದ್ದಿರಬಹುದು? ಅವರಿಗೆ ಸರಿಯಾದ ಆಹಾರ, ವಸತಿಯ ವ್ಯವಸ್ಥೆ ಆಗಿದ್ದಿರಬಹುದೇ? ವೇತನ ಸಿಕ್ಕಿರಬಹುದೇ? ಎಲ್ಲವೂ ಸರಿಯಾಗಿದ್ದಿದ್ದರೆ ಅವರೇಕೆ ಹೀಗೆ ನಡೆಯುತ್ತಿದ್ದರು? ನಮ್ಮ ವರದರಾಜನಂತೆ ಅವರ ಮಾಲಿಕರೂ ಅರ್ಧದಲ್ಲೇ ಕೈ ಬಿಟ್ಟಿರಬಹುದು. ಇವರಾದರೂ ಏನು ಮಾಡಿಯಾರು? ಉಳ್ಳವರ ಪಾಲಿಗೆ ನಾವೆಲ್ಲ ಕಸ–ಕಡ್ಡಿಗಳು ಅನು. ಅವರು ಬೇಕಾದಷ್ಟು ಸಮಯ ನಮ್ಮನ್ನು ಬಳಸುತ್ತಾರೆ. ಬೇಡವೆಂದಾಗ ಎಸೆಯುತ್ತಾರೆ. ಓ, ಆ ತಾಯಿಯನ್ನು ನೋಡು. ಸೊಂಟದಲ್ಲಿ ಸಣ್ಣ ಮಗು ಇದೆ. ಒಂದು ಕೈಯಲ್ಲಿ ಬ್ಯಾಗು ಇದೆ. ಆ ತಾಯಿ ಯಾರ ಮೇಲೆ ಭರವಸೆ ಇಟ್ಟು ನಡೆಯುತ್ತಿದ್ದಾರೆ? ಅವರ ಮನೆ ಎಲ್ಲಿರಬಹುದು? ಈ ಊರಿಗೆ ಅವರು ಬಂದಿರುವುದರ ಹಿಂದೆ ಎಂಥ ಕರುಣಾಜನಕ ಕತೆಯಿರಬಹುದು? ನಡೆದುಕೊಂಡೇ ತಾನು ಮನೆ ತಲುಪುವೆ

ಎಂಬ ಧೈರ್ಯವನ್ನು ಅವರಲ್ಲಿ ತುಂಬಿದವರು ಯಾರು..'

ನೂರ್ ಪ್ರಶ್ನೆಗಳನ್ನು ಎಸೆಯುತ್ತಲೇ ಹೋದ.

ಅನಾಮಿಕ ಒಮ್ಮೆ ಹಿಂದೆ ತಿರುಗಿ ನೋಡಿದಳು. ಓಹ್, ಆಕೆ ದಂಗಾದಳು. ರಸ್ತೆ ತುಂಬಾ ಕಾಲ್ನಡಿಗೆಯಲ್ಲಿರುವ ಜನರು. ಅಂಗಡಿಗಳು ತೆರೆದುಕೊಂಡಿಲ್ಲ. ವಾಹನಗಳೂ ಇಲ್ಲ.

'ಇವರೆಲ್ಲ ಯಾವ ಭರವಸೆಯ ಮೇಲೆ ನಡೆಯುತ್ತಿದ್ದಾರೆ?' ಅನಾಮಿಕ ಅನುಮಾನ ವ್ಯಕ್ತಪಡಿಸಿದಳು.

'ನಾವು ನಮ್ಮ ಮೇಲೆ ಭರವಸೆ ಇಟ್ಟುಕೊಳ್ಳಬೇಕು ಅನಾಮಿಕ..' ನೂರ್ ಉತ್ತರಿಸಿದ.

'ಯಾವ ಹೊರೆ ಹೊರುವಾತನೂ ಇನ್ನೊಬ್ಬನ ಹೊರೆಯನ್ನು ಹೊರುವುದಿಲ್ಲ...' ಎಂದು ಕುರಾನು ಹೇಳುತ್ತೆ. ಬಹುಶಃ ಕುರಾನಿನ 66ನೇ ಅಧ್ಯಾಯದಲ್ಲಿ ಈ ವಚನ ಇದೆ. ಇದೇ ರೀತಿಯ ಉಲ್ಲೇಖಗಳು ಭಗವದ್ಗೀತೆಯಲ್ಲೂ ಇದ್ದೀತು. ಧರ್ಮದ ಗುಣವೇ ಅದು. ಮನುಷ್ಯನನ್ನು ಪರಾವಲಂಬನೆಯಿಂದ ಮುಕ್ತಗೊಳಿಸುವುದು. ಸ್ವತಂತ್ರವಾಗಿ ಆಲೋಚಿಸುವುದಕ್ಕೆ ಪ್ರೇರೇಪಿಸುವುದು...

ಪ್ರವಾದಿ ಮುಹಮ್ಮದರು ಮಕ್ಕಾದಲ್ಲಿ ತನ್ನ ವಿಚಾರವನ್ನು ಜನರೊಂದಿಗೆ ಹಂಚಿಕೊಳ್ಳುತ್ತಿದ್ದರಲ್ಲ, ಆಗ ಅದನ್ನು ಒಪ್ಪದವರು ಹೇಳಿದರಂತೆ,

'ನೀನು ಹೋದಲ್ಲೆಲ್ಲಾ ನಿನ್ನ ವಿಚಾರ ಹಂಚಿಕೊಳ್ಳುವುದನ್ನು ಬಿಡಬೇಕು. ನಿನ್ನ ಸಮಸ್ಯೆ ಏನಿದೆ, ಅದನ್ನು ನಮಗೆ ಬಿಡು. ನಾವು ಪರಿಹರಿಸುತ್ತೇವೆ. ಇನ್ನು, ನೀನು ಹೇಳುವ ಪರಲೋಕದ ವಿಷಯ. ಸತ್ತ ಬಳಿಕ ದೇವನು ಮತ್ತೆ ನಮ್ಮನ್ನು ಜೀವಂತಗೊಳಿಸುತ್ತಾನೆ, ವಿಚಾರಣೆ ನಡೆಸುತ್ತಾನೆ ಮತ್ತು ಪಾಪ ಮಾಡಿದವರನ್ನು ಶಿಕ್ಷಿಸುತ್ತಾನೆ ಅನ್ನುತ್ತೀಯಲ್ಲ. ಅದನ್ನೂ ನಮಗೆ ಬಿಡು. ದೇವನ ಮುಂದೆ ನಿನ್ನ ಪಾಪವನ್ನು ನಾವು ವಹಿಸಿಕೊಂಡು ನಿನ್ನನ್ನು ಪಾಪಮುಕ್ತಗೊಳಿಸುತ್ತೇವೆ..' ಎಂದು ಹೇಳುತ್ತಿದ್ದರಂತೆ. ಈಗ ಈ ಮೇಲಿನ ವಚನವನ್ನು ಒಮ್ಮೆ ನೆನಪಿಸಿಕೊಳ್ಳಂತೆ. 'ಯಾವ ಹೊರೆ ಹೊರುತಾವನೂ ಇನ್ನೊಬ್ಬನ ಹೊರೆಯನ್ನು ಹೊರುವುದಿಲ್ಲ' ಅನ್ನುವುದು ಅರ್ಥವತ್ತಾಗಿದೆ ನೋಡು.

ನಿಜ ಏನು ಗೊತ್ತಾ?

ನಿನ್ನ ಪ್ರತಿಭೆ, ನಿನ್ನ ಸಿದ್ಧತೆಯ ಮೇಲೆ ನೀನು ಭರವಸೆ ಇಟ್ಟುಕೊಳ್ಳಬೇಕು. ತಾನು ಗುರಿಯನ್ನು ತಲುಪಿಯೇ ತಲುಪುತ್ತೇನೆ ಎಂಬ ವಿಶ್ವಾಸವನ್ನು ಹೊಂದಿರಬೇಕು. ಹೀಗೆ ನೀನು ತೀರ್ಮಾನಿಸಿದಾಗ ನಿನ್ನೊಳಗೆ ಪಾಸಿಟಿವ್ ಕಣಗಳು ಸಕ್ರಿಯವಾಗುತ್ತವೆ ಮತ್ತು ಅವು ನಿನ್ನೊಳಗಿನ ನೆಗೆಟಿವ್ ಕಣಗಳನ್ನು ಕೊಲ್ಲಲು ಪ್ರಾರಂಭಿಸುತ್ತವೆ. ನಿನ್ನಲ್ಲಿ ನಿನ್ನ ಬಗ್ಗೆ ಎಲ್ಲಿಯ ವರೆಗೆ ಭರವಸೆ ಇರುತ್ತೋ ಅಲ್ಲಿಯ ವರೆಗೆ ಪಾಸಿಟಿವ್





ಕಣಗಳು ಮೇಲುಗೈ ಪಡೆದಿರುತ್ತವೆ. ಆಗ ಯಾವುದನ್ನೂ ನೀನು ಹಿನ್ನಡೆ ಎಂದು ಅಂದುಕೊಳ್ಳುವುದೇ ಇಲ್ಲ. ವಾಸ್ಕೋಡಗಾಮ, ಕೊಲಂಬಸ್‌ರ ಸಾಹಸ ಕತೆಯನ್ನು ನೀನು ಕೇಳಿಲ್ಲವೇ? ಬ್ಲೇಡ್ ರನ್ನರ್ ಎಂದೇ ಗುರುತಿಸಿಕೊಂಡಿರುವ ದಕ್ಷಿಣ ಆಫ್ರಿಕಾದ ಆಸ್ಕರ್ ಪಿಸ್ಟೋರಿಯಸ್‌ನ ಸಾಧನೆ ತಿಳಿದಿಲ್ಲವೇ?

ಅನಾಮಿಕ ನಡುವೆ ಬಾಯಿ ಹಾಕಿದಳು–

'ನೀನು ಈ ಕಾಫಿ ಎಸ್ಟೇಟ್‌ಗೆ ಬರುವ ಮೊದಲು ಉಪನ್ಯಾಸಕ ವೃತ್ತಿಯನ್ನು ಬಿಟ್ಟು ಪಿಹೆಚ್‌ಡಿ ಸಂಶೋಧಕನಾಗಿಯೂ ಕೆಲಸ ಮಾಡಿರುವೆಯಾ?'

ನೂರ್ ನಕ್ಕ.

11 ತಿಂಗಳ ಮಗುವಾಗಿದ್ದಾಗಲೇ ಆಸ್ಕರ್ ಪಿಸ್ಟೋರಿಯಸ್‌ನ ಎರಡೂ ಕಾಲುಗಳನ್ನು ಕತ್ತರಿಸಿ ತೆಗೆಯಲಾಗಿತ್ತು. ಅಂಗ ಊನತೆಯೊಂದಿಗೆ ಹುಟ್ಟಿದ್ದ ಪಿಸ್ಟೋರಿಯಸ್‌ನ ಎರಡೂ ಕಾಲುಗಳು ಮಂಡಿಯಿಂದ ಕೆಳಗೆ ವಿಚಿತ್ರವಾಗಿ ತಿರುಗಿಕೊಂಡ ರೀತಿಯಲ್ಲಿತ್ತು. ಆದರೆ ಆತನ ಧೀಶಕ್ತಿ ಎಷ್ಟು ಪ್ರಬಲವಾಗಿತ್ತೆಂದರೆ, ಎರಡೂ ಕಾಲುಗಳು ಸರಿ ಇರುವವರ ಓಟದ ಸ್ಪರ್ಧೆಯಲ್ಲಿ ಭಾಗವಹಿಸಿ 6ನೇ ಸ್ಥಾನ ಪಡೆದುಕೊಂಡ. ಅದೂ ಅಂತಿಂಥ ಸ್ಪರ್ಧೆಯಲ್ಲ. ದಕ್ಷಿಣ ಆಫ್ರಿಕಾದ ಪ್ರಬಲ ಓಟಗಾರರೆಲ್ಲ ಭಾಗವಹಿಸಿದ್ದ ಸ್ಪರ್ಧೆ. 2005ರಲ್ಲಿ ಈ ಓಟದ ಸ್ಪರ್ಧೆ ನಡೆದಿತ್ತು ಎಂಬುದು ನನ್ನ ತಿಳುವಳಿಕೆ. 2004ರ ಸಮ್ಮರ್ ಪ್ಯಾರಾ ಒಲಿಂಪಿಕ್ಸ್‌ನ 400 ಮೀಟರ್ ಓಟದಲ್ಲಿ ದಾಖಲೆಯ ವೇಗದೊಂದಿಗೆ ಚಿನ್ನ ಪಡೆದುಕೊಂಡ. ಆ ಬಳಿಕದ ಅನೇಕಾರು ಸ್ಪರ್ಧೆಗಳಲ್ಲಿ ಜಗತ್ತನ್ನೇ ಅಚ್ಚರಿಗೆ ಕೆಡವಿ ಬಹುಮಾನಗಳನ್ನು ಬಾಚಿಕೊಂಡ.

ಕಾಲಿರುವವರನ್ನು ನೋಡುತ್ತಾ ಹತಾಶೆಯಿಂದ ತನ್ನ ಅದೃಷ್ಟವನ್ನೇ ಹಳಿದುಕೊಳ್ಳುತ್ತಾ ಕಳೆದು ಹೋಗಬೇಕಿದ್ದ ವ್ಯಕ್ತಿಯೊಬ್ಬ, ಕಾಲಿರುವವರೇ ಮಾಡಲು ಸಾಧ್ಯವಾಗದ ಸಾಧನೆಯನ್ನು ಹೇಗೆ ಮಾಡಿದ? ಆತನೊಳಗೆ ಅಂಥದ್ದೊಂದು ಶಕ್ತಿಯನ್ನು ತುಂಬಿದವರು ಯಾರು?

ಇಟಲಿಯ ಕೊಲಂಬಸ್ ಮತ್ತು ಪೋರ್ಚುಗೀಸ್‌ನ ವಾಸ್ಕೋಡಗಾಮರದ್ದೂ ಅದ್ಭುತ ಸಾಧನೆ. ಅವರ ಕಾಲದಲ್ಲಿ ಸಮುದ್ರ ಯಾನ ಎಂಬುದು ಇವತ್ತಿನಂತೆ ಸಲೀಸಿನದ್ದಲ್ಲ. ಇವತ್ತಿನಂಥ ತಂತ್ರಜ್ಞಾನಗಳ ಆವಿಷ್ಕಾರವೂ ಅವರ ಕಾಲದಲ್ಲಿ ಆಗಿರಲಿಲ್ಲ. ಯಾವಾಗ ಬೇಕಾದರೂ ಸಮುದ್ರ ಹುಚ್ಚೆದ್ದು ಕುಣಿಯಬಹುದು. ಚಂಡಮಾರುತ ಬೀಸಬಹುದು. ಸಂಪರ್ಕ ಸಾಧನಗಳೂ ಇಲ್ಲ. ಅಂಥ ಸ್ಥಿತಿಯಲ್ಲೂ ಸಮುದ್ರದ ಇನ್ನೊಂದು ತುದಿ ಎಲ್ಲಿ ಎಂದೂ ಗೊತ್ತಿಲ್ಲದೇ ಅವರಿಬ್ಬರೂ ಸಮುದ್ರ ಯಾನಕ್ಕೆ ಸಿದ್ಧರಾಗುತ್ತಾರಲ್ಲ, ಆ ಧೈರ್ಯವನ್ನು ಅವರೊಳಗೆ ಹುದುಗಿಸಿಟ್ಟವರು ಯಾರು?

ಯುರೋಪ್ ರಾಷ್ಟ್ರಗಳೊಂದಿಗೆ ಭಾರತಕ್ಕೆ ಸಂಪರ್ಕ ಕಲ್ಪಿಸಿದವನೇ ವಾಸ್ಕೋಡಗಾಮ.

ಕೊಲಂಬಸ್‌ನಿಂದಾಗಿ ಯುರೋಪಿಯನ್ ರಾಷ್ಟ್ರಗಳಿಗೆ ತಮ್ಮ ವ್ಯಾಪಾರವನ್ನು ವೃದ್ಧಿಸಲು ಅಮೇರಿಕ ಎಂಬ ರಾಷ್ಟ್ರವೊಂದು ಸಿಕ್ಕಿತು.

ನಮ್ಮ ಮೇಲೆ ನಾವು ಭರವಸೆ ಇಟ್ಟುಕೊಂಡಾಗ ಪ್ರಕೃತಿಯೇ ನಮ್ಮನ್ನು ಪೋಷಿಸುತ್ತದೆ. ನಮ್ಮ ಗೆಲುವನ್ನು ಅದು ಸುಲಭಗೊಳಿಸಿ ಕೊಡುತ್ತದೆ. ನಮ್ಮ ಹಿಂದೆ–ಮುಂದೆ ಹೊರಟಿರುವ ವಲಸೆ ಕಾರ್ಮಿಕರಿದ್ದಾರಲ್ಲ, ಅವರೆಲ್ಲ ತಮ್ಮ ಶಕ್ತಿಯ ಮೇಲೆ ಭರವಸೆ ಇಟ್ಟುಕೊಂಡವರು. ಸರಕಾರವನ್ನು ಅವಲಂಬಿಸದವರು. ನಾವೂ ಅಷ್ಟೇ. ಹೀಗೆ ಹೊರಟಾಗ ಪ್ರಕೃತಿಯೇ ನಮ್ಮನ್ನು ಸಲಹುತ್ತದೆ. ದಾರಿಯಲ್ಲಿ ನಮಗೆ ನೀರು, ಆಹಾರದ ಪೊಟ್ಟಗಳನ್ನು ಕೊಟ್ಟವರ ಪರಿಚಯ ನಿನಗೆ ಈ ಮೊದಲು ಇತ್ತೇ? ಅವರು ಹೀಗೆ ನಮ್ಮ ಹಸಿವನ್ನು ತಣಿಸುವರು ಎಂದು ಆ ಕಾಳರಾತ್ರಿ ವರದರಾಜನ ಎಸ್ಟೇಟ್‌ನಿಂದ ಪರಾರಿಯಾಗುವಾಗ ನಾವು ಭಾವಿಸಿದ್ದೇವೆಯೇ... ನಾವು ಧೈರ್ಯವನ್ನೇ ತೋರದಿದ್ದರೆ ಎಲ್ಲವೂ ಇದ್ದಲ್ಲೇ ಇರುತ್ತದೆ.

ಹೇಳುತ್ತಲೇ ನಡೆಯುತ್ತಿದ್ದ ನೂರ್, ಪ್ರತಿಕ್ರಿಯೆ ಬಾರದಿದ್ದುದರಿಂದ ಕ್ಷಣ ನಿಂತು ಅನಾಮಿಕಳನ್ನು ನೋಡಿದ.





# ಮೂವತ್ತು

ಆಕೆಗೆ ಆಯಾಸ ಆದಂತಿತ್ತು.

ಸೂರ್ಯನೂ ನಡು ನೆತ್ತಿಗೇರಿದ್ದ.

'ಓ ಅಂಗಡಿಯ ವರಾಂಡದಲ್ಲಿ ಕುಳಿತು ದಣಿವಾರಿಸಿ ಕೊಳ್ಳೋಣವೇ'– ಎಂದು ನೂರ್ ಪ್ರಶ್ನಿಸಿದ. ಅನಾಮಿಕ ಅದನ್ನೇ ಬಯಸುವವಳಂತೆ ತಕ್ಷಣ ಒಪ್ಪಿಕೊಂಡಳು.

ತುಸು ಹೊತ್ತು ಇಬ್ಬರೂ ಮೌನಕ್ಕೆ ಜಾರಿದರು.

'ಇನ್ನೆಷ್ಟು ದಿನಗಳ ಕಾಲ ನಡೆಯಬೇಕೋ?' ಅನಾಮಿಕ ಅಸಮಾಧಾನ ತುಂಬಿದ ದನಿಯಲ್ಲಿ ಹೇಳಿದಳು.

'ಕಾಲ್ನಡಿಗೆಯಲ್ಲೇ ಮನೆ ತಲುಪುವೆ ಎಂದು ಶಪಥ

ಮಾಡಿದ್ದೀಯೋ ಹೇಗೆ?' ನೂರ್ ಒಗಟಿನಂತೆ ಪ್ರಶ್ನಿಸಿದ.

'ಕಾಲ್ನಡಿಗೆಯಲ್ಲಲ್ಲದೇ ಮತ್ತೇನು ವಿಮಾನದಲ್ಲಿ ಪ್ರಯಾಣಿಸುವುದಕ್ಕಾಗುತ್ತಾ?' ಅನಾಮಿಕಾಳ ಮಾತಿನಲ್ಲಿ ಸಿಟ್ಟು ಬೆರೆತುಕೊಂಡಿತ್ತು.

'ನಾನಂತೂ ಹಾಗೆ ತೀರ್ಮಾನಿಸಿಲ್ಲ ಅನು. ನನಗೆ ಮನೆಗೆ ತಲುಪಬೇಕು ಅಷ್ಟೇ. ಅದರ ಪ್ರಾರಂಭ ಕಾಲ್ನಡಿಗೆಯಲ್ಲಿ. ನನ್ನ ವಿಶ್ವಾಸ ನನ್ನ ಕಾಲುಗಳ ಮೇಲೆ. ಆದರೆ, ಪ್ರಕೃತಿ ನಮ್ಮ ಈ ವಿಶ್ವಾಸವನ್ನು ಕಂಡು ನಮಗೆ ವಾಹನದ ವ್ಯವಸ್ಥೆಯನ್ನೂ ಮಾಡಬಹುದು. ಆಪದ್ಬಾಂಧವರನ್ನೂ ಕಳುಹಿಸಬಹುದು. ಹೇಗೆ ನಮಗೆ ತಿಂಡಿ, ನೀರು ಲಭಿಸಿತೋ ಹಾಗೆ. ನಾನು ಆಗಲೇ ಹೇಳಿದೆನಲ್ಲ, ದೇವನು ಸೃಷ್ಟಿಸಿದ ಈ ಪ್ರಕೃತಿ ಮಹಾ ಉದಾರಿ. ನಾವು ನಿರೀಕ್ಷಿಸದ ರೀತಿಯಲ್ಲಿ ಅದು ನಮ್ಮನ್ನು ಕಾಪಾಡುತ್ತದೆ'– ನೂರ್ ಸಮಾಧಾನಚಿತ್ತದಿಂದ ಹೇಳಿದ.

'ಓಹೋ, ನಿನಗೆ ನಿನ್ನ ಮೇಲೆ ಮತ್ತು ನಿನ್ನ ಕಾಲುಗಳ ಮೇಲೆ ಅಷ್ಟೊಂದು ವಿಶ್ವಾಸ ಇದ್ದಿದ್ದರೆ ಮತ್ತೇಕೆ ನನ್ನನ್ನು ಆ ಬೇವಿನ ಮರದಡಿ ಅಷ್ಟು ಕಾಯಿಸಬೇಕಿತ್ತು? ಯಾರೇ ನೋಡಲಿ–ಬಿಡಲಿ, ಮಲಗಲಿ–ಏಳಲಿ; ನೀನು ನಿನ್ನ ಮೇಲೆ ಭರವಸೆ ಇಟ್ಟುಕೊಂಡು ಸೀದಾ ಬರಬೇಕಿತ್ತಲ್ಲವೇ? ಅಲ್ಲದೇ ಮೊಬೈಲ್‌ನ ಸ್ವಿಚ್ಚನ್ನೂ ಆಫ್ ಮಾಡಿದ್ದಿ?' ಅನಾಮಿಕ ಕುಟುಕಿದಳು.

'ವಿಶ್ವಾಸಕ್ಕೂ ಅಹಂಕಾರಕ್ಕೂ ವ್ಯತ್ಯಾಸ ಇದೆ ಅನು. ನನಗೆ ನನ್ನ ಮೇಲೆ ವಿಶ್ವಾಸ ಇದೆ.

ಆದರೆ

ಆ ವಿಶ್ವಾಸವೆಂಬುದು ಅಹಂಕಾರವಲ್ಲ. ಆ ಕಾಫಿ ಎಸ್ಟೇಟ್‌ನಿಂದ ಕಾಲ್ನಡಿಗೆಯಲ್ಲಿ ನನ್ನ ಮನೆಗೆ ತಲುಪುವೆನೆಂಬುದು ವಿಶ್ವಾಸ. ನನ್ನ ಕಾಲುಗಳು ನನ್ನ ಭರವಸೆ. ಆದರೆ, ನನ್ನ ಮನೆ ಎಂಬ ಗುರಿಯನ್ನು ತಲುಪುವುದಕ್ಕೆ ಪೂರಕ ವಾತಾವರಣವನ್ನು ಸೃಷ್ಟಿಸಿಕೊಳ್ಳುವುದು ವಿಶ್ವಾಸಕ್ಕೆ ಚ್ಯುತಿ ಎನ್ನಿಸುವುದಿಲ್ಲ. ನನ್ನ ಕಾಲಿನ ಮೇಲೆ ಭರವಸೆಯಿದೆಯೆಂದು ಹೇಳಿ, ಯಾವ ಮುನ್ನೆಚ್ಚರಿಕೆಯನ್ನು ವಹಿಸದಿದ್ದರೆ, ನನ್ನ ಕಾಲನ್ನೇ ಕಟ್ಟಿ ಹಾಕುವ ಸನ್ನಿವೇಶಗಳು ಸೃಷ್ಟಿಯಾಗಬಹುದು. ವಿಶ್ವಾಸ ಎಂಬುದು ಗುರಿ ಮುಟ್ಟುವುದಕ್ಕೆ ಬೇಕಾದ ಎಲ್ಲಾ ಎಚ್ಚರಿಕೆಗಳನ್ನು ಜಾಣತನದಿಂದ ನಿಭಾಯಿಸುವುದರ ಹೆಸರು. ಇಲ್ಲದಿದ್ದರೆ ಅದು ಅಹಂಕಾರವಾಗುತ್ತದೆ. ನನಗೆ ಮನೆಗೆ ಹೊರಡಬೇಕಿತ್ತು. ಅದಕ್ಕೆ ಬೇಕಾದ ಆತ್ಮವಿಶ್ವಾಸವೂ ಇತ್ತು. ಆದರೆ, 53 ಕಾರ್ಮಿಕರನ್ನು ಲೆಕ್ಕಿಸದೇ ಕಾಲಲ್ಲಿ ಒದ್ದು ಮನೆ ತಲುಪುವೆನೆಂದು ಹೊರಡುವುದು ಪೆದ್ದುತನ ಅಥವಾ ಅಹಂಕಾರ. ಆ ರಾತ್ರಿಯ ನನ್ನ ಚಡಪಡಿಕೆಯನ್ನು ಗುರಿ ಮುಟ್ಟುವುದಕ್ಕಾಗಿ ಮಾಡಿಕೊಂಡಿರುವ ತಂತ್ರವೆಂದೇ ಪರಿಗಣಿಸುತ್ತೇನೆ...'





ನೂರ್‌ನ ಮಾತಿನಲ್ಲಿ ಉದ್ವೇಗ ಇರಲಿಲ್ಲ.

'ನೀನು ನಿಜಕ್ಕೂ ಈ ಕಾಫಿ ಎಸ್ಟೇಟ್‌ನಲ್ಲಿ ದುಡಿಯಬೇಕಾದವನಲ್ಲ. ನೀನೊಬ್ಬ ವಿಶಿಷ್ಟ ವ್ಯಕ್ತಿ. ನಿನ್ನ ಮಾತುಗಳೆಲ್ಲ ನನ್ನ ಮಟ್ಟಿಗೆ ಹೊಸತು. ಮುಂದೆ ನೀನೋರ್ವ ಅದ್ಭುತ ವ್ಯಕ್ತಿಯಾಗುತ್ತೀ...'

ಅನಾಮಿಕ ಅಭಿಮಾನದಿಂದ ಹೇಳಿದಳು.

## ಮೂವತ್ತೊಂದು

ಮುಚ್ಚಿದ್ದ ಅಂಗಡಿಯ ವರಾಂಡದಲ್ಲಿ ದಣಿವಾರಿಸಿಕೊಳ್ಳಲೆಂದು ಕುಳಿತಿದ್ದ ನೂರ್ ಮತ್ತು ಅನಾಮಿಕರಿಗೆ ಓರ್ವ ಯುವಕ ಓಡೋಡಿ ಬಂದು ಊಟದ ಕಿಟ್ ಅನ್ನು ಕೊಟ್ಟು ಹೊರಟು ಹೋದ. ಅನಾಮಿಕ ಅಚ್ಚರಿಯಿಂದ ನೂರ್‌ನ ಮುಖವನ್ನು ದಿಟ್ಟಿಸಿದಳು. ಆತ ಮರೆಯಾಗಿ ಹೋಗುತ್ತಿದ್ದ ಆ ಯುವಕನತ್ತಲೇ ದೃಷ್ಟಿ ನೆಟ್ಟಿದ್ದ. ಅನಾಮಿಕ ಹೇಳಿದಳು,

'ನೀನೋರ್ವ ಪವಾಡ ಪುರುಷನಂತಿರುವೆ.'

'ಹೌದೇ?'

'ನಮ್ಮಲ್ಲಿ ಆತ್ಮಬಲ ಇದ್ದರೆ ಮತ್ತು ಉದ್ದೇಶಿತ ಗುರಿಯೆಡೆಗೆ





ತಲುಪುವ ಛಲ ಇದ್ದರೆ ಅದನ್ನು ಸಾಧಿಸುವುದಕ್ಕೆ ಪ್ರಕೃತಿಯೇ ನೆರವಾಗುತ್ತದೆ ಎಂದು ನೀನು ಹೇಳಿದಿಯಲ್ಲ. ನೋಡು, ಆತ ಊಟ ಕೊಟ್ಟು ಹೋದ. ಆತನಾರು ಎಂದು ನಮಗೆ ಗೊತ್ತಿಲ್ಲ. ನಾವ್ಯಾರು ಎಂದು ಆತನಿಗೂ ಗೊತ್ತಿಲ್ಲ. ಆತ ಕೇಳಿಯೂ ಇಲ್ಲ. ಆತನನ್ನು ಇಲ್ಲಿಗೆ ಕಳಿಸಿದ್ದು ಯಾರೋ? ಯಾವ ಅಶರೀರವಾಣಿಯ ಪ್ರೇರಣೆಯಿಂದ ಆತ ಇಲ್ಲಿಗೆ ಬಂದನೋ? ನನಗೆ ನಿನ್ನ ಮಾತು ಒಗಟಿನಂತೆ ಅನಿಸುತ್ತಿತ್ತು. ಹಾಗೂ ಇದೆಲ್ಲಾ ನಿಜವಾ ಎಂದು ತೋರುತ್ತಿತ್ತು. ಈಗ ನಿಜ ಎಂದು ಮನಸ್ಸು ಹೇಳುತ್ತಿದೆ'– ಅನಾಮಿಕ ಅಭಿಮಾನದಿಂದ ಹೇಳಿದಳು. ಆಕೆಯ ಕಣ್ಣಿನಲ್ಲಿ ಮಿಂಚಿತ್ತು.

ನೂರ್ ಮುಗುಳ್ನಕ್ಕ.

❖ ❖ ❖

ಉರಿಯುತ್ತಿದ್ದ ಸೂರ್ಯನು ಶಾಂತನಾದ.

ವಲಸಿಗರ ದಂಡು ಸಾಗುತ್ತಲೇ ಇತ್ತು. ಕೆಲವರ ಕಂಕುಳಲ್ಲಿ ಮಗು ಇದ್ದರೆ ಇನ್ನೂ ಕೆಲವರ ಭುಜದ ಮೇಲೆ ಮಕ್ಕಳಿದ್ದುವು. ಚಪ್ಪಲಿ ಧರಿಸಿದವರೂ ಧರಿಸದವರೂ ಇದ್ದರು. ಯುವಕರು ಮತ್ತು ಯುವತಿಯರೂ ಇದ್ದರು. ಅಳುವ ಮಕ್ಕಳು ಮತ್ತು ನಡೆಯಲು ಶಕ್ತಿಯಿಲ್ಲದೇ ಏದುಸಿರು ಬಿಡುತ್ತಿರುವ ಹಿರಿಯರೂ ಇದ್ದರು. ನೂರ್‌ನನ್ನು ಉದ್ದೇಶಿಸಿ ಅನಾಮಿಕ ಹೇಳಿದಳು,

'ಓ, ಆ ಜೋಡಿಯನ್ನು ನೋಡಂತೆ.'

'ಅವರು ಜೋಡಿಗಳೆಂದು ನೀನು ಹೇಗೆ ಹೇಳಿದಿ?'– ನೂರ್ ಪ್ರಶ್ನಿಸಿದ.

'ಯುವಕ ಮತ್ತು ಯುವತಿ ಜೊತೆಯಾಗಿದ್ದರೆ ಸಾಮಾನ್ಯವಾಗಿ ಹೇಳುವುದು ಹಾಗೆ. ಅದನ್ನೇ ನಾನೂ ಹೇಳಿದೆ'– ಅನಾಮಿಕ ಸಮರ್ಥಿಸಿಕೊಂಡಳು.

'ಅವರು ಅಣ್ಣ ಮತ್ತು ತಂಗಿಯೂ ಆಗಿರಬಹುದು. ಅಕ್ಕ ಮತ್ತು ತಮ್ಮನೂ ಆಗಿರಬಹುದು. ಗೆಳೆಯ ಮತ್ತು ಗೆಳತಿಯೂ ಆಗಿರಬಹುದು...' ನೂರ್ ವ್ಯಾಖ್ಯಾನಿಸಿದ.

'ಜೋಡಿಗಳೂ ಆಗಿರಬಹುದು...' ಅನಾಮಿಕ ಆತನ ಮಾತಿಗೆ ತನ್ನ ಮಾತನ್ನು ಪುನಃ ಜೋಡಿಸಿ ನಕ್ಕಳು.

'ಮನುಷ್ಯ ಸಂಬಂಧ ಎಷ್ಟು ವಿಚಿತ್ರ ಅಲ್ವೇ?'

'ಯಾಕೆ ವಿಚಿತ್ರ?' ಅನಾಮಿಕ ಮರು ಪ್ರಶ್ನಿಸಿದಳು. ದಣಿವಿನಿಂದ ಚೇತರಿಸಿಕೊಂಡ ಕುರುಹೂ ಆಕೆಯ ಪ್ರಶ್ನೆಯಲ್ಲಿತ್ತು.

'ಹೆಣ್ಣು ಮತ್ತು ಗಂಡು ಜೊತೆಯಾಗಿದ್ದರೆ ಜೋಡಿ ಅನ್ನುತ್ತೇವೆ. ಪ್ರೇಮಿಗಳು ಎಂದು ಕರೆಯುತ್ತೇವೆ. ಅದೇ, ಗಂಡು-ಗಂಡು ಜೊತೆಯಾಗಿದ್ದರೆ ಗೆಳೆಯರು ಅನ್ನುತ್ತೇವೆ. ಅದು ಜೋಡಿಯೂ ಅಲ್ಲ, ಪ್ರೇಮಿಯೂ ಅಲ್ಲ. ಹಾಗಂತ, ಜೋಡಿ ಎಂದು ಗುರುತಿಸಿಕೊಂಡವರು ಮತ್ತು ಗೆಳೆಯರು ಎಂದು ಗುರುತಿಸಿಕೊಂಡವರ

ನಡುವಿನ ವ್ಯತ್ಯಾಸವನ್ನೊಮ್ಮೆ ಪರಿಶೀಲಿಸು. ದೇಹ ರಚನೆಯಲ್ಲಿ ಒಂದಿಷ್ಟು ವ್ಯತ್ಯಾಸವಿದೆ ಎಂಬುದನ್ನು ಬಿಟ್ಟರೆ, ಉಳಿದಂತೆ ಅವರಿಬ್ಬರೂ ಮನುಷ್ಯರೇ. ಜೋಡಿ ಎಂದು ಗುರುತಿಸಿಕೊಂಡವರೂ ಮತ್ತು ಗೆಳೆಯರು ಎಂದು ಗುರುತಿಸಿಕೊಂಡವರೂ ನಾಲಗೆಯಿಂದಲೇ ಮಾತಾಡುತ್ತಾರೆ. ಕಣ್ಣಿನಿಂದಲೇ ವೀಕ್ಷಿಸುತ್ತಾರೆ. ಕಿವಿಯಿಂದಲೇ ಆಲಿಸುತ್ತಾರೆ. ಮೂಗಿನಿಂದ ಆಘ್ರಾಣಿಸುತ್ತಾರೆ. ಕಾಲುಗಳು, ಕೈಗಳು, ಬೆರಳುಗಳು, ಉಗುರು, ಮೂಗಿನ ಹೊಳ್ಳೆ, ತುಟಿಗಳು ಎಲ್ಲವೂ ಏಕಪ್ರಕಾರವೇ. ಆದರೂ ಭಿನ್ನ ಆಕೃತಿಯ ಇಬ್ಬರು ಸೇರಿಕೊಂಡಾಗ ಜೋಡಿ ಅನ್ನುತ್ತೇವೆ. ಅವರ ನಡುವೆ ಸಂಬಂಧವನ್ನು ಕಲ್ಪಿಸುತ್ತೇವೆ. ಇಲ್ಲದ್ದನ್ನು ಆಡಿಕೊಳ್ಳುತ್ತೇವೆ...'

'ನಿನ್ನದೇನು ವಾದ? ಹಾಗೆ ಕರೆಯಬಾರದು ಎಂದೇ? ಗಂಡು–ಗಂಡು ಜೊತೆಯಾಗಿರುವುದನ್ನು ಹೇಗೆ ನೋಡಬೇಕೋ ಹೆಣ್ಣು ಮತ್ತು ಗಂಡು ಜೊತೆಯಾಗಿರುವುದನ್ನೂ ಹಾಗೆಯೇ ನೋಡಬೇಕು ಎಂದೇ? ನಾನು ಮತ್ತು ನೀನು ಜೊತೆಯಾಗಿ ಹೋಗುತ್ತಿರುವುದನ್ನು ಕಂಡವರು ಏನಂದುಕೊಂಡಿರಬಹುದು? ಗಂಡ–ಹೆಂಡತಿ ಆಗಿರಬಹುದು ಎಂದೇ ಅಲ್ಲವೇ?'– ಅನಾಮಿಕ ವಾದಿಸಿದಳು.

'ನಾನು ಸೃಷ್ಟಿ ವೈಚಿತ್ರ್ಯದ ಬಗ್ಗೆ ಹೇಳುತ್ತಿದ್ದೇನೆ'– ನೂರ್ ಸ್ಪಷ್ಟೀಕರಿಸಿದ.

ದೇಹರಚನೆಯಲ್ಲಿ ಆಗಿರುವ ಸಣ್ಣ ವ್ಯತ್ಯಾಸವು ಎಷ್ಟೊಂದು ದೊಡ್ಡ ಬದಲಾವಣೆಗೆ ಕಾರಣವಾಗಿದೆ ಎಂದು ನಿನಗೆ ಅನಿಸುವುದಿಲ್ಲವೇ?

ಒಂದು ಜೀವವನ್ನು ಕಟ್ಟುಮಸ್ತಾಗಿ ಮತ್ತು ಬಲಶಾಲಿಯಾಗಿ ದೇವನು ಸೃಷ್ಟಿಸಿದ. ಇನ್ನೊಂದು ಅಂಥದ್ದೇ ಜೀವಕ್ಕೆ ಮೃದುತ್ವ ಮತ್ತು ಕೋಮಲತೆಯನ್ನು ತುಂಬಿಸಿದ. ಮಗುತನದಲ್ಲಿ ಈ ಎರಡೂ ಜೀವಗಳ ನಡುವೆ ಲಿಂಗವ್ಯತ್ಯಾಸವೊಂದನ್ನು ಬಿಟ್ಟರೆ, ಬೇರೆಲ್ಲವೂ ಸಮಾನವೇ. ನಗು, ಅಳು, ನಿದ್ದೆ, ನೋಟ ಎಲ್ಲವೂ. ಬೆಳೆಯುತ್ತಾ ಹೋದಂತೆ ಈ ಜೀವಗಳ ದೇಹ ಪ್ರಕೃತಿಯಲ್ಲಿ ವ್ಯತ್ಯಾಸ ಮೂಡುತ್ತಾ ಹೋಗುತ್ತದೆ. ಗಂಡು ಮತ್ತು ಹೆಣ್ಣು ಎಂದು ಬಾಹ್ಯವಾಗಿ ಗುರುತಿಸಲು ಬೇಕಾಗುವ ಅಂಶಗಳನ್ನು ಅವು ಪ್ರದರ್ಶಿಸುತ್ತವೆ. ಎರಡು ಜೀವಗಳ ಸ್ವಭಾವಗಳಲ್ಲೂ ವ್ಯತ್ಯಾಸ ಉಂಟಾಗುತ್ತವೆ. ಮಾತಿನ ಶೈಲಿಯಲ್ಲೂ, ನಗುವಿನಲ್ಲೂ, ನಡತೆಯಲ್ಲೂ, ಉಡುಪಿನಲ್ಲೂ, ಆಸಕ್ತಿ–ಹವ್ಯಾಸಗಳಲ್ಲೂ ಈ ವ್ಯತ್ಯಾಸ ಕಾಣಿಸುತ್ತದೆ. ಮಗುತನದಲ್ಲಿ ಒಂದೇ ಆಗಿದ್ದ ಎರಡು ಜೀವಗಳು ಬೆಳೆದಾಗ ಆಗುವ ಮಾರ್ಪಾಟು ಇದು. ಹಾಗಂತ,

ಇದು ಇಲ್ಲಿಗೇ ಮುಗಿಯುವುದಿಲ್ಲ.

ಈ ಎರಡು ಜೀವಗಳ ಕಾರಣಕ್ಕಾಗಿ ಈ ಜಗತ್ತಿನಲ್ಲಿ ಅಸಂಖ್ಯಾತ ಹತ್ಯೆಗಳಾಗಿವೆ. ಯುದ್ಧಗಳಾಗಿವೆ. ಸಂಬಂಧಗಳು ಶಾಶ್ವತವಾಗಿ ಮುರಿದಿವೆ. ರಾಜಕೀಯ ನಡೆದಿವೆ. ಕುಟುಂಬಗಳೇ ನಾಶವಾಗಿವೆ. ಅಪ್ಪನೇ ಮಗಳನ್ನು ಹತ್ಯೆಗೈದದ್ದಿದೆ. ಮಗಳೇ ಅಪ್ಪ–





ಅಮ್ಮನ ಕೊಲೆಗೈದದ್ದಿದೆ. ಇತಿಹಾಸವೇ ನಿರ್ಮಾಣವಾಗಿದೆ. ಅದೇವೇಳೆ, ಇವೇ ಎರಡು ಜೀವಗಳಿಂದ ಮಾನವ ಜನಾಂಗದ ಬೆಳವಣಿಗೆಯೂ ಆಗಿದೆ. ಕುಟುಂಬ ಸಂಬಂಧಗಳು ಉಂಟಾಗಿವೆ. ಇವೇ ಎರಡು ಜೀವಗಳು ಗಂಡ–ಹೆಂಡತಿ ಎಂದು ಗುರುತಿಸಿಕೊಂಡು ಓಡಾಡಿವೆ. ಅಪ್ಪ–ಅಮ್ಮನಾಗಿ ಖುಷಿಪಟ್ಟಿವೆ. ಅಜ್ಜ–ಅಜ್ಜಿ ಎಂಬ ಉನ್ನತ ದರ್ಜೆಗೂ ಏರಿವೆ...'

'ನಾನು ಹೀಗೆಲ್ಲಾ ಆಲೋಚಿಸುವುದಿಲ್ಲಪ್ಪಾ..' ಅನಾಮಿಕ ಬೆರಗಾಗಿ ಹೇಳಿದಳು.

'ನಿನಗೆ ಈ ಮಾನವ ಸೃಷ್ಟಿ ಹೇಗಾಯಿತೆಂದು ಗೊತ್ತಾ?'

'ಮತ್ತೇಗೆ, ಮಂಗನಿಂದ ಮಾನವನಾದ..' ಅನಾಮಿಕಳ ಮಾತಿನಲ್ಲಿ ಉಡಾಫೆಯೂ ಇತ್ತು.

'ಅದು ಡಾರ್ವಿನ್ನನ ವಿಕಾಸವಾದ ಸಿದ್ಧಾಂತ. ನಿನಗೆ ಅದರ ಮೇಲೆ ಪೂರ್ಣ ನಂಬಿಕೆ ಇದೆಯೇ?'

'ಪೂರ್ಣ ಅಂದರೆ? ನಂಬಿಕೆಯಂತೂ ಇದೆ'– ಅನಾಮಿಕ ಅಂದಳು.

'ನಿನ್ನ ಧರ್ಮ ಪ್ರಕಾರ ಸೃಷ್ಟಿಕ್ರಿಯೆ ನಡೆದಿರುವುದು ಹೇಗೆ?' ನೂರ್ ಕುತೂಹಲ ವ್ಯಕ್ತಪಡಿಸಿದ.

'ಹೇಗೋ? ನಾನು ಆ ಬಗ್ಗೆ ಓದಿಲ್ಲ. ದೇವನು ಸೃಷ್ಟಿಸಿದ್ದಾನೆ ಎಂದು ಇರಬಹುದು..'

ನೂರ್ ಹೇಳಿದ,

'ಮಾನವನಿಗೆ ಸಂಬಂಧಿಸಿ ಕುರಾನು ವಿಕಾಸವಾದವನ್ನು ಒಪ್ಪುವುದಿಲ್ಲ.

ದೇವನು ಮೊದಲು ಆದಮ್ ಎಂಬ ಪುರುಷನನ್ನು ಸೃಷ್ಟಿಸಿದ. ಬಳಿಕ ಹವ್ವಾ ಎಂಬ ಮಹಿಳೆಯನ್ನು ಸೃಷ್ಟಿಸಿದ. ಬೈಬಲ್ ಇವರಿಬ್ಬರನ್ನು ಆ್ಯಡಮ್ ಮತ್ತು ಈವ್ ಎಂಬ ಹೆಸರಲ್ಲಿ ಗುರುತಿಸಿದೆ. ಭೂಮಿಯ ಮೊದಲ ದಂಪತಿಗಳು ಇವರು ಎಂಬುದು ಮುಸ್ಲಿಮರ ನಂಬಿಕೆ. ಇವರ ದಾಂಪತ್ಯದಲ್ಲಿ ಉಂಟಾದ ಮಕ್ಕಳು ಪರಸ್ಪರ ಮದುವೆಯಾಗುವ ಮೂಲಕ ಮಾನವ ಸಂತತಿ ಬೆಳೆಯಿತು ಎಂದು ನಂಬಲಾಗುತ್ತಿದೆ. ಡಾರ್ವಿನ್ನನ ವಿಕಾಸವಾದ ಇದನ್ನು ಒಪ್ಪುತ್ತಿಲ್ಲ ನಿಜ. ಆದರೆ, ಡಾರ್ವಿನ್ನನ ವಾದವನ್ನೇ ನಾವು ತಿರಸ್ಕರಿಸಿ ಲೇವಡಿಗೆ ಒಳಪಡಿಸಬೇಕಿಲ್ಲ. ಸಂಶೋಧನೆ ಎಂಬುದು ಸತ್ಯದ ಕಡೆಗೆ ಕೊರೆಯುವ ಒಂದು ಸುರಂಗ ಮಾರ್ಗ ಅಷ್ಟೇ. ಯಾವ ಸಂಶೋಧನೆಯೂ ಅಂತಿಮ ಅಲ್ಲ. ಅದೊಂದು ಹುಡುಕಾಟ. ಈ ಹುಡುಕಾಟಕ್ಕೆ ಪ್ರೇರಣೆ ಧರ್ಮಗ್ರಂಥಗಳ ವಚನಗಳು ಎಂಬುದು ನನ್ನ ಭಾವನೆ. ನಿಜವಾಗಿ,

ತರ್ಕವೇ ಇಲ್ಲದ ಕಡೆ ಸಂಶೋಧನೆ ಕಡಿಮೆ.

ದೇವನೇ ಮಾನವನನ್ನು ಸೃಷ್ಟಿಸಿದ ಎಂದು ಧರ್ಮಗ್ರಂಥಗಳು ಹೇಳಿದಾಗ, ಅದರ

ಬಗ್ಗೆ ಮಾನವ ಕುತೂಹಲಗೊಳ್ಳುವುದು ಸಹಜ. ಮಾನವರೆಲ್ಲ ದೇವನನ್ನು ಒಪ್ಪುವವರಲ್ಲ. ದೇವನಿಲ್ಲ ಎಂದು ಹೇಳುವವರಿದ್ದಾರೆ. ಮಹಾಸ್ಫೋಟದಿಂದ ಜಗತ್ತು ಸೃಷ್ಟಿಯಾಗಿದೆ ಎಂದು ವಾದಿಸುವವರಿದ್ದಾರೆ. ಧರ್ಮವನ್ನೇ ನಿರಾಕರಿಸಿ ಬದುಕುತ್ತಿರುವವರೂ ಇದ್ದಾರೆ. ಇಂಥವರಿಗೆಲ್ಲ ಕುರಾನಿನ ವಚನ ಒಂದು ಸವಾಲು. ಒಂದುವೇಳೆ, ಇಂಥ ವಚನವೇ ಇಲ್ಲದಿರುತ್ತಿದ್ದರೆ, ಮಾನವ ಜನಾಂಗದ ಹುಟ್ಟಿನ ಬಗ್ಗೆ ಸಂಶೋಧನೆಗಳಾಗುತ್ತಿತ್ತೋ ಇಲ್ಲವೋ? ಒಂದುವೇಳೆ ಸಂಶೋಧನೆಗಳು ಆಗಿರುತ್ತಿದ್ದರೂ ಅದನ್ನು ಒಪ್ಪಿಕೊಳ್ಳದವರ ಸಂಖ್ಯೆ ಈಗಿನಷ್ಟು ಇರುತ್ತಿತ್ತೋ ಇಲ್ಲವೋ? ಯಾವಾಗ ಸಂಶೋಧನೆಯೊಂದು ನಿರಾಕರಣೆಗೆ ಒಳಗಾಗುತ್ತದೋ ಆಗ ಇನ್ನಷ್ಟು ಸಂಶೋಧನೆಗೆ ಆ ನಿರಾಕರಣೆ ಪ್ರೇರಣೆಯನ್ನು ಒದಗಿಸುತ್ತದೆ.

ಆದ್ದರಿಂದಲೇ,

ವಿಕಾಸವಾದ ಅಂತಿಮ ಸಿದ್ಧಾಂತ ಅಲ್ಲ. ಅದು ಸತ್ಯವನ್ನು ಹುಡುಕುವ ಪಯಣದಲ್ಲಿ ಸಂಶೋಧಕರು ತಂಗಿದ ನಿಲ್ದಾಣ. ಮುಂದೆ ಈ ನಿಲ್ದಾಣದಿಂದಾಚೆ ಯಾವುದಾದರೂ ಸಂಶೋಧಕರು ಪಯಣ ಮುಂದುವರಿಸಬಹುದು. ಅವರು ಇನ್ನೊಂದು ಸಂಶೋಧನಾ ಫಲಿತಾಂಶವನ್ನು ಮುಂದಿಡಬಹುದು. ಈ ಬಗೆಯ ಬೆಳವಣಿಗೆಗಳು ನಿಜಕ್ಕೂ ಸ್ವಾಗತಾರ್ಹ. ಅಂತಿಮ ಸತ್ಯವನ್ನು ಹುಡುಕುವ ಪ್ರಯತ್ನಗಳು ಇವೆಲ್ಲ...' ನೂರ್ ಮಾತು ನಿಲ್ಲಿಸಿದ.

'ನಿನಗೆ ಇವೆಲ್ಲ ಎಲ್ಲಿಂದ ಸಿಗುತ್ತೆ?' ಕುತೂಹಲದಿಂದ ಪ್ರಶ್ನಿಸಿದಳು ಅನಾಮಿಕ. ನೂರ್ ಉತ್ತರಿಸದೇ ಎದ್ದು ನಿಂತ. ಹೋಗೋಣ. ಬಿಸಿಲು ಕಡಿಮೆಯಾಗಿದೆ ಎಂದು ಅವಸರ ತೋರಿದ. ಅನಾಮಿಕ ಎದ್ದಳು. ರಸ್ತೆಯ ಉದ್ದಕ್ಕೂ ವಲಸೆ ಕಾರ್ಮಿಕರ ದಂಡು ಕಾಲ್ನಡಿಗೆಯಲ್ಲಿ ಸಾಗುತ್ತಿತ್ತು.

ಅವರಿಬ್ಬರೂ ನಡೆಯತೊಡಗಿದರು.





# ಮೂವತ್ತೆರಡು

ರೈಲಿನಲ್ಲಿ ಕುಳಿತ ಅನಾಮಿಕ ತನ್ನ ಕಣ್ಣುಗಳನ್ನೇ ನಂಬಲಿಲ್ಲ...

ಆಕೆಗೆ ಎಲ್ಲವೂ ಒಂದು ಪವಾಡದಂತೆ ತೋಚಿತು. ಕಾಫಿ ಎಸ್ಟೇಟ್‌ನಿಂದ ಆ ಅರ್ಧರಾತ್ರಿ ಪರಾರಿಯಾಗುವಾಗ ತಾನು ಈ ರೈಲು ಪ್ರಯಾಣವನ್ನು ನಿರೀಕ್ಷಿಸಿದ್ದೆನೇ? ಕಾಲ್ನಡಿಗೆಯಲ್ಲಿ ಸಾವಿರಾರು ಕಿಲೋಮೀಟರ್ ದೂರದ ತನ್ನೂರಿಗೆ ಹೇಗೆ ತಲುಪುವುದು ಎಂದು ಪ್ರಶ್ನಿಸಿದ್ದೆನಲ್ಲ, ಅದಕ್ಕೆ ನೂರ್ ಕೊಟ್ಟ ಉತ್ತರವೇನು?

'ಕಾಲ್ನಡಿಗೆಯಲ್ಲೇ ಮನೆಗೆ ತಲುಪುತ್ತೇನೆಂದು ನಾನು ತೀರ್ಮಾನಿಸಿಲ್ಲ. ನನಗೆ ಮನೆಗೆ ತಲುಪಬೇಕು, ಅಷ್ಟೇ. ಅದರ ಪ್ರಾರಂಭ ಕಾಲ್ನಡಿಗೆಯಲ್ಲಿ. ನನ್ನ ವಿಶ್ವಾಸ ನನ್ನ ಕಾಲುಗಳ

ಮೇಲೆ. ಆದರೆ ಪ್ರಕೃತಿ ನಮ್ಮ ಈ ವಿಶ್ವಾಸವನ್ನು ಕಂಡು ನಮಗೆ ವಾಹನದ ವ್ಯವಸ್ಥೆಯನ್ನು ಮಾಡಲೂ ಬಹುದು. ಆಪದ್ಬಾಂಧವರನ್ನು ಕಳುಹಿಸಲೂ ಬಹುದು. ದೇವನು ಸೃಷ್ಟಿಸಿದ ಈ ಪ್ರಕೃತಿ ಮಹಾ ಉದಾರಿ ಅನು. ನಾವು ನಿರೀಕ್ಷಿಸದ ರೀತಿಯಲ್ಲಿ ಅದು ನಮ್ಮನ್ನು ಕಾಪಾಡುತ್ತದೆ..' ಎಂದು ಹೇಳಿದ್ದ. ನಾನು ಆ ಮಾತನ್ನು ಅಷ್ಟಾಗಿ ಗಣನೆಗೆ ತೆಗೆದುಕೊಂಡಿರಲಿಲ್ಲ. ಆದರೆ ಆತನ ಮುಖಭಾವ ಮಾತ್ರ ಹಾಗಿರಲಿಲ್ಲ. ತನ್ನ ಮಾತಿನ ಮೇಲೆ ದೃಢವಿಶ್ವಾಸ ಇದ್ದವನಂತೆ ಕಾಣುತ್ತಿದ್ದ. ಪ್ರತಿ ಮಾತನ್ನೂ ಎಷ್ಟು ಆತ್ಮವಿಶ್ವಾಸದಿಂದ ಹೇಳುತ್ತಿದ್ದನೆಂದರೆ, ಆತನಿಗೆ ಖಂಡಿತ ಪ್ರಕೃತಿ ಸಹಾಯ ಒದಗಿಸಿಯೇ ತೀರುತ್ತದೆ ಎಂದೇ ಅನಿಸುತ್ತಿತ್ತು...

ಈಗ ಆಗಿರುವುದಾದರೂ ಏನು?

ದಣಿವಾರಿಸಿಕೊಂಡು ಅಂಗಡಿಯ ಪಡಸಾಲೆಯಿಂದ ಆ ಸಂಜೆ ಹೊರಟ ಬಳಿಕದ ಇಡೀ ಘಟನೆಯನ್ನು ಆಕೆ ಆ ರೈಲು ಬೋಗಿಯಲ್ಲಿ ಕುಳಿತು ಮೆಲುಕು ಹಾಕಿದಳು...

❖ ❖ ❖

ಆವತ್ತು ನಡೆದೂ ನಡೆದೂ ಸುಸ್ತಾಗಿತ್ತು. ಸೂರ್ಯನೂ ಉರಿದೂ ಉರಿದೂ ಸುಸ್ತಾಗಿ ಹೊರಟು ಹೋಗಿದ್ದ. ಬೀದಿದೀಪಗಳು ರಾತ್ರಿಯಾಗಿರುವುದನ್ನು ಸಾರಿ ಸಾರಿ ಹೇಳುತ್ತಿತ್ತು. ಮೊದಲು ಮಾತಾಡಿದ್ದು ನೂರ್.

'ನಾವು ಇಲ್ಲೇ ಎಲ್ಲಾದರೂ ತಂಗಿ ಬೆಳಿಗ್ಗೆ ಪ್ರಯಾಣ ಮುಂದುವರಿಸೋಣ.'

ನನಗೂ ಅದುವೇ ಬೇಕಿತ್ತು.

ಹ್ಞೂಂ ಅಂದೆ. ಕಾಲು ನೋಯುತ್ತಿತ್ತು. ಹಾಗಂತ,

ಕಾಲ್ನಡಿಗೆಯಲ್ಲಿ ಸಾಗಿ ನನಗೆ ಗೊತ್ತಿಲ್ಲ ಎಂದಲ್ಲ. ನಡೆದು ಅಭ್ಯಾಸ ಇದ್ದ ಕಾಲುಗಳೇ ನನ್ನವು. ಆದರೆ ಸತತ ನಡಿಗೆ ಹೊಸತು. ಇಡೀ ದಿನ ನಡೆಯುವುದೆಂದರೆ, ಅದೂ ರಣ ಬಿಸಿಲಿಗೆ ನಡೆಯುವುದೆಂದರೆ, ಸುಲಭ ಅಲ್ಲ. ದೇಹವು ಪಕ್ಕನೆ ಒಗ್ಗಿಕೊಳ್ಳುವುದಿಲ್ಲ. ಕಾಲು ಸಹಕರಿಸುವುದಿಲ್ಲ. ದಣಿವು ಮತ್ತು ಬಾಯಾರಿಕೆ ಕಾಡುತ್ತದೆ. ಚಪ್ಪಲಿ ಧರಿಸಿದ್ದರೂ ಪಾದಗಳು ಬಾತುಕೊಂಡ ಅನುಭವವಾಗುತ್ತದೆ. ಬಿಸಿಲಿನ ಝಳವನ್ನು ತಡೆಯಲಾರದೇ ತಲೆ ನೋಯತೊಡಗುತ್ತದೆ. ಕಣ್ಣುರಿ. ಹಬೆಯಲ್ಲಿ ಕಾದ ಅನುಭವ.

ನಾವಿಬ್ಬರೂ ಆ ಅಂಗಡಿಯ ಜಗಲಿಯಲ್ಲಿ ರಾತ್ರಿ ತಂಗಲು ತೀರ್ಮಾನಿಸಿದೆವು.

ನನಗಿಂತಲೂ ನೂರ್‌ಗೇ ಹೆಚ್ಚು ದಣಿವಾಗಿರಬೇಕು. ಮಲಗಿದ ತುಸು ಹೊತ್ತಿನಲ್ಲೇ ಗೊರಕೆ ಹೊಡೆಯಲಾರಂಭಿಸಿದ. ನಾಳೆಯ ಚಿಂತೆಯೇ ಇಲ್ಲದೇ ಆತ ಮಲಗಿರುವಂತೆ ಕಂಡಿತು. ನಾನೂ ಮಲಗಿದೆ.





ಬೆಳಿಗ್ಗೆ ನನ್ನನ್ನು ಎಚ್ಚರಿಸಿದ್ದು ಆತನೇ.

'ಹೊರಡು' ಎಂದ. ನಾನಿನ್ನೂ ಸರಿಯಾಗಿ ಎದ್ದಿರಲಿಲ್ಲ.

'ಎಲ್ಲಿಗೆ' ಎಂದೆ ಅರೆ ಮನಸ್ಸಿನಿಂದ.

'ರೈಲ್ವೆ ಸ್ಟೇಷನ್‌ಗೆ.'

ನನ್ನಲ್ಲಿ ಅಷ್ಟೊಂದು ಶಕ್ತಿ ಎಲ್ಲಿತ್ತೋ ಗೊತ್ತಿಲ್ಲ. ತಕ್ಷಣ ಎದ್ದು ಕುಳಿತೆ. ರೈಲ್ವೆ ಸ್ಟೇಷನ್ ಅನ್ನುವ ಪದವೇ ನನ್ನೊಳಗೆ ನೂರ್ಮಡಿ ಶಕ್ತಿಯನ್ನು ವೃದ್ಧಿಸಿತ್ತು. ಜಗಲಿಗೆ ಹಾಸಿದ ಬಟ್ಟೆಯನ್ನು ಬ್ಯಾಗಿಗೆ ತುಂಬಿಸುತ್ತಾ 'ಯಾಕೆ' ಎಂದು ಪ್ರಶ್ನಿಸಿದೆ.

ನೂರ್ ಹೇಳಿದ.

'ವಲಸೆ ಕಾರ್ಮಿಕರನ್ನು ಅವರವರ ಊರಿಗೆ ತಲುಪಿಸಲು ಸರಕಾರ ವಿಶೇಷ ರೈಲುಗಳ ಏರ್ಪಾಡು ಮಾಡಿದೆಯಂತೆ. ಮೊಬೈಲ್‌ನಲ್ಲಿ ಮೆಸೇಜು ಓದಿದೆ. ಇಲ್ಲಿಂದ ಬಿಹಾರಕ್ಕೆ ರೈಲು ಇರುವುದಾಗಿಯೂ ಮಾಹಿತಿ ಬಂದಿದೆ. ರೈಲ್ವೆ ಸ್ಟೇಷನ್ ಇಲ್ಲೇ ಎಲ್ಲೋ ಹತ್ತಿರದಲ್ಲೇ ಇರಬೇಕು. ಆ ಬೋರ್ಡು ನೋಡಂತೆ.'

ನಾನು ನಂಬಲಿಲ್ಲ.

'ನೀನೇನು ಹೇಳುತ್ತಿದ್ದೀ? ನಿಜವೇ?'

'ನನಗೆ ನಂಬಿಕೆ ಇದೆ. ಯಾಕೆ ನಿಜವಾಗಿರಬಾರದು? ನಾವು ಹೀಗೆ ನಡೆದೂ ನಡೆದೂ ದಣಿಯುವುದನ್ನು ಪ್ರಕೃತಿ ನಿರ್ಭಾವುಕತೆಯಿಂದ ವೀಕ್ಷಿಸುತ್ತಾ ನಿಲ್ಲುತ್ತದೆಂದು ನಾನು ಭಾವಿಸುವುದಿಲ್ಲ. ಯಾವುದಕ್ಕೂ ನಾವೊಮ್ಮೆ ರೈಲ್ವೇ ನಿಲ್ದಾಣಕ್ಕೆ ಹೋಗುವ. ನಿನ್ನ ಸಂಶಯವೂ ನಿವಾರಣೆಯಾದಂತಾಗುತ್ತದೆ...' ನೂರ್ ಬ್ಯಾಗು ಬೆನ್ನಿಗೇರಿಸಿ ಹೊರಟಿದ್ದ. ನಾನೂ ಅನುಸರಿಸಿದ್ದೆ.

ನೂರ್ ಹೇಳಿದ್ದು ನಿಜವಾಗಿತ್ತು. ಆದರೆ,

ರೈಲನ್ನೇರಲು ನೂರ್ ಸಿದ್ಧವಾಗಿರಲಿಲ್ಲ. ನನ್ನ ಸುಗಮ ರೈಲು ಪ್ರಯಾಣಕ್ಕಾಗಿ ಆತ ಏರ್ಪಾಡುಗಳನ್ನು ಮಾಡತೊಡಗಿದ್ದ. ನನ್ನಲ್ಲಿ ಧೈರ್ಯ ತುಂಬುತ್ತಿದ್ದ. ದೇವನಿಗೆ ಕೃತಜ್ಞತೆ ಸಲ್ಲಿಸುತ್ತಿದ್ದ. ನಾನು ಪ್ರಶ್ನಿಸಿದ್ದೆ,

'ನೀನು ರೈಲು ಹತ್ತುವುದಿಲ್ಲವೇ?'

ನೂರ್ ಮಾತಾಡಲಿಲ್ಲ. ಮತ್ತೆ ಪ್ರಶ್ನಿಸಿದ್ದೆ,

'ನೂರ್ ನೀನು ಬರುವುದಿಲ್ಲವೇ?'

ನೂರ್ ಕಣ್ಣರಳಿಸಿ ಮರು ಪ್ರಶ್ನೆ ಎಸೆದಿದ್ದ–

'ನಾನಾ?'

'ಹೌದು ನೀನೇ.'

'ಇದು ಬಿಹಾರಕ್ಕೆ ಹೋಗುವ ಟ್ರೈನು. ಪಶ್ಚಿಮ ಬಂಗಾಳಕ್ಕಲ್ಲ.'

'ಹೌದು ಗೊತ್ತಿದೆ...'

'ಪಶ್ಚಿಮ ಬಂಗಾಳಕ್ಕೆ ಹೋಗುವ ಟ್ರೈನು ಬರುತ್ತೋ ಎಂದು ಕಾಯುತ್ತೇನೆ. ಬರುವ ಸೂಚನೆ ಸಿಗದಿದ್ದರೆ ಕಾಲುಗಳು ಹೇಗೂ ಇವೆಯಲ್ಲ, ನಡೆಯುತ್ತೇನೆ.'

'ಬೇಡ, ನೀನು ಈ ಟ್ರೈನ್ ಹತ್ತು. ಜೊತೆಯಾಗಿ ಪ್ರಯಾಣಿಸೋಣ'– ನಾನು ಒತ್ತಾಯಿಸಿದ್ದೆ.

ನೂರ್ ಹಿಂದೇಟು ಹಾಕಿದ್ದ. ಆದರೆ ನಾನು ಬಿಡಲಿಲ್ಲ.

'ನಾವು ವರದರಾಜನ ಕಾಫಿ ಎಸ್ಟೇಟ್‌ನಿಂದ ಹೊರಟದ್ದು ಜೊತೆಯಾಗಿ. ಆದ್ದರಿಂದ ಮುಂದಿನ ಪ್ರಯಾಣವೂ ಜೊತೆಯಾಗಿಯೇ ಸಾಗಲಿ. ಬಿಹಾರದ ನನ್ನ ಮನೆಯ ವರೆಗೆ ನೀನು ನನ್ನ ಜೊತೆ ಇರಬೇಕು. ಆ ಬಳಿಕ ಏನಾಗುತ್ತೋ ನೋಡೋಣ...' ನಾನು ಅಳುಕಿಲ್ಲದೇ ಹೇಳಿದ್ದೆ.

ಅರೆ ಮನಸ್ಸಿನಿಂದ ನೂರ್ ರೈಲು ಹತ್ತಿದ್ದ.

❖ ❖ ❖





## ಮೂವತ್ತಮೂರು

ರೈಲು ದಿಢೀರನೆ ವೇಗವನ್ನು ತಗ್ಗಿಸಿದುದರಿಂದ ಅತ್ತಿತ್ತ ವಾಲಿದ ಅನಾಮಿಕ ವಾಸ್ತವಕ್ಕೆ ಬಂದಳು. ರೈಲು ತುಂಬಾ ವಲಸೆ ಕಾರ್ಮಿಕರು. ಅನಾಮಿಕಳ ತುಸು ದೂರದಲ್ಲಿ ನೂರ್ ಕುಳಿತಿದ್ದ. ಕಾರ್ಮಿಕರ ಮುಖಗಳಲ್ಲಿ ಕಾಂತಿ ತುಂಬಿದ್ದುವು. ಒಬ್ಬೊಬ್ಬರದ್ದೂ ಒಂದೊಂದು ಮಾತು–ಕತೆ. ಇವರಲ್ಲಿ ಹಲವು ದಿನಗಳ ಕಾಲ ನಡೆದವರಿದ್ದರು. ಚಪ್ಪಲಿಯೇ ಇಲ್ಲದೇ ಬರಿಗಾಲಲ್ಲಿ ನಡೆದು ಪಾದಗಳು ಬೊಬ್ಬೆಗಳೆದ್ದು ನಡೆಯಲಾಗದ ಸ್ಥಿತಿಗೆ ತಲುಪಿದವರಿದ್ದರು. ಮಕ್ಕಳು, ಹಿರಿಯರು, ಯುವತಿಯರು, ಯುವಕರು, ಪತಿ–ಪತ್ನಿ... ಹೀಗೆ ಇಡೀ ಭಾರತವನ್ನೇ ರೈಲಿನಲ್ಲಿ ದರ್ಶಿಸಬಹುದಾಗಿತ್ತು.

ಅನಾಮಿಕ ಸೀರೆಯ ಸೆರಗಿನಿಂದ ತಲೆಯನ್ನು ಮರೆಸಿದಳು. ನೂರ್ ಹೇಳಿದ,

'ನೀನೀಗ ಬುರ್ಖಾ ಧರಿಸಿರುವಿ.'

'ನಾನಾ..?' ಅನಾಮಿಕ ಅರ್ಥವಾಗದವಳಂತೆ ಪ್ರಶ್ನಿಸಿದಳು.

'ಹೌದು, ನೀನೇ'– ನೂರ್ ಒತ್ತಿ ಹೇಳಿದ.

'ಬುರ್ಖಾ ಅಂದರೆ ಕಪ್ಪು ಬಣ್ಣದ್ದಲ್ಲವೇ? ಅದರಲ್ಲಿ ಮುಖವೂ ಕಾಣುವುದಿಲ್ಲ. ಕೈ ಕಾಲುಗಳೂ ಕಾಣುವುದಿಲ್ಲ. ಹೆಣ್ಣೋ ಗಂಡೋ ಎಂದೂ ಗೊತ್ತಾಗುವುದಿಲ್ಲ. ನಾನು ಹಾಗಿದ್ದೀನಾ?' ಅನಾಮಿಕ ಸಂದೇಹ ವ್ಯಕ್ತಪಡಿಸಿದಳು.

ನೂರ್ ನಕ್ಕ.

'ಈ ಕಪ್ಪು ಬಣ್ಣದ ಬುರ್ಖಾ ಇದೆಯಲ್ಲ, ಅದರ ಉದ್ದೇಶ ಏನು ಹೇಳು?'

'ಮತ್ತೇನು, ಮುಸ್ಲಿಮ್ ಮಹಿಳೆಯರನ್ನು ಅಡಗಿಸಿಡುವುದು'– ಅನಾಮಿಕ ಉತ್ತರಿಸಿದಳು.

'ಯಾಕೆ?' ನೂರ್ ಮರು ಪ್ರಶ್ನಿಸಿದ.

'ಪುರುಷರು ನೋಡಬಾರದಂತೆ.'

'ಹಾಗಿದ್ದರೆ ಮಹಿಳೆಯರು ಪುರುಷರನ್ನು ನೋಡಬಹುದೇ?' ನೂರ್ ಮತ್ತೆ ಕೆಣಕಿದ.

'ನನ್ನ ಪ್ರಶ್ನೆಯೂ ಇದುವೇ...' ಅನಾಮಿಕ ಹುರುಪಿನಿಂದ ಉತ್ತರಿಸಿದಳು.

'ನಿಜ ಏನು ಗೊತ್ತಾ ಅನಾಮಿಕ. ಇಸ್ಲಾಮಿನಲ್ಲಿ ಮಹಿಳೆಗೆ ಮಾತ್ರ ಉಡುಪು ಸಂಹಿತೆ ಇರುವುದಲ್ಲ. ಪುರುಷನಿಗೂ ಉಡುಪು ಸಂಹಿತೆ ಇದೆ.

ಹಾಗಂತ,

ಪುರುಷ ಮಹಿಳೆಯನ್ನು ನೋಡಬಾರದು ಆದರೆ, ಮಹಿಳೆ ಪುರುಷನನ್ನು ನೋಡಬಹುದು ಎಂಬ ನಿಯಮ ಸಂಹಿತೆಯೇ ಇಸ್ಲಾಮಿನಲ್ಲಿ ಇಲ್ಲ. ಮಹಿಳೆಯನ್ನು ಕಂಡಾಗ ದೃಷ್ಟಿಯನ್ನು ಕೆಳಗಿರಿಸು ಎಂದು ಕುರಾನು ಮೊದಲು ಗಂಡಿಗೆ ಆದೇಶಿಸುತ್ತದೆ– ಬಳಿಕ ಹೆಣ್ಣಿಗೆ. ಅದರರ್ಥ ಗಂಡು–ಹೆಣ್ಣು ಮಾತಾಡಬಾರದು ಎಂದಲ್ಲ. ಹೆಣ್ಣು–ಗಂಡು ಮಾತಾಡದೇ ಈ ಜಗತ್ತಿನಲ್ಲಿ ಬದುಕು ಸಾಧ್ಯವೇ? ತಂತ್ರಜ್ಞಾನದ ಈ ಯುಗದಲ್ಲಂತೂ ಯಾರೂ ಅಜ್ಞಾತರಲ್ಲ. ಯಾರೂ ಅಪರಿಚಿತರಲ್ಲ. ಯಾರು ಎಲ್ಲಿದ್ದರೂ ಹೇಗಿದ್ದರೂ ಚಿತ್ರೀಕರಿಸುವ ತಂತ್ರಜ್ಞಾನಗಳ ಆವಿಷ್ಕಾರವಾಗಿದೆ. ವಿದ್ಯಾಭ್ಯಾಸದ ಸಮಯದಲ್ಲಿ ಗಂಡು–ಹೆಣ್ಣು ಪರಸ್ಪರ ಕಲೆತು ಮಾತಾಡಲೇಬೇಕಾಗುತ್ತದೆ. ಉದ್ಯೋಗ ಸ್ಥಳದಲ್ಲಿ, ಕಚೇರಿಗಳಲ್ಲಿ, ಪ್ರಯಾಣದಲ್ಲಿ, ಕ್ರೀಡೆ, ಪ್ರತಿಭಟನೆ, ರ್‍ಯಾಲಿ.. ಹೀಗೆ ಹೆಣ್ಣು–ಗಂಡು ಜೊತೆಯಾಗಿಯೇ ಇರಬೇಕಾದ ಅನೇಕಾರು ಅನಿವಾರ್ಯ ಸನ್ನಿವೇಶಗಳು ಇವತ್ತು ಸೃಷ್ಟಿಯಾಗಿವೆ.





ಹೀಗಿರುವಾಗ,

ಮುಸ್ಲಿಮ್ ಹೆಣ್ಣು ಮಕ್ಕಳನ್ನು ಕಪ್ಪು ಬಟ್ಟೆಯೊಳಗೆ ಕೂರಿಸಿ ಗಂಡಿನಿಂದ ಸಂಪರ್ಕ ಕಡಿದು ಹಾಕುವುದು ಇಸ್ಲಾಮಿನ ಉದ್ದೇಶ ಎಂದು ಹೇಳುವುದು ತಪ್ಪಾಗುತ್ತದೆ...

ನಿಜ ಏನು ಗೊತ್ತಾ?

ಕಪ್ಪು ಬುರ್ಖಾವೇ ಕುರಾನಿನ ಪರಿಕಲ್ಪನೆಯಲ್ಲ. ಅದು ಬಟ್ಟೆ ಆವಿಷ್ಕಾರದ ಕೊಡುಗೆ. ಕುರಾನಿನ ಪ್ರಕಾರ ಮಹಿಳೆಯು ಪರ್ದಾ ಧರಿಸಬೇಕು. ಪರ್ದಾ ಅಂದರೆ, ನೀನೀಗ ಧರಿಸಿರುವೆಯಲ್ಲ, ಬಹುತೇಕ ಹಾಗೆ. ದೇಹದ ಸೌಂದರ್ಯ ಭಾಗ ಮತ್ತು ತಲೆಯ ಭಾಗವನ್ನು ಮರೆಸುವ ಒಂದು ಉಡುಪು. ಅದು ಸೀರೆಯಲ್ಲೂ ಆದೀತು. ಚೂಡಿದಾರ್‌ನಲ್ಲೂ ಆದೀತು. ಲಂಗ–ಧಾವಣಿಯಲ್ಲೂ ಆದೀತು. ಅಂತೂ ದೇಹದ ಅಂಗಾಂಗಗಳು ಬಹಿರಂಗಕ್ಕೆ ಬಾರದಂತೆ ಮರೆಸುವ ಯಾವುದೇ ಉಡುಪು ಪರ್ದಾ ಆಗುತ್ತದೆ. ಈ ಉದ್ದೇಶವನ್ನು ಈಡೇರಿಸುವುದಕ್ಕೆಂದು ಉಡುಪು ವಿನ್ಯಾಸಕಾರರು ಆವಿಷ್ಕರಿಸಿದ ಉಡುಪೇ ಬುರ್ಖಾ. ಬಣ್ಣ ಅವರವರ ಆಯ್ಕೆ. ಅದು ಮಾತ್ರ ಪರ್ದಾ ಅಲ್ಲ. ನನ್ನ ಪ್ರಕಾರ ನೀನೀಗ ಪರ್ದಾದಲ್ಲಿದ್ದಿ. ಅಥವಾ ಅರ್ಥವಾಗುವ ಭಾಷೆಯಲ್ಲಿ ಹೇಳುವುದಾದರೆ ಬುರ್ಖಾದಲ್ಲಿದ್ದಿ.

ಅವನ ಪಕ್ಕದಲ್ಲಿ ಕುಳಿತ ತಾಯಿಯೋರ್ವಳ ಮಗು ಜೋರಾಗಿ ಕೂಗಿದ್ದರಿಂದ ಅವರಿಬ್ಬರ ಗಮನವೂ ಅತ್ತ ತಿರುಗಿತು. ಬಹುಶಃ ಮಗುವಿಗೆ ದಾಹವಾಗಿರಬೇಕು. ಆದರೆ ರೈಲಿನಲ್ಲಿ ನೀರಿನ ವ್ಯವಸ್ಥೆಯಾಗಲಿ ಊಟ ವ್ಯವಸ್ಥೆಯಾಗಲಿ ಇರಲಿಲ್ಲ. ಟ್ರೈನ್ ನಿಲ್ಲುವುದೇ ಬಿಹಾರದಲ್ಲಿ. ಕ್ಷಣಹೊತ್ತು ಮಗುವನ್ನು ನೋಡಿದ ಆತ ಮತ್ತೆ ಮಾತು ಮುಂದುವರಿಸಿದ.

ಬುರ್ಖಾದ ಪ್ರಾಮುಖ್ಯತೆ ಇಷ್ಟೇ ಅನಾಮಿಕ.

ಅದು ಮಹಿಳೆಯರನ್ನು ಅಡಗಿಸಿಡುತ್ತದೆ ಎಂಬುದು ತಪ್ಪು ವ್ಯಾಖ್ಯಾನ. ಅದು ಹೆಣ್ಣು ಮತ್ತು ಗಂಡಿಗೆ ಅವರವರ ಇತಿ–ಮಿತಿಯನ್ನು ನೆನಪಿಸುವ ಒಂದು ಲಕ್ಷ್ಮಣ ರೇಖೆ. ಯಾವುದೇ ಸಂದರ್ಭದಲ್ಲೂ, ಯಾವುದೇ ಸನ್ನಿವೇಶ ಮತ್ತು ಚಟುವಟಿಕೆಯಲ್ಲೂ ಪರಸ್ಪರ ಕಾಯ್ದುಕೊಂಡು ಬರಬೇಕಾದ ಮೌಲ್ಯ ಪ್ರಜ್ಞೆಯೊಂದರ ಗುರುತು ಪತ್ರ. ಅದು ಹೆಣ್ಣು–ಗಂಡನ್ನು ಬೇರ್ಪಡಿಸುವುದಲ್ಲ, ಹೆಣ್ಣು–ಗಂಡು ಎಂಬ ಗುರುತು ಚೀಟಿಯೊಂದಿಗೆ ಜೋಡಿಸುತ್ತದೆ. ಆ ಗುರುತು ಚೀಟಿಯೇ ಅವರ ನಡುವಿನ ಮಾತು–ಕೃತಿ, ಮೌನ, ನಗು, ವಾದ ಎಲ್ಲವೂ ಹೇಗಿರಬೇಕೆಂಬುದನ್ನು ಪದೇ ಪದೇ ನೆನಪಿಸುತ್ತಿರುತ್ತದೆ.

'ಅಂದರೆ ನಾನೀಗ ಮುಸ್ಲಿಮ್ ಆಗುವೆನೇ?' ಅನಾಮಿಕಳ ಮಾತಿನಲ್ಲಿ ಅರ್ಥ ವ್ಯಂಗ್ಯವೂ ಬೆರೆತಿತ್ತು.

ಉಡುಪು ಯಾರನ್ನೂ ಹಿಂದೂ–ಮುಸ್ಲಿಮ್ ಮಾಡಲಾರದು ಅನಾಮಿಕ. ಅದು ಮೈ ಮುಚ್ಚುವುದಕ್ಕಿರುವ ಒಂದು ಹೊರಗವಚ ಅಷ್ಟೇ. ನಾನು ಟೋಪಿ ಧರಿಸಿದ್ದೇನೆ. ಗಡ್ಡ ಬಿಟ್ಟಿದ್ದೇನೆ. ಒಂದುವೇಳೆ, ಟೋಪಿಯನ್ನು ಕೆಳಗಿಟ್ಟು ನಾಮ ಬಳಿದುಕೊಂಡರೆ ಹಿಂದೂ ಆಗುತ್ತೇನೆಯೇ? ತಲೆಗೊಂದು ಪಗಡಿ ಕಟ್ಟಿದರೆ ಸಿಕ್ಖ್ ಆಗುತ್ತೇನೆಯೇ? ಉದ್ದದ ನಿಲುವಂಗಿ ತೊಟ್ಟು ಗಡ್ಡ ಬೋಳಿಸಿದರೆ ಕ್ರೈಸ್ತ ಆಗುತ್ತೇನೆಯೇ?

ಇದೇ ರೀತಿಯ ಪ್ರಶ್ನೆ ನಿನ್ನದು.

ನಾವಿರುವ ಜಗತ್ತು ಮನುಷ್ಯರನ್ನು ಹಾಗೆ ವಿಂಗಡಿಸಿದೆ. ಕಪ್ಪು ಬುರ್ಖಾ ಧರಿಸಿರುವ ನೀನು ಮತ್ತು ನಾನು ಜಗಳ ಮಾಡಿದರೆ ಈ ಸಮಾಜ ಅದನ್ನು ನೋಡಿ ಮಜಾ ಪಡೆಯುತ್ತದೆ. ನಕ್ಕು ಸುಮ್ಮನಾಗುತ್ತದೆ. ಆದರೆ ಹಣೆಗೆ ಬಿಂದಿ ಹಾಕಿರುವ ನೀನು ಮತ್ತು ನಾನು ಜಗಳವಾಡಿದರೆ ಹಿಂದೂ ಮಹಿಳೆಯ ಮೇಲೆ ಮುಸ್ಲಿಮನಿಂದ ಹಲ್ಲೆ ಎಂದು ರೊಚ್ಚಿಗೇಳುತ್ತದೆ. ಘರ್ಷಣೆಗೆ ನಿಲ್ಲುತ್ತದೆ. ಬುರ್ಖಾದ ಒಳಗಿದ್ದುಕೊಂಡು ನೀನು ನನ್ನೊಂದಿಗೆ ಜಗಳ ಮಾಡಿದರೆ ಅದು ಮನರಂಜನೆ, ಬುರ್ಖಾದಿಂದ ಹೊರಬಂದು ನೀನು ಜಗಳ ಮಾಡಿದರೆ ಅದು ಧರ್ಮಗಳ ನಡುವಿನ ಸಂಘರ್ಷ. ಧರ್ಮಗಳೆಲ್ಲ ಸಂಕೇತಗಳಲ್ಲಿ ಬಂಧಿಯಾಗಿರುವುದರ ಪರಿಣಾಮ ಇದು. ನೀನು ಮುಸ್ಲಿಮ್ ಆಗುವುದು ಪರ್ದಾ ಧರಿಸಿರುವುದರಿಂದ ಅಲ್ಲ. ಗಡ್ಡ ಮತ್ತು ಟೋಪಿ ಧರಿಸಿರುವುದರಿಂದಾಗಿ ನಾನು ಮುಸ್ಲಿಮ್ ಆಗಿರುವುದೂ ಅಲ್ಲ. ಅದು ಮನಸ್ಸಿನ ಸ್ಥಿತಿ.

'ಹಾಗಿದ್ದರೆ ಮುಸ್ಲಿಮ್ ಎಂದರೆ ಏನು?' ಅನಾಮಿಕ ಪ್ರಶ್ನಿಸಿದಳು.

'ದೇವನಿಗೆ ಶರಣಾದವ ಅಥವಾ ಶರಣಾದವಳು ಎಂದರ್ಥ.'

'ಅಂದರೆ, ನೀನು ಶರಣಾದವ, ನಾನು ಶರಣಾಗದವಳು ಎಂದರ್ಥ ತಾನೇ?'

'ನೀನೂ ಶರಣಾದವಳೆಂದೇ ನಾನು ಅಂದುಕೊಳ್ಳುತ್ತೇನೆ' ನೂರ್ ಉತ್ತರಿಸಿದ.

'ನಾನಾ? ನಾನು ಮುಸ್ಲಿಮ್ ಆಗಿಲ್ಲವಲ್ಲ'– ಅನಾಮಿಕ ಹುಬ್ಬು ಹಾರಿಸಿದಳು.

'ನೀನು ಉಡುಪಿನಲ್ಲಿ ಮತ್ತು ವರ್ತನೆಯಲ್ಲಿ ದೇವನಿಗೆ ಶರಣಾಗಿರುವಿ'– ನೂರ್ ಸಮರ್ಥಿಸಿದ. ಅನಾಮಿಕ ನಕ್ಕಳು.

ರೈಲು ಶರವೇಗದಲ್ಲಿ ಸಾಗುತ್ತಿತ್ತು. ಕತ್ತಲು ಮತ್ತು ಬೆಳಕನ್ನು ಸೀಳುತ್ತಾ ಒಂದು ಸಂಜೆ ರೈಲು ಬಿಹಾರವನ್ನು ತಲುಪಿತು. ಎಲ್ಲರನ್ನೂ ಅವರವರ ಊರಲ್ಲಿ ಕ್ವಾರಂಟೈನ್‌ನಲ್ಲಿ ಇಡಲಾಯಿತು.





## ಮೂವತ್ತನಾಲ್ಕು

ಕ್ವಾರಂಟೈನ್ ಅವಧಿಯನ್ನು ಮುಗಿಸಿಕೊಂಡು ಅನಾಮಿಕ ಮತ್ತು ನೂರ್ ಹೊರಟರು.

'ಇನ್ನು ನನ್ನ ಮನೆಗೆ ಹೆಚ್ಚು ದೂರವಿಲ್ಲ'– ಅನಾಮಿಕ ಉತ್ಸಾಹದಿಂದ ಹೇಳಿದಳು.

ನೂರ್ ಮಾತಾಡಲಿಲ್ಲ.

'ಏನು ಆಲೋಚಿಸುತ್ತಿದ್ದೀ? ನನ್ನ ಮನೆಗೆ ಬರುವುದು ಇಷ್ಟವಿಲ್ಲವೇ?' ನೂರ್‌ನ ಮುಖವನ್ನೇ ನೋಡುತ್ತಾ ಅನಾಮಿಕ ಪ್ರಶ್ನಿಸಿದಳು.

'ನನ್ನ ಮನೆ ಅನ್ನುವುದೇ ದೊಡ್ಡ ಮಿಥ್ಯೆ ಅನು. ನನ್ನದು ಅಂದುಕೊಂಡ ಮನೆ ನಾಳೆ ಒಂದು ಪುಟ್ಟ ಗಾಳಿ ಬೀಸಿದರೆ ಎಲ್ಲಿಗೋ ಹಾರಿ ಹೋಗುತ್ತೆ. ಭೂಮಿ ಒಂದಿಷ್ಟು ಅಲುಗಾಡಿ ಬಿಟ್ಟರಂತೂ ನನ್ನದು ಅನ್ನುವ ಮನೆ ಬಿಡು, ನೆಲವೇ ಇರುವುದಿಲ್ಲ. ಒಂದುವೇಳೆ, ನಾನು ಸಾವಿಗೀಡಾದರೆ ನನ್ನ ಹೆಸರೂ ನನ್ನ ಜೊತೆ ಇರುವುದಿಲ್ಲ. ಅಷ್ಟೇ ಅಲ್ಲ,

ನನ್ನದು ಅಂದುಕೊಂಡ ನನ್ನ ಮನೆ, ನನ್ನ ಹಣ, ನನ್ನ ಮಕ್ಕಳು, ನನ್ನ ಪತ್ನಿ, ತಂದೆ–ತಾಯಿ, ಗೆಳೆಯರು, ಮಾಲಿಕರು.. ಯಾರೂ ನನ್ನ ಜೊತೆ ದಫನ ಗುಂಡಿಗೆ ಬರುವುದಿಲ್ಲ. ನಮ್ಮ ಜೊತೆ ಬರುವುದು ಯಾರು ಗೊತ್ತಾ?'

'ಯಾರು?'

ಒಳಿತು ಮತ್ತು ಕೆಡುಕು ಮಾತ್ರ. ಆದರೂ, ಈ ನನ್ನ ಮನೆ, ನನ್ನ ಮಕ್ಕಳು, ನನ್ನ ಹೆತ್ತವರು.. ಇತ್ಯಾದಿಗಳೆಲ್ಲ ನಮ್ಮನ್ನು ಲವಲವಿಕೆಯಿಂದ ಇಡುತ್ತದೆ. ಬದುಕುವುದಕ್ಕೆ ಪ್ರೇರೇಪಿಸುತ್ತಾ ಇರುತ್ತದೆ...

ನಿಜ ಏನು ಗೊತ್ತಾ?

ಮಕ್ಕಳನ್ನು ಅಮ್ಮ ಬೆಳೆಸುತ್ತಾಳೆ ಎಂದು ನಾವು ಹೇಳುತ್ತೇವಲ್ಲ. ಅದೂ ಸಂಪೂರ್ಣ ಸರಿಯಲ್ಲ. ಮಗುವಿನೊಂದಿಗೆ ಅಮ್ಮನೂ ಬೆಳೆಯುತ್ತಾಳೆ. ಮಗುವೂ ಬೆಳೆಯುತ್ತದೆ. ಮಗು ಬೆಳೆದಂತೆ ಅಮ್ಮನ ವಿಚಾರಗಳೂ ಬೆಳೆಯುತ್ತವೆ. ಮಗು ಇಲ್ಲದಿದ್ದರೆ ಓರ್ವ ಹೆಣ್ಣು, ಹೆಣ್ಣು ಮಾತ್ರ.

ಅಮ್ಮ ಆಗುವುದೇ ಮಗುವಿನಿಂದಾಗಿ.

'ನೀನೇನು ಸಂತನೇ?' ಅನಾಮಿಕ ಬೆರಗಾಗಿ ಕೇಳಿದಳು. ನೂರ್ ನಕ್ಕ.

'ನಿನ್ನ ಮನೆ ಈ ಕರ್ನೂರ್‌ನಲ್ಲಿ ಇರುವುದರಿಂದಲೇ ನೀನು ಆ ಕಾಳರಾತ್ರಿಯಲ್ಲಿ ಒಬ್ಬಳೇ ಬಂದು ಬೇವಿನ ಮರದಡಿಯಲ್ಲಿ ನಿಂತೆ. ನಾನೂ ಅಷ್ಟೇ. ನನ್ನ ಮನೆ ಪಶ್ಚಿಮ ಬಂಗಾಳದಲ್ಲಿ ಇದೆ ಎಂಬ ಕಾರಣಕ್ಕೆ ಆ ರಾತ್ರಿಯಲ್ಲಿ ನಿನ್ನ ಜೊತೆ ಹೊರಟು ಬಂದೆ. ಒಂದುವೇಳೆ, ನನ್ನ ಮನೆ ಎಂಬುದೇ ಇಲ್ಲದಿರುತ್ತಿದ್ದರೆ, ಪರಾರಿಯ ಯೋಚನೆಯೇ ಬರುತ್ತಿರಲಿಲ್ಲ, ಅಲ್ಲವೇ?'

ಅನಾಮಿಕ ನಕ್ಕಳು.

'ನೂರ್'

'ಏನು?'

'ವರದರಾಜನ ಕಾಫಿ ಎಸ್ಟೇಟ್‌ನಿಂದ ಆ ಅರ್ಧರಾತ್ರಿ ನಾವು ಹೊರಟು ಬಂದೆವಲ್ಲ, ಅಲ್ಲಿಂದ ಇಲ್ಲಿವರೆಗಿನ ಯಾತ್ರೆಯನ್ನು ಒಮ್ಮೆ ಕಲ್ಪಿಸಿಕೊಳ್ಳಂತೆ'– ಅನಾಮಿಕಳ ಮಾತಿನಲ್ಲಿ ಬೆರಗಿತ್ತು.





'ಅಲ್ಲಿಂದ ಹೊರಡುವಾಗ ನಿನ್ನ ಮನಸ್ಸಿನಲ್ಲಿ ಏನಿತ್ತು?'– ನೂರ್ ಪ್ರಶ್ನಿಸಿದ.

'ಹೇಗೋ ಏನೋ ಅನ್ನುವ ಆತಂಕ.'

'ಮತ್ತೆ ಹೇಗೆ ನನ್ನ ಜೊತೆ ಬಂದೆ?'

'ನಿನ್ನ ಮೇಲೆ ಭಾರ ಹಾಕಿ...' ಅನಾಮಿಕಳ ಮಾತಿನಲ್ಲಿ ತುಂಟತನದ ನಗುವೂ ಇತ್ತು.

'ನಾನಾದರೋ ದೇವನ ಮೇಲೆ ಭಾರ ಹಾಕಿದ್ದೆ'– ನೂರ್ ಹೇಳಿದ.

'ಮತ್ತೆ ನಿನ್ನ ಕಾಲುಗಳು...' ಅನಾಮಿಕ ಕೆಣಕಿದಳು.

'ಅದರ ಮೇಲೆ ಭರವಸೆ ಇಟ್ಟಿದ್ದೆ' ನೂರ್ ಸ್ಪಷ್ಟಪಡಿಸಿದ.

'ನನಗೆ ನಮ್ಮ ಇಡೀ ಪ್ರಯಾಣವೇ ಒಂದು ಪವಾಡದಂತೆ ಅನಿಸುತ್ತಿದೆ. ಹೊರಡುವಾಗ ಹೇಗಿದ್ವಿ? ಏನೇನೋ ಆಲೋಚನೆಗಳು. ಈಗ–' ಅನಾಮಿಕ ಅಚ್ಚರಿ ವ್ಯಕ್ತಪಡಿಸಿದಳು.

'ಅನು...'

'ನೀನು ನನ್ನ ಹೆಸರನ್ನು ಹೀಗೆ ಚುಟುಕಾಗಿ ಕರೆಯುವುದು ನನಗೆ ತುಂಬಾ ಇಷ್ಟ'– ಅನಾಮಿಕ ಹರ್ಷ ವ್ಯಕ್ತಪಡಿಸಿದಳು.

'ಈ ಜಗತ್ತೇ ಒಂದು ಪವಾಡ. ಈ ಭೂಮಿಯನ್ನೇ ಒಮ್ಮೆ ಕಲ್ಪಿಸಿಕೋ. 600 ಕೋಟಿ ಮನುಷ್ಯರಿರುವ ಭೂಮಿ. ಇನ್ನು ಪ್ರಾಣಿ ಪಕ್ಷಿಗಳು ಎಷ್ಟೋ. ಜಲಚರಗಳ ಸಂಖ್ಯೆ ಎಷ್ಟೋ? ಪರ್ವತಗಳು, ಬಂಡೆಗಳು, ಕಾಡುಗಳು.. ಓಹ್. ಎಷ್ಟೊಂದು ಭಾರವಿರಬಹುದು ಈ ಭೂಮಿಯ ಮೇಲೆ. ಆದರೂ ಈ ಭೂಮಿ ತಿರುಗುತ್ತಂತೆ. ತಿರುಗುತ್ತಾ ಸೂರ್ಯನಿಗೆ ಅಡ್ಡ ಬಂದಾಗ ರಾತ್ರಿಯಾಗುತ್ತಂತೆ. ಮತ್ತೂ ತಿರುಗಿದಾಗ ಬೆಳಗಾಗುತ್ತಂತೆ.

ನಿನಗಿದು ಪವಾಡ ಅನಿಸಲ್ವೆ?'

'ಏನೋ?'

'ಈ ಸಮುದ್ರದಿಂದ ಒಂದು ದಿನದಲ್ಲಿ ಎತ್ತುವ ಮೀನುಗಳೆಷ್ಟಿರಬಹುದು ಹೇಳು? ಶ್ರೀಲಂಕಾದಂಥ ಎಷ್ಟು ರಾಷ್ಟ್ರಗಳು ಕೇವಲ ಮೀನನ್ನೇ ತಮ್ಮ ಮುಖ್ಯ ಕಸುಬಾಗಿಸಿ ಕೊಂಡಿವೆ, ಆಲೋಚಿಸು. ಮೀನು– ಈ ಜಗತ್ತಿನ ಅತಿ ದೊಡ್ಡ ಬಿಸಿನೆಸ್ಸು. ಆದರೂ ಸಮುದ್ರದಲ್ಲಿ ಮೀನು ಕಡಿಮೆಯಾಗಿದೆಯಾ? ಇವತ್ತು ಮೀನಿಲ್ಲ, ಸಮುದ್ರದಲ್ಲಿ ಮೀನು ಖಾಲಿಯಾಗಿದೆ ಎಂದು ಯಾರಾದರೂ ಹೇಳಿದ್ದನ್ನು ಕೇಳಿದ್ದೀಯಾ?'

'ಇಲ್ಲ. ನಿಜಕ್ಕೂ ನಾನು ಹೀಗೆ ಆಲೋಚಿಸಿಯೇ ಇಲ್ಲ.'

'ಕಾಡಿನಲ್ಲಿರುವ ಪ್ರಾಣಿಗಳ ಕುರಿತು ಒಮ್ಮೆ ಆಲೋಚಿಸಂತೆ. ಅವುಗಳಿಗೆ ಆಹಾರ ಎಲ್ಲಿಂದ ಸಿಗುತ್ತೆ? ಅವು ಹಸಿವಿನಿಂದ ಸಾಯುತ್ತಿಲ್ಲವೇಕೆ? ಒಂದು ಹುಲಿ ಇನ್ನೊಂದು

ಹುಲಿಯನ್ನು ತಿಂದು ಹೊಟ್ಟೆ ತುಂಬಿಸಲ್ಲ. ಸಿಂಹಕ್ಕೆ ಇನ್ನೊಂದು ಸಿಂಹ ಆಹಾರವಾಗುವುದಿಲ್ಲ. ಹೆಚ್ಚಿನ ಮಾಂಸಾಹಾರಿ ಪ್ರಾಣಿಗಳು ಆಹಾರಕ್ಕಾಗಿ ಅವಲಂಬಿಸಿರುವುದು ಸಸ್ಯಾಹಾರಿ ಪ್ರಾಣಿಗಳನ್ನು. ಜಿಂಕೆ, ಕಾಡೆಮ್ಮೆ, ಎತ್ತು.. ಇತ್ಯಾದಿ. ಆದರೆ, ವರ್ಷದಿಂದ ವರ್ಷಕ್ಕೆ ಯಾವ ಪ್ರಾಣಿಯ ಸಂಖ್ಯೆ ಕಡಿಮೆಯಾಗುತ್ತಿರುವುದು ಗೊತ್ತೇ?'

'ನೀನೇ ಹೇಳು.'

'ಹುಲಿ, ಸಿಂಹ, ಚಿರತೆ...'

'ನಿನಗಿದು ಪವಾಡ ಎಂದು ಅನಿಸುತ್ತಿಲ್ಲವೇ?'

ಅನಾಮಿಕ ಹೇಳಿದಳು,

'ನಿನ್ನಲ್ಲಿ ಯಾವ ವಿಷಯವನ್ನೂ ಹೇಳದಿರುವುದೇ ಒಳ್ಳೆಯದು. ಹೇಳಿದರೆ, ಎಲ್ಲೆಲ್ಲಿಗೋ ಹೋಗುತ್ತಿ. ಇತಿಹಾಸವನ್ನೇ ಅಗೆದು ತೆಗೆಯುತ್ತೀ.'

'ನನಗೇನು ಅನಿಸುತ್ತೋ ಅದನ್ನೇ ಹೇಳುತ್ತೇನಪ್ಪ. ನಿನಗೆ ಯಾಕೆ ಹಾಗೆ ಅನಿಸಲ್ಲ ಅನ್ನುವುದೇ ನನಗೆ ಅಚ್ಚರಿ'– ನೂರ್ ತನ್ನನ್ನು ಸಮರ್ಥಿಸಿಕೊಂಡ.

ಸ್ವಲ್ಪ ದೂರ ಇಬ್ಬರೂ ಮೌನವಾಗಿ ನಡೆದರು.

'ನೂರ್.. ನೂರ್. ಅಲ್ಲಿ ನೋಡು, ಅಲ್ಲಿ ನೋಡು...' ಅನಾಮಿಕ ಅಕ್ಷರಶಃ ಚೀರಿದಳು.

'ಏನಾಯ್ತು?'

'ಓ ಅಲ್ಲಿ ಕಾಣುತ್ತಿದೆಯಲ್ಲ, ಅದುವೇ ನನ್ನ ಮನೆ'– ಅನಾಮಿಕಳ ಮಾತಿನಲ್ಲಿ ಹಬ್ಬದ ಸಂತೋಷವಿತ್ತು.





## ಮೂವತ್ತೈದು

ಪಾನೀಯವನ್ನು ಕುಡಿದು ಗ್ಲಾಸನ್ನು ಕೆಳಗಿಟ್ಟ ನೂರ್ ಬ್ಯಾಗನ್ನೆತ್ತಿಕೊಂಡು ಅಂಗಳಕ್ಕೆ ಇಳಿದ.

'ಎಲ್ಲಿಗೆ?' ಗೊತ್ತಿದ್ದೂ ಅನಾಮಿಕ ಪ್ರಶ್ನಿಸಿದಳು.

'ನನ್ನೂರಿಗೆ, ಪಶ್ಚಿಮ ಬಂಗಾಳಕ್ಕೆ.'

'ಕಾಲ್ನಡಿಗೆಯಲ್ಲಾ?'

'ಹಾಂ, ಇಲ್ಲಿವರೆಗೆ ಬಂದಿರುವುದೂ ಕಾಲ ಮೇಲಿನ ಭರವಸೆಯಿಂದಲೇ ತಾನೇ?'

ಆತ ಒಂದು ಹೆಜ್ಜೆ ಮುಂದಿಟ್ಟಾಗ ಅನಾಮಿಕ ಮತ್ತೆ

ಕರೆದಳು–

'ನೂರ್'– ಕರೆಯಲ್ಲಿ ಆರ್ದ್ರತೆ, ಪ್ರೀತಿ ತುಂಬಿತ್ತು.

'ಏನು?'

'ನನ್ನನ್ನೂ ಜೊತೆಗೊಯ್ಯುವೆಯಾ?'

ನೂರ್ ದಂಗಾದವನಂತೆ ನಿಂತು ಬಿಟ್ಟ. ಕಣ್ಣಲ್ಲಿ ಅಚ್ಚರಿ. ತಿರುಗಿ ಅನಾಮಿಕಳ ಮುಖವನ್ನೇ ದಿಟ್ಟಿಸಿದ.

'ನಿನ್ನವಳಾಗಿ ನನ್ನನ್ನೂ ಜೊತೆಗೊಯ್ಯುವೆಯಾ?' ಅನಾಮಿಕಳ ಮಾತಿನಲ್ಲಿ ನಡುಕವಿದ್ದರೂ ಅಸ್ಪಷ್ಟತೆ ಇರಲಿಲ್ಲ.

ನೂರ್ ಕ್ಷಣ ಯೋಚಿಸಿದ. ಬಳಿಕ ಸಹಜ ಧ್ವನಿಯಲ್ಲಿ ಹೇಳಿದ,

'ಕ್ಷಮಿಸು ಅನು. ನನ್ನ ಈ ಹೃದಯದಲ್ಲಿ ನನ್ನ ಸಾರಾಳ ಹೊರತು ಇನ್ನಾರಿಗೂ ಜಾಗ ಇಲ್ಲ. ನನ್ನ ಬಳಿ ಆಕೆಯಲ್ಲದೇ ಇನ್ನಾರು ಮಲಗುವುದನ್ನೂ ನಾನು ಕಲ್ಪಿಸಿಕೊಂಡಿಲ್ಲ. ಅವಳು ನನಗಾಗಿ ಪ್ರತಿದಿನವೂ ಕಾಯುತ್ತಾಳೆ. ನನ್ನ ಕ್ಷೇಮ ವಿಚಾರಿಸುತ್ತಾಳೆ. ನನಗಾಗಿ ಪ್ರಾರ್ಥಿಸುತ್ತಾಳೆ. ಅವಳು ಮಾತ್ರ ನನ್ನವಳು..'

'ಆದರೆ ನಾನು ವಿಧವೆ. ಅನಾಥ ಮಗುವಿನ ತಾಯಿ..' ಅನಾಮಿಕಳ ಗಂಟಲು ಕಟ್ಟಿತು.

'ಹೌದು'– ಅನಾಮಿಕಳ ಮುಖ ನೋಡದೆಯೇ ನೂರ್ ಉತ್ತರಿಸಿದ.

'ನಿನ್ನ ಕುರಾನಿನಲ್ಲಿ ಅನಾಥರಿಗೆ, ವಿಧವೆಯರಿಗೆ ಬಾಳು ಕೊಡಬೇಕೆಂದು ಹೇಳಿದೆಯಲ್ಲವೇ? ಆ ಕಾರಣಕ್ಕಾಗಿಯೇ ಇನ್ನೊಂದು ಮದುವೆಯಾಗುವುದಕ್ಕೆ ಕುರಾನು ಅನುಮತಿ ನೀಡಿದೆಯಲ್ಲವೇ?'

'ಹೌದು.'

'ಮತ್ತೇಕೆ ನಿರಾಕರಿಸುತ್ತೀ?' ನೂರ್ ಈ ಹಿಂದೆ ಉಲ್ಲೇಖಿಸಿದ್ದ ಕುರಾನಿನ ವಚನವನ್ನು ಅನಾಮಿಕ ನೆನಪಿಸಿದಳು.

ನೂರ್ ಅನಾಮಿಕಳ ಮುಖ ನೋಡಿದ. ಕ್ಷಣ ಹೊತ್ತು ಮೌನವಾದ. ಬಳಿಕ ಹೇಳಿದ,

'ಕುರಾನಿನ ಆ ವಚನದ ಮುಂದಿನ ವಚನದಲ್ಲಿ ಹೀಗೂ ಇದೆ ಅನಾಮಿಕ–

'ಇಬ್ಬರ ನಡುವೆ ಸಮಾನ ನ್ಯಾಯ ಪಾಲಿಸಲು ಅಸಾಧ್ಯವೆಂದು ತೋಚಿದರೆ ಒಬ್ಬಳಿಗೇ ಸೀಮಿತಗೊಳಿಸಬೇಕು...'

ನೂರ್ ಮಾತು ನಿಲ್ಲಿಸಿದ. ಏನೋ ಹೇಳಬೇಕೆಂದು ಬಾಯಿ ತೆರೆದ ಅನಾಮಿಕ, ಬಳಿಕ ಮೌನವಾದಳು.

ಅದೇ ನೂರ್. ಪ್ರಯಾಣದ ಉದ್ದಕ್ಕೂ ಹೇಗಿದ್ದನೋ ಹಾಗೆಯೇ. ಅದೇ





ನಿರ್ಮಲ ಭಾವ. ಓಡಿ ಹೋಗಿ ಅಪ್ಪಿಕೊಳ್ಳಬೇಕೆಂದು ಅನಾಮಿಕಳಿಗೆ ಅನಿಸಿತಾದರೂ ಬಳಿಕ ಬಲವಂತದಿಂದ ತಡೆದುಕೊಂಡಳು. ನೂರ್ ಆಕೆಯ ಮುಖಕ್ಕೆ ಮುಖ ಕೊಟ್ಟು ಹೇಳಿದ,

'ಕ್ಷಮಿಸು ಅನು. ನನ್ನ ಸಾರಾ ಮಾತ್ರ ನನ್ನವಳು. ಆದರೆ ನೀನು ತುಂಬಾ ಒಳ್ಳೆಯವಳು. ಪ್ರಯಾಣದಲ್ಲಿ ನಿನ್ನಂಥ ಹೆಣ್ಣು ಮಗಳು ಸಿಕ್ಕಿದ್ದು ನನ್ನ ಅದೃಷ್ಟ. ನೀನು ಚೆನ್ನಾಗಿರು. ನಿನ್ನ ಮುಂದಿನ ಬದುಕು ಆನಂದಮಯವಾಗಲಿ...'

ಬ್ಯಾಗನ್ನು ಬೆನ್ನಿಗೇರಿಸುತ್ತಾ ಹೊರಟು ಹೋದ ನೂರ್‌ನನ್ನು ಕಡೆಯ ತನಕ ನೋಡುತ್ತಾ ಅನಾಮಿಕ ಬಾಗಿಲಲ್ಲೇ ಕಲ್ಲಾದಳು...

ವೈರಸ್

## ಲೇಖಕರ ಪ್ರಕಟಿತ ಕೃತಿಗಳು

1. ದಾಯಿರ (ಕಥಾ ಸಂಕಲನ)
2. ಜಾಗತೀಕರಣ ಮತ್ತು ಸಂಸ್ಕೃತಿ (ವೈಚಾರಿಕ ಕೃತಿ)
3. ಚಾಟಿಯೇಟು (ಸಂಪಾದಕೀಯ ಸಂಗ್ರಹ)
4. ಮದ್ಯಪಾನ: ಪರ, ವಿರೋಧ ಮತ್ತು ನಿಜ
5. ಸರಸ–ಸಲ್ಲಾಪ (ಲಲಿತ ಪ್ರಬಂಧ)
6. ಎಣ್ಣೆ ಬತ್ತಿದ ಲಾಟೀನು (ಪ್ರವಾಸ ಕಥನ)